ವಿಶ್ವವಾಣಿ
ವಿಶ್ವಾಸವೇ ವಿಶ್ವ

ರೋಹಿತ್ ಶತಕ

ರೋಹಿತ್ ಶರ್ಮಾ (ಅಜೇಯ 123) ಮತ್ತು ಕೊಹ್ಲಿ (74) ಅವರ ಅಮೋಘ ಆಟದ ಮೂಲಕ ಆಸ್ಟ್ರೇಲಿಯಾ ವಿರುದ್ಧದ ಅಂತಿಮ ಏಕದಿನ ಪಂದ್ಯದಲ್ಲಿ ಭಾರತ ಜಯ ಗಳಿಸಿದೆ.

ರಸ್ತೆ ವಿಭಜಕ್ಕೆ ಡಿಕ್ಕಿ ಹೊಡೆದು ಕೆಳಗುರುಳಿದ್ದ ಬೈಕ್‌ಗೆ ಬಸ್ ಡಿಕ್ಕಿ

ಪಾನಮತ್ತ ಬೈಕ್ ಸವಾರ ಬಸ್ ದುರಂತದ ಮೂಲ

ಹೈದರಾಬಾದ್: ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಸಂಸ್ಥೆಯ ಸ್ಲೀಪರ್ ಎಸಿ ಬಸ್ ಕರ್ನೂಲು ಬಳಿ ಹೊತ್ತಿ ಉರಿದು 20 ಮಂದಿ ಮೃತಪಟ್ಟ ಘಟನೆಗೆ ಬೈಕ್ ಚಾಲಕ ಪಾಮತ್ತನಾಗಿ ಬೈಕ್ ಚಲಾಯಿಸಿದ್ದೇ ಮೂಲ ಕಾರಣ ಎಂದು ತನಿಖೆಯಲ್ಲಿ ತಿಳಿದು ಬಂದಿದೆ. ಇದೇ ವೇಳೆ ಬಸ್‌ನ ಚಾಲಕ ಮಿರಿಯಾಲ ಲಕ್ಷ್ಮಯ್ಯ (42) ಮತ್ತು ಇಬ್ಬರು ಹೆಚ್ಚುವರಿ ಚಾಲಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಲಕ್ಷ್ಮಯ್ಯ ಸುಳ್ಳು ದಾಖಲೆ ನೀಡಿ ಚಾಲನಾ ಪರವಾನಗಿ ಪತ್ರ ಪಡೆದಿರುವುದು ಬೆಳಕಿಗೆ ಬಂದಿದೆ. ಅಪಘಾತಕ್ಕೀಡಾದ ಬಸ್ ಹಲವು ಸಾರಿಗೆ ನಿಯಮಗಳನ್ನು ಉಲ್ಲಂಘಿಸಿರುವುದು ಬಯಲಾಗಿದೆ. ಇದರ ಬೆನ್ನಿಗೇ ಕರ್ನಾಟಕ ಮತ್ತು ತೆಲಂಗಾಣ ಸಾರಿಗೆ ಅಧಿಕಾರಿಗಳು ಟ್ರಾಫಿಕ್ ನಿಯಮ ಉಲ್ಲಂಘಿಸಿರುವ ಖಾಸಗಿ ಬಸ್‌ಗಳ ಮೇಲೆ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ.

19 ಪ್ರಯಾಣಿಕರ ಸಜೀವ ದಹನಕ್ಕೆ ಕಾರಣವಾಗಿದ್ದ ಬೈಕ್‌ಸವಾರ, ಈ ಅಪಘಾತಕ್ಕೂ ಮೊದಲೇ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಮೃತಪಟ್ಟಿರುವುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.ಪಲ್ಸರ್‌ಬೈಕ್‌ನಲ್ಲಿ ಹಿಂಬದಿ ಸವಾರನನ್ನು ಕೂರಿಸಿಕೊಂಡು ಹೋಗುತ್ತಿದ್ದ ಬಿ. ಶಿವಶಂಕರ್(22), ಕರ್ನೂಲ್ ಜಿಲ್ಲೆಯ ಚಿನ್ನತೇಕೂರು ಬಳಿ ಹೆದ್ದಾರಿಯ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿದ್ದ. ಹಿಂಬದಿ ಸವಾರ ಯರ್ರಿಸ್ವಾಮಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈ ವಿಷಯ ಬೆಳಕಿಗೆ ಬಂದಿದೆ.

ಇವರಿಬ್ಬರೂ ಶುಕ್ರವಾರ ಬೆಳಿಗ್ಗೆ 2.24ರ ಸುಮಾರಿಗೆ ಬಂಕ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳಲು ಬೈಕ್ ಅನ್ನು ನಿಲ್ಲಿಸಿದ್ದು, ಅಲ್ಲಿಂದ ತೂರಾಡುತ್ತಲೇ ಹೊರಟಿರುವುದು ಸಿಸಿಟಿವಿಯಲ್ಲಿ ದಾಖಲಾಗಿದೆ. ಇಲ್ಲಿಂದ ಹೊರಟ ಸ್ವಲ್ಪ ಸಮಯದಲ್ಲಿಯೇ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸವಾರ ಶಿವಶಂಕರ್ ಸ್ಥಳದಲ್ಲೇ ಮೃತಪಟ್ಟಿದ್ದ. ಯರ್ರಿಸ್ವಾಮಿ ಶಿವಶಂಕರ್ ದೇಹವನ್ನು ಸ್ವಲ್ಪ ದೂರ ಎಳೆದು ಉಸಿರಾಟ ಪರಿಶೀಲಿಸಿದ್ದ. ಉಸಿರಾಟ ನಿಂತಿರುವುದನ್ನು ಖಚಿತಪಡಿಸಿಕೊಂಡ ಬಳಿಕ ಬೈಕ್ ಅನ್ನು ಪಕ್ಕಕ್ಕೆ ಎಳೆಯಲು ಪ್ರಯತ್ನಿಸುತ್ತಿದ್ದಾಗಲೇ ವೇಗವಾಗಿ ಬಂದ ಬಸ್ ಡಿಕ್ಕಿ ಹೊಡೆದಿದೆ.

→ 4

ಖಾಸಗಿ ಬಸ್‌ಗಳ ಮೇಲೆ ನಿಗಾ

ತೆಲಂಗಾಣ ಪೊಲೀಸರು ಶನಿವಾರ ಬೆಳಿಗ್ಗೆ ಹೈದರಾಬಾದ್‌ಗೆ ಆಗಮಿಸುವ ಖಾಸಗಿ ಬಸ್‌ಗಳನ್ನು 54 ಚೆಕ್‌ಪೋಸ್ಟ್‌ಗಳ ಮೂಲಕ ತಪಾಸಣೆ ನಡೆಸಿ ಸಾರಿಗೆ ನಿಯಮಗಳ ಉಲ್ಲಂಘನೆ, ತೆರಿಗೆ ಪಾವತಿ, ಅಗ್ನಿಶಾಮಕ ವ್ಯವಸ್ಥೆಯಿಲ್ಲದ ಖಾಸಗಿ ಬಸ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಪ್ರತಿದಿನ 500ಕ್ಕೂ ಅಧಿಕ ಅಂತರರಾಜ್ಯ ಖಾಸಗಿ ಬಸ್‌ಗಳು ಹೈದರಾಬಾದ್ ಮೂಲಕ ಸಂಚರಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರ್ನಾಟಕದ ಸಾರಿಗೆ ಅಧಿಕಾರಿಗಳು ಶುಕ್ರವಾರ ನಿಯಮ ಉಲ್ಲಂಘಿಸಿದ 25ಕ್ಕೂ ಅಧಿಕ ಖಾಸಗಿ ಬಸ್‌ಗಳನ್ನು ವಶಕ್ಕೆ ಪಡೆದಿದ್ದರು.

ಸೊಂಪಾದ ಪುಟಗಳು

ಇಸ್ರೇಲಿಗಳೇಕೆ ಹಾಂಗ, ನಾವು ಭಾರತೀಯರೇಕೆ ಹೀಂಗ?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಸರಕಾರದ ಕೆಲಸವನು ಸರಕಾರವೇ ಮಾಡಿದರೆ ಚೆನ್ನ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಕೊನೆಯಲ್ಲಿ ಕೇವಲ ಶೇ.ಒಂದರಷ್ಟು ಫೈಟಿಂಗ್ ಚಾನ್ಸ್ ಇದೆ ಎಂದಾದರೂ ಸೆಣಸದೇ, ಪ್ರಯತ್ನಿಸದೇ ಇರಬೇಡಿ. ಅಷ್ಟೊತ್ತಿಗೆ ನಿಮ್ಮ ಪ್ರತಿಸ್ಪರ್ಧಿ ಸೆಣಸಿ ಸುಸ್ತಾಗಿರಬಹುದು. ಅಂಥ ಸಣ್ಣ ಅವಕಾಶವನ್ನೂ ಕಳೆದುಕೊಳ್ಳಬಾರದು.

ವಕ್ರತುಂಡೋಕ್ತಿ

ಮಕ್ಕಳನ್ನು ಹೇಗೆ ಬೆಳೆಸಬೇಕೆಂದು ಎಲ್ಲರಿಗೂ ತಿಳಿದಿದೆ, ಪಾಲಕರನ್ನು ಹೊರತುಪಡಿಸಿ.

ಬಿಹಾರ ಚುನಾವಣೆ ಬಳಿಕ ಸಿಎಂ, ಡಿಸಿಎಂ ದೆಹಲಿಗೆ ಸಂಪುಟ ಪುನಾರಚನೆ ಬಗ್ಗೆ ಸ್ಪಷ್ಟನೆ ಪಡೆಯುವ ಸಾಧ್ಯತೆ

ದಿಲ್ಲಿ ಚಲೋಗೆ ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಸಂಪುಟ ಪುನಾರಚನೆ, ಉತ್ತರಾಧಿಕಾರಿ ನೇಮಕ, ಅಧಿಕಾರ ಹಂಚಿಕೆ ವಿಷಯದ ಬಗ್ಗೆ ಚರ್ಚೆಗಳು ತೀವ್ರಗೊಂಡಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೂರು ದಿನಗಳ ದೆಹಲಿ ಪ್ರವಾಸ ಕೈಗೊಳ್ಳುತ್ತಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಬಿಹಾರ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳುತ್ತಿದ್ದಂತೆ ರಾಜ್ಯ ಕಾಂಗ್ರೆಸ್ ನಾಯಕರಿಂದ ದೆಹಲಿ ಪರೇಡ್ ನಡೆಯುವುದು ನಿಶ್ಚಿತವಾಗಿದೆ. ಈಗಾಗಲೇ ಖಾಲಿಯಿರುವ ಎರಡು ಸ್ಥಾನದೊಂದಿಗೆ ಇನ್ನಷ್ಟು ಮಂದಿಯನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಚರ್ಚೆಗಳು ನಡೆಯುತ್ತಿದೆ. ಈ ಸಮಯದಲ್ಲಿಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ವಕೀಲ, ಕಾಂಗ್ರೆಸ್ ಹಿರಿಯ ನಾಯಕ ಕಪಿಲ್ ಸಿಬಲ್ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲು ನ.15ರಂದು ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಕಾರ್ಯಕ್ರಮದ ಬಳಿಕ ಎರಡು ಮೂರು ದಿನ ದೆಹಲಿಯಲ್ಲಿಯೇ ವಾಸ್ತವ್ಯ ಹೂಡುತ್ತಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

→ 4

ನೀವು (ಮಾಧ್ಯಮ) ಏನೇನೋ ಊಹೆ ಮಾಡಬೇಡಿ. ಕಪಿಲ್ ಸಿಬಲ್ ಅವರ ಜೀವನ ಚರಿತ್ರೆ ಕೃತಿ ಬಿಡುಗಡೆ ಇದೆ. ಪುಸ್ತಕ ಬಿಡುಗಡೆಗೆ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಿದ್ದಾರೆ. ಹೋದ ಮೇಲೆ ವರಿಷ್ಠರನ್ನೂ ಭೇಟಿ ಮಾಡಬಹುದು. ರಾಹುಲ್ ಗಾಂಧಿ, ಖರ್ಗೆಯವರನ್ನು ಭೇಟಿ ಮಾಡುತ್ತಾರೆ. ನಾವು ದೆಹಲಿಗೆ ಅಲ್ಲದೇ ನಾಗಪುರಕ್ಕೆ ಹೋಗೋಕೆ ಸಾಧ್ಯವೇ?. ತಿಂಗಳಿಗೊಮ್ಮೆ ನಾನು ದೆಹಲಿಗೆ ಹೋಗಬೇಕು. ಇಲಾಖೆ ಸಂಬಂಧಿಸಿದಂತೆ ಕೇಂದ್ರದ ಸಚಿವರನ್ನು, ಅಧಿಕಾರಿಗಳನ್ನು ಭೇಟಿಯಾಗುತ್ತೇನೆ. ಅದೇ ರೀತಿ ವರಿಷ್ಠರನ್ನೂ ಭೇಟಿ ಮಾಡುತ್ತೇವೆ.

–ಪ್ರಿಯಾಂಕ್ ಖರ್ಗೆ, ಸಚಿವ

ಮಂತ್ರಿಗಿರಿ ಬಿಡಲು ಸಿದ್ಧ: ಕೃಷ್ಣಬೈರೇಗೌಡ



ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆಯ ಗೊಂದಲಗಳು ಮುಂದುವರಿದಿರುವ ಸಮಯದಲ್ಲಿಯೇ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು, ಹೈಕಮಾಂಡ್ ಸೂಚಿಸಿದರೆ ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧ ಎಂದು ಹೇಳಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಸರಕಾರಕ್ಕೆ ಅಧಿಕಾರಕ್ಕೆ ಬಂದು ಎರಡುವರೆ ವರ್ಷದ ಬಳಿಕ ರಾಜ್ಯದಲ್ಲಿ ಸಂಪುಟ ಪುನಾರಚನೆಯಾಗಲಿದೆ. ಇದು ಸರಕಾರ ಬಂದಾಗಲೇ ನಿರ್ಧಾರವಾಗಿತ್ತು. ಹಾಲಿ ಸಚಿವ ಸಂಪುಟದಿಂದ ಹೊರಗಿರುವವರಿಗೆ ಅವಕಾಶ ನೀಡಬೇಕು ಎನ್ನುವ ಕಾರಣಕ್ಕೆ ಈ ತೀರ್ಮಾನವಾಗಿದೆ. ಸಂಪುಟಕ್ಕೆ ಸೇರುವ ಅರ್ಹತೆಯಿರುವವರಿಗೆ ಅವಕಾಶ ಸಿಗಬೇಕು ಎನ್ನುವುದು ಇದರ ಹಿಂದಿನ ಉದ್ದೇಶ. ಆದರೆ ಸಂಪುಟ ಪುನಾರಚನೆಗೂ, ನಾಯಕತ್ವ ಬದಲಾವಣೆಗೂ ಸಂಬಂಧವಿಲ್ಲ. ನಾಯಕತ್ವ ಬದಲಾವಣೆ ಮಾಡುವ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸಲಿದೆ ಎಂದು ಸ್ಪಷ್ಟಪಡಿಸಿದರು. ಈಗಾಗಲೇ ಪಕ್ಷ ನನಗೆ ಮೂರು ಬಾರಿ ಸಚಿವ ಸ್ಥಾನವನ್ನು ನೀಡಿದೆ. ಅರ್ಹತೆ ಮೀರಿ ನನಗೆ ಪಕ್ಷ ಅವಕಾಶ ಕೊಟ್ಟಿದೆ. ಸಚಿವ ಸ್ಥಾನದಿಂದ ಕ್ಷೇತ್ರದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ಅವಕಾಶದ ವಿಷಯದಲ್ಲಿ ನನಗೆ ಹೊಟ್ಟೆ ತುಂಬಿದೆ, ಆದರೆ ಕೆಲಸದಲ್ಲಿ ಅಲ್ಲ. ಇನ್ನೂ ಮಾಡುವ ಕೆಲಸ ಬಾಕಿಯಿದೆ. ಆದರೆ ಅವಕಾಶದ ವಿಚಾರದಲ್ಲಿ ನನಗೆ ಸಂತೃಪ್ತಿ ಇದೆ ಎಂದರು.

ನಟ ಸತೀಶ್ ಶಾ ನಿಧನ

ಮುಂಬೈ: ಬಾಲಿವುಡ್‌ನ ಹಿರಿಯ ನಟ ಸತೀಶ್ ಶಾ ಶನಿವಾರ ಮುಂಬೈನ ಹಿಂದೂಜಾ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅವರಿಗೆ 74 ವರ್ಷ ವಯಸ್ಸಾಗಿತ್ತು. ಇತ್ತೀಚೆಗೆ ಅವರು ಕೋಲ್ಕತ್ತಾದಲ್ಲಿ ಮೂತ್ರ ಪಿಂಡದ ಕಸಿ ಮಾಡಿಸಿಕೊಂಡಿದ್ದ ಅವರು ಸಂಪೂರ್ಣವಾಗಿ ಗುಣಮುಖರಾಗಿ ಮರಳಿದ್ದರು. ಸಾರಾಭಾಯ್ ವರ್ಸಸ್ ಸಾರಾಭಾಯ್ ಮತ್ತು ಜಾನೆ ಭಿ ದೋ ಯಾರೋ ಎಂಬ ಟಿವಿ ಸೀರಿಯಲ್‌ಗಳ ಮೂಲಕ ಸತೀಶ್ ಶಾ ಖ್ಯಾತಿ ಪಡೆದಿದ್ದರು.

ಅದಾನಿಗೆ ಎಲ್ಐಸಿ ಸಾಥ್

ಮುಂಬೈ: ಎಲ್‌ಐಸಿ ಅದಾನಿ ಗ್ರೂಪ್‌ನಲ್ಲಿ ಸುಮಾರು ₹33,000 ಕೋಟಿ ಹೂಡಿಕೆ ಮಾಡಿದೆ ಎಂದು

ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಈ ವರದಿಯನ್ನು ಉಲ್ಲೇಖಿಸಿ ಕಾಂಗ್ರೆಸ್ ಅದಾನಿ ಗ್ರೂಪ್‌ಗೆ ಲಾಭವಾಗಲು ವಿಮಾ ಕಂಪನಿಯು ಮೇ 2025 ರಲ್ಲಿ ಈ ಹೂಡಿಕೆ ಮಾಡಿದೆ ಎಂದು ದೂರಿದೆ. ಗ್ರಾಹಕರ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಪಕ್ಷ ಆರೋಪಿಸಿದೆ.

ಅಯ್ಯಪ್ಪನ ಚಿನ್ನ ವಶ

ಬೆಂಗಳೂರು: ಕೇರಳ ಪೊಲೀಸರು ಅಯ್ಯಪ್ಪ ದೇಗುಲದ ಚಿನ್ನ ಕಳವು ಪ್ರಕರಣದ ಪ್ರಮುಖ ಆರೋಪಿ

ಉನ್ನಿಕೃಷ್ಣನ್ ಪೊಟ್ಟಿ ಚಿನ್ನ ಮಾರಾಟ ಮಾಡಿದ್ದ ಬಳ್ಳಾರಿಯ 'ರೊದ್ದಂ ಜ್ಯುವೆಲ್ಲರಿ' ಮೇಲೆ ದಾಳಿ ನಡೆಸಿದ ಎಸ್‌ಐಟಿ, 400 ಗ್ರಾಂ ಚಿನ್ನದ ಗಟ್ಟಿಗಳು ಮತ್ತು 2 ಲಕ್ಷ ರು. ವಶಪಡಿಸಿಕೊಂಡಿದ್ದಾರೆ. ಎಸ್‌ಐಟಿ, ಉನ್ನಿಕೃಷ್ಣನ್ ಪೊಟ್ಟಿಯನ್ನು ಸಾಕ್ಷ್ಯ ಸಂಗ್ರಹಕ್ಕಾಗಿ ಶುಕ್ರವಾರ ಬೆಂಗಳೂರಿಗೆ ಕರೆತಂದಿತ್ತು.

ತಿಮರೋಡಿಗೆ ಸಮನ್ಸ್

ಬೆಂಗಳೂರು: ಧರ್ಮಸ್ಥಳ ಪ್ರಕರಣದ ತನಿಖೆಯನ್ನು ಎಸ್‌ಐಟಿ ಚುರುಕುಗೊಳಿಸಿದ್ದು, ಪ್ರಕರಣದ ಕೇಂದ್ರ

ಬಿಂದುವಾಗಿರುವ ನಾಲ್ವರು ಪ್ರಮುಖ ಸಾಮಾಜಿಕ ಹೋರಾಟಗಾರರಿಗೆ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದೆ. ಒಂದು ವೇಳೆ ವಿಚಾರಣೆಗೆ ಗೈರಾದರೆ ಬಂಧನ ಎದುರಿಸಬೇಕಾಗುತ್ತದೆ ಎಂದು ನೋಟಿಸ್‌ನಲ್ಲಿ ಕಠಿಣ ಎಚ್ಚರಿಕೆ ನೀಡಲಾಗಿದೆ.

ಜಮೀರ್ ಆಡಿಯೋ ವಿವಾದ

ಬೆಂಗಳೂರು/ಚಿಕ್ಕಬಳ್ಳಾಪುರ: ರಾಜ್ಯದ ರೈತರ ಪರವಾಗಿ

ನಿಲ್ಲಬೇಕಾದ ಸಚಿವರು ವಂಚಕರ ಪರ ನಿಂತು ಒಂದೂಮುಕ್ಕಾಲು ಕೋಟಿ ರು. ವಂಚಿಸಿರುವವರ ಪರ ಕೇಸ್ ಅನ್ನು ಸೆಟಲ್ ಮಾಡುವಂತೆ ಪೊಲೀಸರಿಗೆ ಸೂಚಿಸಿರುವ ಆಡಿಯೋ ಈಗ ಸಂಚಲನ ಸೃಷ್ಟಿಸಿದೆ. ವಂಚಕರ ಪರವಾಗಿ ಪಿಎಸ್‌ಐಗೆ ಕರೆ ಮಾಡಿ ಸಚಿವ ಜಮೀರ್ ಅಹಮದ್ ಈ ರೀತಿ ತಮ್ಮ ಧರ್ಮದವರ ಪರ ಪ್ರಭಾವ ಬೀರಿರುವುದು ಈಗ ವಿವಾದಕ್ಕೆ ಕಾರಣವಾಗಿದೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮತ್ತು
5 ಬೆಂಗಳೂರು ನಗರ ಪಾಲಿಕೆಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

ಬೆಂಗಳೂರು ನಾಗರಿಕರಿಗೆ ಅತೀ ದೊಡ್ಡ ಉಡುಗೊರೆ

ಕರ್ನಾಟಕ ಸರ್ಕಾರದಿಂದ ಐತಿಹಾಸಿಕ ನಿರ್ಣಯ

ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ಮತ್ತು ಹೊಸ ನಿವೇಶನಗಳಿಗೂ ಎ-ಖಾತಾ ಲಭ್ಯ

ಯೂಟ್ಯೂಬ್‌ನಲ್ಲಿ ತರಬೇತಿ ವಿಡಿಯೋ ವೀಕ್ಷಿಸಿರಿ

ಕನ್ನಡ ಆವೃತ್ತಿ: https://tinyurl.com/v9naynyv ಇಂಗ್ಲಿಷ್ ಆವೃತ್ತಿ: https://tinyurl.com/3xjs6eu8

ಬಿ-ಖಾತಾದಿಂದ ಎ-ಖಾತಾ ಸಹಾಯವಾಣಿ: 94806 83695

2000 ಚ.ಮೀ.ಗಳ ವರೆಗೆ

- ನಿಮ್ಮ ಮೊಬೈಲ್ ಮತ್ತು ಓಟಿಪಿ ಬಳಸಿ https://bbmp.karnataka.gov.in/BtoAKhata ರಲ್ಲಿ ಲಾಗಿನ್ ಆಗಿ
- ನಿಮ್ಮ ಅಂತಿಮ ಬಿ-ಖಾತೆಯ ಇಪಿಐಡಿ ಸಂಖ್ಯೆಯನ್ನು ನಮೂದಿಸಿ ವಿವರಗಳನ್ನು ಪಡೆಯಿರಿ
- ಮಾಲೀಕರ ಆಧಾರ್ ದೃಢೀಕರಿಸಿ
- ನಿವೇಶನವಿರುವ ಸ್ಥಳವನ್ನು ಮತ್ತು ನಿವೇಶನ ಮುಂಭಾಗದ ರಸ್ತೆಯ ಪ್ರಕಾರವನ್ನು ದೃಢಪಡಿಸಿ
- ಭೂ ಪರಿವರ್ತನೆಯಾದ ಮತ್ತು ಭೂ ಪರಿವರ್ತನೆಯಾಗದ ಎರಡೂ ನಿವೇಶನಗಳು ಅರ್ಹ (ಫ್ಲಾಟ್‌ಗಳಿಗೆ ಅರ್ಹತೆಯಿಲ್ಲ)
- ನಿಗದಿತ ಅರ್ಜಿ ಶುಲ್ಕ ರೂ.500/-ಗಳನ್ನು ಪಾವತಿಸಿ ಸ್ವೀಕೃತಿಯನ್ನು ಪಡೆಯಿರಿ
- ನಗರ ಪಾಲಿಕೆ ವತಿಯಿಂದ ನಿವೇಶನಕ್ಕೆ ಭೇಟಿ ಮತ್ತು ದೃಢೀಕರಣ
- ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರದ ಶೇ. 5% ರಷ್ಟು ಮೊತ್ತವನ್ನು "ಏಕ ನಿವೇಶನ" ಅನುಮೋದನೆ ಶುಲ್ಕವಾಗಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಸುವುದು
- ಸ್ವಯಂಕೃತ "ಏಕ ನಿವೇಶನ" ಅನುಮೋದನೆಯಾಗಿ ಅರ್ಹತಾನುಸಾರ ಎ-ಖಾತಾ ವಿತರಣೆ

2000 ಚ.ಮೀ.ಗೂ ಹೆಚ್ಚಿನ

- ನೋಂದಾಯಿತ ವಾಸ್ತುಶಿಲ್ಪಿ ಅಥವಾ ಎಂಜಿನಿಯರ್‌ರನ್ನು ಸಂಪರ್ಕಿಸಿ
- ಯಾವುದೇ ರೀತಿಯ ನಿವೇಶನಗಳಿಗಾಗಿ https://bpas.bbmpgov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ
- ಅಗತ್ಯ ದಾಖಲೆಗಳು ಮತ್ತು ಕ್ಯಾಡ್ ಡ್ರಾಯಿಂಗ್ ಅನ್ನು ಅಪ್‌ಲೋಡ್ ಮಾಡಿ
- ಆರಂಭಿಕ ಪರಿಶೀಲನಾ ಶುಲ್ಕ ರೂ.500 ಅನ್ನು ಪಾವತಿಸಿ
- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ (ಫ್ಲಾಟ್‌ಗಳಿಗೆ ಅರ್ಹತೆಯಿಲ್ಲ)
- ನಿವೇಶನಕ್ಕೆ ಭೇಟಿ ನೀಡುವ ಮೂಲಕ ಪರಿಶೀಲನೆ
- ಅರ್ಹತಾನುಸಾರ ಅನುಮೋದನೆ
- ಅನ್ವಯವಾಗುವ ಶುಲ್ಕಗಳ ಪಾವತಿ
- ಅರ್ಹತಾನುಸಾರ "ಏಕನಿವೇಶನ" ಅನುಮೋದನೆ ಪ್ರಮಾಣಪತ್ರ, ಡ್ರಾಯಿಂಗ್ ಮತ್ತು ಎ-ಖಾತಾ ವಿತರಣೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ಕ್ರಿಪ್ಟೋ ಕರೆನ್ಸಿ ನೆಪ: ಲಕ್ಷಾಂತರ ರು. ವಂಚನೆ

ಸುಳ್ಯ: ಆ್ಯಪ್ವೊಂದರ ಮೂಲಕ ಪರಿಚಯವಾದ ವ್ಯಕ್ತಿ ತಿಳಿಸಿದಂತೆ ಕ್ರಿಪ್ಟೋ ಕರೆನ್ಸಿ ಇನ್ವೆಸ್ಟ್‌ಮೆಂಟ್ ಆ್ಯಂಡ್ ಟ್ರೇಡಿಂಗ್ ಹೆಸರಲ್ಲಿ ಸುಳ್ಯದ ವ್ಯಕ್ತಿಯೊಬ್ಬರಿಗೆ ಲಕ್ಷಾಂತರ ರೂಪಾಯಿ ವಂಚಿಸಿರುವ ಬಗ್ಗೆ ಮಂಗ ಳೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಸುಳ್ಯದ ಕೆರೆಮೂಲೆಯ 50 ವರ್ಷದ ವ್ಯಕ್ತಿ ವಂಚನೆ ಗೊಳಗಾದವರು. ಸುಳ್ಯದ ವ್ಯಕ್ತಿ ಮೊಬೈಲ್ನಲ್ಲಿ ಚಾಟ್ಜಿಪಿಟಿ ಮೂಲಕ ಆ್ಯಪ್ವೊಂದನ್ನು ಡೌನ್ಲೋಡ್ ಮಾಡಿಕೊಂಡಿದ್ದು, ಆ್ಯಪ್ ಮೂಲಕ ಇಶಾಸಿಂಗ್ ಎಂಬ ವರ ಪರಿಚಯವಾಗಿ ಬಳಿಕ ಟೆಲಿಗ್ರಾಂ ಚಾಟ್ ಮಾಡಿ ಕೊಂಡಿದ್ದು, ಈ ವೇಳೆ ಇಶಾಸಿಂಗ್ ಅವರು ಸುಳ್ಯದ ವ್ಯಕ್ತಿಗೆ ಕ್ರಿಪ್ಟೋ ಕರೆನ್ಸಿ ಇನ್ವೆಸ್ಟ್‌ಮೆಂಟ್ ಆ್ಯಂಡ್ ಟ್ರೇಡಿಂಗ್ ಮಾಡಲು ತಿಳಿಸಿದ್ದು, ಅದಕ್ಕೆ ಒಪ್ಪಿದ ಸುಳ್ಯದ ವ್ಯಕ್ತಿ ಇಶಾಸಿಂಗ್ ಕಳುಹಿಸಿದ ಲಿಂಕ್ ತೆರೆದು ಇಶಾಸಿಂಗ್ ತಿಳಿಸಿದ ಮಾಹಿಯಂತೆ ಮೊದಲಿಗೆ ರೂ.50 ಸಾವಿರ ಹಣ ಹಾಕಿದ್ದು, ಅದಕ್ಕೆ ಪ್ರತಿಯಾಗಿ ಲಾಭಾಂಶ ರೂಪ ದಲ್ಲಿ ರೂ.2,900 ಹಾಗೂ ರೂ.8,000 ಹಣ ಸುಳ್ಯದ ವ್ಯಕ್ತಿಗೆ ಬಂದಿದೆ. ಆ ಹಣವನ್ನು ಅವರು ವಿತ್ಡ್ರಾ ಮಾಡಿ ದ್ದರು. ನಂತರ ಅ.25ರಂದು ರೂ.2,40,000 ಹಣ ವನ್ನು ಹಾಕಲು ತಿಳಿಸಿದಂತೆ ಸುಳ್ಯದ ವ್ಯಕ್ತಿ ಹಣ ಹಾಕಿ ದ್ದು, ಹೂಡಿಕೆಯ ವೆಬ್ಸೈಟ್ನಲ್ಲಿ ಸುಳ್ಯದ ವ್ಯಕ್ತಿಯ ಖಾತೆ ಯಲ್ಲಿ ವಿತ್ಡ್ರಾ ಫಿಟ್ ತೋರಿಸಿದ್ದು, ನಂತರ ಸುಳ್ಯದ ವ್ಯಕ್ತಿ ಹಣವನ್ನು ವಿತ್ಡ್ರಾ ಮಾಡಲು ಕೇಳಿದಾಗ ಖಾತೆಯ ಕೊನೆಯ ನಂಬ್ರ ಬದಲಾಯಿಸಿರುವುದು ಕಂಡು ಬಂದಿದೆ. ಈ ಬಗ್ಗೆ ಸಂಶಯಗೊಂಡು ವಿಚಾರಿಸಿದಾಗ ಇದೊಂದು ಮೋಸದ ಜಾಲ ಎಂಬುದು ತಿಳಿದು ಬಂದಿದೆ. ರೂ.2,90,000 ಹಣಪಡೆದು ವಂಚಿಸಿದವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಸುಳ್ಯದ ವ್ಯಕ್ತಿ ಸೆನ್ ಠಾಣೆಗೆ ದೂರು ನೀಡಿದ್ದಾರೆ.

ಸಿಮೆಂಟ್ ಹೆಸರಿನಲ್ಲಿ 12 ಲಕ್ಷ ರು. ವಂಚನೆ

ಉಡುಪಿ: ಸಿಮೆಂಟ್ ಕಳುಹಿಸಿ ಕೊಡುತ್ತೇನೆ ಎಂದು ನಂಬಿಸಿ ವ್ಯಕ್ತಿಯೊಬ್ಬ 12 ಲಕ್ಷ ರೂ. ವಂಚಿಸಿದ ಬಗ್ಗೆ ಕುಂದಾಪುರ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ. ಯು. ಸತೀಶ್ ಕುಮಾರ್‌ಶೆಟ್ಟಿ ಉಪ್ಪುಂದ ಅವರು ಹಂಗಳೂರು ಗ್ರಾಮದ ನಗು ಸ್ಕ್ಯಾರ್‌ಪ್ರೈ ಲಿಮಿಟೆಡ್ ನಲ್ಲಿ ಅಕೌಂಟೆಂಟ್ ಆಗಿದ್ದು, ಕಂಪನಿಗೆ ಸಂಬಂಧಿಸಿ ತಲ್ಲೂರಿನಲ್ಲಿ ಹೊಸದಾಗಿ ನಿರ್ಮಾಣ ಆಗುವ ಕಟ್ಟಡಕ್ಕೆ ಸಿಮೆಂಟ್ ಪಡೆಯಲೆಂದು ಇಂಡಿಯಾ ಮಾರ್ಟ್ ಎಂಬ ಆನ್ಲೈನ್ ಶಾಪಿಂಗ್ ವೆಬ್ ಸೈಟ್ ನಲ್ಲಿ ಹುಡುಕಿ ದರು. ಅದರಲ್ಲಿ ಖ್ಯಾತ ಸಿಮೆಂಟ್ ಕಂಪೆನಿಯೊಂದರ ಮಾರ್ಕೆಟಿಂಗ್ ಮ್ಯಾನೇಜರ್‌ಎಂದು ಹೇಳಿ ಪರಿಚಯಿಸಿಕೊಂಡು ಒಂದು ಬ್ಯಾಗ್ ಗೆ 300 ರೂ. ರಂತೆ 5,000 ಸಿಮೆಂಟ್ ಬ್ಯಾಗ್ ಗೆ 15 ಲಕ್ಷ ರೂ. ನೀಡುವಂತೆ ಕೇಳಿದ್ದ. ಆತನ ಮಾತನ್ನು ನಂಬಿದ ದೂರುದಾರರು ಅವನು ಕಳುಹಿಸಿಕೊಟ್ಟ ಕೊಟೇಶನ್ ನಿಜವೆಂದು ನಂಬಿ ತಲಾ 6 ಲಕ್ಷ ರೂ.ಯಂತೆ 2 ಬಾರಿ 12 ಲಕ್ಷ ರೂ. ಅನ್ನು ಆರೋಪಿ ನೀಡಿದ್ದ ಖಾತೆಗೆ ಜಮೆ ಮಾಡಿದ್ದರು. ಬಳಿಕ ಆರೋಪಿಯ ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನದಿಗೆ ಬಿದ್ದು ಯುವಕ ಸಾವು

ಉಡುಪಿ : ಮಲ್ಪೆ ಸೀವಾಕ್ ಪಕ್ಕದ ನದಿಯಲ್ಲಿ ಝಾರ್ಖಂಡ್ ಮೂಲದ ಮನೀಶ್ ಮಾಂಜಿ (38) ಅವರು ಮೃತದೇಹ ಪತ್ತೆಯಾಗಿರುವುದರ ಬಗ್ಗೆ ಮಲ್ಪೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅ. 23ರ ಬೆಳಗ್ಗೆ 9 ಗಂಟೆ ಸುಮಾರಿಗೆ ಆಕಸ್ಮಿಕವಾಗಿ ನೀರಿಗೆ ಬಿದ್ದು ಮೃತಪಟ್ಟಿರ ಬಹುದೆಂದು ಶಂಕಿಸಲಾಗಿದೆ.

ಮದರಸ ಕಾಮಗಾರಿಗೆ 10 ಲಕ್ಷ ಅನುದಾನ

ಸುಳ್ಯ: ತಾಲೂಕಿನ ಸಂಪಾಜೆ ಗ್ರಾಮದ ಗೂನಡ್ಕ ಪೇರಡ್ಕ ಮೊಹಿದ್ದೀನ್ ಜುಮಾ ಮಸೀದಿ ಅಧೀನದಲ್ಲಿರುವ ತೆಕ್ಕಿಲ್ ಮೊಹಮದ್ ಹಾಜಿ ಸ್ಮಾರಕ ತಕ್ವಿಯತುಲ್ ಇಸ್ಲಾಂ ಮದರಸ ಕಟ್ಟಡ ಅಭಿವೃದ್ಧಿ ಕಾಮಗಾರಿಗೆ ಸರಕಾರದ ವಕ್ಫ್ ಇಲಾಖೆಯಿಂದ 10 ಲಕ್ಷ ಅನುದಾನ ಮಂಜೂರು ಆಗಿದೆ. ಅನುದಾನ ಬಿಡುಗಡೆಗೆ ಕರ್ನಾಟಕ ಸರಕಾರದ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷರಾದ ಪೇರಡ್ಕ ಗೂನಡ್ಕ ಮೋಹಿದ್ದೀನ್ ಜುಮ ಮಸ್ಜಿದ್ ಅಧ್ಯಕ್ಷರಾದ ಟಿ.ಎಂ ಶಾಹೀದ್ ತೆಕ್ಕಿಲ್ ಅವರು ವಸತಿ ಅಲ್ಪಸಂಖ್ಯಾತರ ಇಲಾಖೆ ಹಾಗು ವಕ್ಫ್ ಸಚಿವ ಝಮೀರ್‌ಅಹಮ್ಮದ್ ಖಾನ್ ಅವರಿಗೆ ಮನವಿ ಮಾಡಿದ್ದರು.

'ರೈಲ್ವೇ ಕೆಳ ಸೇತುವೆ ಚಲೋ' ಕಾಂಗ್ರೆಸಿನಿಂದ ಆಂದೋಲನ

ಸೇತುವೆ ಕಾಮಗಾರಿ ಆಮೆಗತಿ ಖಂಡಿಸಿ ಶಾಸಕ ಐವನ್ ಡಿಸೋಜ ನೇತೃತ್ವದಲ್ಲಿ ಪ್ರತಿಭಟನೆ

ಮಂಗಳೂರು: ಮಹಾಕಾಳಿಪಡ್ಪು ರೈಲ್ವೆ ಕೆಳ ಸೇತುವೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದನ್ನು ಖಂಡಿಸಿ ವಿಧಾನ ಪರಿಷತ್ ಶಾಸಕ ಐವನ್ ಡಿಸೋಜ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಅಬ್ದುಲ್ ಸಲೀಂ ನೇತೃತ್ವದಲ್ಲಿ ಕಾಂಗ್ರೆಸ್ನಿಂದ ಶನಿವಾರ ರೈಲ್ವೇ ಕೆಳಸೇತುವೆ ಚಲೋ ಪ್ರತಿಭಟನೆ ನಡೆಯಿತು.

ಸೇತುವೆ ಕಾಮಗಾರಿ ನಡೆಯುವ ಸ್ಥಳಕ್ಕೆ ತೆರಳಿದ ಪ್ರತಿಭಟನಾಕಾರರು ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿ ಸಲು ಸ್ಮಾರ್ಟ್ ಸಿಟಿಯ ಮ್ಯಾನೇಜರ್ ಅರುಣ್ ಪ್ರಭಾರನ್ನು ಒತ್ತಾಯಿಸಿದರು.

ಈ ಸಂದರ್ಭ ಮುಂದಿನ 30 ದಿನಗಳ ಒಳಗಡೆ ಕಾಮಗಾರಿಯನ್ನು ಮುಗಿಸಿ ಸಾರ್ವಜನಿಕರ ಉಪಯೋಗಕ್ಕೆ ನೀಡಿವುದಾಗಿ ಅರುಣ್ ಪ್ರಭಾರವರು ಪ್ರತಿಭಟನಾಕಾರರಿಗೆ ನಿಯೋಗಕ್ಕೆ ಭರವಸೆ ನೀಡಿದರು.

ಕಾಮಗಾರಿ ಅಮೆಗತಿಯಲ್ಲಿ ನಡೆಯುತ್ತಿದ್ದು, ಮಳೆಯ ಕಾರಣದಿಂದ ಕಾಮಗಾರಿ ಕುಂಠಿತಗೊಂಡಿದೆ ಎಂದು ಹೇಳುವ ಉತ್ತರ ಸಮಂಜಸವಲ್ಲ ಕೂಡಲೇ ಕಾಮಗಾರಿ ಮುಗಿಸಬೇಕು ಇಲ್ಲದೇ ಇದ್ದಲ್ಲಿ ಪಂಪ್ವೆಲ್ ಮತ್ತು ಕಂಕನಾಡಿಯಲ್ಲಿ ಉದ್ದೇಶಿಸಿರುವ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು. ಯಾವುದೇ ಕಾರಣಕ್ಕೂ ಮಹಾಕಾಳಿಪಡ್ಪು ರೈಲ್ವೆ ಅಂಡರ್‌ಬ್ರಿಡ್ಜ್ನ ಸಮಸ್ಯೆ ಪರಿಹಾರವಾಗದೇ ಪಂಪವೆಲ್ ಮತ್ತು ಕಂಕನಾಡಿ ಕಾಮಗಾರಿಗಳನ್ನು ಮುಂದುರಿಸಬಾರದೆಂದು ಐವನ್ ಡಿಸೋಜಾ ಇವರು ಪೋಲಿಸ್ ಕಮಿಷನರ್‌ಮತ್ತು ಮಂಗಳೂರು ಸಂಚಾರ ವಿಭಾಗದ ಡಿಸಿಪಿಯವರನ್ನು ಒತ್ತಾಯಿಸಿದ್ದಾರೆ.

ಸೇತುವೆ ಕಾಮಗಾರಿ ಆಮೆಗತಿ ಖಂಡಿಸಿ ಶಾಸಕ ಐವನ್ ಡಿಸೋಜ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಕಳೆದ ನಾಲ್ಕು ವರ್ಷಗಳಿಂದ ಈ ಸೇತುವೆ ಕಾಮಗಾರಿ ನಡೆಯುತ್ತಿದೆ. ಮಳೆಗಾಲದಲ್ಲಿ ಜನಸಾಮಾನ್ಯರು ಬವಣೆ ಪಡುವಂತಾಗಿದೆ. ಹಾಗೂ ಚರಂಡಿಗಳಲ್ಲಿ ನೀರು ನಿಂತು ಡೆಂಗ್ಯೂ ಮಲೇರಿಯಾದಂತಹ ಕಾಯಿಲೆಯಿಂದ ಬಳಲುವಂತಾಗಿದೆ ಎಂದು ಐವನ್ ಡಿಸೋಜಾ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಬ್ದುಲ್ ಸಲೀಂ ಇಲ್ಲಿನ ಸೇತುವೆ ಕಾಮಗಾರಿ ಅವೈಜ್ಞಾನಿಕವಾಗಿದೆ. ಇದು ನೀರು ಸಂಗ್ರಹಕ್ಕೆ ಮಾಡಲಾದ ಟ್ಯಾಂಕ್ನಂತಿದ್ದು, ಸಾರ್ವಜನಿಕರಿಗೆ ಉಪಯೋಗವಾಗದು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಾಯಕರಾದ ಆಲ್‌ಸ್ಟನ್ ಡಿಕುನ್ಹಾ, ಸತೀಶ್ ಪೆಂಗಲ್, ಚಂದ್ರಕಲಾ ಜೋಗಿ, ಸುಧಾಕರ್,ಶಾಲಿನಿ, ನವಾಜ್ ಜೆಪ್ಪು, ಮನೀಶ್ ಬೋಳಾರ್ ,ನೆಲ್ಸನ್, ಹೈದರ್‌ಬೋಳಾರ್,ವಿಕಾಸ್ ಶೆಟ್ಟಿ, ನೀತು ಡಿಸೋಜಾ, ಹಬೀಬುಲ್ಲಾ ಕಣ್ಣೂರು, ಸ್ಥಳೀಯರಾದ ಬಾಬು ಸುವರ್ಣ,ಲತೀಫ್ ಪಾಟ್ನಾ, ಜೆ. ಇಬ್ರಾಹಿಂ, ಸಪ್ನ ಜೆಪ್ಪುಪಾಟ್ನಾ, ಅಬ್ದುಲ್ ವಹಾಬ್, ಅಜ್ಮಲ್, ಹಬಿಬುಲ್ಲ ಮೊದಲಾದವರು ಉಪಸ್ಥಿತರಿದ್ದರು.

ಬಿಜೆಪಿಯ ಕಾರ್ಮಿಕ ಪ್ರಕೋಷ್ಠ ಡಿಸಿಗೆ ಮನವಿ

ಉಡುಪಿ: ಕಾರ್ಮಿಕರಿಗೆ ವೈದ್ಯಕೀಯ ನೆರವಿನ ಇ.ಎಸ್.ಐ. ಯೋಜನೆ ಅನುಷ್ಠಾನ ಮಾಡುವಲ್ಲಿ ರಾಜ್ಯ ಸರಕಾರದ ಕಾರ್ಮಿಕ ಇಲಾಖೆ ಯ ವಿಳಂಬ ನೀತಿಯನ್ನು ಖಂಡಿಸಿ ಉಡುಪಿ ಜಿಲ್ಲೆಯ ಭಾರತೀಯ ಜನತಾ ಪಕ್ಷದ ಅಸಂಘಟಿತ ಕಾರ್ಮಿಕರ ಪ್ರಕೋಷ್ಠ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ರಾಜ್ಯ ಕಾರ್ಮಿಕ ಇಲಾಖೆಯ ಮೂಲಕ ಅನುಷ್ಠಾನ ಗೊಳ್ಳುತ್ತಿರುವ ಇ.ಎಸ್.ಐ. ಯೋಜನೆ ಉಡುಪಿ ಜಿಲ್ಲೆಯಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿ ಸಕಾಲದಲ್ಲಿ ಒಪ್ಪಂದ ಮತ್ತು ನೊಂದಾವಣೆ ಮಾಡಿಕೊಳ್ಳದೇ ಇರುವುದರಿಂದ ಕಾರ್ಮಿಕರು ಚಿಕಿತ್ಸೆಗಾಗಿ ಪರದಾಡುವಂತಾಗಿದೆ. ಭಾರತೀಯ ಜನತಾ ಪಕ್ಷದ ಶಾಸಕರು ಮತ್ತು ಸಂಸದರ ಮೂಲಕ ಒತ್ತಡ ತಂದ ಹಿನ್ನೆಲೆಯಲ್ಲಿ ಪ್ರಸ್ತುತ ನ. 15ರವರೆಗೆ ಮಾತ್ರ ಸೌಲಭ್ಯವನ್ನು ವಿಸ್ತರಿಸಲಾಗಿದೆ. ನ. 15ರ ಅನಂತರ ಮತ್ತೆ ನೊಂದಣಿ ಸೌಲಭ್ಯ ಪಡೆಯಲು ರೋಗಿಗಳು ಪರದಾಡುವ ಸಾಧ್ಯತೆಯಿದೆ. ಹೀಗಾಗಿ ಮುಖ್ಯಮಂತ್ರಿಗಳು ಕಾರ್ಮಿಕ ಸಚಿವರಿಗೆ ಸೂಕ್ತ ನಿರ್ದೇಶನ ನೀಡಿ ಬಡ ಕಾರ್ಮಿಕರಿಗೆ ತೊಂದರೆ ನೀಡುವುದನ್ನು ನಿಲ್ಲಿಸಿ ಇಎಸ್ಐ ಸೌಲಭ್ಯವನ್ನು 3 ರಿಂದ 5 ವರ್ಷಗಳವರೆಗೆ ವಿಸ್ತರಿಸಲು ಭಾರತೀಯ ಜನತಾ ಪಕ್ಷದ ಅಸಂಘಟಿತ ಕಾರ್ಮಿಕ ಪ್ರಕೋಷ್ಠ ಸರಕಾರವನ್ನು ಒತ್ತಾಯಿಸಿದೆ. ಪಕ್ಷದ ಅಸಂಘಟಿತ ಕಾರ್ಮಿಕ ಪ್ರಕೋಷ್ಠ ಜಿಲ್ಲಾ ಸಂಚಾಲಕ ಅರುಣ್ ಕುಮಾರ್‌ಬಾಣ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ, ಅಲೆವೂರು ಶ್ರೀಕಾಂತ್ ನಾಯಕ್, ಜ್ಯೋತಿ ಉದಯ್ ಕುಮಾರ್,ಸಂತೋಷ್ ಪೂಜಾರಿ ನೇರಳಕಟ್ಟೆ, ನಳಿನಿ ಪ್ರದೀಪ್, ಸಂಧ್ಯಾ ಇದ್ದರು.

ಉಡುಪಿ ಜಿಲ್ಲೆಯ ಬಿಜೆಪಿಯ ಕಾರ್ಮಿಕರ ಪ್ರಕೋಷದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಸಂಘಪರಿವಾರದ ಮನಸ್ಥಿತಿಯ ಪುತ್ತೂರು ಶಾಸಕರು

ಪುತ್ತೂರು: ಪುತ್ತೂರಿನ ಈಶ್ವರಮಂಗಲದಲ್ಲಿ ಅ. 22 ರಂದು ನಡೆದ ಗೋಸಾಗಣೆಗಾರನ ಮೇಲಿನ ಶೂಟೌಟ್ ಪ್ರಕರಣದಲ್ಲಿ ಹಲವು ಗೊಂದಲಗಳಿದ್ದು, ಈ ಪ್ರಕರಣವನ್ನು ಸರಕಾರ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಎಸ್ .ಡಿ.ಪಿ.ಐ ಪಕ್ಷ ಒತ್ತಾಯಿಸಿದೆ.

ಪುತ್ತೂರು ಪ್ರೆಸ್ ಕ್ಲಬ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್ಡಿ.ಪಿ.ಐ ಪಕ್ಷದ ಜಿಲ್ಲಾಧ್ಯಕ್ಷ ಅನ್ವರ್‌ಸಾದತ್ ಹಾಸನದ ಸಂತೆಯಿಂದ ಜಾನುವಾರುಗಳನ್ನು ಖರೀದಿಸಿ ಕೇರಳ ಕಡೆಗೆ ಸಾಗಿಸುವ ಸಂದರ್ಭದಲ್ಲಿ ಪೋಲೀಸರು ವಾಹನವನ್ನು ನಿಲ್ಲಿಸಲು ಸೂಚಿಸಿದರೂ ವಾಹನವನ್ನು ನಿಲ್ಲಿಸದೆ ಪೋಲೀಸ್ ವಾಹನಕ್ಕೆ ಡಿಕ್ಕಿ ಹೊಡೆದು ಕೊಲೆಯತ್ನ ನಡೆಸಿದ್ದರು ಎಂದು ಪೋಲೀಸರು ತಮ್ಮ ಹೇಳಿಕೆಯನ್ನು ಈಗಾಗಲೇ ನೀಡಿದ್ದಾರೆ. ಆದರೆ ಘಟನಾ ಸ್ಥಳವನ್ನು ಪರಿಶೀಲಿಸಿದ ಎಸ್.ಡಿ.ಪಿ.ಐ ನಿಯೋಗಕ್ಕೆ ಕಂಡ ಮಾಹಿತಿ ಪ್ರಕಾರ ಕಾಲಿಗೆ ಗುಂಡೇಟು ತಾಗಿದಾಗ ಸುರಿದ ರಕ್ತದ ಕಲೆಗಳು ಈಚರ್‌ವಾಹನದ ಮುಂಭಾಗದಲ್ಲಿದೆ.

ಸಾಮಾನ್ಯವಾಗಿ ಪೋಲೀಸರು ಬೆನ್ನಟ್ಟಿದ ಸಂದರ್ಭದಲ್ಲಿ ವಾಹನ ಬಿಟ್ಟು ಹೋಗುವಾಗ ಎಲ್ಲರೂ ಹಿಮ್ಮುಖವಾಗಿ ಪಲಾಯನ ಮಾಡುತ್ತಾರೆ. ಯಾಕೆಂದರೆ ಮುಂಭಾಗದಲ್ಲಿ ಪೋಲೀಸ್ ವಾಹನ ಇರುವ ಕಾರಣಕ್ಕೆ ಯಾರೂ ಕೂಡಾ ಪೋಲೀಸರು ಇರುವ ಕಡೆಗೆ ಓಡುವ ಸಾಹಸವನ್ನು ಮಾಡೋದಿಲ್ಲ. ಆದರೆ ಈಶ್ವರಮಂಗಲದ ಬೆಳ್ಳಿ ಚಡವಿನಲ್ಲಿ ನಡೆದ ಘಟನೆಯಲ್ಲಿ ವಾಹನದ ಮುಂಭಾಗದಲ್ಲೇ ಪೋಲೀಸರು ಗುಂಡು ಹಾರಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎಸ್ಡಿ.ಪಿ.ಐ ಪಕ್ಷದ ಜಿಲ್ಲಾಧ್ಯಕ್ಷ ಅನ್ವರ್‌ಸಾದತ್ ಮಾತನಾಡಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿಶ ಹೇಳಿಕೆ ನೀಡಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್‌ರೈ ಅವರ ವಿರುದ್ಧ ಪೋಲೀಸರು ಸೋಮೋಟೋ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿದರು. ಅಲ್ಪಸಂಖ್ಯಾತರನ್ನೇ ಗುರಿಯಾಗಿಸಿ ಈ ಹೇಳಿಕೆಯನ್ನು ನೀಡಿರುವ ಶಾಸಕರು ಸಂಘಪರಿವಾರ ಮತ್ತು ಬಿಜೆಪಿ ಮನಸ್ಥಿತಿಯಿಂದ ಇನ್ನೂ ಹೊರಬಂದಿಲ್ಲ.ಅಲ್ಪಸಂಖ್ಯಾತರ ಮತದಿಂದ ಗೆದ್ದಿರುವ ಶಾಸಕರು ನಿರಂತರವಾಗಿ ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ಮಾಡಿದ್ದಾರೆ. ಅವರನ್ನು ಕಾಂಗ್ರೆಸ್ ಪಕ್ಷದಿಂದ ಹೊರ ಹಾಕಬೇಕೆಂದು ಒತ್ತಾಯಿಸಿದರು,

ಪಟಾಕಿ ಅಂಗಡಿಯಿಂದ ಹಪ್ತಾ ವಸೂಲಿ

ಮಂಗಳೂರು: ಬಜ್ಪೆ ಪರಿಸರದ ಪಟಾಕಿ ಅಂಗಡಿಯಲ್ಲಿ ಪಟಾಕಿ ಖರೀದಿ ಹಣ ನೀಡದೇ ಹಪ್ತಾ ವಸೂಲಿ ಮಾಡುತ್ತಿದ್ದ ಆರೋಪದ ಮೇಲೆ ಫಾಜಿಲ್ ಕೊಲೆ ಪ್ರಕರಣದ ಆರೋಪಿ, ರೌಡಿಶೀಟರ್‌ಪ್ರಶಾಂತ್ ಅಲಿಯಾಸ್ ಪಚ್ಚು ಮತ್ತು ಆತನ ಸಹವರ್ತಿ ಮೇಲೆ ಬಜ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ಟೋಬರ್22ರಂದು ಪಟಾಕಿ ಮಾರಾಟ ಮಾಡುತ್ತಿದ್ದವರನ್ನು ಹೆದರಿಸಿ ಹಣ ಕೇಳಿದ್ದಾನೆ. ಅಲ್ಲದೆ ಹಣ ಕೊಡದೆ ಪಟಾಕಿ ಕೊಡಿ ಎಂದು ಹೆದರಿಸಿದ್ದಾರೆ. ಬಳಿಕ ಅಂಗಡಿಯವರು ಹೆದರಿಕೊಂಡು ಸೈಲೆಂಟ್ ಇದ್ದರು. ಆದರೆ ಒಬ್ಬರು ಬಂದು ಘಟನೆ ಕುರಿತಂತೆ ಪೊಲೀಸರಿಗೆ ದೂರು ನೀಡಿದ್ದಾರೆ. ಆರೋಪಿ ಪ್ರಶಾಂತ್, ಇತ್ತೀಚೆಗೆ ಕೊಲೆಯಾದ ಸುಹಾಸ್ ಶೆಟ್ಟಿ ಸಹವರ್ತಿಯಾಗಿದ್ದು ಬಜ್ಪೆಯಲ್ಲಿ ರೌಡಿಶೀಟರ್ ಆಗಿದ್ದಾನೆ. ಈತನ ಜೊತೆಗಿದ್ದ ಅಶ್ವಿತ್ ಕ್ರಿಮಿನಲ್ ಹಿನ್ನೆಲೆಯಿಲ್ಲ, ಇದೀಗ ರೌಡಿಶೀಟರ್‌ಜೊತೆ ತಿರುಗಾಡಿ ಕೇಸ್ ಹಾಕಿಸಿಕೊಂಡಿದ್ದಾನೆ.

ಘಟನೆ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಪೊಲೀಸ್ ಕಮಿಷನರ್‌ಸುಧೀರ್‌ರೆಡ್ಡಿ, ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳ ಜೊತೆಗೆ ತಿರುಗಾಡದಂತೆ ಈ ಮೊದಲೇ ಹೇಳಿದ್ದೆ. ರೌಡಿಗಳ ಜೊತೆಗಿದ್ದು ಅಪರಾಧದಲ್ಲಿ ಸಿಲುಕಬೇಡಿ ಎಂದೂ ಹೇಳಿದ್ದೆ. ನಾವು ನಮ್ಮ ಕೆಲಸ ಮಾಡ್ತೀವಿ. ಪೊಲೀಸರು ತಮ್ಮ ಕೆಲಸ ಮಾಡುತ್ತಾರೆ ಎಂದು ವಾರ್ನಿಂಗ್ ಮಾಡಿದ್ದಾರೆ.

ಐಸಿಯು ಸಂಖ್ಯೆ ಕಡಿಮೆ: ಸೂಕ್ತ ಕ್ರಮಕ್ಕೆ ಶಾಸಕ ಕಾಮತ್ ಪತ್ರ



ಮಂಗಳೂರು: ವೆನ್ಲಾಕ್ ಆಸ್ಪತ್ರೆಯಲ್ಲಿ ಐಸಿಯು ಘಟಕಗಳ ಸಂಖ್ಯೆಗಳು ಕಡಿಮೆಯಿರುವ ಕಾರಣ ತುರ್ತು ಸಂದರ್ಭದಲ್ಲಿ ರೋಗಿಗಳು ಪರದಾಡುವಂತಾಗಿದೆ. ದಯವಿಟ್ಟು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ಕ್ಷೇತ್ರದ ಜವಾಬ್ದಾರಿಯುತ ಶಾಸಕನಾಗಿ ಆರೋಗ್ಯ ಸಚಿವರಿಗೆ ಪತ್ರ ಬರೆದು ಪತ್ರಿಕಾ ಹೇಳಿಕೆ ನೀಡಿದ್ದಕ್ಕೆ ಕೆಲವು ಕಾಂಗ್ರೆಸ್ ನಾಯಕರು ಬಾಲಿಶ ಹೇಳಿಕೆ ನೀಡಿ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ದುರಂತವೆಂದು ಶಾಸಕ ವೇದವ್ಯಾಸ ಕಾಮತ್ ಪ್ರತಿಕ್ರಿಯಿಸಿದರು.

ವೆನ್ಲಾಕ್ ಆಸ್ಪತ್ರೆಗೆ ನಮ್ಮ ಜಿಲ್ಲೆ ಮಾತ್ರವಲ್ಲದೇ, ಸುತ್ತಮುತ್ತಲಿನ 9-10 ಜಿಲ್ಲೆಗಳಿಂದ ರೋಗಿಗಳು ಚಿಕಿತ್ಸೆಗಾಗಿ ಬರುತ್ತಾರೆ. ಹಾಗೆ ಬಂದ ಅನೇಕರು ಒಂದು ಐಸಿಯು ಬೆಡ್ ದೊರಕಿಸಿಕೊಡಿ ಎಂದು ಮನವಿ ಮಾಡುತ್ತಾರೆ. ಆ ವೇಳೆ ಆಸ್ಪತ್ರೆಯ ಸಂಬಂಧಪಟ್ಟವರಿಗೆ ಕರೆ ಮಾಡಿದಾಗ ಬಹುತೇಕ ಬಾರಿ ಬೆಡ್ ಖಾಲಿ ಇಲ್ಲ ಎಂಬ ಉತ್ತರವೇ ಬರುತ್ತದೆ. ಇದು ಹೆಚ್ಚಿನ ಶಾಸಕರ ಅನುಭವಕ್ಕೂ ಬಂದಿದೆ. ಆಸ್ಪತ್ರೆಯವರ ಈ ಅಸಹಾಯಕತೆಯನ್ನು ನೋಡಿಯೇ ಇಲ್ಲಿನ ಐಸಿಯು ಘಟಕಗಳ ಸಂಖ್ಯೆಯನ್ನು ಕನಿಷ್ಠ 200 ಕ್ಕೆ ಹೆಚ್ಚಿಸಿ ಎಂದು ನಾನು ಸರ್ಕಾರಕ್ಕೆ ಆಗ್ರಹಿಸಿದ್ದು. ಇಂತಹ ಸೂಕ್ಷ್ಮ ವಿಚಾರದಲ್ಲೂ ರಾಜಕೀಯವನ್ನು ಹುಡುಕುವ ಕೆಲವು ಕಾಂಗ್ರೆಸ್ ನಾಯಕರಿಗೆ ಬಡ ರೋಗಿಗಳ ಸಮಸ್ಯೆ ಅರ್ಥವಾಗುವುದಿಲ್ಲ ಎಂದರು.

2018 ರಲ್ಲಿ ನಾನು ಶಾಸಕನಾದಾಗ ಕೇವಲ 16 ಐಸಿಯು ಇದ್ದವು. ನಂತರ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋಟ ಶ್ರೀನಿವಾಸ ಪೂಜಾರಿ, ಸುನಿಲ್ ಕುಮಾರ್,ಎಸ್ ಅಂಗಾರ ರವರ ಸಹಕಾರ ಹಾಗೂ ಸಂಸದರಾಗಿದ್ದ ನಳಿನ್ ಕುಮಾರ್‌ಕಟೀಲು ರವರು ತಮ್ಮ ಒಂದು ವರ್ಷದ ಸಂಸದರ ನಿಧಿಯನ್ನು ಸಂಪೂರ್ಣವಾಗಿ ವೆನ್ಲಾಕ್ ಆಸ್ಪತ್ರೆಗೆ ನೀಡಿದ್ದರಿಂದ ಕೊರೋನ ಸಾಂಕ್ರಾಮಿಕದ ಸಂದರ್ಭದಲ್ಲಿ 116 ಕ್ಕೂ ಹೆಚ್ಚು ಐಸಿಯು ಗಳನ್ನು ನಿರ್ಮಿಸಲಾಗಿತ್ತು. ಜೊತೆಗೆ ಈ ಹಿಂದೆ ಕೇವಲ 50 ರಷ್ಟಿದ್ದ ಆಕ್ಸಿಜನ್ ಬೆಡ್ ಗಳನ್ನು 250 ಕ್ಕೂ ಏರಿಸಲಾಗಿತ್ತು. ಕಳೆದ ಎರಡೂವರೆ ವರ್ಷಗಳಿಂದ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ರವರು ಈ ನಿಟ್ಟಿನಲ್ಲಿ ಏನು ಕೊಡುಗೆ ನೀಡಿದ್ದಾರೆ? ಒಂದಾದರೂ ಹೆಚ್ಚುವರಿ ಐಸಿಯು ನಿರ್ಮಿಸಿದ್ದಾರಾ? ಎಂಬುದನ್ನು ಕಾಂಗ್ರೆಸ್ಸಿನ ವಿಧಾನ ಪರಿಷತ್ ಸದಸ್ಯರು ಬಹಿರಂಗ ಪಡಿಸಲಿ ನೋಡೋಣ ಎಂದು ಶಾಸಕರು ಸವಾಲೆಸೆದರು.

ಸಮಾಜ ಸೇವಾ ಟ್ರಸ್ಟ್ ನಿಂದ ಸಾಧಕರಿಗೆ ಸನ್ಮಾನ

ಸುಬ್ರಹ್ಮಣ್ಯ : ಸುಬ್ರಹ್ಮಣ್ಯದ ರವಿ ಕಕ್ಕೆ ಪದವು ಸಮಾಜ ಸೇವಾ ಟ್ರಸ್ಟ್,ರೋಟರಿ ಕ್ಲಬ್ ಸುಬ್ರಹ್ಮಣ್ಯ,ಹಾಗೂ ಸೀನಿಯರ್‌ಚೇಂಬರ್‌ಇಂಟರ್ನ್ಯಾಷನಲ್ ಸುಬ್ರಹ್ಮಣ್ಯ ಲೀಜನ್ ವತಿಯಿಂದ ಖ್ಯಾತ ಉದ್ಯಮಿ, ಸಮಾಜಸೇವಕ, ಚಲನಚಿತ್ರ ನಟ,ನಿರ್ಮಾಪಕ, ಅಖಿಲ ಭಾರತ ಬಿಲ್ಲವ ಮಹಾಮಂಡಲದ ಮುಲ್ಕಿಯ ಅಧ್ಯಕ್ಷ ಡಾ. ರಾಜಶೇಖರ ಕೋಟ್ಯಾನ್ ಅವರನ್ನು ಸುಬ್ರಹ್ಮಣ್ಯದ ದೋಣಿಮಕ್ಕಿ ಕುಕ್ಕೆ ಶ್ರೀ ನಿಲಯದ ಸಭಾಂಗಣದಲ್ಲಿ ಗೌರವಿಸಲಾಯಿತು.

ಡಾ.ರಾಜೇಶ್ ಶೇಖರ ಕೋಟ್ಯಾನ್ ಅವರು ಸಮಾಜಕ್ಕೆ ಸಲ್ಲಿಸಿದ ಅಮೋಘ ಸೇವೆಗಾಗಿ ಹಾಗೂ ಚಲನಚಿತ್ರ ರಂಗದಲ್ಲಿ ಸಲ್ಲಿಸಿದ ಸೇವೆ ಮತ್ತು ಬಡವರಿಗಾಗಿ ಸದಾ ದುಡಿಯುತ್ತಿರುವ ಅವರಿಗೆ ಈ ಗೌರವಾರ್ಪಣೆ ಮಾಡಲಾಗಿದೆ ಎಂದು ಸಮಾಜ ಸೇವ ಟ್ರಸ್ಟ್ ನ ಸಂಸ್ಥಾಪಕ ಡಾ. ರವಿಕಕ್ಕೆ ಪದವು ತಿಳಿಸಿದರು. ರವಿ ಕಕ್ಕೆಪದವು ಅವರ ದೋಣಿಮಕ್ಕಿಯ ಕುಕ್ಕೆ ಶ್ರೀ ನಿಲಯದಲ್ಲಿ ಬೆಳಿಗ್ಗೆ ಗಣ ಹೋಮ ಹಾಗೂ ಮಧ್ಯಾಹ್ನ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನೆರವೇರಿತು.

ಇದೇ ಸಂದರ್ಭದಲ್ಲಿ ರಕ್ತದಾನ ಮಾಡಿ ಜೀವ ಉಳಿಸುವ ಕಾರ್ಯದಲ್ಲಿ ತೊಡಗಿರುವ ಬೆಳ್ತಂಗಡಿ ಮೆಚ್ಚಿನ ದವರಾದ ನೆತ್ತರ ಗೋಪಾಲಕೃಷ್ಣ ಶೆಟ್ಟಿ ಹಾಗೂ ಆಪತ್ತು ರಕ್ಷಕ,ಬಡವರ ಬಂಧು ಎಂದೆ ಚಿರಪರಿಚಕರಾಗಿರುವ ಬೆಳ್ತಂಗಡಿ ಕಣಿ ಯೂರಿನ ಅಶೋಕ ಕುಲಾಲ್ ಅವರಿಗೂ ಸನ್ಮಾನಿಸಲಾಯಿತು.

ರವಿ ಕಕ್ಕೆ ಪದವು ಸಮಾಜ ಸೇವಾ ಟ್ರಸ್ಟ್ ನಿಂದ ಸಾಧಕರಿಗೆ ಸನ್ಮಾನ ನಡೆಯಿತು.

ಸಮಾರಂಭದಲ್ಲಿ ಧರ್ಮ ಪತ್ನಿ ಗೀತಾರವಿಕಕ್ಕೆ ಪದವು, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳ ಸಮಿತಿ ಸದಸ್ಯ ಅಶೋಕ್ ನೆಕ್ರಾಜ, ರೋಟರಿ ಕ್ಲಬ್ ಸುಬ್ರಹ್ಮಣ್ಯದ ಅಧ್ಯಕ್ಷ ಜಯಪ್ರಕಾಶ್, ಸೀನಿಯರ್‌ಚೇಂಬರ್ ಸುಬ್ರಹ್ಮಣ್ಯ ಲಿಜನ್ ಅಧ್ಯಕ್ಷ ವೆಂಕಟೇಶ ಹೆಚ್ ಎಲ್, ಸ್ಥಾಪಕ ಅಧ್ಯಕ್ಷ ವಿಶ್ವನಾಥ ನಡು ತೋಟ, ಕಾರ್ಯದರ್ಶಿ ಗೋಪಾಲ್ ಎಣ್ಣೆ ಮಜಲ್, ಸುಬ್ರಹ್ಮಣ್ಯದ ಉದ್ಯಮಿ ಯಜ್ಞೇಶ್ ಆಚಾರ್ ,ಪುತ್ತೂರು ಅಕ್ಷಯ ಕಾಲೇಜ್ ಆಡಳಿತ ಮಂಡಳಿ ಅಧ್ಯಕ್ಷ ಜಯಂತ ನಡುಬೈಲು, ಮುಲ್ಕಿ ಬಿಲ್ಲವ ಸಂಘದ ಪದಾಧಿಕಾರಿಗಳಾದ ಸಂತೋಷ,ದಿನೇಶ್,, ಬಳ್ಪ ದ ಉಮೇಶ್,ಲಕ್ಷ್ಮಣ ಪೂಜಾರಿ, ಮುದ ಲಾದಿ ಪದ್ಮ ಪೂಜಾರಿ ಹಾಜರಿದ್ದರು.

ಸಚಿವರಿಂದ ಕೆಪಿಎಸ್ ಶಾಲೆ ನೂತನ ಕಟ್ಟಡ ಉದ್ಘಾಟನೆ

ಹಿರಿಯೂರು : ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಬ್ಬರೂ ಉತ್ತಮ ವಿದ್ಯಾಭ್ಯಾಸ ಮುಗಿಸಿದ ನಂತರ ಉತ್ತಮವಾದ ಭವಿಷ್ಯ ರೂಪಿಸಿಕೊಳ್ಳಿ ಎಂದು ಸಚಿವರಾದ ಡಿ ಸುಧಾಕರ್‌ಅವರು ಸಲಹೆ ನೀಡಿದರು.

ಮರಡಿಹಳ್ಳಿ ಗ್ರಾಮದಲ್ಲಿ ಶನಿವಾರ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ತರಗತಿಗಳ ನೂತನ ಕಟ್ಟಡ ಉದ್ಘಾಟನೆ ಹಾಗೂ ಪ್ರೌಢಶಾಲೆಯ ಕೊಠಡಿಗಳ ದುರಸ್ತಿ ಅಡುಗೆಮನೆ ಮತ್ತು ಭೋಜನ ಶಾಲೆಯ ಶಂಕುಸ್ಥಾಪನೆ ನೆರವೇರಿಸಿ ನಂತರ ಮಾತನಾಡಿದರು.

ಈ ನೂತನ ಕಟ್ಟಡಗಳು ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣದ ವಾತಾವರಣ ನಿರ್ಮಿಸಲು ಸಹಕಾರಿಯಾಗಲಿವೆ ಎಂದು ಹೇಳಿದರು . ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿ ಇತರರಿದ್ದರು.

ಹಲವು ರೈಲುಗಳ ಸೇವೆಯಲ್ಲಿ ವ್ಯತ್ಯಯ

ಮಂಗಳೂರು : ಸಕಲೇಶಪುರ-ಸುಬ್ರಹ್ಮಣ್ಯ ರೋಡ್ ನಡುವೆ ನಡೆಯುತ್ತಿರುವ ರೈಲ್ವೆ ವಿದ್ಯುದ್ದೀಕರಣ ಕಾರ್ಯದಿಂದಾಗಿ, ಮಂಗಳೂರು ಬೆಂಗಳೂರು ನಡುವೆ ಸಂಚರಿಸುವ ಹಲವು ರೈಲುಗಳ ಸಮಯದಲ್ಲಿ ವ್ಯತ್ಯವಾಗಲಿದ್ದು. ಕೆಲವು ರೈಲುಗಳ ಸಂಚಾರ ರದ್ದು ಮಾಡಲಾಗಿದೆ . ಸಕಲೇಶಪುರ ಹಾಗೂ ಸುಬ್ರಹ್ಮಣ್ ರೋಡ್ ಘಾಟ್ ಸೆಕ್ಷನ್ನಲ್ಲಿ ರೈಲ್ವೇ ಕಾಮಗಾರಿ ಆರಂಭಗೊಳ್ಳುತ್ತಿದೆ. ಈ ಭಾಗದಲ್ಲಿ ರೈಲ್ವೇ ವಿದ್ಯುದ್ದೀಕರಣ ಕಾಮಗಾರಿ ನವೆಂಬರ್2 ರಿಂದ ಆರಂಭಗೊಳ್ಳುತ್ತಿದೆ. ಹೀಗಾಗಿ ಈ ಮಾರ್ಗದಲ್ಲಿ ಸಂಚರಿಸುವ ಹಲವು ರೈಲು ಸೇವೆ ರದ್ದಾಗುತ್ತಿದೆ. ಈ ಕುರಿತು ನೈರುತ್ಯ ರೈಲ್ವೆ ಪ್ರಕಟಣೆ ಹೊರಡಿಸಿದೆ. ಬೆಂಗಳೂರು-ಮಂಗಳೂರು ರೈಲ್ವೇ ಸೇವೆಯಲ್ಲಿ ವ್ಯತ್ಯಯವಾಗುತ್ತಿದೆ.

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸೊರಬ
ಸಿ.ಮಿಸ್.ನಂ : 232/2025
ಅರ್ಜಿದಾರರು:- 1) ಸೈಯದ್ ಅನ್ಸರ್, ಬಿನ್ ಬಾಷಾ ಸಾಬ್ ಸುಮಾರು 40 ವರ್ಷ ಸುಭಾಷ್ ನಗರ, ಕಾನಕೇರಿ ಸೊರಬ, ಸೊರಬ ತಾಲ್ಲೂಕು.
2) ಖೈರುನ್ ಬೀ ಕೋಂ ಬಾಷಾ ಸಾಬ್ ಸುಮಾರು 70 ವರ್ಷ ಸುಭಾಷ್ ನಗರ, ಕಾನಕೇರಿ ಸೊರಬ, ಸೊರಬ ತಾಲ್ಲೂಕು.
3) ನಸಿರಿನ್ ಬಾನು ಬಿನ್ ಬಾಷಾ ಸಾಬ್ ಸುಮಾರು 37 ವರ್ಷ ಸುಭಾಷ್ ನಗರ, ಕಾನಕೇರಿ ಸೊರಬ, ಸೊರಬ ತಾಲ್ಲೂಕು.
-: ವಿರುದ್ಧ :-
ಎದುರುದಾರರು:- ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಲಯ ಸೊರಬ, ಸೊರಬ ತಾಲ್ಲೂಕು.
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು, ಇದರ ವಿಚಾರಣೆಯು ದಿನಾಂಕ 14/11/2025 ರಂದು ಬೆಳಗ್ಗೆ 11 ಗಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.
ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ.
1 ಮತ್ತು 3ನೇ, ಅರ್ಜಿದಾರರ ತಂದೆ, 2ನೇ ಅರ್ಜಿದಾರರ ಗಂಡನಾದ ಭಾಷಾ ಸಾಬ್ ಜಿನ್ ಸೈದು ಸಾಬ್ ಇವರು ಸೊರಬ ತಾಲ್ಲೂಕು, ಸುಭಾಷ್ ನಗರದ ನಮ್ಮ ಮನೆಯಲ್ಲಿ ದಿನಾಂಕ:15/10/2012 ರಂದು ಮರಣ ಹೊಂದಿರುತಾರೆ. ಆ ಸಂಬಂಧ ಅರ್ಜಿದಾರರ ತಂದೆಯ ಮರೆಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ನ್ಯಾಯಾಲಯಾದ ಆದೇಶದ ಮೇರೆಗೆ ಶಿರಸ್ತೇದಾರರು.
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ
ಅರ್ಜಿದಾರರ ಪರ ವಕೀಲರು
ಶ್ರೀ ಓಂಕಾರಪ್ಪ ಎಸ್
ವಕೀಲರು, ಸೊರಬ
ರೋಲ್ ನಂ.ಕೆ.ಎ.ಆರ್.8/2007

ಧರ್ಮಸ್ಥಳ: ಮೂವರಿಗೆ ಎಸ್ಐಟಿ ನೋಟಿಸ್

ಬೆಳ್ತಂಗಡಿ: ಧರ್ಮಸ್ಥಳ ಪ್ರಕರಣದ ಸಂಬಂಧ ತನಿಖೆ ಮಹತ್ವದ ಹಂತ ತಲುಪಿದ್ದು, ಎಸ್ಐಟಿ ಮುಖ್ಯಸ್ಥ ಪ್ರಣಬ್ ಮೊಹಾಂತಿ ಅವರು ಬೆಳ್ತಂಗಡಿ ಕಚೇರಿಗೆ ಶನಿವಾರ ಮಧ್ಯಾಹ್ನ ಆಗಮಿಸಿದ್ದಾರೆ. ಕಳೆದ ನಾಲ್ಕು ತಿಂಗಳಿನಿಂದ ನಡೆಯುತ್ತಿರುವ ಎಸ್ಐಟಿ ತನಿಖೆ ಇದೀಗ ಮಹತ್ವದ ಹಂತ ತಲುಪಿದೆ. ಚಿನ್ನಯ್ಯ ತಂದಿದ್ದ ತಲೆಬುರುಡೆಗೆ ಸಂಬಂಧಿಸಿದಂತೆ ತನಿಖೆ ಪೂರ್ಣಗೊಂಡಿದ್ದು, ಇದರಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಎಸ್ಐಟಿ ತಂಡ ಅಂತಿಮ ನಿರ್ಧಾರಕ್ಕೆ ಬಂದಿದ್ದು, ಈ ಬಗ್ಗೆ ಮಹತ್ವದ ಸಭೆಗಳು ಎಸ್ಐಟಿ ಕಚೇರಿಯಲ್ಲಿ ಭಾನುವಾರ ನಡೆಯಲಿದೆ.

ಎಸ್ಐಟಿ ನೋಟಿಸ್: ಬೆಳ್ತಂಗಡಿ : ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಹಲವು ಮಹಿಳೆಯರ ಅತ್ಯಾಚಾರ, ಕೊಲೆ ಆರೋಪದ ಬಗ್ಗೆ ತನಿಖೆ ನಡೆಸುತ್ತಿರುವ ಎಸ್ಐಟಿ ಮೂವರು ಸಾಮಾಜಿಕ ಹೋರಾಟಗಾರರಾದ ಮಹೇಶ್ ಶೆಟ್ಟಿ ತಿಮರೋಡಿ, ಟಿ ಜಯಂತ್ ಮತ್ತು ಗಿರೀಶ್ ಮಟ್ಟಣ್ಣವರ್ ಅವರಿಗೆ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದೆ. ಒಂದು ವೇಳೆ ವಿಚಾರಣೆಗೆ ಹಾಜರಾಗದಿದ್ದಲ್ಲಿ ಬಂಧಿಸಬೇಕಾಗುತ್ತದೆ ಎಂದು ಪೊಲೀಸರು ನೋಟಿಸ್ ನಲ್ಲಿ ಉಲ್ಲೇಖಿಸಿರುವುದಾಗಿ ಮೂಲಗಳು ಹೇಳಿವೆ. ಬೆಳ್ತಂಗಡಿ ಎಸ್.ಐ.ಟಿ ಕಚೇರಿಗೆ ಅ. 27 ರಂದು ಸೋಮವಾರ 10 :30 ಕ್ಕೆ ವಿಚಾರಣೆಗೆ ಹಾಜರಾಗಲು ಸೌಜನ್ಯ ಪರ ಹೋರಾಟದ ನೇತೃತ್ವ ವಹಿಸಿರುವ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್ ,ಜಯಂತ್ ಟಿ, ವಿಠಲ್ ಗೌಡ ಎಂಬವರಿಗೆ ಅ. 24 ರಂದು ನೋಟಿಸ್ ಜಾರಿ ಮಾಡಲಾಗಿದೆ. ಸೋಮವಾರ ವಿಚಾರಣೆಗೆ ಹಾಜರಾಗದಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ನೋಟೀಸ್ ನಲ್ಲಿ ತಿಳಿಸಲಾಗಿದೆ.

ಶ್ರೀ ಭಗವದ್ಗೀತಾ ಅಭಿಯಾನಕ್ಕೆ ಚಾಲನೆ

ದಾವಣಗೆರೆ: ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ, ಶ್ರೀ ಸರ್ವಜ್ಞೇಂದ್ರ ಸರಸ್ವತಿ ಪ್ರತಿಷ್ಠಾನದ ಪೀಠಾಧೀಶ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು 2007 ಅಕ್ಟೋಬರ್‌ನಿಂದ ನಾಡಿನಾದ್ಯಂತ ಶ್ರೀ ಭಗವದ್ಗೀತಾ ಅಭಿಯಾನ ಪ್ರಾರಂಭಿಸಿದ್ದು ರಾಜ್ಯಾದ್ಯಂತ ಯಶಸ್ವಿಯಾಗಿ ನಡೆದಿದೆ.

ಶನಿವಾರ ಇಲ್ಲಿನ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಭಗವದ್ಗೀತಾ ಅಭಿಯಾನಕ್ಕೆ ಅಭಿಯಾನದ ಜಿಲ್ಲಾ ಗೌರವಾಧ್ಯಕ್ಷ ಡಾ.ಎಸ್. ಆರ್.ಹೆಗಡೆ ಚಾಲನೆ ನೀಡಿ ಮಾತನಾಡಿದರು.

ಇಲ್ಲಿವರೆಗೆ ಈ ಭಗವದ್ಗೀತಾ ಅಭಿಯಾನವು ಯಶಸ್ವಿಯಾಗಿ ನಡೆಯುತ್ತಾ ಬಂದಿದ್ದು, ಆಸಕ್ತರು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಭಿಯಾನ ಯಶಸ್ವಿ ಮಾಡಿಕೊಡಬೇಕೆಂದರು.

ಅಭಿಯಾನದ ಸಂಚಾಲಕ ಜಿ. ಭಾಸ್ಕರ್‌ಮಾತನಾಡಿ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ವಿದ್ಯಾರ್ಥಿಗಳಿಗೆ ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಕಂಠಪಾಠ ಸ್ಪರ್ಧೆ, ಭಾಷಣ, ರಸಪ್ರಶ್ನೆ ಸ್ಪರ್ಧೆ ಹಮ್ಮಿಕೊಂಡಿದ್ದು, ನವೆಂಬರ್30 ರಂದು ಶಿವಮೊಗ್ಗದ ಫ್ರೀಡಂ ಪಾರ್ಕಿನಲ್ಲಿ ರಾಜ್ಯಮಟ್ಟದ ಸ್ಪರ್ಧೆಗಳು ನಡೆಯಲಿದೆ ಎಂದರು.

ವಿದ್ವಾನ್ ಗಣೇಶ್ ನಡುಗೋಡು ಭಗವದ್ಗೀತೆ ಕುರಿತು ಉಪನ್ಯಾಸ ಮಾಡಿದರು. ವಿದ್ವಾನ್ ಶಂಕರಾನಂದ ಅಭಿಯಾನದ ಕುರಿತು ಮಾಹಿತಿ ನೀಡಿದರು. ಮಹಿಳೆಯರು-ಪುರುಷರು ಭಗವದ್ಗೀತೆ 11ನೇ ಅಧ್ಯಾಯದ ಶ್ಲೋಕ ಪಠಿಸಿದರು.

ಭಗವದ್ಗೀತಾ ಅಭಿಯಾನಕ್ಕೆ ಅಭಿಯಾನದ ಜಿಲ್ಲಾ ಗೌರವಾಧ್ಯಕ್ಷ ಡಾ.ಎಸ್.ಆರ್.ಹೆಗಡೆ ಚಾಲನೆ ನೀಡಿದರು.

ಜಿಲ್ಲಾ ಕಾರ್ಯಾಧ್ಯಕ್ಷ ಕುಸುಮ ಶ್ರೇಷ್ಠಿ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಡಾ.ಎಂ.ಸಿ ಶಶಿಕಾಂತ್,

ಅಭಿಯಾನದ ಗೀತಾ ಬಾಲಚಂದ್ರ ಭಟ್, ಕೆ.ಎಸ್.ಸತೀಶ್ ಚಂದ್ರ, ಬಾಲಕೃಷ್ಣ ವೈದ್ಯ, ರಾಮಚಂದ್ರರಾವ್, ಅನಿಲ್ ಬಾರಂಗಲ್, ಭಾಸ್ಕರ್,ರಾಮಚಂದ್ರರಾವ್ ಉಪಸ್ಥಿತರಿದ್ದರು.

ಚೂರಿ ಇರಿದು ಕೊಲೆಗೆ ಯತ್ನ: ಆರೋಪಿ ಸೆರೆ

ಮಂಗಳೂರು : ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ಕಾನಾದ ಬಳಿಯಲ್ಲಿ ಯುವಕರಿಬ್ಬರಿಗೆ ಚೂರಿಯಿಂದ ಇರಿದು ಕೊಲೆಗೆ ಯತ್ನಿಸಿದ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳನ್ನು ಪೋಲಿಸರು ಬಂಧಿಸಿದ್ದಾರೆ. ಆ. 23 ರಂದು ರಾತ್ರಿ ಸುರತ್ಕಲ್ ಕಾನಾ ಬಳಿಯ ದೀಪಕ್ ಬಾರ್‌ಬಳಿಯಲ್ಲಿ ಕ್ಷುಲಕ ಕಾರಣಕ್ಕಾಗಿ ಹಸನ್ ಮುಕ್ಷಿತ್ ಮತ್ತು ನಿಝಾಂ ಎಂಬ ಯುವಕರಿಬ್ಬರಿಗೆ ಈ ಹಿಂದೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಗುರುರಾಜ್ ಆಚಾರಿ, ಅಲೆಕ್ಸ್ ಸಂತೋಷ್, ನಿತಿನ್ ಮತ್ತು ಸುಶಾಂತ್ ಸೇರಿಕೊಂಡು ಚೂರಿಯಿಟದ ಇರಿದು ಕೊಲೆಗೆ ಯತ್ನಿಸಿದ್ದ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳನ್ನು ಕಾನಾ ಸುರತ್ಕಲ್ ನಿವಾಸಿ ಸುಶಾಂತ್,ಕೆ ವಿ ಅಲೆಕ್ಸ್(27) ಹಾಗೂ ನಿತಿನ್(26) ಎಂದು ತಿಳಿದುಬಂದಿದೆ. ಜೊತೆಯಲ್ಲಿ ಆರೋಪಿಗಳಿಗೆ ಆಶ್ರಯ ಕೊಟ್ಟ ವ್ಯಕ್ತಿ ಆರುಣ್ ಶೆಟ್ಟಿ(56), ಎಂಬವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಆರೋಪಿ ಗುರುರಾಜ್ ಆಚಾರಿ ಹಾಗೂ ಆರೋಪಿಗಳಿಗೆ ಅರುಣ್ ಶೆಟ್ಟಿಯೊಂದಿಗೆ ಆಶ್ರಯ ನೀಡಿದ ಅಶೋಕ್‌ಗೆ ಪತ್ತೆ ಕಾರ್ಯ ಮುಂದು ವರಿದಿದೆ. ಸುರತ್ಕಲ್ ಸಿಪಿಐ ಪ್ರಮೋದ್ ಕುಮಾರ್ ನೇತೃತ್ವದಲ್ಲಿ ಪಿಎಸ್ಐಗಳಾದ ರಾಘವೇಂದ್ರ ನಾಯ್ಕ್, ಜನಾರ್ಧನ ನಾಯ್ಕ್, ಶಶಿಧರ ಶೆಟ್ಟಿ, ಎಎಸ್.ಐ ರವರಾದ ರಾಜೇಶ್ ಆಳ್ವ, ತಾರನಾಥ, ರಾಧಾಕೃಷ್ಣ ಹಾಗೂ ತಂಡ ಪತ್ತೆ ಕಾರ್ಯದಲ್ಲಿ ಭಾಗವಹಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

25 ಸಾವಿರ ಕುಂಡಗಳ ಮಹಾಯಜ್ಞ27ರಂದು

ಶಿವಮೊಗ್ಗ : ವಾರಣಾಸಿಯ ಧಾರ್ಮಿಕ ಸಂಸ್ಥೆ ವಿಹಂಗಮ ಯೋಗ ಸಮಾಜದ ವತಿಯಿಂದ ಶಿವಮೊಗ್ಗದ ಕಲ್ಲಹಳ್ಳಿಯ ಶ್ರೀ ಶಿವಗಂಗ ಯೋಗಕೇಂದ್ರದಲ್ಲಿ ಸಮರ್ಪಣ ದೀಪ ಆಧ್ಯಾತ್ಮ ಮಹೋತ್ಸವದ 25 ಸಾವಿರ ಕುಂಡಗಳ ಸ್ವರ್ವೇದ ಜ್ಞಾನ ಮಹಾಯಜ್ಞ ಅಂಗವಾಗಿ ಜೈ ಸರ್ವೇದ ಕಥಾ ಕಾರ್ಯಕ್ರಮವನ್ನ ಅ.27ರಂದು ಸಂಜೆ 4 ಗಂಟೆಗೆ ಆಯೋಜಿಸಲಾಗಿದೆ ಎಂದು ಶಿವಮೊಗ್ಗದ ಸಂಚಾಲಕ ಎಂ.ಎನ್. ಸುಂದರರಾಜ್ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಾರಣಾಸಿಯಲ್ಲಿ ವಿಹಂಗಮ ಯೋಗದ 112ನೇ ವಾರ್ಷಿಕೋತ್ಸವ ಹಾಗೂ 25 ಸಾವಿರ ಕುಂಡಗಳ ಮಹಾಯಜ್ಞವನ್ನು ನ. 25 ಮತ್ತು 26ರಂದು ನಡೆಯಲಿದ್ದು, ಸಂಸ್ಥೆಯ ಸಂತ ಪ್ರವರ ಶ್ರೀ ವಿಜ್ಞಾನ್ ದೇವ್ ಜೀ ಮಹಾರಾಜ್ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಸ್ವರ್ವೇದ ಸಂದೇಶ ಯಾತ್ರೆ ಕೈಗೊಂಡಿದ್ದಾರೆ. ಇವರು ಶಿವಮೊಗ್ಗಕ್ಕೆ ಅ. 27ರಂದು ಸಂಜೆ 4 ಗಂಟೆಗೆ ಆಗಮಿಸಲಿದ್ದು ಜೈ ಸ್ವರ್ವೇದ ಕಥಾ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದರು.ಶಿವಗಂಗ ಯೋಗ ಕೇಂದ್ರದ ಸಿ.ವಿ. ರುದ್ರಾರಾಧ್ಯ ಮಾತನಾಡಿ, ಯಜ್ಞದಿಂದ ಸಕಾರಾತ್ಮಕ ಚಿಂತನೆ ಬೆಳೆಯುತ್ತವೆ. ಒಂದು ಯಜ್ಞ ಮಾಡಿದರೆ ಸಾಕಷ್ಟು ಪುಣ್ಯ ಬರುತ್ತದೆ. ಶ್ರೀಗಳು ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಯಾತ್ರೆ ಕೈಗೊಂಡಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂತ ಸಮಾಜ ನಿವೇದಕರಾದ ಸುಮಾ ಜಗದೀಶ್, ಶೈಲೇಶ್ ಚೌಹಾಣ್, ನಿತಿನ್ ಅಗರವಾಲ್, ಮುಕ್ತಿರಂಜನ್, ಓಂಕಾರ್,ಅಭಿನಂದನ್, ಜಗದೀಶ್ ಇದ್ದರು.

ಅ.27ರಂದು ನಾಟಕ ರಚನಾ ಕಮ್ಮಟ

ಶಿವಮೊಗ್ಗ : ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗ, ಎನ್.ಎಸ್.ಎಸ್. ಘಟಕಗಳು, ಕುವೆಂಪು ವಿವಿ ಕನ್ನಡ ಅಧ್ಯಾಪಕರ ಸಂಘ, ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನ ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ರಾಧಾಕೃಷ್ಣ ಸಭಾಂಗಣದಲ್ಲಿ ಅ.27ರಂದು ಬೆಳಗ್ಗೆ 10 ಗಂಟೆಗೆ ನಾಟಕ ರಚನಾ ಕಮ್ಮಟ ಆಯೋಜಿಸಲಾಗಿದೆ.ಈ ಕಾರ್ಯಕ್ರಮವನ್ನು ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಬೈರಮಂಗಲ ರಾಮೇಗೌಡ ಉದ್ಘಾಟಿಸುವರು. ಪ್ರಾಂಶುಪಾಲರಾ ಪ್ರೊ. ರಾಜೇಶ್ವರಿ ಎನ್., ಕುವೆಂಪು ವಿವಿ ಕನ್ನಡ ಅಧ್ಯಾಪಕರ ವೇದಿಕೆ ಕಾರ್ಯದರ್ಶಿ ಪ್ರೊ.ಎಸ್.ಎಂ. ಮುತ್ತಯ್ಯ, ಸಹ ಕಾರ್ಯದರ್ಶಿ ಡಾ. ಹಾಲಮ್ಮ ಎಂ. ಇವರು ಉಪಸ್ಥಿತರಿರುವರು.ಬಿಎಂಶ್ರೀ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಶಾಂತರಾಜು ನಾಟಕ ರಚನೆಯ ಪೂರ್ವ ತಯಾರಿ ಕುರಿತು, ಸಿನಿಮಾ ನಿರ್ದೇಶಕ ರಾಣಾ ಸುನಿಲ್ ಕುಮಾರ್‌ಸಿಂಗ್ ಅವರು ನಾಟಕ ರಚನೆ, ನಿರ್ದೇಶನ ಕುರಿತು ಮಾತನಾಡುವರು. ಪ್ರತಿಷ್ಠಾನದ ಕೋಶಾಧಿಕಾರಿ ಚಂದ್ರಶೇಖರ್‌ನಾದೂರು ಅಧ್ಯಕ್ಷತೆ ವಹಿಸುವರು.ಸಂಜೆ 4.30ಕ್ಕೆ ರಂಗಕರ್ಮಿ ಡಾ. ಸಾಸ್ವೆಹಳ್ಳಿ ಸತೀಶ್ ಸಮಾರೋಪ ಭಾಷಣ ಮಾಡುವರು. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಬೈರಮಂಗಲ ರಾಮೇಗೌಡ, ಸಹ್ಯಾದ್ರಿ ಕಾಲೇಜಿನ ಕನ್ನಡ ಎಚ್‌ಒಡಿ ಪ್ರೊ, ಹಾ.ಮಾ. ನಾಗಾರ್ಜುನ, ಹಿರಿಯ ವಿದ್ಯಾರ್ಥಿ ಕೃಷ್ಣಮೂರ್ತಿ ಉಪಸ್ಥಿತರಿರುವರು. ವಿದ್ಯಾರ್ಥಿಗಳಿಂದ ಸಂವಾದ, ನಾಟಕ ರಚನಾ ವಿಧಾನ, ಆಂಗಿಕ ಅಭಿನಯ ನಡೆಯಲಿದೆ.

ಲಾರಿ ಕಳವು : ಆರೋಪಿ ಬಂಧನ

ಸೊರಬ: ಪೆಟ್ರೋಲ್ ಬಂಕ್ ಮುಂಭಾಗ ನಿಲ್ಲಿಸಿದ್ದ ಲಾರಿಯನ್ನು ಕಳವು ಮಾಡಿದ್ದ ಆರೋಪಿಯನ್ನು ಸೊರಬ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇತ್ತೀಚೆಗೆ ಸಾಗರ ಪಟ್ಟಣದ ಗಾಂಧಿನಗರ ನಿವಾಸಿ ಆರೀಫ್ ಅಹ್ಮದ್ ಎಂಬುವರಿಗೆ ಸೇರಿದ ಲಾರಿ ಕಳ್ಳತನವಾದ ಬಗ್ಗೆ ದೂರು ದಾಖಲಾಗಿತ್ತು. ಪ್ರಕರಣದ ಜಾಡು ಹಿಡಿದು ಬೆನ್ನಟ್ಟಿದ ಪೊಲೀಸರು ಪಟ್ಟಣದ ಕಾನುಕೇರಿ ಬಡಾವಣೆ ನಿವಾಸಿ ಇಬ್ರಾಹಿಂ ಅಹಮ್ಮದ್ (26) ಎಂಬಾತನನ್ನು ಬಂಧಿಸಿ, ಬಂಧಿತ ವ್ಯಕ್ತಿಯಿಂದ ಸುಮಾರು 4.90 ಲಕ್ಷ ರೂ., ಮೌಲ್ಯದ ಲಾರಿಯನ್ನು ವಶಕ್ಕೆ ಪಡೆದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಎಸ್ಪಿ ಜಿ.ಕೆ. ಮಿಥುನ್ ಕುಮಾರ್ ,ಎಎಸ್ಪಿಗಳಾದ ಬಿ. ರಮೇಶ್ ಹಾಗೂ ಕಾರಿಯಪ್ಪ, ಡಿವೈಎಸ್ಪಿ ಕೆ.ಇ. ಕೇಶವ, ಸಿಪಿಐ ಮಹಾಂತೇಶ ಕೆ. ಲಂಬಿ, ಪಿಎಸ್‌ಐ ಎಂ.ಎಚ್. ನವೀನ್ ನೇತೃತ್ವದ ಕಾರ್ಯಾಚರಣೆಯಲ್ಲಿ ಸಿಬ್ಬಂದಿ ರಾಘವೇಂದ್ರ, ವಿನಯ್, ಲೋಕೇಶ್ ಪಾಲ್ಗೊಂಡಿ ದ್ದರು.

ಟಾಪರ್ಸ್ ಗಳಿಗೆ ದೆಹಲಿ ವಿಮಾನ ಪ್ರವಾಸ ಭಾಗ್ಯ

ದಾವಣಗೆರೆ: ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಒಂಬತ್ತು ಎಸ್‌ಎಸ್‌ಎಲ್ಸಿ ಟಾಪರ್‌ವಿದ್ಯಾರ್ಥಿಗಳಿಗೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ ನವದೆಹಲಿಗೆ ಐದು ದಿನಗಳ ಶೈಕ್ಷಣಿಕ ಪ್ರವಾಸ ಆಯೋಜಿಸಿದ್ದಾರೆ.ತಮ್ಮ ಗೃಹಕಚೇರಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಯಾಣ ಸುಖಕರವಾಗಿರಲಿ ಎಂದು ಶುಭಹಾರೈಸಿದರು. ಇಬ್ಬರು ಶಿಕ್ಷಕರೂ ಕೂಡ ತೆರಳಲಿದ್ದಾರೆ. ಈ ತಂಡ ಸೋಮವಾರ ಸಂಜೆ 5.30 ಕ್ಕೆ ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಪ್ರಯಾಣ ಆರಂಭಿಸಲಿದೆ.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ರಾಜ್ಯದ ಸರಕಾರಿ ಶಾಲೆ ಮಕ್ಕಳಿಗೆ ಅಜೀಂ ಪ್ರೇಮ್ಜಿ ಅವರ ವಿಪ್ರೋ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಆರು ದಿನಗಳ ಕಾಲ ಮೊಟ್ಟೆ ನೀಡಲಾಗುತ್ತಿದೆ. ರಾಗಿ ಮಾಲ್ಟ್, ಹಾಲು, ಬಿಸಿಯೂಟ ಒದಗಿಸಲಾಗುತ್ತಿದೆ. ಕಾಲೇಜಿನಲ್ಲಿ ಓದುವ ಹೆಣ್ಣುಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಅಜೀಂ ಪ್ರೇಮ್ಜಿ ಅವರಿಗೆ ಸರಕಾರದ ಪರವಾಗಿ ಧನ್ಯವಾದ ಹೇಳುತ್ತೇನೆ.

ರಾಜ್ಯ ನದಾಫ್ / ಪಿಂಜಾರ ಸಂಘದ 33ನೇ ವರ್ಷದ ಸಂಸ್ಥಾಪನಾ ದಿನ | ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್‌ರಿಂದ ಚಾಲನೆ

ಪಿಂಜಾರ ಸಮಾಜವನ್ನು ಸಿದ್ದರಾಮಯ್ಯ ನಿರ್ಲಕ್ಷಿಸಿಲ್ಲ

ಚಿತ್ರದುರ್ಗ : ಸಣ್ಣಪುಟ್ಟ ಸಮಾಜವನ್ನು ಗೌರವದಿಂದ ಕಾಣುವ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪಿಂಜಾರ ಸಮಾಜವನ್ನು ಯಾವತ್ತು ನಿರ್ಲಕ್ಷಿಸಿಲ್ಲ. ಕಾಂಗ್ರೆಸ್ ಪಕ್ಷ ಸದಾ ನಿಮ್ಮ ಪರವಾಗಿದೆ. ಚಿಂತಿಸುವುದು ಬೇಡ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್‌ಪಿಂಜಾರ ಸಮುದಾಯಕ್ಕೆ ಆತ್ಮವಿಶ್ವಾಸ ತುಂಬಿದರು.

ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘ ಜಿಲ್ಲಾ ಘಟಕದ ಸಹಯೋಗದೊಂದಿಗೆ ಮುರುಘಾಮಠದ ಅನುಭವ ಮಂಟಪದಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ 33 ನೇ ವರ್ಷದ ಸಂಸ್ಥಾಪನಾ ದಿನಾಚರಣೆ, ಸಾಧಕರು, ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಹಾಗೂ ವಕೀಲರ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಮೊದಲಿನಿಂದಲೂ ನಮ್ಮ ಕುಟುಂಬ ಪಿಂಜಾರ ಸಮಾಜದೊಂದಿಗೆ ಅನ್ಯೋನ್ಯವಾಗಿದೆ. ಶ್ರದ್ದೆ, ಔದಾರ್ಯ,ಸ್ವಾಭಿಮಾನವುಳ್ಳ ಸಮಾಜ ನಿಮ್ಮದು. ನಾನು ನಾಲ್ಕು ಬಾರಿ ಶಾಸಕನಾಗಲು ಪಿಂಜಾರ ಸಮುದಾಯದ ಕೊಡುಗೆಯಿದೆ. ಮುಖ್ಯಮಂತ್ರಿಗಳ ಬಳಿ ನಿಮ್ಮ ಸಮಸ್ಯೆ ಬೇಡಿಕೆಗಳ ಬಗ್ಗೆ ಚರ್ಚಿಸಲು ಅವಕಾಶ ಕೊಡಿಸುತ್ತೇನೆಂದು ಸಚಿವ ಡಿ.ಸುಧಾಕರ್‌ಭರವಸೆ ನೀಡಿದರು.

ಸಚಿವ ಡಿ.ಸುಧಾಕರ್ ರಾಜ್ಯ ನದಾಫ್ / ಪಿಂಜಾರ ಸಂಘ ಜಿಲ್ಲಾ ಘಟಕದೊಂದಿಗೆ ನಡೆದ 33 ನೇ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿದರು.

ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಮಾತನಾಡಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪಕ್ಷದ ತತ್ವ ಸಿದ್ದಾಂತಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಓಟಿನ ರಾಜಕಾರಣ ಮಾಡುವವರಲ್ಲ. ಎಲ್ಲಾ ಜಾತಿ ಧರ್ಮದವರ ಪರವಾಗಿರುವ ಮುಖ್ಯಮಂತ್ರಿಗಳು ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸಿ ಬೇಡಿಕೆಗಳನ್ನು ಈಡೇರಿಸುತ್ತಾರೆಂಬ ನಂಬಿಕೆಯಿದೆ. ಹಳ್ಳಿಗಳಲ್ಲಿ ಎಲ್ಲರ ಜೊತೆ ಹೊಂದಿಕೊಳ್ಳುವ ದೊಡ್ಡ ಗುಣ ನಿಮ್ಮದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಲ್ಲರ ಪ್ರೀತಿ ವಿಶ್ವಾಸ ಗಳಿಸುವ ಸಮಾಜ ನಿಮ್ಮದು. ನಿಮ್ಮಲ್ಲಿಯೂ ಅನೇಕ ಪ್ರತಿಭಾವಂತರಿದ್ದಾರೆ. ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕೆಂದರು. ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಡಾ.ಬಸವಕುಮಾರ ಸ್ವಾಮೀಜಿ, ರಾಜಕಾರಣಿಗಳು ಕಿವುಡರಾಗಿರುತ್ತಾರೆ. ಅವರಿಗೆ ಕೇಳಿಸುವ ರೀತಿಯಲ್ಲಿ ನಿಮ್ಮ ಬೇಡಿಕೆಗಳನ್ನು ಸಲ್ಲಿಸಬೇಕಾದರೆ ಮೊದಲು ನೀವುಗಳು ಸಂಘಟಿತರಾಗಿ ಹೋರಾಡಬೇಕೆಂದು ಕರೆ ನೀಡಿದರು.

ಸೀಬಾರದ ಸಮೀಪ, ರೈಲ್ವೆ ನಿಲ್ದಾಣದ ಹತ್ತಿರ ಟೆಂಟ್‌ಗಳಲ್ಲಿ ವಾಸಿಸುತ್ತಿರುವ ಅಲೆಮಾರಿಗಳ ಜೊತೆ ಕೆಲವು ಪಿಂಜಾರರು ಇದ್ದಾರೆ. ಸಣ್ಣ ಸಣ್ಣ ಜನಾಂಗಕ್ಕೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಸ್ಥಾನಮಾನ ಸಿಗಬೇಕು. ಇಲ್ಲವಾದಲ್ಲಿ ಬದುಕಿದ್ದು, ಏನು ಪ್ರಯೋಜನ ಎಂದರು.

ನದಾಫ್/ಪಿಂಜಾರ ಸಂಘದ ರಾಜ್ಯಾಧ್ಯಕ್ಷ ಹೆಚ್. ಜಲೀಲಾಬ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಧಾನಪರಿಷತ್ ಸದಸ್ಯ ಅಬ್ದುಲ್‌ಜಬ್ಬಾರ್‌ಇದ್ದರು.

ಚಿಕ್ಕಜಾಜೂರಿನಲ್ಲಿ ಶ್ರೀ ಬನಶಂಕರಿ ಸಮುದಾಯ ಭವನ ಉದ್ಘಾಟನೆ

ಧರ್ಮಗಳೆಲ್ಲವೂ ಜಾತಿಗಳಾಗಿವೆ : ಡಾ.ಶ್ರೀಗಳು

ಹೊಳಲ್ಕೆರೆ : ಭಾರತದಲ್ಲಿ ಎಷ್ಟೊಂದು ಧರ್ಮಗಳ ಬಗ್ಗೆ ಸಾವಿರಾರು ವರ್ಷಗಳಿಂದ ಭೋದನೆ ಮಾಡಿಕೊಂಡು ಬಂದಿದ್ದರೂ, ಧರ್ಮ ದ ಮೇಲೆ ಜನರ ಜೀವನ ಇಲ್ಲದೆ ಇರುವುದು ದುರದೃಷ್ಟಕರ. ಧರ್ಮಗಳು ಜಾತಿಗಳಾಗಿವೆ ಎಂದು ಸಿರಿಗೆರೆ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರಿನಲ್ಲಿ ಗ್ರಾಮಸ್ಥರು ಹಮ್ಮಿಕೊಂಡಿದ್ದ ಶ್ರೀ ಬನಶಂಕರಿ ಅಮ್ಮನ ದೇವಸ್ಥಾನದ 25 ನೇ ವರ್ಷದ ರಜತ ಮಹೋತ್ಸವ ಹಾಗೂ ಬನಶಂಕರಿ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದರು.

ದುಬೈ ಮಸ್ಲಿಂಮರು ಇರುವಂತ ದೇಶ. ಅದು ರಾಮರಾಜ್ಯದಂತಿದೆ. ಎಲ್ಲಿ ನಾಗರಿಕರು ಯಾವುದೇ ತೊಂದರೇ ಇಲ್ಲದೆ, ಯಾವುದೆ ಸಂಘರ್ಷವಿಲ್ಲದೆ ಖುಷಿಯಿಂದ ಜೀವನ ಮಾಡಲು ಸಾಧ್ಯವೂ ಅದು ರಾಮ ರಾಜ್ಯವಾಗುತ್ತದೆ. ಭಾರತದಲ್ಲಿ ರಾಮರಾಜ್ಯ ಯಾವಾಗ ಆಗುತ್ತದೆ ಎಂದರೇ, ಮಹಿಳೆಯರು ತಡ ರಾತ್ರಿಯಲ್ಲಿ ರಸ್ತೆಯಲ್ಲಿ ನಿರ್ಭಯವಾಗಿ ಓಡಾಡಲು ಸಾಧ್ಯವಾದರೇ ಮಾತ್ರ ರಾಮರಾಜ್ಯ ಕನಸು ಸಾಕಾರವಾಗುತ್ತದೆ ಎಂದು ತಿಳಿಸಿದರು.

ಬಸವಾದಿ ಶರಣ ವಚನ ಸಾಹಿತ್ಯವನ್ನು ಜಗತ್ತಿನಾದ್ಯಾಂತ ಪರಿಸುವ ಅಪ್ ಮಾಡಿದ್ದೇವೆ. ನಮ್ಮ ಹಿರಿಯ ಜಗದ್ಗುರುಗಳ ಆಶಯಂತೆ ಎಲ್ಲಾ ಭಾಷೆಗಳಿಗೆ ವಚನ ಸಾಹಿತ್ಯ ಭಾಷಾಂತರಿಸಿ ಅಲ್ಲಿನ ಮೌಲ್ಯಗಳನ್ನು ಜನಮಾನಸಕ್ಕೆ ತಲುಪಿಸುವ ಕೆಲಸ ಮಾಡಲಾಗಿದೆ. ಜನರು ತಮ್ಮ ಮೊಬೈಲ್ ನಲ್ಲಿ ವಚನಗಳನ್ನು ನೋಡಿಕೊಳ್ಳಬಹುದು, ವಚನದ ಮಹತ್ವ ಅರಿತುಕೊಳ್ಳಬಹುದು ಎಂದು ತಿಳಿಸಿದರು.

ಚಿಕ್ಕಜಾಜೂರಿನಲ್ಲಿ ಬನಶಂಕರಿ ಸಮುದಾಯ ಭವನ ವನ್ನು ಸಿರಿಗೆರೆ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಹಂಪೆ ಹೇಮಾಕೂಟ ಮಠದ ಶ್ರೀ ದಯಾನಂದ ಪುರಿ ಶ್ರೀಗಳು ಮಾತನಾಡಿ, ಸಿರಿಗೆರೆ ಶ್ರೀಗಳು 22 ಸಾವಿರ ವಚನಗಳನ್ನು ಅಪ್ಲಲ್ಲಿ ಸೇರಿಸಿ ವಚನ ಸಾಹಿತ್ಯಕ್ಕೆ ಮೆರಗು ಕೊಟ್ಟಿದ್ದಾರೆ, ಸಾಮಾಜಿಕ ಚಿಂನೆಗಳನ್ನು ಒಳಗೊಂಡ ಶ್ರೀಗಳ ಒಡನಾಟ ನಿಜಕ್ಕು ಸಂತಸ ತಂದಿದೆ ಎಂದರು.

ಶಾಸಕ ಎಂ.ಚಂದ್ರಪ್ಪ ಮಾತನಾಡಿ, ಗುಣಮಟ್ಟದಿಂದ ನಿರ್ಮಾಣಗೊಂಡಿರುವ ಸಮುದಾಯ ಭವನ ಕೇವಲ ದೇವಾಂಗ ಜನಾಂಗಕ್ಕೆ ಸೇರಿದ್ದಲ್ಲ, ಎಲ್ಲಾ ಜಾತಿಯವರ ಕಲ್ಯಾಣಕ್ಕೆ ಬಳಕೆಯಾಗಲಿದೆ ಎಂದು ತಿಳಿಸಿದರು.

ಹೊಳಲ್ಕೆರೆ ಈಶ್ವರೀಯ ವಿವಿ ಸಂಚಾಲಕರಾದ ಬಿ.ಕೆ.ಸುಮಿತ್ರಕ್ಕ, ಸಂಸದ ಗೋವಿಂದ ಎಂ. ಕಾರಜೋಳ, ದೇವಾಂಗ ಸಮಾಜದ ಅಧ್ಯಕ್ಷ ಆರ್.ಎ.ಅಶೋಕ್, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಾಜಿ ಶಾಸಕ ಎಂ.ಡಿ.ಲಕ್ಷ್ಮಿನಾರಾಯಣ, ದೇವಾಂಗ ಸಮಾಜದ ಜಿಲ್ಲಾಧ್ಯಕ್ಷ .ತಿಪ್ಪೇಶ್, ಚಿಕ್ಕಜಾಜೂರು ಗ್ರಾ.ಪಂ ಅಧ್ಯಕ್ಷೆ ಅಂಜಲಿ, ಮಾಜಿ ಅಧ್ಯಕ್ಷ ಡಿ.ಸಿ.ಮೋಹನ್, ತಾ.ಪಂ.ಮಾಜಿ ಸದಸ್ಯರಾದ ಬಿ.ಪುಟ್ಟಸ್ವಾಮಿ, ಪಿ.ಎಸ್.ಮೂರ್ತಿ,ಜಿ.ಪಂ.ಮಾಜಿ ಅಧ್ಯಕ್ಷ ಪಿ.ಆರ್.ಶಿವಕುಮಾರ್ ,ಶ್ರೀನಿವಾಸಶಾಸ್ತ್ರಿ, ಲೋಕೇಶ್, ಸುರೇಶ್, ಬಿ.ವಿ.ರಾಜು, ಕೆ.ಶಿವರಾಜ್ ಇದ್ದರು.

ಗುಣಮಟ್ಟದ ಕಾಮಗಾರಿಗೆ ಶಾಸಕರ ಸೂಚನೆ

ಚಳ್ಳಕೆರೆ : ನಿಗದಿತ ಸಮಯದೊಳಗೆ ಗುಣಮಟ್ಟದ ಕಾಮಗಾರಿ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಓಡಾಡಲು ತೊಂದರೆಯಾಗದಂತೆ ಕಾಮಗಾರಿ ಪೂರ್ಣಗೊಳಿಸಲು ಶಾಸಕ ಟಿ.ರಘುಮೂರ್ತಿ ಸೂಚನೆ ನೀಡಿದರು. ನಗರದ ಹೆಚ್ ಪಿಪಿಎಸ್ ಸರಕಾರಿ ಪ್ರಥಮದರ್ಜೆ ಕಾಜೇಜಿನ ದ್ವಿಪಥ ರಸ್ತೆ ಚರಂಡಿ, ಮುಖ್ಯದ್ವಾರದ ಕಾಮಗಾರಿ ವೀಕ್ಷಣೆ ಮಾಡಿ ಮಾತನಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಕಾಲೇಜು ಕಟ್ಟಡ ನಿರ್ಮಿಸಲಾಗುತ್ತದೆ, ಅದರಂತೆ ವಿಶಾಲವಾದ ರಸ್ತೆ, ಆಟದ ಮೈದಾನ, ವಿಶಾಲವಾದ ಕಾಲೇಜು ಕ್ಯಾಂಪಸ್, ಒಂದು ಸಾವಿರ ವಿದ್ಯಾರ್ಥಿಗಳು ಏಕಕಾಲದಲ್ಲಿ ಕುಳಿತು ಓದುವಂತಹ ವಿಶಾಲವಾದ ಗ್ರಂಥಾಲಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಶಾಲವಾದ ಆಡಿಟೋರಿಯಂ ಇತರೆ ಸೌಲಭ್ಯಗಳನ್ನು ಒದಗಿಸಿದ್ದೇವೆ ಎಂದರು.

ಶಾಸಕ ಟಿ.ರಘುಮೂರ್ತಿ ಸರಕಾರಿ ಪ್ರಥಮರ್ಜೆ ಕಾಜೇಜಿನ ದ್ವಿಪಥ ರಸ್ತೆ ಚರಂಡಿ ಕಾಮಗಾರಿ ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ತಾ.ಗ್ಯಾರೆಂಟಿ ಸಮಿತಿಯ ಅಧ್ಯಕ್ಷರಾದ ಗದ್ದಿಗೆ ತಿಪ್ಪೇಸ್ವಾಮಿ, ನಗರಸಭೆ ಸದಸ್ಯರಾದ ರಮೇಶ್ ಗೌಡ, ರಾಘವೇಂದ್ರ, ನಿರ್ಮಿತಿ ಕೇಂದ್ರ ಇಂಜಿನಿಯರ್‌ಸಿದ್ದೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶಶಿಧರ, ಮುಖಂಡರಾದ ವೀರೇಶ್, ತಿಪ್ಪೇಸ್ವಾಮಿ, ವೀರೇಶ್, ಕಾಲೇಜಿನ ಪ್ರಾಂಶುಪಾಲರಾದ ಡಾ.ದೇವಪ್ಪ ಉಪಸ್ಥಿತರಿದ್ದರು.

ಮಸೀದಿಗಳಲ್ಲಿ ಅಜಾನ್ ವಿರುದ್ಧ ಹೋರಾಟ

ಶಿವಮೊಗ್ಗ : ಮಸೀದಿಗಳಲ್ಲಿ ಅಜಾನ್ ಕೂಗುವ ಬಗ್ಗೆ ಬಿಜೆಪಿ ಮುಖಂಡ ಹಾಗೂ ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಆಕ್ಷೇಪ ವ್ಯಕ್ತಪಡಿಸಿದ್ದು, ಮುಂದಿನ ದಿನಗಳಲ್ಲಿ ಇದರ ವಿರುದ್ಧ ಹೋರಾಟ ಶುರುವಾಗಲಿದೆ ಎಂದು ಎಚ್ಚರಿಸಿದ್ದಾರೆ.

ಅವರು ಶನಿವಾರ ಬಿಜೆಪಿ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯ ಸರ್ಕಾರವು ಸಂಘ–ಸಂಸ್ಥೆಗಳ ಪಥ ಸಂಚಲನಕ್ಕೆ ವಿಧಿಸಿರುವ ನಿರ್ಬಂಧ ಹೇರಿರುವ ಸಂಗತಿ ಪಸ್ತಾಪಿಸಿ ಅವರು, ಅಜಾನ್ ವಿರುದ್ಧದ ಹೋರಾಟದ ಘೋಷಣೆ ಮಾಡಿದರು.ಮಸೀದಿಗಳಲ್ಲಿ ಅಜಾನ್ ಕೂಗುವ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟ ಸೂಚನೆ ನೀಡಿದೆ. ಆದರೂ ಕೂಡ ಮಸೀದಿಗಳಲ್ಲಿ ಸೌಂಡ್ ಲಿಮಿಟ್ ಕಡಿಮೆಆಗಿಲ್ಲ. ದಿನಕ್ಕೆ ಐದಾರು ಬಾರಿ ಅಜಾನ್ ಹಾಕಲಾಗುತ್ತದೆ. ಇದು ಮಸೀದಿ ಸುತ್ತ–ಮುತ್ತಲ ಜನರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಓದುವ ಮಕ್ಕಳಂತೂ ತೀವ್ರ. ತೊಂದರೆ ಅನುಭವಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈಬಗ್ಗೆ ಮಾತನಾಡಲು ಶುರು ಮಾಡುತ್ತೇವೆ ಎಂದರು.

ರಾಜ್ಯದ ಕಾಂಗ್ರೆಸ್ ಸರಕಾರ ಹಿಂದೂಗಳಿಗೆ ಒಂದು ನೀತಿ, ಮುಸಲ್ಮಾನರಿಗೇ ಒಂದುನೀತಿ ಅನುಸರಿಸುತ್ತಿದೆ. ಆರ್‌ಎಸ್‌ಎಸ್ ಸೇರಿ ಹಿಂದೂ ಸಂಘಟನೆಗಳ ಮೇಲೆ ನಿರ್ಬಂಧ ಹೇರುವುದಕ್ಕಾಗಿಯೇ ಪಥ ಸಂಚಲನಗಳಿಗೆ, ಪಾದಯಾತ್ರೆಗಳಿಗೆ ಅನುಮತಿ ಕಡ್ಡಾಯ ಮಾಡಿದೆ. ಆದರೆ ಸರ್ಕಾರ ನಿರ್ಬಂಧ ಹಾಕಬೇಕಿರುವುದು ನಮಗಲ್ಲ, ಅಜಾನ್ ಸೌಂಡ್ ಲಿಮಿಟ್ಗೆ ನಿರ್ಬಂಧ ಹಾಕಲಿ, ಕೋರ್ಟ್ ಕೊಟ್ಟ ಸೂಚನೆಗಳನ್ನು ಅನುಷ್ಠಾನಕ್ಕೆ ತರಲು ಶ್ರಮಿಸಲಿ ಎಂದು ಒತ್ತಾಯಿಸಿದರು.

ಶಾಸಕರಿಗೆ ಕೊಡಬೇಕಾದ ಅನುದಾನಗಳು ಒಂದು ನಯಾಪೈಸೆ ಬಂದಿಲ್ಲ. 25 ಕೋಟಿ ರೂ. ನೀಡುವುದಾಗಿ ಘೋಷಣೆ ಮಾತ್ರ ಮಾಡಿದ್ದಾರೆ. ಈ ವರ್ಷದ ಅನುದಾನ 2 ಕೋಟಿ ರೂ. ಕೂಡ ಬಂದಿಲ್ಲ. ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಅನುದಾನವಿಲ್ಲದೆ ಹಿನ್ನಡೆ ಯಾಗಿದೆ. ಒಂದು ಪಂಚಾಯ್ತಿಗೆ 40 ಸಾವಿರ ರೂ.ಗಳು ಮಾತ್ರ ಬರುತ್ತದೆ. ಅದನ್ನೂ ಬಿಡುಗಡೆ ಮಾಡಿಲ್ಲ ಎಂದು ದೂರಿದರು.

ಪಟೇಲ್ 150ನೇ ಜನ್ಮದಿನ: ಏಕತಾ ಯಾತ್ರೆ

ಶಿವಮೊಗ್ಗ : ಉಕ್ಕಿನ ಮನುಷ್ಯ ಎಂದೇ ಹೆಸರಾದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ 150ನೇ ಜನ್ಮದಿನೋತ್ಸವದ ಅಂಗವಾಗಿ ಅ.31ರಿಂದ ನವೆಂಬರ್26ರ ವರೆಗೆ ಏಕತಾ ಯಾತ್ರೆ ಹಮ್ಮಿಕೊಳ್ಳ ಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ರಾಜ್ಯ ಬಿಜೆಪಿ ಕಾರ್ಯದರ್ಶಿ ಡಿ.ಎಸ್. ಅರುಣ್ ಹೇಳಿದ್ದಾರೆ.

ಅವರು ಶನಿವಾರ ಜಿಲ್ಲಾ ಬಿಜೆಪಿ ಕಛೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾಲ್ಕು ಬೇರೆ ಬೇರೆ ವಿಭಾಗಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪಟೇಲ್ ಅವರ ಏಕತಾ ಯಾತ್ರೆಯನ್ನು ಮಾಡಲಿದ್ದೇವೆ ಎಂದರು.

ಉತ್ತಮ ಆಡಳಿತದ ಸಂಕಲ್ಪತೊಟ್ಟು ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ (ಮಂಡಲದಲ್ಲಿ) ಜಿಲ್ಲಾ ಬಿಜೆಪಿವತಿಯಿಂದ ವಿದ್ಯಾರ್ಥಿಗಳು ಮತ್ತು ಕಾರ್ಯಕರ್ತರನ್ನು ಒಳಗೊಂಡು ಭಾರತದ ತ್ರಿವರ್ಣಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು 8ರಿಂದ 10 ಕಿ.ಮೀ. ನಡಿಗೆ ಹಮ್ಮಿಕೊಂಡಿದ್ದೇವೆ. ಎಲ್ಲೂ ಬಿಜೆಪಿ ಧ್ವಜವನ್ನು ಉಪಯೋಗಿಸುವುದಿಲ್ಲ. ದೇಶಾದ್ಯಂತ ಈ ಏಕತಾಯಾತ್ರೆ ನಡೆಯಲಿದ್ದು, ಶಿವಮೊಗ್ಗದಲ್ಲಿ ಗಿಡಗಳನ್ನು ನೆಟ್ಟು ಗೋಪೂಜೆ ಮಾಡುವುದರ ಮೂಲಕ ಪಾದಯಾತ್ರೆಗೆ ಚಾಲನೆ ಸಿಗಲಿದೆ. ಮೋದಿಯವರ ಕನಸಾದ ಆತ್ಮನಿರ್ಭರ ಭಾರತ್, ಸ್ವದೇಶಿ ಜಾಗೃತಿ ಬಗ್ಗೆ ಅರಿವು ಮೂಡಿಸುವ ಕಾರ್ಯವಾಗಲಿದೆ. ಸರ್ದಾರ್ ಪಟೇಲ್ ಅವರ ಜೀವನದ ಪ್ರದರ್ಶಿನಿಯನ್ನು ಕೂಡ ಹಮ್ಮಿಕೊ ಳ್ಳಲಾಗುವುದು. ನಶಿಮುಕ್ತ ಭಾರತ ಶೀರ್ಷಿಕೆಯಡಿ ಈ ಅಭಿಯಾನದಲ್ಲಿ ಅರಿವು ಮೂಡಿಸಲಾಗುವುದು. ರೈತರ ಚಳುವಳಿಯ ಮೂಲಕವೇ ಸರ್ದಾರ್‌ಪಟೇಲ್ ಅವರು, ಬಂದ ಕಾರಣ ರೈತರಿಗೆ ಅನುಕೂಲವಾಗುವ ಭೂಮಿಯ ಮಣ್ಣು ಪರೀಕ್ಷೆ ಕಾರ್ಯಕ್ರ ಮವನ್ನು ಕೂಡ ಜೋಡಿ ಸಲಾಗಿದೆ ಎಂದರು. ಪಟೇಲ್ ಅವರ ಬಗ್ಗೆ ಪ್ರಬಂಧ ಮತ್ತು ಭಾಷಣ ಸ್ಪರ್ಧೆಯನ್ನು ಕೂಡ ಹಮ್ಮಿಕೊ ಳ್ಳಲಾಗಿದ್ದು, ಅಲ್ಲದೆ ಸರ್ದಾರ್ ಪಟೇಲ್ ಅವರ ಏಕತಾ ಪ್ರತಿಮೆಯ ಬಗ್ಗೆ ರೀಲ್ಸ್ ಮಾಡುವ ಸ್ಪರ್ಧೆ ಕೂಡ ಇರುತ್ತದೆ. ನಶೆಮುಕ್ತ ಭಾರತದ ಬಗ್ಗೆ ಶಾಲಾ–ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಮತ್ತು ಸ್ವದೇಶಿ ವಿಚಾರ ಸಂಕಿರಣ ನಡೆಯಲಿದೆ ಎಂದರು. ಎಬಿವಿಪಿ ಸಂಘಟನೆಯ ಸಹಕಾರದೊಂದಿಗೆ ವಿದ್ಯಾರ್ಥಿಗಳು ಮತ್ತು ಬಿಜೆಪಿಯ ಭೂತ್ಮಟ್ಟದಿಂದ ಜಿಲ್ಲಾ ಮಟ್ಟದ ಕಾರ್ಯ ಕರ್ತರು ಕೂಡ ಭಾಗವಹಿ ಸಲಿದ್ದಾರೆ. ಸುಮಾರು ದೇಶ 565 ಸಂಸ್ಥಾನ ಗಳನ್ನು ಒಗ್ಗೂಡಿಸಿ ಜಮ್ಮು–ಕಾಶ್ಮೀರ, ಹೈದ್ರಾಬಾದ್ ಗಳನ್ನು ಒಕ್ಕೂಟಕ್ಕೆ ಸೇರಿಸುವಲ್ಲಿ ತನ್ನ ದೃಢ ನಿಲುವುಗಳ ಮೂಲಕ ದೇಶದ ಏಕತೆಗೆ ಅನೇಕ ಕೊಡುಗೆಗಳನ್ನು ನೀಡಿದರು ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಜಗದೀಶ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷ ಗಾಯತ್ರಿ ಮಲ್ಲಪ್ಪ, ಪ್ರಮುಖ ರಾದ ಮಾಲತೇಶ್, ಪದ್ಮಿನಿರಾವ್, ಹರಿಕೃಷ್ಣ, ಕುಪೇಂದ್ರ, ದರ್ಶನ್, ಸಂತೋಷ್ ಇದ್ದರು.

ಕನ್ನಡ ರಾಜ್ಯೋತ್ಸವ ಅದ್ದೂರಿ ಆಚರಿಸಿ:ಶಾಸಕ

ಹರಿಹರ: ಕನ್ನಡ ರಾಜೋತ್ಸವವನ್ನು ಅತ್ಯಂತ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಣೆ ಮಾಡುವಂತೆ ಶಾಸಕ ಬಿ.ಪಿ.ಹರೀಶ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡ ರಾಜೋತ್ಸವ ಕೇವಲ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳಿಗೆ ಸೀಮಿತವಾಗಿದೆ ಸಾರ್ವಜನಿಕರು ಸಹ ಪಾಲ್ಗೊಳ್ಳುವಂತೆ ಜಾಗೃತಿ ಮೂಡಿಸಬೇಕು, ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣ ಮಾಡಬೇಕು ಎನ್ನುವುದು ಸೇರಿದಂತೆ ಕನ್ನಡ ಪರ ಸಂಘಟನೆಯ ಪದಾಧಿಕಾರಿಗಳು, ಹಿರಿಯ ಮುಖಂಡರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಪ್ರಮುಖರನ್ನು ಬಳಸಿಕೊಂಡು ಹಬ್ಬ ಆಚರಣೆ ಆಗಲಿ ಸೂಚನೆ ನೀಡಿದರು. ಕರುನಾಡ ಕದಂಬ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಹೆಚ್. ಸುಧಾಕರ್ ಮಾತನಾಡಿ, ಗಾಂಧಿ ಮೈದಾನದಲ್ಲಿ ನೆರವೇ ರಿಸುವ ವೇದಿಕೆಗೆ ಮಯೂರವರ್ಮರ ಹೆಸರನ್ನಿಡಬೇಕು ಎನ್ನುವುದು ಸೇರಿದಂತೆ ಇತರೆ ಸಲಹೆ ನೀಡಿದರು.

ತಾಲೂಕು ಆಡಳಿತದ ವತಿಯಿಂದ ರಾಜ್ಯೋತ್ಸವದ ಪೂರ್ವಭಾವಿ ಸಭೆಯಲ್ಲಿ ಶಾಸಕ ಬಿ.ಪಿ.ಹರೀಶ್ ಮಾತನಾಡಿದರು. ಎಚ್.ಬಿ.ಪ್ರಭಾಕರ್‌ಗೌಡ್ರು, ಡಿ. ದುರುಗಪ್ಪ ಇದ್ದರು.

ಕಸಾಪ ಜಿಲ್ಲಾ ಮಾಜಿ ಅಧ್ಯಕ್ಷ ಎಸ್. ಎಚ್.ಹೂಗಾರ್,ಕಾರ್ಮಿಕ ಮುಖಂಡ ಎಚ್.ಕೆ.ಕೊಟ್ರಪ್ಪ, ಬಿ.ಮುಗ್ದಂ, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ರಿಯಾಜ್ ಆಹ್ಮದ್, ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಸಭೆಯಲ್ಲಿ ಸಲಹೆ ನೀಡಿದರು.

ಸಭೆಯಲ್ಲಿ ಪ್ರಭಾರಿ ತಹಶೀಲ್ದಾರ್‌ಎಚ್ .ಬಿ.ಪ್ರಭಾಕರ್‌ಗೌಡ್ರು, ಕ್ಷೇತ್ರ ಶಿಕ್ಷಣಾಧಿಕಾರಿ ಡಿ. ದುರುಗಪ್ಪ, ನಗರಸಭೆ ಎಇಇ ವಿನಯಕುಮಾರ್,ಪಿಎಸ್‌ಐ ಶ್ರೀಪತಿ ಗಿನ್ನಿ, ಸಮಾಜ,ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಹನುಮಂತಪ್ಪ ಲಮಾಣ , ಟಿಎಚ್‌ಒ ಡಾ.ಅಬ್ದುಲ್ ಖಾದರ್,ಕೃಷಿ ಸಹಾಯಕ ನಿರ್ದೇಶಕ ನಟರಾಜ್, ಕಸಾಪ ತಾಲೂಕು ಗೌರವ ಕಾರ್ಯದರ್ಶಿ ಚಿದಾನಂದ.ಎಂ. ಕಂಚಿಕೇರಿ, ಮಂಜುನಾಥ್ ಪೂಜಾರ್ ,ರಮೇಶ್ ಮಾನೆ, ಪ್ರೀತಂ ಬಾಬು, ರಾಜೇಶ್ ಇತರರಿದ್ದರು.

ಕ್ರಿಶ್ಚಿಯನ್ ನಿಗಮದಿಂದ ಸಾಲ ಸೌಲಭ್ಯಕ್ಕೆ ಆಹ್ವಾನ

ಚಿತ್ರದುರ್ಗ: ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಮೂಲಕ ವಿವಿಧ ಯೋಜನೆ ಗಳಯಡಿ ಸಾಲ ಸೌಲಭ್ಯ ಪಡೆಯಲು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸ 'ಲಾಗಿದೆ. ಕ್ರಿಶ್ಚಿಯನ್ ಸಮುದಾಯದ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ ಯೋಜನೆ, ವಿದೇಶಿ ವಿದ್ಯಾಭ್ಯಾಸ ಸಾಲ ಯೋಜನೆ, ಶ್ರಮಶಕ್ತಿ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ನೇರ ಸಾಲ ಯೋಜನೆ, ಶ್ರಮಶಕ್ತಿ (ವಿಶೇಷ ಮಹಿಳಾ) ಯೋಜನೆ, ಗಂಗಾ ಕಲ್ಯಾಣ ಯೋಜನೆ, ಅರಿವು ಸಾಲ ಯೋಜನೆಗಳಿಗೆ ವೆಬ್ಸೈಟ್ https://kccdclonline.karnataka.gov.in ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್ಸೈಟ್/ ದೂರವಾಣಿ ಸಂಖ್ಯೆ 08194–226412 ಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಶಕ್ತಿ ಯೋಜನೆ ಖಾಸಗಿ ಬಸ್‌ಗೂ ವಿಸ್ತರಿಸಲಿ

ಜಗಳೂರು: ಸರ್ಕಾರದ ಶಕ್ತಿ ಯೋಜನೆಯಿಂದ ಲಕ್ಷಾಂತರ ಖಾಸಗಿ ಬಸ್ ಕಾರ್ಮಿಕರ ಕುಟುಂಬಕ್ಕೆ ಸರಕಾರ ಅನ್ಯಾಯ ಮಾಡಿದೆ. ಶಕ್ತಿ ಯೋಜನೆ ಸರ್ಕಾರಿ ಬಸ್ ಗಳಿಗೆ ಸೀಮಿತವಾಗದೆ ಖಾಸಗಿ ಬಸ್ ಗಳಿಗೂ ವಿಸ್ತರಿಸಬೇಕು ಎಂದು ಖಾಸಗಿ ಬಸ್ ಮಾಲೀಕರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ್ ಒತ್ತಾಯಿಸಿದರು.

ತಾಲೂಕಿನ ಪತ್ರಕರ್ತರಿಗೆ ದಾವಣಗೆರೆ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದಿಂದ ರಾಜ್ಯದಲ್ಲಿಯೇ ಪ್ರ ಪ್ರಥಮ ಬಾರಿಗೆ ಉಚಿತ ಖಾಸಗಿ ಬಸ್ ಪಾಸ್ ವಿತರಿಸಿ ನಂತರ ಮಾತನಾಡಿದರು.

ರಾಜ್ಯದ 9 ಜಿಲ್ಲೆಗಳಲ್ಲಿ ಮಾತ್ರ ಖಾಸಗಿ ಬಸ್ ಗಳಿದ್ದು,9000 ಖಾಸಗಿ ಬಸ್ ಸಂಚರಿಸುತ್ತಿವೆ. ವರ್ಷಕ್ಕೆ ಲಕ್ಷಾಂತರ ಹಣ ತೆರಿಗೆ ಭರಿಸುತ್ತಿದ್ದೇವೆ. ಸುಮಾರು 25 ವರ್ಷಗಳಿಂದ ಸುಗಮವಾಗಿ ನಡೆಸಿಕೊಂಡು ಬಂದಿರುವ ಖಾಸಗಿ ಬಸ್ ಗಳ ಮಾಲೀಕರುಗಳಿಗೆ,ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆಯಿಂದ ಖಾಸಗಿ ಬಸ್ ಮಾಲೀಕರುಗಳ ಆರ್ಥಿಕ ಪರಿಸ್ಥಿತಿಗೆ ಕೊಡಲಿಪೆಟ್ಟು ಬಿದ್ದಿದೆ ಎಂದರು.

ಪತ್ರಕರ್ತರಿಗೆ ದಾವಣಗೆರೆ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದಿಂದ ಉಚಿತ ಖಾಸಗಿ ಬಸ್ ಪಾಸ್ ವಿತರಿಸಲಾಯಿತು.

ಖಾಸಗಿ ಬಸ್ ಮಾಲೀಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಪಲ್ಲಾಗಟ್ಟೆ ಹೆಚ್.ಸಿ ಮಹೇಶ್ ಮಾತನಾಡಿ, ಸರ್ಕಾರಿ ಆದೇಶಗಳನ್ನು ಕೆಎಸ್ ಆರ್‌ಟಿಸಿ ನಿಗಮದ ಅಧಿಕಾರಿಗಳು ದುರುಪಯೋಗಪಡೆದುಕೊಂಡು ಖಾಸಗಿ ಬಸ್ ಮಾರ್ಗದ ಸಮಯದಲ್ಲಿ ಸರ್ಕಾರಿ ಬಸ್ ಗಳಿಗೆ ಮಾರ್ಗ ತೋರಿಸಿ ವಿನಾಕಾರಣ ಸಂಘರ್ಷಕ್ಕೆ ಅವಕಾಶಮಾಡುತ್ತಿದ್ದಾರೆ. ಖಾಸಗಿ ಬಸ್ ಗಳಲ್ಲಿ ವಿದ್ಯಾರ್ಥಿಗಳಿಗೆ,ಬಡವರಿಗೆ,ವಯೋವೃದ್ಧ,ಮಹಿಳೆಯರಿಗೆ ರಿಯಾಯಿತಿ ಪ್ರಯಾಣದರ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಖಾಸಗಿ ಬಸ್ ಮಾಲೀಕರ ಸಂಘದ ಗೌರವಾಧ್ಯಕ್ಷ ಕಮ್ಮತ್ತಹಳ್ಳಿ ಮಂಜುನಾಥ್ ಮಾತನಾಡಿದರು. ಸಂಘದ ಕಾರ್ಯದರ್ಶಿ ಎಂ.ಆರ್.ಸತೀಶ್,ಖಜಾಂಚಿ ಮಹಮ್ಮದ್ ಅಸ್ಲಾಂ,ಸಹಕಾರ್ಯದರ್ಶಿ ಎಂ.ಎನ್ ವೀರೇಂದ್ರ ಪಾಟೀಲ್,ಉಪಾಧ್ಯಕ್ಷ ಜಿಲಾನ್ ಬೇಗ್,ನಿರ್ದೇಶಕ ಅಬೂಬಕರ್‌ಸಿದ್ದಿಕ್, ಹೆಚ್ .ಜಿ.ವೀರೇಶ್,ಸೈಯದ್ ಅನ್ವರ್,ಜಗದೀಶ್ ರೆಡ್ಡಿ,ಅಶೋಕ,ಸಾತ್ವಿಕ್,ಪೀರ್‌ಭಾಷಾ,ಏಜೆಂಟ್ ಮುಕುಂದ,ಪತ್ರಕರ್ತರ ಸಂಘದ ಪದಾಧಿಕಾರಿಗಳಾದ ಅಣಬೂರು ಕೊಟ್ರೇಶ್ ,ಹೆಚ್.ಆರ್.ಬಸವರಾಜ್, ರವಿಕುಮಾರ್,ಕೆ. ಎಂ.ಜಗದೀಶ್,ಸಂದೀಪ್ ಇದ್ದರು.

ಗುಣಮಟ್ಟದ ಕೆಲಸ ಆಗಲಿ: ಶಾಸಕ ಚಂದ್ರಪ್ಪ ಸೂಚನೆ

ಹೊಳಲ್ಕೆರೆ : ಸರ್ಕಾರ ಹಣ ಖರ್ಚು ಮಾಡಿದ ಮೇಲೆ ಗುಣಮಟ್ಟದ ಕೆಲಸ ಆಗಬೇಕೆಂದು ಶಾಸಕ ಡಾ.ಎಂ.ಚಂದ್ರಪ್ಪ ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗೆ ಸೂಚಿಸಿದರು.

ಸಿರಿಗೆರೆ ಹೋಬಳಿ ಡಿ.ಮದಕರಿಪುರ ಗ್ರಾಮದಲ್ಲಿ ಮೂರು ಕೋಟಿ ರೂ.ವೆಚ್ಚದಲ್ಲಿ ಡಿ.ಮದಕರಿಪುರ ಗ್ರಾಮದಿಂದ ತಣಿಗೆಹಳ್ಳಿವರೆಗೆ ನೂತನ ಸಿ.ಸಿ.ರಸ್ತೆ, ಚರಂಡಿಗಳ ನಿರ್ಮಾಣ, ನೂತನ ಶಾಲಾ ಕಟ್ಟಡ, ಆಟದ ಮೈದಾನ ನಿರ್ಮಾಣ ಕಾಮಗಾರಿಗೆ ಶನಿವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿದ್ದ ಹಿಂದಿನ ಬಿಜೆಪಿ.ಸರ್ಕಾರ 63 ಜಾತಿಗಳಿಗೆ ಶೇ.5 ರಷ್ಟು ಮೀಸಲಾತಿ ನೀಡಿತ್ತು. ಈಗಿನ ಸರ್ಕಾರ ಲಂಬಾಣಿ, ಕೊರಚ, ಕೊರಮ, ಭೋವಿ ಜನಾಂಗಕ್ಕೆ ಶೇ.3 ರಷ್ಟು, ಅಲೆಮಾರಿಗಳಿಗೆ ಶೇ.1 ರಷ್ಟು ಮೀಸಲಾತಿ ನೀಡಿರುವುದು ಅನ್ಯಾಯವಲ್ಲವೆ? ಇದರ ವಿರುದ್ದ ಮೊದಲು ನೀವುಗಳು ಎಚ್ಚೆತ್ತುಕೊಂಡು ಹೋರಾಡಬೇಕೆಂದು ತಿಳಿಸಿದರು. ನನ್ನ ಕ್ಷೇತ್ರ ಶಿವನಿ, ಅಜ್ಜಂಪುರದವರೆಗಿದೆ. ತಾಲ್ಲೂಕಿನ 493 ಹಳ್ಳಿಗಳಲ್ಲಿಯೂ ಸಿ.ಸಿ.ರಸ್ತೆ, ರೈತರಿಗೆ ವಿದ್ಯುತ್, ಶಾಲಾ–ಕಾಲೇಜುಗಳನ್ನು ನಿರ್ಮಿಸಿ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿದ್ದೇನೆ ಎಂದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕಮಲಾಕ್ಷಿ, ಸಿರಿಗೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮೋಹನ್, ಗ್ರಾಮ ಪಂಚಾಯಿತಿ ಸದಸ್ಯರುಗಳಾದ ರಮೇಶ್, ಕುಬೇರಮ್ಮ, ರುದ್ರಣ್ಣವಿಷ್ಣು, ಮೋಹನ್ಕುಮಾರ್,ಮೂರ್ತಣ್ಣ, ಗಂಗಣ್ಣ, ಶೇಖರಪ್ಪ, ಬಸವರಾಜ್, ಪಂಚಾಕ್ಷರಿ ಇದ್ದರು.

ಸಮಾಚಾರ ಸಣ್ಣದಲ್ಲ

ಭ್ರೂಣ ಹತ್ಯೆ: ನಾಲ್ವರಿಗೆ ನ್ಯಾಯಾಂಗ ಬಂಧನ

ಮೈಸೂರು: ಮೈಸೂರು ಸಮೀಪದ ಫಾರಂ ಹೌಸ್‌ನಲ್ಲಿ ಭ್ರೂಣಲಿಂಗ ಪತ್ತೆ ಪ್ರಕರಣ ಸಂಬಂಧ ಬಂಧಿತರಾಗಿದ್ದ ನಾಲ್ವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಿಂಗ್ ಪಿನ್ ಶ್ಯಾಮಲಾ, ಹರೀಶ್ ನಾಯಕ, ಶಿವಕುಮಾರ್ ಹಾಗೂ ಪುಟ್ಟರಾಜು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ತಲೆಮರೆಸಿಕೊಂಡಿರುವ ಪ್ರಕರಣದ ಪ್ರಮುಖ ಆರೋಪಿ ಸ್ವಾಮಿ, ಗೋವಿಂದರಾಜು, ಕಾರ್ತಿಕ್ ಅವರ ಪತ್ತೆಗೆ ಹುಡುಕಾಟ ನಡೆದಿದೆ. ಬನ್ನೂರು ರಸ್ತೆಯ ಸುತ್ತಮುತ್ತಲ ಗ್ರಾಮಗಳಲ್ಲಿ ಭ್ರೂಣಲಿಂಗ ಪತ್ತೆ ಕಾರ್ಯ ನಡೆಯುತ್ತಿರುವ ಮಾಹಿತಿ ಮೇರೆಗೆ ಎರಡು ತಿಂಗಳಿಂದ ಕಣ್ಣಾವಲು ಇಟ್ಟಿದ್ದ ಆರೋಗ್ಯ ಇಲಾಖೆ ಅಧಿಕಾರಿಗಳು ಬುಧವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಿದ್ದರು. 2019 ರಿಂದ ಕಾರ್ಯನಿರ್ವಹಿಸುತ್ತಿರುವ ತಿ.ನರಸೀಪುರ ತಾಲೂಕಿನ ಬನ್ನೂರು ಪಟ್ಟಣದಲ್ಲಿ ಎಸ್.ಕೆ ಆಸ್ಪತ್ರೆಯಲ್ಲಿ 15 ಹಾಸಿಗೆಗಳಿವೆ. ಬಿಎಸ್ಸಿ ನರ್ಸಿಂಗ್ ಸರ್ಟಿಫಿಕೇಟ್ ಪಡೆದಿರುವ ಶ್ಯಾಮಲಾ ಆಸ್ಪತ್ರೆಯ ಆಡಳಿತವನ್ನು ನಿರ್ವಹಿಸುತ್ತಿದ್ದರು. ಈವರೆಗೂ 200ಕ್ಕೂ ಹೆಚ್ಚು ಭ್ರೂಣಲಿಂಗ ಪರೀಕ್ಷೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಡಿತರ ಅಕ್ಕಿ ಜಪ್ತಿ: ತನಿಖೆಗೆ ಆದೇಶ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಕೋನಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೌಡಿಪುರ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 262 ಕ್ವಿಂಟಾಲ್ ಅಕ್ಕಿ ಜಪ್ತಿ ಪ್ರಕರಣ ಸಂಬಂಧ ಮೊಳಕಾಲ್ಮೂರು ತಾಲೂಕಿನ ಎಲ್ಲ ನ್ಯಾಯಬೆಲೆ ಅಂಗಡಿಗಳನ್ನು ತಪಾಸಣೆ ನಡೆಸುವಂತೆ ಆಹಾರ ಇಲಾಖೆ ಆದೇಶ ಹೊರಡಿಸಿದೆ. ಗ್ರಾಮದ ಸರಕಾರಿ ಸಮುದಾಯ ಭವನದಲ್ಲಿ ಸಂಗ್ರಹಿಸಿಟ್ಟಿದ್ದ ಅಕ್ಕಿಯನ್ನು ಪೊಲೀಸರು ದಾಳಿ ನಡೆಸಿ 535 ಚೀಲ ಅಕ್ಕಿಯನ್ನು ಜಪ್ತಿ ಮಾಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದು ಮೇಲ್ನೋಟಕ್ಕೆ ಪಡಿತರ ಅಕ್ಕಿ ಎಂಬುದು ಸಾಬೀತಾಗಿದೆ. ಈ ಅಕ್ಕಿಯು ಎಲ್ಲಿಂದ ಸಂಗ್ರಹಣೆ ಮಾಡಲಾಗಿದೆ ಎಂಬುದನ್ನು ಪರಿಶೀಲಿಸುವ ಸಲುವಾಗಿ ತಾಲೂಕಿನ ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ತಪಾಸಣೆ ನಡೆಸಿ ವಾರದೊಳಗೆ ವರದಿ ನೀಡುವಂತೆ ಇಲಾಖೆಯ ಜಂಟಿ ನಿರ್ದೇಶಕ, ತಹಸೀಲ್ದಾರ್‌ಗೆ ಸೂಚಿಸಿದ್ದಾರೆ.

ರಾಜ್ಯದಲ್ಲಿ ಗಾಂಧೀಜಿ ಸ್ತಂಭ ನಿರ್ಮಾಣ

ಕೊಪ್ಪಳ: ಮಹಾತ್ಮ ಗಾಂಧಿ ಅಧ್ಯಕ್ಷತೆ ವಹಿಸಿದ್ದ



ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮ ನಡೆಸಿ ಒಂದು ವರ್ಷ ಪೂರ್ಣಗೊಳ್ಳುವುದರ ಒಳಗೆ ರಾಜ್ಯದಾದ್ಯಂತ ಗಾಂಧೀಜಿ ಭೇಟಿ ನೀಡಿದ ಸ್ಥಳ ಅಥವಾ ಆ ಜಿಲ್ಲೆಯಲ್ಲಿ ಅವರ ಪುತ್ಥಳಿ ಸಮೇತ ಸ್ತಂಭ ನಿರ್ಮಾಣ ಮಾಡಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿ ಶತಮಾನೋತ್ಸವ ಕಾರ್ಯಕ್ರಮದ ವೇಳೆ ಅಂದು ಕೊಂಡಂತೆ ಗಾಂಧಿ ಭಾರತ ಯಾತ್ರೆಯ ಕಾರ್ಯಕ್ರಮ ಗಳನ್ನು ಅ. 2ರ ಒಳಗೆ ಪೂರ್ಣಗೊಳಿಸಬೇಕಿತ್ತು. ಸಾಧ್ಯವಾಗದ ಕಾರಣ ದಿನಾಂಕ ವಿಸ್ತರಣೆ ಮಾಡಿದ್ದೇವೆ ಎಂದರು.

ಡಿಸೆಂಬರ್‌ಗೆ ಕಾಮಗಾರಿ ಪೂರ್ಣ: ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗಾಗಿ ಈಗಾಗಲೇ ಕಾಮಗಾರಿಗಳು ನಡೆಯುತ್ತಿದ್ದು ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿವೆ. ಗಂಗಾವತಿ ತಾಲೂಕಿನ ಹಿರೇಬೆಣಕಲ್ ಗ್ರಾಮದ ಮೋರೇರ್ ತಟ್ಟೆಯ ಪ್ರದೇಶವನ್ನು ಯೂನಸ್ಕೊ ಪಟ್ಟಿಗೆ ಸೇರಿಸುವ ಬಗ್ಗೆ ಪ್ರಯತ್ನ ನಡೆದಿದ್ದು, ಬೆಂಗಳೂರಿನ ಬಾಂಕ್ವೆಟ್ ಹಾಲ್‌ನಲ್ಲಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಕಿತ್ತೂರು ಚೆನ್ನಮ್ಮನ ಆದರ್ಶ ಬೆಳೆಸಿಕೊಳ್ಳಿ

ಬೆಂಗಳೂರು: ಬೆಳವಡಿ ಮಲ್ಲಮ್ಮ ಹಾಗೂ ಕಿತ್ತೂರು

ಚೆನ್ನಮ್ಮ ಈ ನಾಡಿನ ಸರ್ವಶ್ರೇಷ್ಠ ಹೋರಾಟಗಾರ್ತಿಯಾಗಿದ್ದು, ಅವರ ಬದುಕು, ಜೀವನ ಎಲ್ಲರಿಗೂ ಪ್ರೇರಣೆಯಾಗಲಿ ಎಂದು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ ಬಿದರಿ ಕರೆ ನೀಡಿದ್ದಾರೆ. ಲಗ್ಗೆರೆಯಲ್ಲಿ ನೀಲೆ ಫೌಂಡೇಷನ್‌ನಲ್ಲಿ ಭಾರತಿ ದರ್ಶ್ ಫೌಂಡೇಶನ್‌ನಿಂದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯ ಅಂಗವಾಗಿ ಬೆಳವಡಿ ಮಲ್ಲಮ್ಮ ಹಾಗೂ ಕಿತ್ತೂರು ಚೆನ್ನಮ್ಮ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ನಾಡಿನ ಕೆಚ್ಚೆದೆಯ ಹೋರಾಟಗಾರ್ತಿಯರ ಬದುಕು, ಹೋರಾಟವನ್ನು ಅಧ್ಯಯನ ಮಾಡಬೇಕು. ಅವರ ಆದರ್ಶ ಬೆಳೆಸಿಕೊಳ್ಳಬೇಕು ಎಂದರು.

ಎಚ್‌ಡಿಕೆ-ಡಿಕೆಶಿ ನಡುವೆ ಖಾತಾ ಸಮರ

ಬಿ ಖಾತಾ-ಎ ಖಾತಾ ಬೋಗಸ್: ಎಚ್‌ಡಿಕೆ

ಬೆಂಗಳೂರು: ಬಿ ಖಾತಾದಿಂದ ಎ ಖಾತಾ

ಪರಿವರ್ತನೆ ಎನ್ನುವುದೇ ಬೋಗಸ್. ದುಡ್ಡು ಹೊಡೆಯುವುದಕ್ಕೆ ಮಾಡಿರುವ ಸುಲಿಗೆ ಕಾರ್ಯಕ್ರಮ ಇದಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರೂ ಖಾತಾ ಬದಲಾವಣೆ ಮಾಡಿಸಿಕೊಳ್ಳಲು ಹಣ ಕಟ್ಟಬೇಡಿ. ಎರಡು ವರ್ಷಗಳಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಸರಕಾರ ಅಧಿಕಾರಕ್ಕೆ ಬರುತ್ತದೆ. ಕಡಿಮೆ ದರದಲ್ಲಿ ನಿಮಗೆ ಖಾತೆ ಮಾಡಿಕೊಡುತ್ತೇವೆ. ಕಾಂಗ್ರೆಸ್ ಸರಕಾರದ ಬೋಗಸ್ ಆಮಿಷಕ್ಕೆ ಮರುಳಾಗಬೇಡಿ. ಖಾತಾ ಬದಲಾವಣೆ ಕಾಂಗ್ರೆಸ್ ಸರಕಾರದ ಲೂಟಿ ಕಾರ್ಯಕ್ರಮವಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರಕಾರ ಹಗಲು ದರೋಡೆ ಮಾಡುತ್ತಿದೆ. ಜನರನ್ನು ಸುಲಿಗೆ ಸರಕನ್ನಾಗಿ ಮಾಡಿಕೊಂಡಿದೆ. ಬೆಂಗಳೂರು ಜನರಿಗೆ ನಾನು ಹೇಳಲು ಬಯಸುತ್ತೇನೆ. ಯಾವುದೇ ಕಾರಣಕ್ಕೂ ಒಂದು ನಯಾಪೈಸೆ ಕಟ್ಟಬೇಡಿ. ಯಾವುದೇ ಕಾರಣಕ್ಕೂ ಎರಡು ವರ್ಷ ಖಾತೆ ಮಾಡಿಸಿಕೊಳ್ಳಬೇಡಿ. ಇವರ ಮಾತಿಗೆ ಮರುಳಾಗ ಬೇಡಿ. ನಿಮ್ಮನ್ನು ಉಳಿಸುವ, ನಿಮ್ಮ ಹಿತ ಕಾಯುವ ಜವಾಬ್ದಾರಿ ನಮ್ಮದು ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದನಾಯಕ ಸಿ.ಬಿ. ಸುರೇಶ್ ಬಾಬು, ಎಂಎಲ್‌ಸಿ ಟಿ.ಎ.ಶರವಣ, ಟಿ.ಎನ್.ಜವರಾಯಿಗೌಡ, ವಿವೇಕಾನಂದ, ಎಸ್.ಎಲ್.ಭೋಜೇಗೌಡ ಇದ್ದರು.

> **ಖಾತಾ ಪರಿವರ್ತನೆಗೆ ದುಬಾರಿ ಹಣ ಪಾವತಿಸುವ ಬದಲು ಎರಡು ವರ್ಷ ಕಾಯಿರಿ. ನಮ್ಮ ಸರಕಾರ ಅಧಿಕಾರಕ್ಕೆ ಬರಲಿದೆ.ಹಿಂದಿನ ವ್ಯವಸ್ಥೆಯಲ್ಲೆ ಸುಲಭವಾಗಿ ನಿಮ ಆಸ್ತಿ ದೊರೆಯಲಿದೆ. ದೀಪಾವಳಿ ಉಡುಗೊರೆಗೆ ಆಸೆ ಬಿದ್ದು ಹಾಳು ಮಾಡಿಕೊಳ್ಳಬೇಡಿ. ಮಾಲೀಕತ್ವ ಸಿಗಲಿದೆ. ಇದರ ಸವಾಲನ್ನು ಸ್ವೀಕಾರ ಮಾಡುತ್ತೇನೆ.**
>
> **-ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

2 ವರ್ಷದಲ್ಲಿ ಮೈತ್ರಿ ಸರಕಾರ ಬರಲಿದೆ

ಜನತೆ ಆತಂಕಕ್ಕೆ ಒಳಗಾಗಬೇಕಿಲ್ಲ. ಎರಡು ವರ್ಷ ಆದ ಮೇಲೆ ನಮ್ಮ ಮೈತ್ರಿ ಸರಕಾರ ಬರುತ್ತದೆ. ಆಗ ಅತ್ಯಂತ ಸರಳವಾಗಿ, ಸುಲಭವಾಗಿ ಖಾತೆ ಮಾಡಿಕೊಡುತ್ತೇವೆ. ನಿಮಗೆ ಯಾವುದೇ ಹಣಕಾಸಿನ ಹೊರೆ ಆಗುವುದಿಲ್ಲ. ಈಗಾಗಲೇ ಆಸ್ತಿ ಸಂಪಾದನೆ ಮಾಡಲು ಸಾಲ ಮಾಡಿ ಬಡ್ಡಿ ಕಟ್ಟುತ್ತಿದ್ದೀರಿ. ಈಗ ಮತ್ತೊಮ್ಮೆ ಈ ಎ ಖಾತಾ ಮಾಡಿಸಲು ಲಕ್ಷಾಂತರ ರುಪಾಯಿ ಸಾಲ ಮಾಡಬೇಡಿ. ಇನ್ನೊಮ್ಮೆ ಸಾಲದ ಸುಳಿಗೆ ಸಿಕ್ಕಿಕೊಳ್ಳಬೇಡಿ ಎಂದು ಎಚ್‌ಡಿ ಕುಮಾರಸ್ವಾಮಿ ಹೇಳಿದರು. ದೀಪಾವಳಿ ಕೊಡುಗೆ ಎಂದು ಪುಟ ಗಟ್ಟಲೆ ಜಾಹೀರಾತು ಕೊಟ್ಟುಕೊಂಡು ಬಂದ ಈ ಸರಕಾರ ಎ ಖಾತಾ ಎನ್ನುವ ದೋಖಾ ಕಾರ್ಯಕ್ರಮ ವನ್ನು 6ನೇ ಗ್ಯಾರಂಟಿ ಜನರಿಗೆ ದೀಪಾವಳಿ ಉಡುಗೊರೆ ಕೊಟ್ಟಿದ್ದೇವೆ ಎಂದು ಸಿಎಂ, ಡಿಸಿಎಂ ಹೇಳಿದ್ದಾರೆ. ದೀಪಾವಳಿ ಕೊಡುಗೆ ಎಂದರೆ ಜನರಿಂದ ಲಕ್ಷ ಲಕ್ಷ ಪೀಕುವುದು ಈ ಕಾರ್ಯಕ್ರಮವಾಗಿದೆ. ಖಾತಾ ಪರಿವರ್ತನೆ ಮಾಡಲಿ, ಬೇಡ ಎಂದವರು ಯಾರು? ಆದರೆ, ಲಕ್ಷ ಲಕ್ಷ ಸುಲಿಗೆ ಯಾಕೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಹಿಟ್ ಆ್ಯಂಡ್ ರನ್ ಬಿಡಿ ಚರ್ಚೆಗೆ ಬನ್ನಿ: ಡಿಸಿಎಂ

ಬೆಂಗಳೂರು: ಕುಮಾರಸ್ವಾಮಿ ಎಲ್ಲಿ ಕೈಗಾರಿಕೆ ತರುತ್ತಾರೆ

ಎಂದು ಹೇಳಲಿ, ಅಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮಾಡೋಣ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆ, ವಾದ ವಿವಾದ ಇರಬೇಕು. ಹಿಟ್ ಅಂಡ್ ರನ್, ಬ್ಲ್ಯಾಕ್ ಮೇಲ್ ಮಾಡುವುದಲ್ಲ. ಕುಮಾರಸ್ವಾಮಿ ನನ್ನ ವಿರುದ್ಧ ಇರುವ ದಾಖಲೆ ತಂದು ಬಹಿರಂಗ ಚರ್ಚೆಯಲ್ಲಿ ಭಾಗವಹಿಸಲಿ. ಕುಮಾರಸ್ವಾಮಿ ಬಳಿ ಸಾಕ್ಷಿಗುಡ್ಡೆ ಇದ್ದರೆ, ಜನಕ್ಕೆ, ರಾಜ್ಯಕ್ಕೆ ಒಳ್ಳೆಯದು ಮಾಡಿದ್ದರೆ ಅದನ್ನು ದಾಖಲೆ ಸಮೇತ ಬಂದು ಹೇಳಲಿ. ಜನ ಅವರಿಗೆ ಮತ ಕೊಟ್ಟು ದೊಡ್ಡ ಹುದ್ದೆ ನೀಡಿದ್ದಾರೆ. ಸಾರ್ವಜನಿಕವಾಗಿ ಬಂದು ಉತ್ತರ ನೀಡಲಿ. ಕೇವಲ ಸುಳ್ಳು ಆರೋಪ ಮಾಡುತ್ತಾ, ಬೇರೆಯವರಿಗೆ ಹೆದರಿಸುತ್ತಾ ಹೋಗುವುದಲ್ಲ ಎಂದು ಟೀಕಿಸಿದರು.

ಸದನದಲ್ಲಿ ಜೇಬು ತೋರಿಸಿ ಪೆನ್ ಡ್ರೈವ್ ತೆಗೆಯುತ್ತೇನೆ, ತೆಗೆಯುತ್ತೇನೆ ಎಂದು ಹೇಳಿದಂತೆ ಅಲ್ಲ. ಬಹಿರಂಗ ಚರ್ಚೆಗೆ ಬರಲಿ. ಇದರಲ್ಲಿ ಅವಮಾನ ಆಗುವಂತದ್ದು ಏನೂ ಇಲ್ಲ. ಅವರು ಸಿಎಂ ಆಗಿದ್ದಾಗ ನಾನು ಸಾತನೂರಿಗೆ ಚರ್ಚೆಗೆ ಹೋಗಲಿಲ್ಲವೇ? ನಾನು ಏನು ಮಾಡಿದ್ದೇನೆ, ನನ್ನ ಹುಳುಕು ಏನಿದೆ ಎಂಬುದನ್ನು ನೀನು ಹೇಳು, ನಿನ್ನದು ಏನಿದೆ ಎಂದು ನಾನು ಹೇಳುತ್ತೇನೆ. ನಂತರ ಜನ ತೀರ್ಮಾನ ಮಾಡುತ್ತಾರೆ ಎಂದು ಸವಾಲು ಹಾಕಿದರು.

ಅವರು ನನ್ನ ಯಾವ ವಿಚಾರ ಬಿಚ್ಚಿಡುತ್ತಾರೋ ಬಿಚ್ಚಿಡಲಿ. ಅವರ ಬಳಿಯೇ ಕೇಂದ್ರ ಸರಕಾರ ಇದೆಯಲ್ಲಾ. ಈ ಡಿ.ಕೆ. ಶಿವಕುಮಾರ್ ಅದಕ್ಕೆಲ್ಲಾ ಹೆದರುವ ಮಗ ಅಲ್ಲ. ಎರಡೂವರೆ ವರ್ಷಗಳ ನಂತರ ನಮ್ಮ ಸರಕಾರ ಬರುತ್ತದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಈ ಡೈಲಾಗ್ ಎಷ್ಟು ಸಾರಿ ಹೇಳಿ ಆಗಿದೆ. ಕೇಳಿ, ಕೇಳಿ ಸಾಕಾಗಿದೆ. ಇವರ ನಾಯಕತ್ವದಲ್ಲಿ ಇವರ ಪಕ್ಷ 18 ಸ್ಥಾನಕ್ಕೆ ಇಳಿದಿದೆ. ಮುಂದಿನ ಬಾರಿ 8 ಅಥವಾ 9 ಸ್ಥಾನಗಳಿಗೆ ಕುಸಿಯಲಿದೆ ಎಂದು ತಿರುಗೇಟು ನೀಡಿದರು.

- ಕುಮಾರಸ್ವಾಮಿ ಆರೋಪಕ್ಕೆ ತಿರುಗೇಟು ನೀಡಿದ ಡಿಕೆ
- ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಸರಕಾರ ಬರೋದು ಕನಸು
- ಮುಂದಿನ ಚುನಾವಣೆಗೆ ಇನ್ನೂ ಎಂಟು ಸ್ಥಾನ ಕಡಿಮೆಯಾಗಲಿದೆ
- ಎ ಖಾತಾ ಬಿ ಖಾತಾ ವಿಚಾರದಲ್ಲಿ ಭ್ರಷ್ಟಾಚಾರ ನಡೆಯು ತ್ತಿದೆ ಎಂದಾದರೆ ಎಚ್‌ಡಿಕೆ ಬಹಿರಂಗ ಚರ್ಚೆಗೆ ಬರಲಿ

ಭ್ರಷ್ಟಾಚಾರಕ್ಕೆ ದಾಖಲೆ ಕೊಡಲಿ

ಎ ಖಾತಾ ಹಾಗೂ ಬಿ ಖಾತಾ ಪರಿವರ್ತನೆಯಲ್ಲಿ ಭ್ರಷ್ಟಾಚಾರ ನಡೆಯು ತ್ತಿದೆ ಎಂಬ ಜೆಡಿಎಸ್ ಆರೋಪಕ್ಕೆ ಪ್ರತಿಕ್ರಿಯಿದ ಡಿಸಿಎಂ ಡಿಕೆಶಿ, ಬಹಿರಂಗ ಚರ್ಚೆಗೆ ಬನ್ನಿ ಎಂದು ನಾನು ಕರೆಯುತ್ತಲೇ ಇದ್ದೇನೆ. ಎ ಖಾತಾ ಬಿ ಖಾತಾ ವಿಚಾರದಲ್ಲಿ ಯಾವ ಭ್ರಷ್ಟಾಚಾರ ನಡೆಯುತ್ತಿದೆ? ಬೆಂಗಳೂರು ನಾಗರಿಕರ ಆಸ್ತಿ ದಾಖಲೆ ಸರಿಪಡಿಸಿಕೊಳ್ಳಲು, ಅವರಿಗೆ ಮುಂದೆ ಬ್ಯಾಂಕ್ ಸಾಲ ಹಾಗೂ ಇತರೆ ಸೌಲಭ್ಯ ಸಿಗಬೇಕು. ಜನರಿಗೆ ಉತ್ತಮ ಸೌಕರ್ಯ ಒದಗಿಸಬೇಕು. ಜನರು ತೆರಿಗೆ ಪಾವತಿಸುವಂತಾಗ ಬೇಕು ಎಂಬ ಉದ್ದೇಶದಿಂದ ನಾವು ಈ ಯೋಜನೆ ಮಾಡುತ್ತಿದ್ದೇವೆ. ಜನರ ಆಸ್ತಿ ದಾಖಲೆ ಸರಿಪಡಿಸುವುದು ನಮ್ಮ ಆರನೇ ಗ್ಯಾರಂಟಿ. ನಮ್ಮ ಈ ಕಾರ್ಯವನ್ನು ದೇಶದ ಯಾವುದೇ ನಗರದಲ್ಲಿ ಮಾಡಿಲ್ಲ. ಹೀಗಾಗಿ ಕೇಂದ್ರ ಸರಕಾರ ಪ್ರಶಸ್ತಿ ನೀಡಿದೆ. ನಮ್ಮ ಈ ಯೋಜನೆಗೆ ಸಾವಿರಾರು ಜನ ಅರ್ಜಿ ಹಾಕುತ್ತಿದ್ದಾರೆ. ಅವರ ಕಾಲದಲ್ಲಿ ಇ ಖಾತಾ ಮಾಡಿ ಕೊಡಲು ಅವರಿಂದ ಆಗಲಿಲ್ಲ. ಅವರಿಗೆ ಇಂತಹ ಆಲೋಚನೆ ಇರಲಿಲ್ಲ ಎಂದರು.

ಪಾನಮತ್ತ ಬೈಕ್ ಸವಾರ ಬಸ್ ದುರಂತದ ಮೂಲ

← ಮೊದಲಪುಟದಿಂದ

ಅದು ಬೈಕ್ ಅನ್ನು ಸ್ವಲ್ಪ ದೂರ ಎಳೆದೊಯ್ದ ಸಂದರ್ಭ ಬೈಕ್‌ನ ಪೆಟ್ರೋಲ್ ಟ್ಯಾಂಕ್‌ಸೋರಿಕೆಯಾಗಿದೆ. ಈ ಸಂದರ್ಭದಲ್ಲಿ ಆದ ಘರ್ಷಣೆಯಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಪೊಲೀಸರು ವಿವರಿಸಿದ್ದಾರೆ.

ಮೊದಲೇ ಮೃತಪಟ್ಟಿದ್ದ ಪಾನಮತ್ತ ಸವಾರ: ಪೆಟ್ರೋಲ್ ಬಂಕ್‌ನಲ್ಲಿ ಶಿವಶಂಕರ್ ಬೈಕ್‌ನಿಲ್ಲಿಸಿ ಸಿಬ್ಬಂದಿಗಾಗಿ ಹುಡುಕಾಡಿ ಸಿಡಿಮಿಡಿಗೊಂಡಿದ್ದ. ಬಳಿಕ ಕಿರುಚಾಡುತ್ತಲೇ ಅಲ್ಲಿಂದ ಬೈಕ್ ಹತ್ತಿ ಹೊರಡುವಾಗ ಸಮತೋಲನ ತಪ್ಪಿ ಸ್ವಲ್ಪದರಲ್ಲೇ ಸ್ಕಿಡ್ ಆಗುವುದು ತಪ್ಪಿದ್ದು ಸಿಸಿಟಿವಿಯಲ್ಲಿ ಪತ್ತೆಯಾಗಿದೆ. ಬೈಕ್ ಸವಾರ ಮದ್ಯ ಇಲ್ಲವೇ ಮಾದಕ ದ್ರವ್ಯ ಸೇವಿಸಿರುವುದನ್ನು ದೃಢಪಡಿಸಿಕೊಳ್ಳಲು ಆತನ ಅಂಗಾಂಗ ಮಾದರಿಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಸುರಕ್ಷಾ ಮಾನದಂಡಗಳ ಉಲ್ಲಂಘನೆ: ಅಪಘಾತಕ್ಕೀಡಾದ ಕಾವೇರಿ ಟ್ರಾವೆಲ್ಸ್‌ನ ಎಸಿ ಸ್ಲೀಪರ್ ಬಸ್ ದಮನ್ ಮತ್ತು ದಿಯು ಕೇಂದ್ರಾಡಳಿತ ಪ್ರದೇಶದಲ್ಲಿ ನೋಂದಣಿಯಾಗಿದ್ದು, ಆರ್‌ಟಿಒ ಅನುಮತಿ ಪಡೆಯದೆಯೇ ಸ್ಲೀಪರ್ ಕೋಚ್ ಆಗಿ ಪರಿವರ್ತಿಸಿರುವುದು ಬೆಳಕಿಗೆ ಬಂದಿದೆ. ಅಗ್ನಿ ಪತ್ತೆ ಮತ್ತು ನಿಗ್ರಹ ವ್ಯವಸ್ಥೆ ಸಹ ಈ ಬಸ್‌ನಲ್ಲಿ ಇರಲಿಲ್ಲ. ಒಳಾಂಗಣದಲ್ಲಿ ಬಳಸುವ ಪರದೆಗಳು ಕುಶನ್‌ಗಳು ದಿಂಬುಗಳು ಅಗ್ನಿ ನಿರೋಧಕ ಆಗಿರಬೇಕು. ಆದರೆ ಬಸ್‌ನಲ್ಲಿ ಇದ್ದ ಈ ವಸ್ತುಗಳು ಹೆಚ್ಚು ದಹನಕಾರಿ ಆಗಿದ್ದವು ಎಂದು ಅವರು ಅಧಿಕಾರಿಗಳು ಹೇಳಿದ್ದಾರೆ.

ದುರಂತದ ತೀವ್ರತೆ ಹೆಚ್ಚಿಸಿದ ಮೊಬೈಲ್: ಬೆಂಕಿ ಹೊತ್ತಿಕೊಂಡ ಸಂದರ್ಭ ಬಸ್ಸಿನ ಲಗೇಜ್ ಕಪಾಟಿನ ಪೆಟ್ಟಿಗೆಯಲ್ಲಿದ್ದ ಸ್ಮಾರ್ಟ್‌ಫೋನ್‌ಗಳ ಲೀಥಿಯಂ ಅಯಾನ್ ಬ್ಯಾಟರಿಗಳೂ ಸ್ಫೋಟಿಸಿರುವುದರಿಂದ ದುರಂತದ ತೀವ್ರತೆ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ₹46 ಲಕ್ಷ ಮೌಲ್ಯದ 234 ಸ್ಮಾರ್ಟ್‌ಫೋನ್‌ಗಳನ್ನು ಹೈದರಾಬಾದ್ ಮೂಲದ ಉದ್ಯಮಿ ಮಂಗನಾಥ್ ಎಂಬುವರು ಬೆಂಗಳೂರಿನ ಇ-ಕಾಮರ್ಸ್ ಕಂಪನಿಗೆ ಪಾರ್ಸೆಲ್ ಮಾಡಿದ್ದರು. ಮೊಬೈಲ್‌ನ ಬ್ಯಾಟರಿಗಳು, ಬಸ್ಸಿನಲ್ಲಿದ್ದ ಎಸಿ ಬ್ಯಾಟರಿಗಳು ಮತ್ತು ಬಸ್‌ನಲ್ಲಿನ ಸುಡುವ ಪೀಠೋಪಕರಣ ಬೆಂಕಿ ಕೆನ್ನಾಲಗೆಯನ್ನು ಹೆಚ್ಚಿಸುವಂತೆ ಮಾಡಿವೆ' ಎಂದು ಕರ್ನೂಲ್‌ನ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಾಂತ್ ಪಾಟೀಲ್ ಮಾಹಿತಿ ನೀಡಿದ್ದಾರೆ.

ದಿಲ್ಲಿ ಚಲೋಗೆ ಸಿದ್ಧತೆ

← ಮೊದಲಪುಟದಿಂದ

ಈಗಾಗಲೇ ಶುರುವಾಗಿರುವ ಸಂಪುಟ ಪುನಾರಚನೆಯ ಚರ್ಚೆಗೆ ಸಿದ್ದರಾಮಯ್ಯ ಅವರ ಈ ದೆಹಲಿ ಭೇಟಿ ಮತ್ತಷ್ಟು ಇಂಬು ನೀಡಿದೆ. ಸದ್ಯಕ್ಕೆ ಡಿ.ಕೆ.ಶಿವಕುಮಾರ್ ಅವರ ಪ್ರವಾಸ ಪಟ್ಟಿ ಬಹಿರಂಗವಾಗಿಲ್ಲ.

ಆದರೆ ಈ ಸಮಯದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕೆಲ ಹಿರಿಯ ಸಚಿವರು ದೆಹಲಿಗೆ ಭೇಟಿ ನೀಡುವ ಸಾಧ್ಯತೆಯಿದೆ. ಆದರೆ ದೆಹಲಿಯಿಂದ ವಾಪಸಾ ಗುವ ವೇಳೆಗೆ ರಾಜ್ಯ ಕಾಂಗ್ರೆಸ್‌ನ 'ಸ್ಪಷ್ಟ' ಚಿತ್ರಣ ಪಡೆಯಬೇಕು ಎನ್ನುವ ತೀರ್ಮಾನಕ್ಕೆ ಸಿಎಂ ಹಾಗೂ ಡಿಸಿಎಂ ಬಂದಿದ್ದಾರೆ ಎನ್ನಲಾಗಿದೆ.

ದೆಹಲಿ ಭೇಟಿಯ ಬಳಿಕವೇ ರಾಜ್ಯಕ್ಕೆ ರಾಗಾ?: ರಾಜ್ಯ ರಾಜಕೀಯದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಬೆಂಗಳೂರು ಭೇಟಿ ನೀಡುವ ಮೊದಲೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಚರ್ಚೆ ನಡೆಸುವ ಸಾಧ್ಯತೆಯಿದೆ.

ಈ ವೇಳೆ ರಾಹುಲ್ ಗಾಂಧಿ ಅವರ ಸಮುಖದಲ್ಲಿ ಸಂಪುಟ ಪುನಾ ರಚನೆಗೆ ಸಂಬಂಧಿಸಿದಂತೆ ಖರ್ಗೆ, ವೇಣು ಗೋಪಾಲ್, ಸುರ್ಜೇವಾಲ ಅವರೊಂದಿಗೆ ಚರ್ಚೆ ಬಳಿಕ ಬೆಂಗಳೂರಿಗೆ ಆಗಮಿಸುವ ಸಾಧ್ಯತೆಯಿದೆ. ನ.20ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೆಂಗಳೂರು ಶೃಂಗದ ಸಮಾರೋಪ ಕಾರ್ಯಕ್ರಮದ ಬಳಿಕ ರಾಜ್ಯ ನಾಯಕರೊಂದಿಗೆ ಚರ್ಚಿಸಿ, ಸಂಪುಟ ಪುನಾ ರಚನೆಯ ಪಟ್ಟಿ ಅಂತಿಮವಾಗಲಿದೆ ಎಂದು ತಿಳಿದುಬಂದಿದೆ.

ಚೆನ್ನಮ್ಮನ ಸಮಾಧಿ ಸ್ಥಳ ರಾಷ್ಟ್ರೀಯ ಸ್ಮಾರಕ ಘೋಷಣೆಗೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ

ಪತ್ರ ಬರೆದು ವರ್ಷವಾದರೂ ಯಾವುದೇ ಕ್ರಮವಹಿಸಿಲ್ಲ: ಸಿಎಂ

ಬೆಳಗಾವಿ: ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಲು ಕೇಂದ್ರ ಸರಕಾರಕ್ಕೆ ಈಗಾಗಲೇ ಪ್ರಸ್ತಾವನೆ ಕಳಿಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

> **ಚೆನ್ನಮ್ಮನ ಹೆಸರು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತಹ ಹೆಸರು. ಟಿಪ್ಪು ಸುಲ್ತಾನ್ ಕೂಡ ವೀರಾವೇಷದಿಂದ ಬ್ರಿಟೀಷರ ವಿರುದ್ಧ ಹೋರಾಡಿದ್ದರು.ಇದನ್ನು ಹೇಳಿದರೆ ತಮ್ಮ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ಟಿಪ್ಪು ಕೂಡ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ ಯುದ್ಧಭೂಮಿಯಲ್ಲಿಯೇ ಕೊನೆಯುಸಿರು ಎಳೆದಿದ್ದಾರೆ.**
>
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

ಚೆನ್ನಮ್ಮನ ಕಿತ್ತೂರಿನ ಕೋಟೆ ಆವರಣದಲ್ಲಿ ನಡೆದ 201ನೇ ಕಿತ್ತೂರು ಉತ್ಸವದ ಸಮಾರೋಪ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಚೆನ್ನಮ್ಮನ ಕಿತ್ತೂರಿನ ಕೋಟೆ ಆವರಣದಲ್ಲಿ ಮೂರು ದಿನಗಳ ಕಾಲ ನಡೆದ 201ನೇ ಕಿತ್ತೂರು ಉತ್ಸವದ ಅಂಗವಾಗಿ ಶನಿವಾರ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚೆನ್ನಮ್ಮನ ಹೆಸರು ಇಡಲು ಕೇಂದ್ರಕ್ಕೆ ಪತ್ರ ಬರೆದು ಒಂದು ವರ್ಷವಾದರೂ ಕೇಂದ್ರ ಸರಕಾರ ಇದುವರೆಗೆ ಯಾವುದೇ ಕ್ರಮವಹಿಸಿಲ್ಲ ಎಂದರು.

ಜಾತಿ, ಧರ್ಮದ ಆಧಾರದಲ್ಲಿ ಸಮಾಜ ಒಡೆಯುವ ಕೆಲಸ ಮಾಡಲಾಗುತ್ತದೆ. ಯಾವುದೇ ಧರ್ಮದಲ್ಲಿಯೂ ದ್ವೇಷವನ್ನು ಬೋಧಿಸಿಲ್ಲ. ಆದ್ದರಿಂದ ಮನುಷ್ಯ ಮನುಷ್ಯರನ್ನು ಪ್ರೀತಿಸಬೇಕು. ಸಮಾಜ ಒಡೆಯುವಂತಹವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಇತಿಹಾಸದ ಕುರಿತು ತಿಳಿಸಲು ಉತ್ಸವಗಳನ್ನು ಆಚರಿಸಲಾಗುತ್ತಿದೆ ಎಂದರು. ಚೆನ್ನಮ್ಮನ ಹೋರಾಟದ ಬಗ್ಗೆ ನಾಡಿಗೆ ತಿಳಿಸುವುದಕ್ಕಾಗಿ 2017ರಲ್ಲಿ ನಮ್ಮ ಸರಕಾರವೇ ಕಿತ್ತೂರು ಚೆನ್ನಮ್ಮ ಜಯಂತಿ ಆರಂಭಿಸಿತು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಚನ್ನಮ್ಮನ ಸಾಹಸಗಾಥೆ ತಿಳಿಸಲು ಜಯಂತಿ ಆರಮಭಿಸಲಾಯಿತೇ ಹೊರತು ರಾಜಕೀಯ ಕಾರಣಕ್ಕಲ್ಲ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಕರ್ನಾಟಕ ವಿಧಾನಸಭೆಯ ಸರಕಾರದ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ, ಶಾಸಕರಾದ ಎನ್.ಎಚ್.ಕೋನರೆಡ್ಡಿ, ಆಸಿಫ್(ರಾಜು) ಸೇಠ, ವಿಶ್ವಾಸ್ ವೈದ್ಯ, ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ್ ಹಟ್ಟಿಹೊಳಿ ಉಪಸ್ಥಿತರಿದ್ದರು.

ವಿಶ್ವವಾಣಿ ದೀಪಾವಳಿ ವಿಶೇಷಾಂಕ ಲೋಕಾರ್ಪಣೆ

ವಿಜಯಪುರ ಜಿಲ್ಲೆ ಬಬಲೇಶ್ವರ ತಾಲೂಕಿನ ಕಾಖಂಡಕಿ ಗ್ರಾಮದಲ್ಲಿ ಉಪ್ಪಾರ ಸಮಾಜ ಸೇವಾ ಸಂಘ ಆಯೋಜಿಸಿದ್ದ ಶ್ರೀ ರಾಜ ಋಷಿ ಭಗೀರಥರ ಕಂಚಿನ ಮೂರ್ತಿ ಉದ್ಘಾಟನೆ ಸಮಾರಂಭದಲ್ಲಿ ವಿಶ್ವವಾಣಿ ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಹೊಸದುರ್ಗ ತಾಲೂಕಿನ ವಿದ್ಯಾನಗರ ಚೆನ್ನೂಲಾದ್ರಿ, ಶಿಲಾಪುರಿ ಮಹಾಸಂಸ್ಥಾನ ಭಗೀರಥ ಪೀಠದ ಡಾ.ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳು ಹಾಗೂ ಸಚಿವ ಎಂ.ಬಿ.ಪಾಟೀಲ ಲೋಕಾರ್ಪಣೆ ಮಾಡಿದರು. ಈ ವೇಳೆ ಶಿಕ್ಷಕ ಲಕ್ಷ್ಮಣಗೌಡ ವಿ. ಪಾಟೀಲ, ಶಿವಯೋಗೇಶ್ವರ ಶ್ರೀ, ನಿಜಲಿಂಗಯ್ಯ ಶ್ರೀ, ಶಿವಶರಣಾನಂದ ಶ್ರೀ, ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷ ಭರಮಣ್ಣ ಉಪ್ಪಾರ, ಅಶೋಕ ಹುಚ್ಚಪ್ಪಯ್ಯ ದಿಗಂಬರಿಮಠ ಸೇರಿ ಹಲವರಿದ್ದರು.

ಕನ್ನೇರಿ ಶ್ರೀ ಕ್ಷಮೆ ಕೇಳಿದರೆ ಪಾದಮುಟ್ಟಿ ವಿಜಯಪುರಕ್ಕೆ ಕರೆ ತರುವೆ: ಎಂಬಿಪಾ

ವಿಜಯಪುರ: ಕನ್ನೇರಿ ಶ್ರೀಗಳು ತಾವು ಆಡಿರುವ ಮಾತಿಗೆ

ಕ್ಷಮೆ ಕೋರಿದರೆ ನಾನೇ ಅವರ ಪಾದ ಮುಟ್ಟಿ ವಿಜಯಪುರಕ್ಕೆ ಕರೆ ತರುವೆ ಎಂದು ಸಚಿವ ಡಾ.ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷಮೆ ಕೋರಿದರೆ ಕನ್ನೇರಿ ಶ್ರೀಗಳು ದೊಡ್ಡವರಾಗುತ್ತಿದ್ದರು. ಈಗಲೂ ಅವರು ಕ್ಷಮೆ ಕೋರಿದರೆ ನಾನೇ ಅವರಿಗೆ ನಮಸ್ಕರಿಸಿ ಪಾದ ಮುಟ್ಟಿ ಅವರನ್ನು ವಿಜಯಪುರಕ್ಕೆ ಕರೆ ತರುವೆ, ಕನ್ನೇರಿ ಶ್ರೀಗಳು ನನಗೂ ಆತ್ಮೀಯರು, ಅವರು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಶಿಷ್ಯರು, ನಾನು ಸಹ ಶ್ರೀಗಳ ಶಿಷ್ಯನೇ ಎಂದರು.

ಆಡು ಮಾತಿನಲ್ಲಿ ಅವರು ಪದಪ್ರಯೋಗ ಮಾಡಿದ್ದಾರೆ ಎನ್ನುವ ವಾದದಲ್ಲಿ ಹುರುಳಿಲ್ಲ, ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಅನೇಕ ದಶಕಗಳಿಂದ ಆಡುಭಾಷೆಯಲ್ಲಿಯೇ ಪ್ರವಚನ ಮಾಡಿದವರು, ಅವರು ಎಂದೂ ಈ ರೀತಿಯ ಪದ ಪ್ರಯೋಗ ಒಂದೆಡೆ ಇರಲಿ ಅದರ ಬಗ್ಗೆ ಯೋಚನೆ ಮಾಡಿಲ್ಲ, ಅಂತಹ ಮಹಾನ್ ಚೇತನದ ಗರಡಿಯಲ್ಲಿ ಬೆಳೆದ ಕನ್ನೇರಿ ಶ್ರೀಗಳು ಸಿದ್ದೇಶ್ವರ ಸ್ವಾಮೀಜಿಗಳ ಆಡುಭಾಷೆ ಕಲಿತಿಲ್ಲವೇ? ನಾವು ರಾಜಕೀಯದವರು ಏನೇನೋ ಹೇಳಬಹುದು, ಆದರೆ ಕನ್ನೇರಿ ಶ್ರೀಗಳು ಅಧ್ಯಾತ್ಮಿಕ ಚಿಂತಕರು, ಅವರ ಬಾಯಿಯಿಂದ ಈ ಪದ ಪ್ರಯೋಗ ಅದರಲ್ಲೂ ಮಠಾಧೀಶರ ಬಗ್ಗೆ ಪದ ಬಂದಿರುವುದು ಸರಿಯಲ್ಲ, ಈಗಲಾದರೂ ಶ್ರೀಗಳು ಕ್ಷಮೆ ಕೋರಿದರೆ ನಾನೇ ಅವರನ್ನು ಕರೆ ತರುವೆ ಎಂದರು.

> **ಶ್ರೀಗಳ ಪ್ರವೇಶ ನಿಷೇಧದ ಹಿಂದೆ ನನ್ನ ಯಾವ ಪಾತ್ರವೂ ಇಲ್ಲ, ಅದು ಜಿಲ್ಲಾಡಳಿತದ ನಿರ್ಧಾರ, ಜಿಲ್ಲಾಡಳಿತದ ನಿರ್ಧಾರವನ್ನು ಉಚ್ಚ ನ್ಯಾಯಾಲಯ ಸಹ ಎತ್ತಿ ಹಿಡಿದಿದೆ. ಈ ರೀತಿಯ ವಿಚಾರವನ್ನು ಶ್ರೀಗಳು ಮಾತನಾಡಬಾರದು ಎಂದು ಉಚ್ಚ ನ್ಯಾಯಾಲಯ ಸಹ ಹೇಳಿದೆ, ಹೀಗಾಗಿ ಇದರಲ್ಲಿ ನನ್ನ ಪಾತ್ರವೂ ಇಲ್ಲ, ಈ ವಿಷಯವಾಗಿ ನಾನು ಹೆಚ್ಚಿಗೆ ಮಾತನಾಡುವುದಿಲ್ಲ.**
>
> **-ಎಂ.ಬಿ.ಪಾಟೀಲ್,** ಸಚಿವ

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿರವರ ಕಛೇರಿ, ಜಿಲ್ಲಾ ಪಂಚಾಯತ್ ಮಂಡ್ಯ

ದೂರವಾಣಿ ಸಂಖ್ಯೆ: 08232-224027, ಇ-ಮೇಲ್: dho.mandya@gmail.com

ಸಂಖ್ಯೆ: ಸರಬ/21/2025-26 ದಿನಾಂಕ: 23.10.2025

ಇ-ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯ್ದೆ **1999 ರ ಪ್ರಕಾರ** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಅಧೀನದಲ್ಲಿ ಬರುವ ಸಮುದಾಯ ಆರೋಗ್ಯ ಕೇಂದ್ರಗಳಿಗೆ **19 ಮಂದಿ** ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. **(ಟೆಂಡರ್ ಅಂದಾಜು : 65,50,000/- ಹಾಗೂ ಇಎಂಡಿ ಮೊತ್ತ 1,63.750/-)**

ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.kar.gov.in** ಯಿಂದ **ದಿನಾಂಕ:23.10.2025** ರಿಂದ ಡೌನ್‌ಲೋಡ್ ಮಾಡಬಹುದು ಮತ್ತು ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು **ದಿನಾಂಕ:12.11.2025 ಸಂಜೆ-5.00** ಗಂಟೆಯುವರೆಗೆ ಸಲ್ಲಿಸಬಹುದು. ಇಎಂಡಿಯೊಂದಿಗೆ ಸಲ್ಲಿಸದ ಟೆಂಡರ್‌ನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಅಥವಾ ಕಛೇರಿಯಿಂದ ಪಡೆಯಬಹುದು.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ.

ವಾಸಾಸಂಇ/ಮಂಡ್ಯ/ಶಿರಡಿ ಸಾಯಿ/518/2025-26

ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಪತ್ರ ಬರೆದು ಶಾಸಕ ಯತ್ನಾಳ್ ಆಗ್ರಹ

ಹಲಾಲ್ ಉತ್ಪನ್ನ ಸಂಸ್ಥೆಗಳ ನಿಷೇಧಕ್ಕೆ ಯತ್ನಾಳ್ ಪತ್ರ

ಬೆಂಗಳೂರು: ಹಲಾಲ್ ಪ್ರಮಾಣ ಪತ್ರ

ಹೊಂದಿರುವ ಸಂಸ್ಥೆಗಳನ್ನು ತಕ್ಷಣ ರದ್ದುಗೊಳಿಸುವಂತೆ ಆಗ್ರಹಿಸಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕೇಂದ್ರ ಗೃಹ ಸಚಿವ ಅಮಿತ್ ಶಾ ಗೆ ಸವಿವರವಾಗಿ ಪತ್ರ ಬರೆದಿದ್ದಾರೆ. ಉತ್ತರ ಪ್ರದೇಶದಲ್ಲಿ ಈಗಾಗಲೇ ಹಲಾಲ್ ಉತ್ಪನ್ನಗಳನ್ನು ನಿಷೇಧಿಸಲಾಗಿದೆ. ಇದೆ ರೀತಿ ದೇಶಾದ್ಯಂತ ಹಲಾಲ್ ಉತ್ಪನ್ನಗಳು ಹಾಗೂ ಅದನ್ನು ಪ್ರಮಾಣೀಕರಿಸುವ ಸಂಸ್ಥೆಗಳನ್ನು ನಿಷೇಧಿಸುವಂತೆ ಆಗ್ರಹಿಸಿದ್ದಾರೆ.

ಪತ್ರದಲ್ಲಿ ಏನಿದೆ?

ಹಲಾಲ್ ಪ್ರಮಾಣೀಕರಣ ಸಂಸ್ಥೆಗಳ ಕಾರ್ಯಾಚರಣೆಗಳನ್ನು ನಿಷೇಧಿಸುವ ತುರ್ತು ಅಗತ್ಯವನ್ನು ನಿಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ. ನವೆಂಬರ್ 2023 ರಲ್ಲಿ ಹಲಾಲ್ ಪ್ರಮಾಣೀಕರಣ ಸಂಸ್ಥೆಗಳನ್ನು ನಿಷೇಧಿಸುವಂತೆ ಕೋರಿ ನಾನು ಭಾರತ ಸರಕಾರದ ಗ್ರಾಹಕ ವ್ಯವಹಾರಗಳ ಸಚಿವ ಪಿಯೂಷ್ ಗೋಯಲ್ ಅವರಿಗೆ ಪತ್ರ ಬರೆದಿದ್ದೆ. ಧಾರ್ಮಿಕ ಸಂಸ್ಥೆಗಳ ಸೋಗಿನಲ್ಲಿ ಹಲವಾರು ಇಸ್ಲಾಮಿಕ್ ಸಂಸ್ಥೆಗಳು ಮಾಂಸ ಉತ್ಪಾದನೆ, ಆಹಾರ ಉತ್ಪನ್ನಗಳು, ಸೌಂದರ್ಯವರ್ಧಕಗಳು ಮತ್ತು ಇತರ ಗ್ರಾಹಕ ಸರಕುಗಳು ಸೇರಿದಂತೆ ವಿವಿಧ ವಲಯಗಳಲ್ಲಿ ಹಲಾಲ್ ಪ್ರಮಾಣೀಕರಣಗಳನ್ನು ಸಕ್ರಿಯವಾಗಿ ಪ್ರಚಾರ ಮಾಡುತ್ತಿವೆ. ಹಲಾಲ್ ಇಂಡಿಯಾ, ಜಮಿಯತ್ ಉಲೇಮಾ- ಐ-ಹಿಂದ್ ಹಲಾಲ್ ಟ್ರಸ್ಟ್, ಗ್ಲೋಬಲ್ ಇಸ್ಲಾಮಿಕ್ ಶರಿಯಾ, ಹಲಾಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಹಲಾಲ್ ಸರ್ಟಿಫಿಕೇಶನ್ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಜಮಿಯತ್ ಉಲಾಮಾ-ಇ-ಮಹಾರಾಷ್ಟ್ರ ಸೇರಿವೆ. ರೆಸ್ಟೋರೆಂಟ್, ಹೋಟೆಲ್, ಕಸಾಯಿ ಖಾನೆ ಮತ್ತು ಸೌಂದರ್ಯವರ್ಧಕ ಉತ್ಪನ್ನ ಗಳಿಗೆ ಹಲಾಲ್ ಪ್ರಮಾಣೀಕರಣ ಗಳನ್ನು ನೀಡುವುದು ಸರಿಯಾದ ಮನೋ ಭಾವದಲ್ಲಿಲ್ಲ. ಈ ಪ್ರಮಾಣೀಕರಣಗಳು ಭಾರತೀಯ ಸಂವಿಧಾನದಲ್ಲಿ ಪ್ರತಿಪಾದಿಸಲಾದ ತತ್ವಗಳಿಗೆ ವಿರುದ್ಧವಾಗಿವೆ. ಹೆಚ್ಚುವರಿಯಾಗಿ, ಈ ಪ್ರಮಾಣೀಕರಣಗಳ ಮೂಲಕ ಸಂಗ್ರಹಿಸಲಾದ ಗಣನೀಯ ಹಣವನ್ನು ರಾಷ್ಟ್ರವಿರೋಧಿ ಚಟುವಟಿಕೆಗಳು, ಭಯೋತ್ಪಾದನಾ ಬೆಂಬಲ, ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳಿಗೆ ಕಾನೂನು ನೆರವು ಮತ್ತು ಭಯೋತ್ಪಾದನೆ ಮತ್ತು ಜಿಹಾದ್ ಪ್ರಚಾರಕ್ಕೆ ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಪುರಾವೆಗಳಿವೆ ಎಂದು ಪತ್ರದಲ್ಲಿ ಯತ್ನಾಳ್ ಉಲ್ಲೇಖಿಸಿದ್ದಾರೆ.

ಹಲಾಲ್‌ಗೆ ಕಾನೂನಿನ ಮಾನ್ಯತೆಯಿಲ್ಲ

ಹಲಾಲ್ ಷರಿಯಾ ಕಾನೂನು ಅಡಿಯಲ್ಲಿ ಬರುತ್ತದೆ. ಆದರೆ ಭಾರತದಲ್ಲಿ ಇದಕ್ಕೆ ಯಾವುದೇ ಕಾನೂನಿನ ಮಾನ್ಯತೆಯಿಲ್ಲ. ಹೀಗಾಗಿ, ಹಲಾಲ್ ಪ್ರಮಾಣೀಕರಣ ನೀಡುವ ಪ್ರಕ್ರಿಯೆಯೇ ಕಾನೂನುಬಾಹಿರವಾಗಿದೆ. ಕಾನೂನಿನ ಪ್ರಕಾರ, ಎಫ್‌ಎಸ್‌ಎಸ್‌ಎಐ ಹೊರತುಪಡಿಸಿ ಬೇರೆ ಯಾವುದೇ ಪ್ರಾಧಿಕಾರವು ಜನಾಂಗೀಯ, ಧಾರ್ಮಿಕ ಗುರುತುಗಳ ಆಧಾರದ ಮೇಲೆ ಯಾವುದೇ ಉತ್ಪನ್ನವನ್ನು ಲೇಬಲ್ ಮಾಡಲು, ಅಧಿಕೃತಗೊಳಿಸಲು, ಪ್ರಮಾಣೀಕರಿಸಲು ಸಾಧ್ಯವಿಲ್ಲ. ಹಲಾಲ್ ಪ್ರಮಾಣೀಕರಣವನ್ನು ಒದಗಿ ಸುವ ಈ ಸಂಸ್ಥೆಗಳು ಕಾನೂನುಬಾಹಿರ ಕೃತ್ಯವನ್ನು ಮಾಡುತ್ತಿವೆ ಮತ್ತು ಈ ಪ್ರಮಾಣೀಕರಣವನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸುವಂತೆ ಶಾಸಕ ಯತ್ನಾಳ್ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಗ್ಯಾಸ್ ಗೀಸರ್ ಸೋರಿಕೆ: ಸಹೋದರಿಯರು ಸಾವು

ಮೈಸೂರು: ಗ್ಯಾಸ್ ಗೀಸರ್ ಸೋರಿಕೆಯಾಗಿ ಉಸಿರುಗಟ್ಟಿ ಸಹೋದರಿಯರು ಮೃತಪಟ್ಟ ಘಟನೆ ಜಿಲ್ಲೆಯ ಪಿರಿಯಾಪಟ್ಟಣದ ಕಾವಾಡಗೇರಿಯಲ್ಲಿ ನಡೆದಿದೆ. ಗುಲ್ಪರ್ಮ್ ತಾಜ್ (23), ಸಿಮ್ರಾನ್ ತಾಜ್ (20) ಮೃತಪಟ್ಟ ಸಹೋದರಿಯರಾಗಿದ್ದು, ಇಬ್ಬರೂ ಒಟ್ಟಿಗೆ ಸ್ನಾನದ ಕೋಣೆಗೆ ಹೋದಾಗ ಈ ಘಟನೆ ನಡೆದಿದೆ. ಸ್ನಾನದ ಕೋಣೆಗೆ ಹೋದವರು ಬಹಳ ಸಮಯವಾದರೂ ಹೊರಗೆ ಬಂದಿಲ್ಲ, ಇದರಿಂದಾಗಿ ಅನುಮಾನಗೊಂಡ ತಂದೆ ಅಲ್ತಾಫ್ ಬಾಗಿಲು ಬಡಿದಿದ್ದಾರೆ. ಆಗಲೂ ಬಾಗಿಲು ತೆಗೆದಿಲ್ಲ ತೆರೆದು ನೋಡಿದಾಗ ಮಕ್ಕಳಿಬ್ಬರು ಅರೆಪ್ರಜ್ಞಾವಸ್ಥೆಯಲ್ಲಿದ್ದುದು ಗೊತ್ತಾಗಿದೆ. ತಕ್ಷಣ ಮಕ್ಕಳನ್ನು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಇಬ್ಬರೂ ಸಹೋದರಿಯರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಈ ಕುರಿತು ಪಿರಿಯಾ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಲ್ತಾಫ್ ಪಾಷಾ ಅವರಿಗೆ ನಾಲ್ವರು ಹೆಣ್ಣು ಮಕ್ಕಳಿದ್ದು, ಇಬ್ಬರಿಗೆ ಮದುವೆಯಾಗಿದೆ. ಗುಲ್ಪಮ್ ತಾಜ್ ಗೆ ನಿಶ್ಚಿತಾರ್ಥವಾಗಿತ್ತು. ವರನ ಕಡೆಯವರು ಮನೆಗೆ ಬಂದಿದ್ದಾಗಲೇ ಈ ದುರ್ಘಟನೆ ಸಂಭವಿಸಿದೆ.

ಭಗವಂತ್ ಖೂಬಾಗೆ 25 ಕೋಟಿ ರು.ದಂಡ

ಕಲಬುರಗಿ: ಅಕ್ರಮ ಗಣಿಗಾರಿಕೆ ಮಾಡಿದ ಆರೋಪದ ಮೇಲೆ ಮಾಜಿ ಕೇಂದ್ರ ಸಚಿವ ಭಗವಂತ್ ಖೂಬಾ ಅವರಿಗೆ ಕಲಬುರಗಿ ಜಿಲ್ಲೆಯ ಕಾಳಗಿ ತಹಸೀಲ್ದಾರ್ 25.30 ಕೋಟಿ ರು. ದಂಡ ಪಾವತಿಸುವಂತೆ ಸೂಚಿಸಿ ನೋಟಿಸ್ ನೀಡಿದ್ದಾರೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ವಚ್ಚಾ ಗ್ರಾಮದಲ್ಲಿ 2014ರ ಜು.19 ರಿಂದ 2019ರ ಜು.18ರ ವರೆಗೆ ವಚ್ಚಾ ಗ್ರಾಮದ ಸರ್ವೆ ನಂ.24/4 ರಲ್ಲಿ 2 ಎಕರೆಗೆ ಅನುಮತಿ ಪಡೆದು 8 ಎಕರೆಗಿಂತ ಹೆಚ್ಚಿನ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಸಂಜೀವಕುಮಾರ್ ತಿಪ್ಪಣ್ಣ ಜವಕರ್ ಎಂಬವರು ಇದರ ವಿರುದ್ಧ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಗಣಿ ಇಲಾಖೆ ಹಾಗೂ ಕಾಳಗಿ ತಹಸೀಲ್ದಾರ ಜಂಟಿ ಪರಿಶೀಲನೆ ನಡೆಸಿದಾಗ, ಅಕ್ರಮ ಗಣಿಗಾರಿಕೆ ನಡೆದಿದೆ ಅನ್ನೋದು ತಿಳಿದುಬಂದಿದೆ. ಬಳಿಕ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ. ವರದಿ ಬಳಿಕ 25.30 ಕೋಟಿ ರೂ. ದಂಡ ಪಾವತಿಸುವಂತೆ ಮೂರು ಬಾರಿ ಅಧಿಕಾರಿಗಳು ನೊಟೀಸ್ ನೀಡಿದ್ದಾರೆ. ಈ ಬಗ್ಗೆ ಅಧಿಕಾರಿಗಳ ನೋಟಿಸ್ ಪ್ರಶ್ನಿಸಿ ಖೂಬಾ ಕಾನೂನು ಮೊರೆ ಹೋಗಿದ್ದಾರೆ.

ಶಾಲೆಗೆ ಹೋದ ಇಬ್ಬರು ವಿದ್ಯಾರ್ಥಿನಿಯರು ನಾಪತ್ತೆ

ಕೋಲಾರ: ಶಾಲೆಗೆಂದು ಹೋದ ಇಬ್ಬರು ವಿದ್ಯಾರ್ಥಿನಿಯರು ನಾಪತ್ತೆಯಾಗಿರುವ ಘಟನೆ ಕೋಲಾರದಲ್ಲಿ ನಡೆದಿದೆ. ನರಸಾಪುರ ಗ್ರಾಮದ ಶರಣ್ಯ ಹಾಗೂ ದೇವಿ ನಾಪತ್ತೆ ಯಾದ ವಿದ್ಯಾರ್ಥಿನಿಯರು. ಶುಕ್ರವಾರ ಬೆಳಗ್ಗೆ ಶಾಲೆಗೆಂದು ಹೋದ ಇಬ್ಬರು ವಿದ್ಯಾರ್ಥಿಗಳು ಇದುವರೆಗೂ ಪತ್ತೆಯಾಗಿಲ್ಲ. ಇತ್ತ ಶಾಲೆಗೂ ಹೋಗದೆ ಮನೆಗೂ ಬಾರದೆ ಕಣ್ಮರೆಯಾಗಿರುವುದು ಪೋಷಕರಲ್ಲಿ ಆತಂಕ ಮೂಡಿಸಿದೆ. ಬೆಳಗ್ಗೆ ಶಾಲೆಗೆ ಹೋದವರು ರಾತ್ರಿಯಾದರೂ ಮನೆಗೆ ಬಾರದ ಹಿನ್ನೆಲೆ ಆತಂಕಗೊಂಡ ಪೋಷಕರು ಶುಕ್ರವಾರ ಇಡೀ ದಿನ ಮಕ್ಕಳಿಗಾಗಿ ಹುಡಕಾಟ ನಡೆಸಿದ್ದಾರೆ. ರಾತ್ರಿಯಾದರೂ ಮನೆಗೆ ಬಾರದ ಹಿನ್ನೆಲೆ ಮಕ್ಕಳನ್ನುಹುಡುಕಿಕೊಡಿ ಎಂದು ಕೋಲಾರದ ಮಹಿಳಾ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಇಬ್ಬರು ವಿದ್ಯಾರ್ಥಿನಿಯರು ಹತ್ತನೇ ತರಗತಿ ಓದುತ್ತಿದ್ದು, ಎಲ್ಲಿಗೆ ಹೋಗಿದ್ದಾರೆ ಎನ್ನುವ ಮಾಹಿತಿ 24 ಗಂಟೆಯಾದರೂ ಲಭ್ಯವಾಗಿಲ್ಲ. ಹೀಗಾಗಿ ಪೋಷಕರು ಹಾಗೂ ಪೊಲೀಸರು ತೀವ್ರ ಹುಡುಕಾಟ ಆರಂಭಿಸಿದ್ದಾರೆ.

ಹಬ್ಬಕ್ಕೆ ಇಸ್ಪೀಟ್: 1136 ಮಂದಿ ಮೇಲೆ ಕೇಸ್

ಬಳ್ಳಾರಿ: ಜಿಲ್ಲೆಯಲ್ಲಿ ದೀಪಾವಳಿ ಹಬ್ಬದ ದಿನಗಳಲ್ಲಿ ಆಯೋಜನೆಗೊಳ್ಳುವ ಜೂಜು ಅಡ್ಡೆಗಳ ಮೇಲೆ ಜಿಲ್ಲಾ ಪೊಲೀಸರು ದಾಳಿ ಸಂಘಟಿಸಿದ್ದು, 178 ಪ್ರಕರಣಗಳು ದಾಖಲಾಗಿವೆ. ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ, ಅ.20ರಿಂದ 22ರ ವರೆಗೆ ಮೂರು ದಿನ ನಡೆದ ಈ ದಾಳಿಯಲ್ಲಿ ಒಟ್ಟು 1136 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, 17,31,140 ದಂಡ ವಿಧಿಸಲಾಗಿದೆ ಎಂದು ತಿಳಿಸಿದ್ದಾರೆ. ಜಿಲ್ಲೆಯಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹೊಟೇಲ್, ಲಾಡ್ಜ್, ಕಚೇರಿಗಳು, ಹೊಲ, ತೋಟ, ತೋಟದ ಮನೆಗಳು ಸೇರಿದಂತೆ ಹಲವು ಕಡೆ ವ್ಯಾಪಕವಾಗಿ ಇಸ್ಪೀಟ್ ಆಡಲಾಗುತ್ತದೆ. ಈ ಕುರಿತ ದೂರುಗಳು, ಖಚಿತ ಮಾಹಿತಿ ಆಧರಿಸಿ ಪೊಲೀಸ್ ಇಲಾಖೆ ಈ ದಾಳಿ ನಡೆಸಿದೆ. ಕಳೆದ ವರ್ಷವೂ 137 ಪ್ರಕರಣಗಳಲ್ಲಿ, 833 ಮಂದಿಯ ವಿರುದ್ಧ ಕೇಸು ಹಾಕಲಾಗಿತ್ತು. 16,44,665 ಹಣ ವಶಕ್ಕೆ ಪಡೆಯಲಾಗಿತ್ತು. 2023 ರಲ್ಲಿ ಒಟ್ಟು 101 ಪ್ರಕರಣಗಳಲ್ಲಿ 660 ಮಂದಿಯನ್ನು ಬಂಧಿಸಿ, 10,83,800 ವಶಪಡಿಸಿಕೊಳ್ಳಲಾಗಿತ್ತು.

ಫನ್‌ತರಂಗ
ರಘುಪತಿ ಶೃಂಗೇರಿ

ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ 'ಉಡಾಳ' ಹೆಸರಿನ ಚಲನಚಿತ್ರ



ಈ ಸಿನೆಮಾ... ನಾವು ವೋಟ್ ಕೇಳೋಕೆ ಈ ಊರಿಗೆ ಬಂದಾಗಲೇ ಬರಬೇಕಿತ್ತಾ...!!

ಹೈಕಮಾಂಡ್ ಸೂಚಿಸಿದ್ರೆ ರಾಜೀನಾಮೆ: ಕೆಬಿಜೆ

ಎರಡುವರೆ ವರ್ಷದ ಬಳಿಕ ಸಂಪುಟ ಪುನಾರಚನೆ ಖಚಿತ
ಈವರೆಗೆ ಸಿಕ್ಕಿರುವ ಅವಕಾಶದ ಬಗ್ಗೆ ನನಗೆ ಸಂತೃಪ್ತಿಯಿದೆ

ಬೆಂಗಳೂರು: ಸರಕಾರ ಅಧಿಕಾರಕ್ಕೆ ಬಂದು ಎರಡುವರೆ ವರ್ಷದ ಬಳಿಕ ರಾಜ್ಯದಲ್ಲಿ ಸಂಪುಟ ಪುನಾರಚನೆಯಾಗಲಿದೆ. ಒಂದು ವೇಳೆ ಹೈಕಮಾಂಡ್ ಹೇಳಿದರೆ ಸಚಿವ ಸ್ಥಾನ ಬಿಟ್ಟುಕೊಡಲು ಸಿದ್ಧ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡೂವರೆ ವರ್ಷಗಳ ಬಳಿಕ ಪುನಾರಚನೆಯಾಗುತ್ತದೆ ಎನ್ನುವುದು ಸರಕಾರ ಬಂದಾಗಲೇ ನಿರ್ಧಾರವಾಗಿತ್ತು. ಹಾಲಿ ಸಚಿವ ಸಂಪುಟದಿಂದ ಹೊರಗಿರುವವರಿಗೆ ಅವಕಾಶ ನೀಡಬೇಕು ಎನ್ನುವ ಕಾರಣಕ್ಕೆ ಈ ತೀರ್ಮಾನವಾಗಿದೆ. ಸಂಪುಟಕ್ಕೆ ಸೇರುವ ಅರ್ಹತೆಯಿರುವವರಿಗೆ ಅವಕಾಶ ಸಿಗಬೇಕು ಎನ್ನುವುದು ಇದರ ಹಿಂದಿನ ಉದ್ದೇಶ. ಆದರೆ ಸಂಪುಟ ಪುನಾರಚನೆಗೂ, ನಾಯಕತ್ವ ಬದವಾಲಣೆಗೂ ಸಂಬಂಧವಿಲ್ಲ. ನಾಯಕತ್ವ ಬದಲಾವಣೆ ಮಾಡುವ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸಲಿದೆ ಎಂದು ಸ್ಪಷ್ಟಪಡಿಸಿದರು.

ಈಗಾಗಲೇ ಪಕ್ಷ ನನಗೆ ಮೂರು ಬಾರಿ ಸಚಿವ ಸ್ಥಾನವನ್ನು ನೀಡಿದೆ. ಅರ್ಹತೆ ಮೀರಿ ನನಗೆ ಪಕ್ಷ ಅವಕಾಶ ಕೊಟ್ಟಿದೆ. ಸಚಿವ ಸ್ಥಾನದಿಂದ ಕ್ಷೇತ್ರದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ಅವಕಾಶ ವಿಷಯದಲ್ಲಿ ನನಗೆ ಹೊಟ್ಟೆ ತುಂಬಿದೆ. ಆದರೆ ಕೆಲಸದಲ್ಲಿ ಅಲ್ಲ. ಇನ್ನೂ ಮಾಡುವ ಕೆಲಸ ಬಾಕಿಯಿದೆ. ಆದರೆ ಅವಕಾಶದ ವಿಚಾರದಲ್ಲಿ ನನಗೆ ಸಂತೃಪ್ತಿ ಇದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಪ್ರತಿಕ್ರಿಯಿಸಿ, ಇಂತಹ ವಿಷಯಗಳ ಬಗ್ಗೆ ನಾನು ಮಾತನಾಡಲ್ಲ. ಮುಖ್ಯಮಂತ್ರಿಗಳು ಜವಾಬ್ದಾರಿ, ಕೆಲಸ ಕೊಟ್ಟಿದ್ದಾರೆ. ಅದನ್ನು ಮಾಡುತ್ತಿದ್ದೇನೆ. ರಾಜಕೀಯ ಮಾತನಾಡಲು ಪಕ್ಷದ ಚೌಕಟ್ಟಿದೆ. ಹೈಕಮಾಂಡ್ ಇದೆ. ಅಲ್ಲಿ ಏನು ಹೇಳಬೇಕು ಹೇಳುತ್ತೇನೆ. ಹೈಕಮಾಂಡ್ ಕಾಲಕಾಲಕ್ಕೆ ತೀರ್ಮಾನ ಮಾಡುತ್ತಾರೆ. ಬಿಜೆಪಿಗರು ದ್ರಾಕ್ಷಿ ಗೊಂಚಲು ಹುಳಿ ಅನ್ನುವ ರೀತಿ ಆಗಿದೆ. ರಾಜಕೀಯ ಮಾತನಾಡಿ ಬೇಳೆ ಬೇಯಿಸಿಕೊಳ್ಳುತ್ತಾರೆ. ಬಿಜೆಪಿಗರಿಗೆ ಬೇರೆ ಕೆಲಸ ಇಲ್ಲ ಎಂದು ಟೀಕಿಸಿದರು.

ಬಿಜೆಪಿಗರಿಗೆ ಅಧಿಕಾರದ ಹಪಾಹಪಿ

ಒಬ್ಬೊಬ್ಬರದು ಒಂದು ಅಭಿಪ್ರಾಯ ಇರುತ್ತದೆ. ಐದು ಬೆರಳು ಸಮಾನವಾಗಿರಲ್ಲ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ. ಅವರೆ ಎಲ್ಲವನ್ನೂ ತೀರ್ಮಾನ ಮಾಡುತ್ತಾರೆ. ಬಿಜೆಪಿಗರಿಗೆ ಅಧಿಕಾರದ ಹಪಾಹಪಿಯಿದೆ. ಅಧಿಕಾರ ಬಿಟ್ಟರೆ ಬೇರೆ ಏನೂ ಜ್ಞಾನವಿಲ್ಲ. ಅಧಿಕಾರ ಇಲ್ಲ ಎಂದು ಚಡಿಪಡಿಸುತ್ತಿದ್ದಾರೆ. ನಾವು ಜವಾಬ್ದಾರಿ ಸ್ಥಾನದಲ್ಲಿದ್ದೇವೆ. ಕೆಲಸ ಮಾಡುತ್ತಿದ್ದೇವೆ ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

ಅವಕಾಶದ ವಿಚಾರದಲ್ಲಿ ನನಗೆ ಹೊಟ್ಟೆ ತುಂಬಿದೆ. ಆದರೆ ಜನರ ಸೇವೆ ಮಾಡುವ ವಿಚಾರದಲ್ಲಿ ಇನ್ನು ತೃಪ್ತಿ ಸಿಕ್ಕಿಲ್ಲ. ಪಕ್ಷ ಅವಕಾಶ ನೀಡಿರುವ ವಿಚಾರದಲ್ಲೂ ನನಗೆ ಸಂತೃಪ್ತಿ ಇದೆ. ಪಕ್ಷಕ್ಕಾಗಿ ಸಚಿವ ಸ್ಥಾನದ ತ್ಯಾಗಕ್ಕೆ ಸಿದ್ಧನಿದ್ದೇವೆ.

- ಕೃಷ್ಣಬೈರೇಗೌಡ ಸಚಿವ

ಆರ್‌ಎಸ್‌ಎಸ್ ಪಥ ಸಂಚಲನದ ದಿನವೇ ರ‍್ಯಾಲಿಗೆ ಪಟ್ಟು

ಚಿತ್ತಾಪುರ: ಶಾಂತಿ ಸಭೆಗೆ ಭೀಮ್ ಆರ್ಮಿ ಆಕ್ಷೇಪ

ಕಲಬುರಗಿ: ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನ ನಡೆಸುವ ವಿಚಾರ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಿದ್ದು, ಜಿಲ್ಲಾಡಳಿತಕ್ಕೆ ತಲೆನೋವು ಶುರುವಾಗಿದೆ. ಅ.28ರಂದು ಜಿಲ್ಲಾಡಳಿತ ಕರೆದಿರುವ ಶಾಂತಿ ಸಭೆಗೆ ಆಕ್ಷೇಪ ವ್ಯಕ್ತಪಡಿಸಿರುವ ಭೀಮ್ ಆರ್ಮಿ ರಾಜ್ಯಾಧ್ಯಕ್ಷ ಎಸ್.ಎಸ್.ತಾವಡೆ, ಆರ್‌ಎಸ್‌ಎಸ್ ಪಥಸಂಚಲ ನದ ದಿನವೇ ನಮ್ಮ ರ‍್ಯಾಲಿಗೂ ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಆರ್‌ಎಸ್‌ಎಸ್ ಸಂಘಕ್ಕೆ ನೊಂದಣಿ ಇದ್ದರೆ ಮಾತ್ರ ಪಥಸಂಚಲನಕ್ಕೆ ಅನುಮತಿ ನೀಡಬೇಕು. ನೊಂದಣಿ ಇಲ್ಲದಿದ್ದರೆ, ಆರ್‌ಎಸ್‌ಎಸ್ ಪಥಸಂಚಲನ ನಡೆಯುವ ದಿನವೇ ನಾವು ಪಥಸಂಚಲನ ನಡೆಸುತ್ತೇವೆ ಎಂದು ತಾವಡೆ ಎಚ್ಚರಿಸಿದ್ದಾರೆ. ನಮ್ಮ ನಿರ್ಧಾರ ಸ್ಪಷ್ಟವಾಗಿದೆ. ಜಿಲ್ಲಾಡಳಿತ ನಮ್ಮ ಮನವಿಯನ್ನು ಪರಿಗಣಿಸಬೇಕು. ಅಧಿಕಾರಿಗಳು ನಮ್ಮಿಂದ ಸಂಘದ ದಾಖಲೆಗಳನ್ನು ಕೇಳಿದ ಹಾಗೆಯೇ ಆರ್‌ಎಸ್‌ಎಸ್‌ನಿಂದಲೂ ನೊಂದಣಿ ಪತ್ರ ಕೇಳಬೇಕು. ನೊಂದಣಿ ಇಲ್ಲದೆ ಅವರಿಗೆ ಅನುಮತಿ ನೀಡಿದರೆ, ನಾವು ಕೂಡ ಅದೇ ದಿನ ಪಥಸಂಚಲನ ಮಾಡುತ್ತೇವೆ ಎಂದು ಹೇಳಿದರು. ಜಿಲ್ಲಾಡಳಿತ ಶಾಂತಿ ಸಭೆಗೆ ಪತ್ರದ ಮೂಲಕ ಆಹ್ವಾನ ನೀಡಿದರೆ ನಾವು ಭಾಗವಹಿಸುತ್ತೇವೆ. ಆದರೆ, ನಮ್ಮ ಮನವೊಲಿಸಲು ಯತ್ನಿಸಿದರೆ ಅದು ಸಾಧ್ಯವಿಲ್ಲ ಎಂದು ಹೇಳಿದರು.

ಗುರಮಠಕಲ್ ಪಥಸಂಚಲನಕ್ಕೆ ಅನುಮತಿ ನಿರಾಕರಣೆ

ಯಾದಗಿರಿ: ಆರ್‌ಎಸ್‌ಎಸ್ ಶತಾಬ್ದಿ ವರ್ಷದ ಪಥ ಸಂಚಲನ ಹಿನ್ನೆಲೆ ರಾಜ್ಯದಲ್ಲಿ ಆರ್ ಎಸ್ ಎಸ್ ಪಥ ಸಂಚಲನದ ಫೈಟ್ ಜೋರಾಗಿದ್ದು, ಚಿತ್ತಾಪುರದ ಬಳಿಕ ಗುರಮಠಕಲ್‌ನಲ್ಲೂ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಜಿಲ್ಲಾಡಳಿತ ಬ್ರೇಕ್ ಹಾಕಿದೆ.

ಜಿಲ್ಲೆಯ ಗುರಮಠಕಲ್ ಪಟ್ಟಣದಲ್ಲಿ ಶನಿವಾರ ನಡೆಯಬೇಕಿದ್ದ ಪಥ ಸಂಚಲನಕ್ಕೆ ಅನುಮತಿ ನಿರಾಕರಿಸಲಾಗಿದೆ. ಆರ್ ಎಸ್ ಎಸ್ ಪಥ ಸಂಚಲನ ಕಾರ್ಯಕ್ರಮಕ್ಕೆ ಅನುಮತಿಯನ್ನು ಯಾದಗಿರಿ ಜಿಲ್ಲಾಧಿಕಾರಿ ಹರ್ಷಲ್ ಬೋಯರ್ ತಿರಸ್ಕರಿಸಿದ್ದಾರೆ.

ಸರಕಾರದ ನಡಾವಳಿ ಪ್ರಕಾರ ಅರ್ಜಿದಾರರು ಉದ್ದೇಶಿತ ಕಾರ್ಯಕ್ರಮದ ಮೂರು ದಿನ ಮೊದಲೇ ಅರ್ಜಿ ಸಲ್ಲಿಸಬೇಕು. ಸರಕಾರಿ ಪ್ರಾಧಿಕಾರ, ಆಸ್ತಿಗಳು ಮತ್ತು ಆವರಣಗಳನ್ನು ಬಳಸಲು ಅನುಮತಿ ಕೋರಿ ಸಕ್ಷಮ ಪ್ರಾಧಿಕಾರಕ್ಕೆ ಲಿಖಿತವಾಗಿ ಅರ್ಜಿ ಸಲ್ಲಿಸಬೇಕು. ಆದರೆ ಜಿಲ್ಲಾಡಳಿತ ಕಾರ್ಯಾಲಯಕ್ಕೆ ಪಥ ಸಂಚಲನದ ಮೂರು ದಿನ ಮೊದಲು ಅರ್ಜಿ ಸಲ್ಲಿಸಿಲ್ಲ ಹೀಗಾಗಿ ಶನಿವಾರ ನಡೆಯುವ ಪಥ ಸಂಚಲನ ಕಾರ್ಯಕ್ರಮಕ್ಕೆ ಅನುಮತಿ ತಿರಸ್ಕರಿಸಲಾಗಿದೆ ಎಂದು ಡಿಸಿ ಹರ್ಷಲ್ ಸ್ಪಷ್ಟಪಡಿಸಿದ್ದಾರೆ.

ಕೋಲಾರದಲ್ಲಿ 148 ನಕಲಿ ಕ್ಲಿನಿಕ್‌ಗಳು ಪತ್ತೆ

ಕೋಲಾರ: ವೈದ್ಯಕೀಯ ವಿದ್ಯಾರ್ಹತೆ ಇಲ್ಲದೆ ಅಕ್ರಮವಾಗಿ ವೈದ್ಯಕೀಯ ಚಟುವಟಿಕೆಗಳನ್ನು ನಡೆಸುತ್ತಿದ್ದವರ ವಿರುದ್ಧ ಕೋಲಾರ ಜಿಲ್ಲಾಡಳಿತ ಕಠಿಣ ಕ್ರಮ ಮುಂದುವರಿಸಿದೆ. ಈಚೆಗೆ ಪತ್ತೆಯಾದ 7 ಕ್ಲಿನಿಕಗಳ ಪೈಕಿ 3 ಕ್ಲಿನಿಕ್‌ಗಳ ನೋಂದಣಿಯನ್ನು ರದ್ದುಪಡಿಸಲಾಗಿದೆ. ನೋಂದಣಿಯಾಗದ ನಾಲ್ಕು ಅನಧಿಕೃತ ಕ್ಲಿನಿಕ್‌ಗಳಿಗೆ ದಂಡ ವಿಧಿಸಿ, ಅವುಗಳ ವೈದ್ಯಕೀಯ ಸೇವೆಗಳನ್ನು ಸ್ಥಗಿತಗೊಳಿಸಲು ಆದೇಶಿಸಲಾಗಿದೆ.

- **ಅನಧಿಕೃತ ಕ್ಲಿನಿಕ್ ಗಳಿಗೆ ದಂಡ**
- **ವೈದ್ಯಕೀಯ ಸೇವೆ ನಿರ್ಬಂಧಕ್ಕೆ ಆದೇಶ**

ಜಿಲ್ಲಾಧಿಕಾರಿ ಎಂ.ಆರ್.ರವಿ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ (ಕೆಪಿಎಂಇ) ಕಾಯ್ದೆ ಯಡಿ ಜಿಲ್ಲಾ ಕುಂದು ಕೊರತೆಗಳ ನಿವಾರಣಾ ಸಮಿತಿ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ವೈದ್ಯಕೀಯ ಅರ್ಹತೆ ಇಲ್ಲದೆ ಚಿಕಿತ್ಸೆ ನೀಡುವುದು ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕರ ಮತ್ತು ಕಾನೂನುಬಾಹಿರ ಎಂದು ಜಿಲ್ಲಾಧಿಕಾರಿ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಈವರೆಗೆ ಒಟ್ಟು 148 ನಕಲಿ ಕ್ಲಿನಿಕ್‌ಗಳನ್ನು ಗುರುತಿಸಲಾಗಿದೆ. ಈ ಪೈಕಿ 48 ಕ್ಲಿನಿಕ್‌ಗಳನ್ನು ತಾಲೂಕು ಪರಿಶೀಲನಾ ತಂಡವು ಸೀಜ್ ಮಾಡಿದೆ. 60 ಕ್ಲಿನಿಕ್‌ಗಳ ನಕಲಿ ವೈದ್ಯರು ಮಳಿಗೆಗಳನ್ನು ಮುಚ್ಚಿ ಪರಾರಿಯಾಗಿದ್ದಾರೆ. 14 ಕ್ಲಿನಿಕ್‌ಗಳ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ. 4 ಕ್ಲಿನಿಕ್‌ಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕೆಪಿಎಂಇ ಕಾಯ್ದೆ ಅನ್ವಯ ನೋಂದಾಯಿತ ವೈದ್ಯರು ಅರ್ಹ ವೈದ್ಯಕೀಯ ಪದ್ಧತಿಯಲ್ಲಿ ಮಾತ್ರ ಚಿಕಿತ್ಸೆ ನೀಡುತ್ತಿರುವುದರ ಬಗ್ಗೆ ನಿಗಾ ವಹಿಸಲು ಹಾಗೂ ಜೈವಿಕ ವೈದ್ಯಕೀಯ ತ್ಯಾಜ್ಯ ವಿಲೇವಾರಿ ನಿರ್ವಹಣೆ ಬಗ್ಗೆ ಗಮನಹರಿಸಲು ತಾಲೂಕು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ.

ನವೆಂಬರ್, ಡಿಸೆಂಬರ್ ಯಾವ ಕ್ರಾಂತಿ ಇಲ್ಲ

ಮೈಸೂರು: ನವೆಂಬರ್ ಕ್ರಾಂತಿ, ಡಿಸೆಂಬರ್ ಕ್ರಾಂತಿ ಯಾವುದೂ ಇಲ್ಲ ಎಂದು ಹೇಳುವ ಮೂಲಕ ಸಿಎಂ ಖುರ್ಚಿ ಮೇಲೆ ಕಣ್ಣಿಟ್ಟಿರುವವರಿಗೆ ಡಾ.ಯತೀಂದ್ರ ಪರೋಕ್ಷವಾಗಿ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೇ ಐದು ವರ್ಷ ಪೂರ್ತಿ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈಗಲೂ ನನ್ನ ಮಾತಿಗೆ ನಾನು ಬದ್ಧನಿದ್ದೇನೆ. ನನ್ನ ಮಾತಿಗೆ ಸ್ಪಷ್ಟೀಕರಣ ಕೂಡ ಕೊಟ್ಟಿದ್ದೇನೆ. ಪಕ್ಷದ ಆಂತರಿಕ ವಿಚಾರಗಳನ್ನು ಮಾಧ್ಯಮಗಳ ಮುಂದೆ ಮಾತನಾಡೋದಿಲ್ಲ. ಪಕ್ಷ ನನಗೆ ನೋಟಿಸ್ ಕೊಟ್ಟರೆ ಸೂಕ್ತ ಉತ್ತರ ಕೊಡುತ್ತೇನೆ ಎಂದರು.

ನಾನು ಏನು ಹೇಳಬೇಕೋ ಹೇಳಿದ್ದಾಗಿದೆ. ಅನಗತ್ಯವಾಗಿ ಮತ್ತೆ ಅದನ್ನೇ ಮಾತನಾಡಿ ವಿವಾದ ಸೃಷ್ಟಿ ಮಾಡಲ್ಲ. ನನ್ನ ಹೇಳಿಕೆ ವಿವಾದ ಪಡೆದ ಕ್ಷಣವೇ ಅದಕ್ಕೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಮಾಧ್ಯಮದ ಮುಂದೆ ಮತ್ತೆ ಏನೂ ಮಾತನಾಡಲ್ಲ.

ಈ ವಿಚಾರದ ಬಗ್ಗೆ ಎಲ್ಲಿ ಮಾತಾಡಬೇಕೋ ಅಲ್ಲಿ ಮಾತಾಡ್ತೀನಿ. ಪಕ್ಷದ ಆಂತರಿಕ ವಿಚಾರಗಳನ್ನು ಪಕ್ಷದ ಒಳಗೆ ಮಾತಾಡುತ್ತೇನೆ, ಮಾಧ್ಯಮದ ಮುಂದೆ ಮಾತನಾಡಲ್ಲ ಎಂದು ಹೇಳಿದರು. ಪಕ್ಷದಿಂದ ನೋಟಿಸ್ ಬಂದಾಗ ನೋಡಿ ಕೊಳ್ಳೋಣ ಬಿಡಿ. ನಾನು ಅವತ್ತು ಬೆಳಗಾವಿಯಲ್ಲಿ ಹೇಳಿದ ಹೇಳಿಕೆಯಲ್ಲಿ ಯಾವುದೇ ತಪ್ಪಿಲ್ಲ. ನವೆಂಬರ್ ಕ್ರಾಂತಿ ಕೇವಲ ಉಹಾಪೋಹ ಅಷ್ಟೇ ಎಂದರು.

ವಿಶ್ವವಾಣಿ ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಕಂದಾಯ ಸಚಿವ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಹಾಸನಾಂಬೆ ದೇಗುಲದ ಆವರಣದಲ್ಲಿ ಬಿಡುಗಡೆ ಮಾಡಿದರು. ಈ ವೇಳೆ ಲೋಕಸಭಾ ಸದಸ್ಯ ಶ್ರೇಯಸ್ ಪಟೇಲ್, ಅರಸೀಕೆರೆ ಶಾಸಕ ಕೆ.ಎಂ ಶಿವಲಿಂಗೇಗೌಡ, ಮೈಸೂರು ಪ್ರಾದೇಶಿಕ ವ್ಯವಸ್ಥಾಪಕ ನಂದನ್ ಕುಮಾರ್ ಹಾಗೂ ಜಿಲ್ಲಾ ವರದಿಗಾರ ಬಿ.ಆರ್ ಬೊಮ್ಮೇಗೌಡ ಇದ್ದರು.

ಮಳೆಗೆ ಲಕ್ಷಾಂತರ ಮೌಲ್ಯದ ಭತ್ತ ನಾಶ

ಕೊಪ್ಪಳ, ಬಳ್ಳಾರಿ ಜಿಲ್ಲೆಯಲ್ಲಿ ನೆಲಕಚ್ಚಿದ ಬೆಳೆ | ಆತ್ಮಹತ್ಯೆಗೆ ಯತ್ನಿಸಿದ ರೈತ

ಕೊಪ್ಪಳ/ಬಳ್ಳಾರಿ: ಧಾರಾಕಾರ ಮಳೆಯಿಂದಾಗಿ ಕೊಪ್ಪಳ/ಬಳ್ಳಾರಿ ಜಿಲ್ಲೆಗಳಲ್ಲಿ ಭತ್ತದ ಬೆಳೆ ನಾಶವಾದ ಹಿನ್ನೆಲೆ ರೈತ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಜಿಲ್ಲೆಯ ಬಸಾಪುರ ಗ್ರಾಮದಲ್ಲಿ ನಡೆದಿದೆ. ಕೊಪ್ಪಳ ತಾಲೂಕಿನ ಬಸಾಪುರ ಗ್ರಾಮದ ರೈತ ಲಕ್ಷ್ಮಣ ರಾಜರಾಮಪೇಟೆ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಕೊಪ್ಪಳ ತಾಲೂಕಿನ ಬಸಾಪುರ ಗ್ರಾಮದ ಸರ್ವೆ ನಂ.24 ಮತ್ತು 25ರಲ್ಲಿ ಒಟ್ಟು 8 ಎಕರೆಯಲ್ಲಿ ಭತ್ತ ಬೆಳೆಯಲು ರೈತ ಲಕ್ಷಂತರ ರು. ಖರ್ಚು ಮಾಡಿದ್ದಾರೆ. ಜತೆಗೆ ರೈತ ಸುಮಾರು 4 ಲಕ್ಷ ರು. ಸಾಲ ಮಾಡಿದ್ದಾನೆ. ಈ ನಡುವೆ ಸತತ ಮಳೆಯಿಂದ ಭತ್ತ ನೆಲಕಚ್ಚಿದ್ದು, ಕಟಾವು ಮಾಡುವುದು ಕಷ್ಟ ಸಾಧ್ಯವಾಗಿದೆ. ಇದರಿಂದ ನೊಂದ ರೈತ ಲಕ್ಷ್ಮಣ ಅವರು ಜಮೀನಿನಲ್ಲಿ ಕ್ರಿಮಿನಾಶಕ ಸೇವಿಸಲು ಮುಂದಾಗಿದ್ದಾರೆ. ವಿಷಯ ತಿಳಿದ ಪಕ್ಕದ ಜಮೀನಿನವರು ರೈತನಿಗೆ ಬುದ್ಧಿವಾದ ಹೇಳಿ, ಅವಘಡ ತಪ್ಪಿಸಿದ್ದಾರೆ.

ಸತತ ಮಳೆಯಾದ ಹಿನ್ನೆಲೆ ಕೊಪ್ಪಳ ತಾಲೂಕಿನ ಹಿಟ್ನಾಳ, ಹುಲಿಗಿ, ಅಗಳಕೇರಾ, ಬಂಡಿ ಹರ್ಲಾಪುರ, ಬಸಾಪುರ, ರಾಜರಾಮಪೇಟೆ, ಮಹ್ಮದ್ ನಗರ, ನಾರಾಯಣ ಪೇಟೆ, ಅಯೋಧ್ಯ ಗ್ರಾಮದಲ್ಲಿ ಸುಮಾರು ನೂರಕ್ಕೂ ಅಧಿಕ ರೈತರ ಜಮೀನಿನಲ್ಲಿ ಭತ್ತ ನೆಲಕಚ್ಚಿದೆ.

ಗಾಳಿ ಮಳೆಗೆ ಕೊಪ್ಪಳ ಜಿಲ್ಲೆಯಲ್ಲಿ ಭತ್ತ ಬೆಳೆ ನೆಲಕಚ್ಚಿರುವುದು.

ಇನ್ನು ಬಳ್ಳಾರಿ ಜಿಲ್ಲೆಯಾದ್ಯಂತ ಮತ್ತೆ ಗಾಳಿ ಮಳೆ ಸುರಿಯುತ್ತಿದೆ. ಕೊಯ್ಲು ಹಂತಕ್ಕೆ ತಲುಪಿದ್ದ ಮುಂಗಾರು ಬೆಳೆಗಳು ಹಾಳಾಗಿವೆ. ಮುಖ್ಯವಾಗಿ ಗಾಳಿ ಹೊಡೆತಕ್ಕೆ ಭತ್ತ ನೆಲಕ್ಕೊರಗಿದೆ. ಕಂಪ್ಲಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಎರಡು ದಿನದಿಂದ ಮಳೆ ಆಗುತ್ತಿರುವುದರಿಂದ ಎರಡು ಮನೆಗೆ ಹಾನಿಯಾಗಿದ್ದು, ತುಂಗಭದ್ರಾ ನದಿ ವ್ಯಾಪ್ತಿಯಲ್ಲಿ ಭತ್ತದ ಪೈರು ನೆಲಕಚ್ಚಿದೆ.

ಆ ನಿರಾಶ್ರಿತೆಯ ಕಣ್ಣೀರ ಕತೆ ಹಲವರಿಗೆ ಆಶ್ರಯ ದಕ್ಕಿಸಿ ಕೊಟ್ಟಿತು

ಸ್ಮರಣೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ವಿಠ್ಠಲಮೂರ್ತಿ, ಮಲೆನಾಡಿನ ಮಳೆಯಲ್ಲಿ ನೀವೂ ನೆನೆದಿರುತ್ತೀರಿ. ಆದರೆ ಎಷ್ಟು ಹೊತ್ತು ನೆನೆದಿದ್ದೀರಿ? ಅಂತ ಅವರು ಕೇಳಿದರು.

ಅಬ್ಬಬ್ಬಾ ಎಂದರೂ ಎರಡು ಅಥವಾ ಮೂರು ಗಂಟೆ ನೆನೆದು ಸುಸ್ತಾಗಿ ಬಕಾಬರಲೆ ಮಲಗಿದ ದಿನಗಳಿವೆ ಸಾರ್ ಎಂದೆ. ಅದಕ್ಕವರು ಸೀರಿಯಸ್ಸಾಗಿ, ಇದೇ ರೀತಿ ಇಪ್ಪತ್ನಾಲ್ಕು ಗಂಟೆ ಮಳೆಯಲ್ಲಿ ನೆನೆದು, ಆ ಮಳೆಯಲ್ಲೇ ಮಲಗಿದವರನ್ನು ನೋಡಿದ ನೆನಪೇನಾದರೂ ಇದೆಯಾ? ಎಂದರು.

ನೋ ಚಾನ್ಸ್ ಸಾರ್. ನಾನು ಹಾಗೇನಾದರೂ ಮಲೆನಾಡಿನ ಬಿರುಮಳೆಗಾಗಲೀ, ಜಿಟಿ ಜಿಟಿ ಮಳೆಗಾಗಲೀ ಇಪ್ಪತ್ನಾಲ್ಕು ಗಂಟೆ ನೆನೆದಿದ್ದರೆ ನೆಗೆದು ಬಿದ್ದೇ ಹೋಗುತ್ತಿದ್ದೆ ಎಂದೆ. ಅರೆಕ್ಷಣ ಅವರು ಮೌನವಾದರು. ಆನಂತರ ಉದ್ವೇಗದಿಂದೆಂಬಂತೆ ಹೇಳತೊಡಗಿದರು.

ಆದರೆ ಅವತ್ತು, ಈ ರೀತಿ ಇಪ್ಪತ್ನಾಲ್ಕು ಗಂಟೆಗೂ ಹೆಚ್ಚು ಕಾಲ ಮಳೆಗೆ ನೆನೆದು, ಅದೇ ಮಳೆಯಲ್ಲಿ ಮರದ ಕೆಳಗೆ ಮಲಗಿದ ಆ ಹಣ್ಣು ಹಣ್ಣು ಮುದುಕಿಯನ್ನು ನೋಡಿ ನಾನು ಅತ್ತುಬಿಟ್ಟಿದ್ದೆ ವಿಠ್ಠಲಮೂರ್ತಿ. ಮುಂದೆ ನಾನು ಮುಖ್ಯಮಂತ್ರಿಯಾದಾಗ ಆಶ್ರಯ ಯೋಜನೆ ಜಾರಿಗೆ ತರಲು ಅದು ಕಾರಣವಾಯಿತು ಎಂದು ಹೇಳಿ ಮತ್ತವರು ಮೌನ ತಾಳಿದರು.

ಅಷ್ಟರಲ್ಲಾಗಲೇ ಕಾರು ವಿಂಡ್ಸರ್ ಮ್ಯಾನರ್ ಹೋಟೆಲ್‌ನ ಅಂಡರ್ ಬ್ರಿಡ್ಜ್ ಕೆಳಗಿತ್ತು. ನಾನು ಕೇಳಿದ ಪ್ರಶ್ನೆಗೆ ಸ್ಥೂಲವಾಗಿ ಉತ್ತರವೇನೋ ಸಿಕ್ಕಿತ್ತು. ಆದರೆ ಅದರ ವಿವರ ಸಿಕ್ಕಿರಲಿಲ್ಲ. ಹಾಗಂತಲೇ, ಸಾರ್, ಈ ಘಟನೆಯನ್ನು ವಿವರವಾಗಿ ಹೇಳಿ ಸಾರ್. ಆಶ್ರಯ ಯೋಜನೆ ಜಾರಿಗೆ ತರಲು ನಿಮಗಿದ್ದ ಪ್ರೇರಣೆ ಏನು ಅನ್ನುವುದು ಗೊತ್ತಾಯಿತು. ಆದರೆ ಅದರ ವಿವರ ಗೊತ್ತಾಗಲಿಲ್ಲ ಎಂದೆ. ಅಂದ ಹಾಗೆ ಅವತ್ತು ನನ್ನ ಕುತೂಹಲದ ಪ್ರಶ್ನೆಗೆ ನೀರಿನ ಕಾರಂಜಿಯಂತೆ ಉತ್ತರ ಹೊರ ಹೊಮ್ಮಿಸಿದವರು ಬಂಗಾರಪ್ಪ. ತೊಂಭತ್ತರಿಂದ ತೊಂಭತ್ತೆರಡರ ತನಕ ಕರ್ನಾಟಕದ ಮುಖ್ಯಮಂತ್ರಿ ಯಾಗುವ ಅವಕಾಶ ಅವರಿಗೆ



ದಕ್ಕಿತ್ತು.

ಈ ಕಾಲದಲ್ಲೇ ಅವರು ಬಡವರಿಗೆ ಸೂರು ಒದಗಿಸುವ ಮಹತ್ವದ ಆಶ್ರಯ ಯೋಜನೆಯನ್ನು ಜಾರಿಗೆ ತಂದರು. ಇದು ಕೂಡಾ ದೇವರಾಜ ಅರಸರು ಜಾರಿಗೆ ತಂದ ಉಳುವವನೇ ಭೂ ಒಡೆಯ ಎಂಬಷ್ಟೇ ಕ್ರಾಂತಿಕಾರಿ ನಿರ್ಣಯವಾಗಿತ್ತು. ಯಥಾ ಪ್ರಕಾರ ಈ ಯೋಜನೆಯ ದುರ್ಲಾಭ ಪಡೆದವರು ಇರಬಹುದು. ಅದು ಬೇರೆ ವಿಷಯ. ಆದರೆ ಅಷ್ಟು ವರ್ಷಗಳಾದರೂ ಇಂತಹದೊಂದು ಮಹತ್ವದ ಯೋಜನೆಯನ್ನು ಜಾರಿಗೆ ತರಲು ಅವರಿಗಿದ್ದ ಪ್ರೇರಣೆ ಏನು? ಅನ್ನುವುದು ಎಲ್ಲೂ ಬಹಿರಂಗವಾಗಿರಲಿಲ್ಲ.

ಅ.26
ರಾಜ್ಯ ಕಂಡ ವರ್ಣರಂಜಿತ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಸಾರೇಕೊಪ್ಪ ಬಂಗಾರಪ್ಪನವರ ಜನ್ಮದಿನ. ಈ ಹಿನ್ನೆಲೆಯಲ್ಲಿ ಬಂಗಾರಪ್ಪನವರ ಕುರಿತು ವಿಶೇಷ ಲೇಖನ

ಹೀಗಾಗಿಯೇ ಈ ವಿಷಯ ತಿಳಿದುಕೊಳ್ಳಲು ನಾನು ಅವತ್ತು ಸದಾಶಿವನಗರದಲ್ಲಿದ್ದ ಅವರ ಮನೆಗೆ ಹೋಗಿದ್ದೆ. ಆಗಷ್ಟೇ ಅವರು ತಮ್ಮ ಬಾಡಿಗೆ ಮನೆಯನ್ನು ಬಿಟ್ಟು ಸ್ವಂತ ಮನೆಗೆ ಹೋಗಿದ್ದರು. ಹೀಗೆ ಅವರನ್ನು ನೋಡಲು ಅಂತ ಹೊರಟಾಗ ಅದಾಗಲೇ ಹೊರಗೆ ಹೊರಡುವ ತಯಾರಿಯಲ್ಲಿದ್ದ ಬಂಗಾರಪ್ಪ, ಮೊಮ್ಮಗನ ಮುತ್ತು ಸ್ವೀಕರಿಸಿ ಕಾರು ಏರುತ್ತಿದ್ದರು. ಅದೇ ಹೊತ್ತಿಗೆ ಸರಿಯಾಗಿ ನಾನವರ ಮನೆಗೆ ಎಂಟ್ರಿಯಾಗಿದ್ದೆ. ಅವರು ತಮ್ಮ ಪತ್ನಿ ಶ್ರೀಮತಿ ಶಕುಂತಲಾ ಅವರ ತೋಳ್ತೆಕ್ಕೆಯಲ್ಲಿದ್ದ ಮಗುವಿನಿಂದ ಮುತ್ತು ಸ್ವೀಕರಿಸಿದ್ದು ಈಗಲೂ ಕಣ್ಣ ಮುಂದೆ ನಡೆದಂತಿದೆ. ಹೀಗೆ ಮುತ್ತು ಪಡೆದ ಬಂಗಾರಪ್ಪ ಕಾರು ಹತ್ತುತ್ತಿದ್ದಂತೆಯೇ ನನ್ನನ್ನು ಗಮನಿಸಿ, ಅರೇ ವಿಠ್ಠಲಮೂರ್ತಿ. ಕಾರು ಹತ್ತಿ ಎಂದರು.

ನಾನು ಹಿಂದೆ ಮುಂದೆ ನೋಡದೆ ಕಾರು ಹತ್ತಿದೆ. ಸರಿ, ಕಾರು ಹೊರಟ ತಕ್ಷಣ ಕೇಳಿದೆ. ಸಾರ್. ನೀವು ಸಿಎಂ ಆಗಿದ್ದಾಗ ಬಡವರಿಗೆ ಸೂರು ಒದಗಿಸುವ ಆಶ್ರಯದಂತಹ ಮಹತ್ವದ ಯೋಜನೆಯನ್ನು ಜಾರಿಗೆ ತಂದಿರಿ. ಅದನ್ನು ಜಾರಿಗೆ ತರಲು ಇದ್ದ ಹಿನ್ನೆಲೆಯ ಬಗ್ಗೆ ಹೇಳಿ ಎಂದು ಕೇಳಿದಾಗ ಬಂಗಾರಪ್ಪ ಹೇಳುತ್ತಾ ಹೋಗಿದ್ದರು. ಹೀಗೆ

ವಿಂಡ್ಸರ್ ಮ್ಯಾನರ್ ಪಕ್ಕದ ಬ್ರಿಡ್ಜಿನ ಬಳಿ ಬರುವ ಹೊತ್ತಿಗೆ ಸ್ಥೂಲವಾಗಿ ಅದರ ಚಿತ್ರವೇನೋ ಸಿಕ್ಕಿತ್ತು. ಆದರೆ ಅದಿನ್ನೂ ಸ್ಪಷ್ಟವಾಗಿರದೆ ಮಂಕು, ಮಂಕಾಗಿತ್ತು. ಹಾಗಂತಲೇ ನಾನು ಪಟ್ಟು ಬಿಡದೆ ಮತ್ತೆ ಅದನ್ನೇ ಕೇಳಿದೆ.

ಅದಕ್ಕವರು ಮತ್ತೆ ವಿಷಾದದ ಧ್ವನಿಯಲ್ಲಿ ಹೇಳತೊಡಗಿದರು. ವಿಠ್ಠಲಮೂರ್ತಿ. ನನ್ನ ಕ್ಷೇತ್ರ ಕುಬಟೂರಿನ ಹತ್ತಿರ ಬಂಕಸಾಣ ಎಂಬ ಗ್ರಾಮವಿದೆ. ಪ್ರತಿ ವರ್ಷ ಅಲ್ಲಿ ಸಾಮೂಹಿಕ ವಿವಾಹ ನಡೆಸುವುದು ನಮ್ಮ ರೂಢಿ. ಹೀಗೇ ಒಂದು ಸಲ ಬಂಕಸಾಣಕ್ಕೆ ಹೋಗಿದ್ದೇನೆ. ಇನ್ನೇನು ಬಂಕಸಾಣ ತಲುಪಬೇಕು. ಮಳೆ ಅಂದರೆ ಮಳೆ. ಎಂತಹ ಮಳೆ ಎನ್ನುತ್ತೀರಿ? ಇನ್ನೇನು ಆ ಮಳೆಯ ಹೊಡೆತಕ್ಕೆ ಪ್ರಳಯವೇ ಆಗಿ ಬಿಡುತ್ತದೆ ಎನ್ನಬೇಕು ಆ ಥರ. ಮರಗಳಿಂದ ಹನಿ ತೊಟ್ಟಿಕ್ಕುವ ಬದಲು ನೀರು ಸುರಿಯುತ್ತಿದೆ ಎಂದರೆ ಅದಿನ್ನೆಂತಹ ಮಳೆ ಇರಬೇಕು ಊಹಿಸಿ? ಆ ಮಳೆಯ ಚಂಡಿತನ ನೋಡಿ ಕಾರಿನಲ್ಲಿ ಕೂತ ನಾನೇ ದಿಗಿಲು ಬಿದ್ದು ಹೋದೆ.

ಅದರ ನಡುವೆಯೇ ಅದೇಕೋ ಆಯಾಚಿತವಾಗಿ ನನ್ನ ಗಮನ ಹೊರಗೆ ಸರಿಯಿತು. ನೋಡಿದರೆ ಆ ರೀತಿ ಭರ್ರೋ ಅಂತ ಯಮಗಾಳಿಯ ಜತೆ ಮಳೆ ಸುರಿಯುತ್ತಿದ್ದರೂ ಒಂದು ಮರದ ಕೆಳಗೆ ವಯಸ್ಸಾದ ಹಣ್ಣು ಹಣ್ಣು ಮುದುಕಿಯೊಬ್ಬಳು ಕುಳಿತಿದ್ದಾಳೆ. ಅರೇ, ಕಾರಿನಲ್ಲಿ ಕೂತ ನಾನೇ ಆ ಮಳೆಯ ಹೊಡೆತಕ್ಕೆ ದಿಗಿಲಾಗಿದ್ದೇನೆ. ಆ ಮುದುಕಿಯ ಕತೆ ಏನಾಗಿರಬೇಕು? ಅಂತ ಯೋಚಿಸುವಷ್ಟರಲ್ಲಿ ಕಾರು ಮುಂದೆ ಹೋಗಿತ್ತು. ಬಂಕಸಾಣದ ದೀಪಗಳು ಝೀರೋ ಕ್ಯಾಂಡಲ್ ಬಲ್ಬ್ ನಂತೆ ಚಿಕ್ಕಿ-ಪಿಕ್ಕಿ ಎನ್ನುತ್ತಿದ್ದವು.

ಸರಿ, ಅದ್ಹೇಗೋ ಬಂಕಸಾಣದಲ್ಲಿ ಮದುವೆ ಕಾರ್ಯಕ್ರಮವನ್ನು ಮುಗಿಸಿದ್ದಾಯಿತು. ಮರುದಿನ ಸಂಜೆ, ಬೆಂಗಳೂರಿಗೆ ಹೊರಟೆ. ಯಥಾ ಪ್ರಕಾರ ಒಂದೇ ಸಮನೆ ಮಳೆ ಸುರಿಯುತ್ತಿದೆ. ಹೋಗುತ್ತಾ ಹೋಗುತ್ತಾ ನನ್ನ ದೃಷ್ಟಿಯನ್ನು ಒಂದು ಬಗೆಯ ಆತಂಕದಿಂದಲೇ ಕಾರಿನ ಎಡಭಾಗದ ಮೇಲಿಟ್ಟು ಹೋದೆ. ಹಿಂದಿನ ದಿನ ಸಂಜೆ ಮರದ ಕೆಳಗೆ ನೆನೆಯುತ್ತಾ ಕುಂತಿದ್ದ ಮುದುಕಿ, ಅದೇ ಮಳೆಯಲ್ಲಿ ಮುದುರಿ ಮರದ ಕೆಳಗೆ ಮಲಗಿದ್ದಾಳೆ.

ತಡೆಯಲಾಗದೆ ನಾನು ಕಾರಿನಿಂದ ಇಳಿದು ಆ ಮುದುಕಿಯ ಬಳಿ ಹೋದೆ. ಕನಿಷ್ಟ ಪಕ್ಷ ಒಂದು ಸೂರಿನ ಕೆಳಗಾದರೂ ಇರದೆ ಮರದ ಕೆಳಗೆ ಮುದುಕಿ ಮಲಗಿದ್ದಾಳೆ ಎಂದರೆ ಸಹಜವಾಗಿಯೇ ಮುನಿಸಾಗುತ್ತದೆ ಅಲ್ಲವಾ ವಿಠ್ಠಲಮೂರ್ತಿ? ನನಗೂ ಹಾಗೇ ಆಯಿತು. ಹಾಗಂತಲೇ ಆ ಮಳೆಯ ನಡುವೆಯೇ ಮುದುಕಿಯ ಹತ್ತಿರ ಹೋಗಿ, ಅಜ್ಜಿ,ಅಜ್ಜಿ ಎಂದು ಕೂಗಿದೆ. ಅದಕ್ಕಾಕೆ ಕಣ್ಣು ತೆರೆದಳು. ನಾನು ಸ್ವಲ್ಪ ಮುನಿಸಿನಿಂದಲೇ, ಅದೇನಜ್ಜಿ? ನಿನ್ನೆ ಸಂಜೆ ನೋಡಿದ್ದು. ಇವತ್ತು ಸಂಜೆ ನೋಡಿದರೂ ಹಾಗೇ ಮಲಗಿದ್ದೀ. ಯಾವುದಾದರೂ ಒಂದು ಸೂರಿನ ಕೆಳಗಾದರೂ ಆಶ್ರಯ ಪಡೆಯಬಾರದಿತ್ತೇ? ಎಂದು ಹೇಳಿದೆ.

ಅದಕ್ಕೆ ಆ ಮುದುಕಿ ಕಣ್ಣೀರಿಡುತ್ತಾ, ಎಲ್ಲಿದೆ ಮಗೂ ನನಗೆ ಆಶ್ರಯ ಕೊಡುವ ಸೂರು? ನನ್ನವರು ಅಂತ ನನಗ್ಯಾರು ಇದ್ದಾರೆ? ಯಾರೂ ಇಲ್ಲ ಕಣಪ್ಪಾ ಎಂದಳು. ಹೀಗೆ ಹೇಳುವಾಗ ಆಕೆಯ ಮೈ-ಕೈ ನಡುಗುತ್ತಿತ್ತು. ಆ ಕ್ಷಣದಲ್ಲಿ ನನ್ನೆದೆ ಝುಲ್ಲೆಂತ ನಡುಗಿ ಹೋಯಿತು ವಿಠ್ಠಲಮೂರ್ತಿ. ಒಬ್ಬ ಮನುಷ್ಯನಿಗೆ ಬಿಸಿಲು, ಗಾಳಿ, ಮಳೆ, ಚಳಿಯ ರಕ್ಷಣೆಗಾಗಿ ಅಂತ ಒಂದು ಸೂರೂ ಇಲ್ಲದಿದ್ದರೆ ಹೇಗೆ? ಅನ್ನಿಸಿ ನೋವಾಯಿತು.

ಇದೇ ಸ್ಥಿತಿಯಲ್ಲಿ ನಾನಿದ್ದಿದ್ದರೆ ಅಂತ ಯೋಚಿಸಿದೆ. ತಕ್ಷಣವೇ ಆ ಮುದುಕಿಯನ್ನು ಎಬ್ಬಿಸಿ, ಮುಂದಿನ ಹಳ್ಳಿಯ ತನಕ ಕಾರಿನಲ್ಲೇ ಕರೆದು ಕೊಂಡು ಹೋದೆ. ಅಲ್ಲಿದ್ದ ಪರಿಚಿತರೊಬ್ಬರಿಗೆ, ಈಕೆ ನನಗೆ ಬೇಕಾದವಳು. ಈಕೆಯನ್ನು ಜತೆಯಲ್ಲಿಟ್ಟುಕೊಳ್ಳಿ. ಆಕೆಯ ಖರ್ಚು ನನ್ನದೇ ಎಂದೆ. ಮುಂದೆ ಆ ಮುದುಕಿ ಬದುಕಿರುವವರೆಗೆ ಆಕೆಯ ಖರ್ಚನ್ನು ನಾನೇ ಭರಿಸುತ್ತಿದ್ದೆ. ಆದರೆ ಆ ದಿನದ ಘಟನೆ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಹೋಯಿತು ವಿಠ್ಠಲಮೂರ್ತಿ.

ಬಂಗಲೆಯೇ ಇರಲಿ, ಗುಡಿಸಲೇ ಇರಲಿ. ಮನುಷ್ಯನಿಗೊಂದು ಸೂರು ಇರಬೇಕು. ಸೂರಿದ್ದರೆ ಗಂಜಿಯೋ? ನೀರೋ ಕುಡಿದುಕೊಂಡು ಇರಬಹುದು. ಆದರೆ ಸೂರಿಲ್ಲದ ಬದುಕನ್ನು ಊಹಿಸಿಕೊಳ್ಳುವುದು ನನಗೆ ಕಷ್ಟವಾಯಿತು. ಹೀಗಾಗಿಯೇ, ನನಗೆ ರಾಜಕೀಯವಾಗಿ, ಮಹತ್ವದ ಅಧಿಕಾರವೇನಾದರೂ ಸಿಕ್ಕಿದರೆ ಇಂತಹ ಜನರಿಗಾಗಿ ಏನಾದರೂ ಮಾಡಬೇಕು ಅಂತ ಮನಸ್ಸು ತಟಗುಟ್ಟುತ್ತಿತ್ತು. ಬಡವರಿಗೆ ಸೂರು ಒದಗಿಸುವ ಆ ಯೋಜನೆಯ ಕನಸಿಗೆ ಬೀಜ ಬಿದ್ದಿದ್ದು ಆ ಸಂದರ್ಭದಲ್ಲಿಯೇ ವಿಠ್ಠಲಮೂರ್ತಿ ಅಂತ ಬಂಗಾರಪ್ಪ ಮೌನವಾದರು. ಅದಾದ ನಂತರ ನಾನು ಮಾತನಾಡಲಿಲ್ಲ. ಯಾಕೆಂದರೆ ಮಾತನಾಡಲು ನನಗೇನೂ ಉಳಿದಿರಲಿಲ್ಲ. ಆಶ್ರಯ ಯೋಜನೆಯ ಕುರಿತು ಹೇಳಲು ಅವರಿಗೇನೂ ಉಳಿದಿರಲಿಲ್ಲ.

ಇಸ್ರೇಲಿಗಳೇಕೆ ಹಾಂಗ, ನಾವು ಭಾರತೀಯರೇಕೆ ಹೀಂಗ?

ಇಸ್ರೇಲ್ ಮತ್ತು ಗಾಜಾ ಪಟ್ಟಿಯಲ್ಲಿರುವ ಹಮಾಸ್ ಉಗ್ರರ ನಡುವಿನ ಎರಡು ವರ್ಷಗಳ ಯುದ್ಧಕ್ಕೆ ತೆರೆ ಬಿದ್ದಿದೆ. ಈ ಯುದ್ಧಕ್ಕೆ ಯಾವ ರೀತಿ ತೆರೆ ಬೀಳಬೇಕು ಎಂದು ಇಸ್ರೇಲಿಗಳು ಅಂದುಕೊಂಡಿದ್ದರೋ, ಅದೇ ರೀತಿ ಆಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆ ವಹಿಸದಿದ್ದರೂ ಇನ್ನೊಂದು ತಿಂಗಳಲ್ಲಿ ಯುದ್ಧ ನಿಲ್ಲುತ್ತಿತ್ತು. ಕಾರಣ ಅಷ್ಟೊತ್ತಿಗೆ ಗಾಜಾ ಬರಿದಾಗಿರುತ್ತಿತ್ತು. ಇಸ್ರೇಲಿ ಸೇನಾಪಡೆ ಈಗಾಗಲೇ ಶೇ.80ರಷ್ಟು ಗಾಜಾವನ್ನು ನಿರ್ನಾಮ ಮಾಡಿದೆ. ಗಾಜಾ ನಗರದಲ್ಲಿರುವ ಬಹುತೇಕರು ಈಗಾಗಲೇ ಊರು ಬಿಟ್ಟಿದ್ದಾರೆ. ಅಷ್ಟೇ ಪ್ರಮಾಣದ ಕಟ್ಟಡಗಳು ನೆಲಸಮವಾಗಿವೆ. ಅಲ್ಲಿ ಉಳಿದಿರುವುದು ಅರೆಬರೆ ಧ್ವಂಸವಾದ ಕಟ್ಟಡಗಳು ಮತ್ತು ಅವುಗಳ ಅವಶೇಷಗಳಷ್ಟೇ. ಹಮಾಸ್ ಉಗ್ರರ ಪೈಕಿ ಹೆಚ್ಚಿನವರು ಹತರಾಗಿದ್ದಾರೆ. ಗಾಜಾದಲ್ಲಿರುವ ಪ್ಯಾಲೆಸ್ತೀನಿಯರು ನಿರಾಶ್ರಿತರಾಗಿದ್ದಾರೆ. ಇಸ್ರೇಲ್ ಗಾಜಾ ಪಟ್ಟಿಯನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಉಗ್ರರ ಚಟುವಟಿಕೆಯನ್ನು ನಿಗ್ರಹಿಸಲು ಗಾಜಾದಲ್ಲಿರುವ ಎಲ್ಲ ಸುರಂಗಗಳನ್ನು ಇಸ್ರೇಲಿನ ಸೇನಾಪಡೆ ಮುಚ್ಚಿದೆ. ಅಕ್ಷರಶಃ ಇಸ್ರೇಲ್, ಗಾಜಾವನ್ನು ಎರಡು ಭಾಗಗಳಾಗಿ ಒಡೆದು ಹಾಕಿದೆ.

ಇದರಿಂದ ಹಮಾಸ್‌ಗಳು ಮೊದಲಿನ ಹಾಗೆ ಕಾರ್ಯಾಚರಣೆ ಮಾಡುವುದು ಸುಲಭವಲ್ಲ. ಗಾಜಾವನ್ನು ಇಡಿಯಾಗಿಯೇ ಕಟ್ಟಬೇಕು, ಆ ರೀತಿ ಮಟ್ಟಸ ಮಾಡಿಬಿಟ್ಟಿದ್ದಾರೆ. ಗಾಜಾವನ್ನು ಪುನರ್‌ನಿರ್ಮಿಸಲು ಇನ್ನೂ ಏನಿಲ್ಲವೆಂದರೂ ಹತ್ತು ವರ್ಷಗಳಾದರೂ ಬೇಕು. ಸದ್ಯಕ್ಕಂತೂ ಹಮಾಸ್‌ಗಳು ಬಾಲಬಿಚ್ಚುವಂತಿಲ್ಲ. ಅವರಿಗೆ ಬೇರೆ ದೇಶಗಳು ಬೆಂಬಲ ನೀಡಿದರೂ ಯುದ್ಧ ಮಾಡುವ ಹುಮ್ಮಸ್ಸು ಅವರಲ್ಲಿ ಉಳಿದಿಲ್ಲ. ಈ ಯುದ್ಧ ಹೇಗೆ ಕೊನೆಗೊಳ್ಳಬಹುದು ಎಂಬ ಬಗ್ಗೆ ಯಾರಲ್ಲೂ ಆಸಕ್ತಿ ಇರಲಿಲ್ಲ. ಆದರೆ ಹಮಾಸ್ ಉಗ್ರರು ಎರಡು ವರ್ಷಗಳ ಹಿಂದೆ ಅಪಹರಿಸಿ ಒತ್ತೆಯಾಳುಗಳನ್ನಾಗಿಟ್ಟುಕೊಂಡ ಇಸ್ರೇಲಿ ನಾಗರಿಕರು ಸುರಕ್ಷಿತವಾಗಿ ಮನೆಗೆ ಮರಳುತ್ತಾರಾ, ಇಲ್ಲವಾ ಎಂಬ ಬಗ್ಗೆ ಕುತೂಹಲವಿತ್ತು. ಅಂದುಕೊಂಡಂತೆ, ಎಲ್ಲ ಒತ್ತೆಯಾಳುಗಳನ್ನೂ ಹಮಾಸ್ ಉಗ್ರರು ಬಿಡುಗಡೆ ಮಾಡಿದ್ದಾರೆ. ಅಲ್ಲಿಗೆ ಯುದ್ಧ ಮುಗಿದಂತೆ ಆಗಿದೆ. ಎಲ್ಲ ಮುಗಿದ ಬಳಿಕ, ಇಸ್ರೇಲ್ ಕದನವಿರಾಮ ಘೋಷಿಸಿದಂತಾಗಿದೆ.

ಒಂದು ವೇಳೆ ಆ ರೀತಿಯ ಸ್ಥಿತಿ ಭಾರತದಲ್ಲಿ ಇದ್ದಿದ್ದರೆ ಏನಾಗುತ್ತಿತ್ತು?

ಹಮಾಸ್ ವಿರುದ್ಧ ಕಾರ್ಯಾಚರಣೆ ಮಾಡಲು ಭಾರತ ಹತ್ತು ಸಲ ಯೋಚಿಸಬೇಕಾಗುತ್ತಿತ್ತು. ಹಮಾಸ್ ವಿರುದ್ಧದ ದಾಳಿಗೆ ಮುನ್ನ ದೇಶದೊಳಗೆ ಇರುವ ಪ್ರತಿಪಕ್ಷಗಳನ್ನು ಎದುರಿಸುವುದೇ ಸರಕಾರಕ್ಕೆ ದೊಡ್ಡ ಸಮಸ್ಯೆ ಆಗುತ್ತಿತ್ತು. ಅದರಲ್ಲೂ ಎರಡು ವರ್ಷಗಳ ತನಕ ಯುದ್ಧ ನಡೆದಿದ್ದರೆ, ಪ್ರತಿಪಕ್ಷಗಳು ಸರಕಾರವನ್ನು ತರಾಟೆಗೆ ತೆಗೆದುಕೊಂಡು ನಮ್ಮ ಸೈನಿಕರ ಜಂಘಾಬಲವನ್ನೇ ಉಡುಗಿಸಿಬಿಡುತ್ತಿದ್ದರು. ಹಮಾಸ್ ಉಗ್ರರನ್ನು ಮಣಿಸಿದ ನಂತರ, ಪ್ರತಿಪಕ್ಷಗಳನ್ನು ಎದುರಿಸುವುದು ಸರಕಾರಕ್ಕೆ ಸುಲಭದ ತುತ್ತಾಗುತ್ತಿರಲಿಲ್ಲ. ಆ ರೀತಿ ಆಡಳಿತ ಪಕ್ಷವನ್ನು ಹಣ್ಣುಗಾಯಿ-ನೀರುಗಾಯಿ ಮಾಡಿಬಿಡುತ್ತಿದ್ದರು. ಹಮಾಸ್ ಉಗ್ರರನ್ನು ಎದುರಿಸಿದ್ದಕ್ಕಿಂತ ಪ್ರತಿಪಕ್ಷಗಳನ್ನು ಎದುರಿಸುವುದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತಿತ್ತು.

ಹಾಗಾದರೆ, ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇತೃತ್ವದ ಇಸ್ರೇಲಿನ ಸರಕಾರಕ್ಕೆ ಈ ಸಮಸ್ಯೆ ಆಗಲಿಲ್ಲವೇ?

ಆಶ್ಚರ್ಯವೆನಿಸಬಹುದು, ಈ ಸಮಸ್ಯೆ ಇಸ್ರೇಲಿ ಪ್ರಧಾನಿಗೆ ಆಗಲೇ ಇಲ್ಲ. ಇಡೀ ಪ್ರತಿಪಕ್ಷ, ಎರಡು ವರ್ಷಗಳ ಕಾಲ ಸರಕಾರದ ಪರವಾಗಿ ಗಟ್ಟಿಯಾಗಿ ನಿಂತುಬಿಟ್ಟಿತು. ಯುದ್ಧದ ಸಂದರ್ಭದಲ್ಲಿ ಪ್ರತಿಪಕ್ಷಗಳು ಪ್ರಧಾನಿ ರಾಜೀನಾಮೆ ನೀಡಬೇಕೆಂದು ಆಗ್ರಹಿಸಲಿಲ್ಲ, ಸಂಸತ್ ಕಲಾಪ ಬಹಿಷ್ಕರಿಸಲಿಲ್ಲ, ಯುದ್ಧ ಲಂಬಿಸುತ್ತಿರುವುದರ ಬಗ್ಗೆ ಸರಕಾರವನ್ನು ಟೀಕಿಸಲಿಲ್ಲ, ಒತ್ತೆಯಾಳುಗಳ ಬಿಡುಗಡೆಗೆ ವಿಳಂಬವಾಗುತ್ತಿದೆಯೆಂದು ಯಾರೂ ತಕರಾರು ತೆಗೆಯಲಿಲ್ಲ, ಹಮಾಸ್ ಉಗ್ರರ ಹುಟ್ಟಡಗಿಸಿದ್ದೇವೆ ಎಂದು ಸರಕಾರ ಹೇಳಿದಾಗ, ಯಾರೂ 'ಸಾಕ್ಷ್ಯ ಕೊಡಿ' ಎಂದು ಹೇಳಲಿಲ್ಲ. ಹಮಾಸ್ ವಿರುದ್ಧದ ಕಾರ್ಯಾಚರಣೆಯಲ್ಲಿ ಸರಕಾರದ ಲೋಪ-ದೋಷಗಳನ್ನು ಎತ್ತಿ ಹಿಡಿದು, ಹೇಗೆ ಬೇಳೆ ಬೇಯಿಸಿಕೊಳ್ಳಬಹುದು ಎಂದು ಪ್ರತಿಪಕ್ಷಗಳು ಯೋಚಿಸಲೇ ಇಲ್ಲ.

ಹಾಗೆಂದು ಇಸ್ರೇಲಿನಲ್ಲಿರುವುದು ಎರಡೇ ಪಕ್ಷಗಳಲ್ಲ. ಭಾರತದಲ್ಲಿರುವಂತೆ ಅಲ್ಲಿ ಕೂಡ ಬಹು-ಪಕ್ಷ ವ್ಯವಸ್ಥೆಯಿದೆ. ಕಾಲಕಾಲಕ್ಕೆ ಹೊಸ ರಾಜಕೀಯ ಪಕ್ಷಗಳು ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಇಸ್ರೇಲ್‌ನ ಈಗಿನ ಸರಕಾರದಲ್ಲಿ (ಬೆಂಜಮಿನ್ ನೆತನ್ಯಾಹು ನೇತೃತ್ವದ ಒಕ್ಕೂಟ), ಮುಖ್ಯ ಪ್ರತಿಪಕ್ಷವೆಂದರೆ ಯೇಶ್ ಅಟಿಡ್ ಪಕ್ಷ. ಇದರ ನಾಯಕ ಯಾಯಿರ್ ಲ್ಯಾಪಿಡ್. ಮಾಜಿ ರಕ್ಷಣಾ ಸಚಿವ ಬೆನ್ನಿ ಗಾಂಟ್ಜ್ ನೇತೃತ್ವದ ರಾಷ್ಟ್ರೀಯ ಐಕ್ಯತಾ ಪಕ್ಷ (National Unity) ಕೂಡ ಒಂದು ಪ್ರಬಲ ವಿರೋಧ ಶಕ್ತಿಯಾಗಿದೆ. ನೆಸೆಟ್‌ನಲ್ಲಿ (ಇಸ್ರೇಲ್‌ನ ಸಂಸತ್ತು) ಅತ್ಯಧಿಕ ಸ್ಥಾನಗಳನ್ನು ಹೊಂದಿರುವ ಪ್ರತ್ಯೇಕ ಪ್ರತಿಪಕ್ಷ ಯೇಶ್ ಅಟಿಡ್ ಆಗಿದೆ. ನೆಸೆಟ್‌ನಲ್ಲಿ ಪ್ರಸ್ತುತ ಪ್ರತಿಪಕ್ಷ ಸ್ಥಾನಮಾನವನ್ನು ಹೊಂದಿರುವ ಒಟ್ಟು ಪಕ್ಷಗಳು-ಮೈತ್ರಿಗಳು ಆರರಿಂದ ಎಂಟು. ಆ ಪೈಕಿ ಯೇಶ್ ಅಟಿಡ್, ರಾಷ್ಟ್ರೀಯ ಐಕ್ಯತೆ (National Unity), ಯಿಸ್ರೇಲ್ ಬೈಟೇನು, ಯುನೈಟೆಡ್ ಅರಬ್ ಲಿಸ್ಟ್, ಹದಶ್-ತಾಲ್, ಲೇಬರ್, ದಿ ಡೆಮೊಕ್ರಾಟ್ಸ್ (ಹಿಂದಿನ ಬ್ಲೂ ಆ್ಯಂಡ್ ವೈಟ್ ಪಕ್ಷದ ಭಾಗವಾಗಿದ್ದರೂ, ಪ್ರಸ್ತುತ ವಿರೋಧದಲ್ಲಿ ಸ್ಥಾನಪಡೆದಿದೆ.) ಸೇರಿವೆ. ಇಸ್ರೇಲಿನ ಸಂಸತ್ತು ಒಟ್ಟು 120 ಸ್ಥಾನಗಳನ್ನು ಹೊಂದಿದೆ.

2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ಭಯೋತ್ಪಾದಕ ದಾಳಿ ನಡೆಸಿದ ನಂತರ, ಇಸ್ರೇಲ್‌ನ ರಾಜಕೀಯದಲ್ಲಿ ಒಂದು ಪ್ರಮುಖ ಬದಲಾವಣೆ ಕಂಡುಬಂದಿತು. ದೇಶಕ್ಕೆ ಎದುರಾದ ಈ ಭಾರಿ ಬಿಕ್ಕಟ್ಟಿನ ಸಮಯದಲ್ಲಿ, ಅನೇಕ ಪ್ರಮುಖ ವಿರೋಧ ಪಕ್ಷಗಳು ಸರಕಾರದ ಪರ ಗಟ್ಟಿಯಾಗಿ ನಿಂತವು. ಒಂದು ಸಂದರ್ಭದಲ್ಲಿ ಪ್ರಮುಖ ಪ್ರತಿಪಕ್ಷಗಳು ರಾಷ್ಟ್ರೀಯ ಏಕತಾ ಸರಕಾರ (National Unity Government)ದಲ್ಲಿ ಭಾಗವಹಿಸಿದವು. ಇಸ್ರೇಲಿನ ರಾಜಕೀಯದಲ್ಲಿ ಆಡಳಿತಾರೂಢ ಲಿಕುಡ್ ಪಕ್ಷ ಮತ್ತು ಅದರ ಬಲಪಂಥೀಯ ಒಕ್ಕೂಟದ ವಿರುದ್ಧ ತೀವ್ರ ವಿರೋಧವಿದ್ದರೂ, ಅಕ್ಟೋಬರ್ 7ರ ದಾಳಿಯು ದೇಶದ ಭದ್ರತೆಯ ವಿಷಯದಲ್ಲಿ ಪಕ್ಷಾತೀತ ಒಗ್ಗಟ್ಟಿಗೆ ಕಾರಣವಾಯಿತು. ವಿರೋಧ ಪಕ್ಷದ ನಾಯಕರಲ್ಲಿ ಪ್ರಮುಖರಾದ ಬೆನ್ನಿ ಗಾಂಟ್ಜ್ ನೇತೃತ್ವದ ರಾಷ್ಟ್ರೀಯ ಐಕ್ಯತಾ ಪಕ್ಷವು ಬೆಂಜಮಿನ್ ನೆತನ್ಯಾಹು ಅವರ ಸರಕಾರವನ್ನು ಸೇರಿಕೊಂಡಿತು.

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್

vbhat@me.com

ಈ ಒಪ್ಪಂದದ ಭಾಗವಾಗಿ, ಒಂದು ಸಣ್ಣ ಯುದ್ಧ ಸಚಿವ ಸಂಪುಟ (War Cabinet)ವನ್ನು ಸ್ಥಾಪಿಸಲಾಯಿತು. ಇದರಲ್ಲಿ ಪ್ರಧಾನಿ ನೆತನ್ಯಾಹು, ರಕ್ಷಣಾ ಮಂತ್ರಿ ಯೋವ್ ಗ್ಯಾಲಂಟ್ ಮತ್ತು ವಿರೋಧ ಪಕ್ಷದಿಂದ ಬಂದ ಬೆನ್ನಿ ಗಾಂಟ್ಜ್ ಅವರು ಪ್ರಮುಖ ಸದಸ್ಯರಾಗಿದ್ದರು. ಈ ಕ್ರಮದ ಮುಖ್ಯ ಉದ್ದೇಶವೆಂದರೆ, ಹಮಾಸ್ ವಿರುದ್ಧದ ಯುದ್ಧವನ್ನು ಹೆಚ್ಚು ಕೇಂದ್ರೀಕೃತವಾಗಿ ಮತ್ತು ನಿರ್ಣಾಯಕವಾಗಿ ನಡೆಸಲು ಸಾಧ್ಯವಾಗುವಂತೆ, ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಂಪೂರ್ಣ ರಾಷ್ಟ್ರೀಯ ಒಮ್ಮತವನ್ನು ಪ್ರದರ್ಶಿಸುವುದಾಗಿತ್ತು. ಬೆನ್ನಿ ಗಾಂಟ್ಜ್ ಪಕ್ಷವು ಸರಕಾರಕ್ಕೆ ಸೇರಿಕೊಂಡರೂ, ಯಾಯಿರ್ ಲ್ಯಾಪಿಡ್ ನೇತೃತ್ವದ ಪ್ರಮುಖ ವಿರೋಧ ಪಕ್ಷವಾದ ಯೇಶ್ ಅಟಿಡ್ ಪಕ್ಷವು ರಾಷ್ಟ್ರೀಯ ಏಕತಾ ಸರಕಾರವನ್ನು ಸೇರಲು ನಿರಾಕರಿಸಿತು. ಲ್ಯಾಪಿಡ್ ಅವರು ಯುದ್ಧಕ್ಕೆ ಸಂಪೂರ್ಣ ಬೆಂಬಲ ಘೋಷಿಸಿದರು. ಆದರೆ ಯುದ್ಧ ಸಂಪುಟದಲ್ಲಿ ತಾವು ಭಾಗವಹಿಸುವುದಿಲ್ಲ, ಬದಲಿಗೆ ಪರಿಣಾಮಕಾರಿ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತೇವೆ ಎಂದು ಹೇಳಿದರು. ವಿರೋಧ ಪಕ್ಷದಲ್ಲೇ ಇದ್ದು ಯುದ್ಧಕ್ಕೆ ಅಗತ್ಯವಾದ ಎಲ್ಲ ಬೆಂಬಲವನ್ನು ನೀಡುವುದಾಗಿ ಮತ್ತು ಯುದ್ಧ ಮುಗಿದ ನಂತರ ರಾಜಕೀಯ ವಿಮರ್ಶೆಯನ್ನು ಮಾಡುವುದಾಗಿ ಅವರ ಪಕ್ಷ ತಿಳಿಸಿತು.

ಅರಬ್-ಪ್ರಬಲ ಪಕ್ಷಗಳನ್ನು ಹೊರತುಪಡಿಸಿ, ಬಹುತೇಕ ಎಲ್ಲ ವಿರೋಧ ಪಕ್ಷಗಳೂ ಹಮಾಸ್ ವಿರುದ್ಧದ ಮಿಲಿಟರಿ ಕ್ರಮಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದವು, ಭದ್ರತೆಯ ವಿಷಯದಲ್ಲಿ ದೇಶ ಒಗ್ಗಟ್ಟಾಗಿದೆ ಎಂದು ಜಗತ್ತಿಗೆ ತೋರಿಸಿದವು. ಒಟ್ಟಾರೆ, ಪ್ರಮುಖ ವಿರೋಧ ಪಕ್ಷದ ನಾಯಕರು ಸರಕಾರದೊಂದಿಗೆ ಯುದ್ಧ ಸಂಪುಟವನ್ನು ರಚಿಸುವ ಮೂಲಕ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದರು. ಇದು ಯುದ್ಧದಂಥ ನಿರ್ಣಾಯಕ ಸಮಯದಲ್ಲಿ ಪಕ್ಷಾತೀತ ಬೆಂಬಲವನ್ನು ತೋರಿಸುವ, ಇತಿಹಾಸದಲ್ಲಿನ ಒಂದು ಅಪರೂಪದ ನಿದರ್ಶನವಾಗಿದೆ.

ಇಸ್ರೇಲ್‌ಗೆ, ಅಕ್ಟೋಬರ್ 7ರ ದಾಳಿಯು ಕೇವಲ ಗಡಿ ಉಲ್ಲಂಘನೆಯಾಗಿರಲಿಲ್ಲ, ಆದರೆ ಇಡೀ ರಾಷ್ಟ್ರದ ಅಸ್ತಿತ್ವಕ್ಕೆ ನೇರ ಬೆದರಿಕೆ ಮತ್ತು ಇತಿಹಾಸದಲ್ಲಿಯೇ ಅತಿ ದೊಡ್ಡ ಭದ್ರತಾ ವೈಫಲ್ಯವಾಗಿತ್ತು. ಇಂಥ ಸಂದರ್ಭದಲ್ಲಿ, ರಾಜಕೀಯ ಭಿನ್ನಾಭಿಪ್ರಾಯಗಳು ಅಪ್ರಸ್ತುತ ಇಂದು ಇಸ್ರೇಲಿ ನಾಯಕರು ಭಾವಿಸಿದರು. ದೇಶದ ರಕ್ಷಣೆ ವಿಷಯ ಎಂಬುದು ಇಸ್ರೇಲಿಗರಿಗೆ ರಾಜಕೀಯಕ್ಕಿಂತ ದೊಡ್ಡ ವಿಷಯವಾಗುತ್ತದೆ. ವಿರೋಧ ಪಕ್ಷದ ನಾಯಕರು ಸರಕಾರವನ್ನು ಬೆಂಬಲಿಸುವುದು ದೇಶಭಕ್ತಿಯ ಮತ್ತು ಕರ್ತವ್ಯದ ಸಂಕೇತವೆಂದು ಪರಿಗಣಿಸುತ್ತಾರೆ. ಮಾಜಿ ಪ್ರಧಾನಿ ಯಾರು, ಪ್ರಸ್ತುತ ಪ್ರಧಾನಿ ಯಾರು ಎಂಬ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಮಾಜಿ ರಕ್ಷಣಾ ಸಚಿವ ಬೆನ್ನಿ ಗಾಂಟ್ಜ್ ಅವರು ನೆತನ್ಯಾಹು ಅವರೊಂದಿಗೆ ಯುದ್ಧದ ನಿರ್ವಹಣೆಗಾಗಿ ಸೀಮಿತ ಅವಧಿಯ 'ರಾಷ್ಟ್ರೀಯ ಏಕತಾ ಸಮರ ಸಂಪುಟ' ಸೇರಿಕೊಂಡಿದ್ದು ಒಂದು ಅಪರೂಪದ ನಡೆ. ರಾಜೀನಾಮೆಗೆ ಆಗ್ರಹಿಸುವ ಬದಲು, ವಿರೋಧ ಪಕ್ಷವು ರಾಷ್ಟ್ರೀಯ ಹಿತಾಸಕ್ತಿಗಾಗಿ ಸಹ-ಆಡಳಿತಕ್ಕೆ ಸಿದ್ಧವಾಯಿತು.

ನಮ್ಮಲ್ಲಿ, 'ಆಪರೇಷನ್ ಸಿಂಧೂರ'ದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸರಕಾರಕ್ಕೆ ಸಂಪೂರ್ಣ ಬೆಂಬಲ ನೀಡಿದರೂ, ನಂತರ ರಾಜಕೀಯ ವಿಮರ್ಶೆಯನ್ನು ಬದಿಗಿಡುವುದಿಲ್ಲ. ಬದಲಿಗೆ, ವೈಫಲ್ಯಕ್ಕೆ ರಾಜಕೀಯ ಹೊಣೆಗಾರಿಕೆಯನ್ನು ನಿಗದಿಪಡಿಸಲು, ಪ್ರಧಾನಿ ಅಥವಾ ಸಂಬಂಧಪಟ್ಟ ಸಚಿವರ ರಾಜೀನಾಮೆಗೆ ಒತ್ತಾಯ ಮಾಡುವುದು ಸಾಮಾನ್ಯ. ಇದು ವಿರೋಧ ಪಕ್ಷದ ಪಾತ್ರವೆಂದು ಅವರು ಪರಿಗಣಿಸುತ್ತಾರೆ. ಭಾರತದಲ್ಲಿ ಪ್ರಮುಖ ವಿರೋಧ ಪಕ್ಷಗಳು ರಾಷ್ಟ್ರೀಯ ಬಿಕ್ಕಟ್ಟಿನ ಸಮಯದಲ್ಲಿ ಆಡಳಿತ ಪಕ್ಷದೊಂದಿಗೆ ಸೇರಿ ಸಮ್ಮಿಶ್ರ ಸರಕಾರ ರಚಿಸಿದ ಉದಾಹರಣೆಗಳು ಇಲ್ಲವೇ ಇಲ್ಲ. ದೇಶದ ಭದ್ರತಾ ವಿಷಯದಲ್ಲಿ ಒಗ್ಗಟ್ಟನ್ನು ತೋರಿಸಿದರೂ, ನಂತರ ತಮ್ಮ ವರಸೆಯನ್ನು ಮುಂದುವರಿಸುವುದು ಚಟವಾಗಿಬಿಟ್ಟಿದೆ.

ಹಮಾಸ್ ದಾಳಿಯ ಮೊದಲು, ಬೆಂಜಮಿನ್ ನೆತನ್ಯಾಹು ಅವರ ಸರಕಾರವು ವಿವಾದಾತ್ಮಕ ನ್ಯಾಯಾಂಗ ಸುಧಾರಣೆಗಳ ಕಾರಣದಿಂದ ಮತ್ತು ಭ್ರಷ್ಟಾಚಾರದ ಆರೋಪಗಳಿಂದಾಗಿ ದೇಶದಲ್ಲಿ ತೀವ್ರ ವಿರೋಧ ಎದುರಿಸುತ್ತಿತ್ತು. ಆದರೆ ಯಾವಾಗ ಹಮಾಸ್ ದಾಳಿ ಆರಂಭವಾಯಿತೋ, ನೆತನ್ಯಾಹು ಅವರಿಗೆ ಯುದ್ಧವನ್ನು ಸಮರ್ಥವಾಗಿ ಮುನ್ನಡೆಸಲು ರಾಷ್ಟ್ರೀಯ ಬೆಂಬಲದ ಕವಚ ಅತ್ಯಗತ್ಯವಾಗಿತ್ತು. ಗಾಂಟ್ಜ್ ಅವರಂಥ ವಿರೋಧ ಪಕ್ಷದ ನಾಯಕರು ಸರಕಾರವನ್ನು ಸೇರಿಕೊಳ್ಳುವ ಮೂಲಕ ನೆತನ್ಯಾಹು ಅವರ ವೈಯಕ್ತಿಕ ರಾಜಕೀಯ ಸಮಸ್ಯೆಗಳು ತಾತ್ಕಾಲಿಕವಾಗಿ ಹಿನ್ನೆಲೆಗೆ ಸರಿಯುವಂತೆ ಆಯಿತು.

ಇಸ್ರೇಲಿ ಸಾರ್ವಜನಿಕರು ಮತ್ತು ವಿರೋಧ ಪಕ್ಷಗಳು ಅಂತಿಮವಾಗಿ ಭದ್ರತಾ ವೈಫಲ್ಯದ ಬಗ್ಗೆ ನೆತನ್ಯಾಹು ಅವರನ್ನು ಪ್ರಶ್ನಿಸಬಹುದು. ಈ ಸಂಬಂಧ ಸಂಸತ್ತಿನಲ್ಲಿ ಜಟಾಪಟಿ ಆಗಬಹುದು. ಆದರೆ ಯುದ್ಧದ ಸಮಯದಲ್ಲಿ ಯಾರೂ ಈ ವಿಷಯವನ್ನು ಪ್ರಸ್ತಾಪಿ ಸಲೇ ಇಲ್ಲ. ಯುದ್ಧ ಮುಗಿದ ನಂತರ ರಾಜ್ಯ ಮಟ್ಟದ ಆಯೋಗ ದಿಂದ ತನಿಖೆ ನಡೆಸಿ, ರಾಜಕೀಯ ಹೊಣೆಗಾರಿಕೆ ನಿಗದಿಪಡಿಸುವ ಸಂಪ್ರದಾಯ ಇಸ್ರೇಲ್‌ನಲ್ಲಿದೆ. ಇಸ್ರೇಲ್‌ನಲ್ಲಿ 'ಹಮಾಸ್' ಬಿಕ್ಕಟ್ಟಿನ ಸಂದರ್ಭಗಳಲ್ಲಿ, ರಾಷ್ಟ್ರದ ಉಳಿವಿನ ಆದ್ಯತೆಯು ಅಲ್ಲಿನ ನಾಯಕರಿಗೆ ರಾಜಕೀಯ ಲೆಕ್ಕಾಚಾರದ ವಿಷಯ ಆಗುವುದಿಲ್ಲ. ಭಾರತದಲ್ಲಿ, ಇಂಥ ಪರಿಸ್ಥಿತಿಯಲ್ಲೂ ಪ್ರತಿಪಕ್ಷಗಳು ಬೆಂಕಿಯಲ್ಲಿ ಮೈ ಕಾಯಿಸಿಕೊಳ್ಳುವುದನ್ನು ಮರೆಯುವುದಿಲ್ಲ.

ಜೆರುಸಲೆಮ್ ಕಲ್ಲು

ಮೊದಲ ಬಾರಿಗೆ ಜೆರುಸಲೆಮ್ ನಗರಕ್ಕೆ ಭೇಟಿಯಿತ್ತವರಿಗೆ ಒಂದು ಸಂಗತಿ ಗಮನಕ್ಕೆ ಬರದೇ ಹೋಗುವುದಿಲ್ಲ. ಅದೇನೆಂದರೆ, ಎಲ್ಲ ಕಟ್ಟಡಗಳೂ ಒಂದೇ ರೀತಿಯಾಗಿ ಏಕೆ ಕಾಣುತ್ತವೆ? ಎಲ್ಲ ಕಟ್ಟಡಗಳ ನಿರ್ಮಾಣದಲ್ಲೂ ಒಂದೇ ರೀತಿಯ ಕಲ್ಲನ್ನೇಕೆ ಬಳಸಿದ್ದಾರೆ? ಜೆರುಸಲೆಮ್‌ಗೆ ಅದರ ವಿಶಿಷ್ಟ, ಐತಿಹಾಸಿಕ ಮತ್ತು ದೈವಿಕ ನೋಟವನ್ನು ನೀಡುವ ಏಕೈಕ ಅಂಶವೆಂದರೆ, ನಗರದ ಪ್ರತಿ ಕಟ್ಟಡದ ಮೇಲೆ ಸ್ಥಳೀಯ ಸುಣ್ಣದ ಕಲ್ಲನ್ನು (Limestone) ಕಡ್ಡಾಯವಾಗಿ ಬಳಸುವುದು. ಇದನ್ನು (The Jerusalem Stone Mandate) ಎಂದು ಕರೆಯುತ್ತಾರೆ.

ಹಾಗಾದರೆ ಈ ಜೆರುಸಲೆಮ್ ಕಲ್ಲು ಎಂದರೇನು?

'ಜೆರುಸಲೆಮ್ ಕಲ್ಲು' ಎಂಬುದು ಒಂದು ನಿರ್ದಿಷ್ಟ ಕಲ್ಲಿನ ಪ್ರಕಾರವಲ್ಲ, ಇದು ವಾಸ್ತವವಾಗಿ ಜೆರುಸಲೆಮ್ ಪ್ರದೇಶ ಮತ್ತು ಜೂಡಿಯನ್ ಬೆಟ್ಟಗಳ ಸುತ್ತಮುತ್ತ ಹೇರಳವಾಗಿ ಕಂಡುಬರುವ ವಿವಿಧ ರೀತಿಯ ತಿಳಿ ಬಣ್ಣದ ಸುಣ್ಣದ ಕಲ್ಲು, ಡಾಲೋಮೈಟ್ ಮತ್ತು ಡಾಲೋಮಿಟಿಕ್ ಸುಣ್ಣದ ಕಲ್ಲುಗಳ ಒಂದು ಸಾಮಾನ್ಯ ಹೆಸರು.

ಈ ಕಲ್ಲುಗಳು ಬಿಳಿ, ತಿಳಿ ಹಳದಿ, ಗುಲಾಬಿ ಮತ್ತು ಕೇಸರಿ-ಕಂದು ಬಣ್ಣಗಳಲ್ಲಿ ಕಂಡುಬರುತ್ತವೆ. ಸೂರ್ಯ ಮುಳುಗುವಾಗ, ಈ ತಿಳಿ ಬಣ್ಣಗಳು ಸುವರ್ಣ ಅಥವಾ ಚಿನ್ನದ ಛಾಯೆಯನ್ನು ಪ್ರತಿಫಲಿಸುತ್ತವೆ. ಈ ಕಾರಣಕ್ಕಾಗಿಯೇ ಜೆರುಸಲೆಮ್‌ಗೆ 'ಚಿನ್ನದ ಜೆರುಸಲೆಮ್' ಎಂಬ ಅಂಕಿತನಾಮ ಬಂದಿದೆ. ಈ ಕಲ್ಲು ಸಾವಿರಾರು ವರ್ಷಗಳಿಂದ, ಬೈಬಲ್‌ನ ಕಾಲದಿಂದಲೂ ಜೆರುಸಲೆಮ್‌ನಲ್ಲಿ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ. ಪಶ್ಚಿಮ ಗೋಡೆ (Western Wall), ಹಳೆಯ ನಗರದ ಗೋಡೆಗಳು ಮತ್ತು ದೇವಾಲಯದ ಸಂಕೀರ್ಣದಂಥ ಪ್ರಸಿದ್ಧ ಪ್ರಾಚೀನ ರಚನೆಗಳು ಈ ಕಲ್ಲಿನಿಂದಲೇ ನಿರ್ಮಾಣವಾಗಿವೆ.

ಎಲ್ಲ ಸಾರ್ವಜನಿಕ ಕಟ್ಟಡಗಳಿಗೆ ಜೆರುಸಲೆಮ್ ಕಲ್ಲನ್ನೇ ಬಳಸಬೇಕು ಎಂಬ ನಿಯಮವನ್ನು ಕಡ್ಡಾಯಗೊಳಿಸಲಾಗಿದೆ. ಈ ನಿಯಮವು ಆಧುನಿಕ ನಗರ ಯೋಜನೆಯ ಇತಿಹಾಸದಲ್ಲಿ ಒಂದು ವಿಶಿಷ್ಟ ಅಧ್ಯಾಯವೇ ಸರಿ. ಈ ಕಟ್ಟಳೆಯು 20ನೇ ಶತಮಾನದ ಆರಂಭದಲ್ಲಿ, ಬ್ರಿಟಿಷ್ ಆಳ್ವಿಕೆ ಅವಧಿಯಲ್ಲಿ ಜಾರಿಗೆ ಬಂದಿತು. 1917ರಲ್ಲಿ ಒಟ್ಟೋಮನ್ ಸಾಮ್ರಾಜ್ಯದಿಂದ ನಗರವನ್ನು ವಶಪಡಿಸಿಕೊಂಡ ನಂತರ, ಮೊದಲ ಬ್ರಿಟಿಷ್ ಮಿಲಿಟರಿ ಗವರ್ನರ್ ಆಗಿದ್ದ ಸರ್ ರೊನಾಲ್ಡ್ ಸ್ಟೋರ್ಸ್ ಆಡಳಿತದಲ್ಲಿ ಈ ನಿಯಮವನ್ನು ಅನುಷ್ಠಾನಕ್ಕೆ ತರಲಾಯಿತು. ಅಲೆಕ್ಸಾಂಡ್ರಿಯಾದ ನಗರ ಎಂಜಿನಿಯರ್ ಆಗಿದ್ದ ಸರ್ ವಿಲಿಯಂ ಮೆಕ್ಲೀನ್ 1918ರಲ್ಲಿ ರೂಪಿಸಿದ ನಗರದ ಮಾಸ್ಟರ್ ಪ್ಲಾನ್‌ನ ಭಾಗವಾಗಿ ಈ ಕಲ್ಲಿನ ಬಳಕೆಯನ್ನು ಕಡ್ಡಾಯಗೊಳಿಸಲಾಯಿತು.

ಬ್ರಿಟಿಷ್ ಅಧಿಕಾರಿಗಳ ಪ್ರಮುಖ ಉದ್ದೇಶವು ನಗರದ ಐತಿಹಾಸಿಕ ಮತ್ತು ದೈವಿಕ ನೋಟವನ್ನು ಸಂರಕ್ಷಿಸುವುದಾಗಿತ್ತು. ಕೈಗಾರಿಕಾ ಕ್ರಾಂತಿಯ ನಂತರ ಜಗತ್ತಿನಾದ್ಯಂತ ಆಧುನಿಕ ಕಾಂಕ್ರೀಟ್ ಕಟ್ಟಡಗಳು ನಿರ್ಮಾಣವಾಗುತ್ತಿದ್ದ ಸಮಯದಲ್ಲಿ, ಜೆರುಸಲೆಮ್ ತನ್ನ ಶಾಶ್ವತ ಪುರಾತನ ಸೌಂದರ್ಯವನ್ನು ಕಾಯ್ದುಕೊಳ್ಳಬೇಕು ಎಂಬುದು ಅವರ ಆಶಯವಾಗಿತ್ತು. ಈ ನಿಯಮದಿಂದಾಗಿ ನಗರದ ವಾಸ್ತುಶಿಲ್ಪದಲ್ಲಿ ಏಕರೂಪತೆ (Visual Harmony) ಸೃಷ್ಟಿಯಾಯಿತು. ಇಂದಿಗೂ, ಜೆರುಸಲೆಮ್ ನಗರಸಭೆಯು ಈ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ. ಹಳೆಯ ನಗರದ ಸುತ್ತಮುತ್ತಲಿನ ಆಧುನಿಕ ವಿಸ್ತರಣೆಗಳಲ್ಲಿ ನಿರ್ಮಿಸಲಾಗುವ ವಸತಿ ಕಟ್ಟಡಗಳು, ಕಚೇರಿ ಕಟ್ಟಡಗಳು ಮತ್ತು ಎತ್ತರದ ಗಗನಚುಂಬಿ ಕಟ್ಟಡಗಳ ಹೊರಭಾಗವನ್ನು ಸಹ ಕಡ್ಡಾಯವಾಗಿ ಸ್ಥಳೀಯ ಕಲ್ಲಿನಿಂದ ಹೊದಿಸಬೇಕು.

ಇದರಿಂದ ನಗರದ ಮೇಲೆ ಆದ ಪರಿಣಾಮಗಳೇನು?

ಇದು ಜೆರುಸಲೆಮ್‌ಗೆ ಅದರ ಐಕಾನಿಕ್ 'ಚಿನ್ನದ ನಗರ' ದೃಶ್ಯವನ್ನು ನೀಡಿದೆ. ಸೂರ್ಯನ ಬೆಳಕು ಮತ್ತು ನೆರಳಿನ ಆಟಕ್ಕೆ ಅನುಗುಣವಾಗಿ ನಗರದ ಬಣ್ಣವು ದಿನವಿಡೀ ಬದಲಾಗುತ್ತಿರುತ್ತದೆ. ಇದು ಪ್ರಪಂಚದ ಬೇರೆ ಯಾವುದೇ ನಗರದಲ್ಲಿ ಕಾಣಸಿಗದ ಸೌಂದರ್ಯ. ಈ ನಿಯಮವು ಆಧುನಿಕ ಕಟ್ಟಡಗಳನ್ನು ಸಹ ಪ್ರಾಚೀನ ಸಂಪ್ರದಾಯದೊಂದಿಗೆ ಮತ್ತು ಸುತ್ತಮುತ್ತಲಿನ ಭೂಪ್ರದೇಶದೊಂದಿಗೆ ವಿಲೀನಗೊಳಿಸಲು ಸಹಾಯ ಮಾಡುತ್ತದೆ. ಹೊಸ ಮತ್ತು ಹಳೆಯ ಕಟ್ಟಡಗಳ ನಡುವಿನ ವ್ಯತ್ಯಾಸವನ್ನು ಇದು ಕಡಿಮೆ ಮಾಡುತ್ತದೆ. ಸ್ಥಳೀಯವಾಗಿ ಸುಲಭವಾಗಿ ದೊರೆಯುವ ಕಲ್ಲನ್ನು ಬಳಸುವುದರಿಂದ ದೂರದ ಸ್ಥಳಗಳಿಂದ ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ವೆಚ್ಚ ಮತ್ತು ಪರಿಸರ ಪರಿಣಾಮ ಕಡಿಮೆಯಾಗುತ್ತದೆ. 1947-1949ರ ಪ್ಯಾಲೆಸ್ತೀನ್ ಯುದ್ಧದ ಸಮಯದಲ್ಲಿ, ಹೊಸ ಕಟ್ಟಡಗಳಲ್ಲಿ ಕಡ್ಡಾಯವಾಗಿ ಕಲ್ಲನ್ನು ಬಳಸಬೇಕು ಎಂಬ ನಿಯಮದಿಂದ ಶೆಲ್ಲಿಂಗ್‌ನಿಂದ ಉಂಟಾದ ಹಾನಿಯನ್ನು ಮಿತಿಗೊಳಿಸಲು ಸಹಾಯ ಮಾಡಿತು.

ಒಟ್ಟಾರೆ, ಜೆರುಸಲೆಮ್‌ನಲ್ಲಿರುವ ಜೆರುಸಲೆಮ್ ಕಲ್ಲನ್ನೇ ಬಳಸಬೇಕೆಂಬ ಕಡ್ಡಾಯ ನಿಯಮವು ಕೇವಲ ನಿರ್ಮಾಣ ನಿಯಮಕ್ಕಿಂತ ಮಿಗಿಲಾದ ಅರ್ಥ ಮತ್ತು ಪ್ರಾಮುಖ್ಯವನ್ನು ಹೊಂದಿದೆ. ಇದು ನಗರದ ಸಾಂಸ್ಕೃತಿಕ ಗುರುತು, ಐತಿಹಾಸಿಕ ಸಂರಕ್ಷಣೆ ಮತ್ತು ದೈವಿಕ ಸೌಂದರ್ಯವನ್ನು ಜಾಗೃತವಾಗಿ ಕಾಯ್ದುಕೊಳ್ಳುವ ಒಂದು ಬದ್ಧತೆಯಾಗಿದೆ. ಈ ಕಾನೂನಿನ ಕಾರಣದಿಂದಾಗಿ, ನಗರವು ಇಂದಿಗೂ ಒಂದು ಪ್ರಾಚೀನ ಮತ್ತು ಪವಿತ್ರ ಸ್ಥಳದಂತೆ ಭಾಸವಾಗುತ್ತದೆ. ಆಧುನಿಕತೆಯ ಒತ್ತಡಗಳ ನಡುವೆಯೂ ತನ್ನ ಮೂಲರೂಪವನ್ನು ಅದು ಉಳಿಸಿಕೊಂಡಿದೆ.

ತೃಣಮಪಿ ನ ಚಲತಿ... ಸೂಕ್ತಿಯ ಹುಲ್ಲು ಸಾಮಾನ್ಯವೇನಲ್ಲ!

ಅವನ ಆಣತಿಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸದು ಎಂಬರ್ಥದಲ್ಲಿ ಇರುವುದು- ತೇನ ವಿನಾ ತೃಣಮಪಿ ನ ಚಲತಿ ಎಂಬ ಸೂಕ್ತಿ. ಆದರೆ, ಅದರಲ್ಲಿ 'ಒಂದು ಹುಲ್ಲುಕಡ್ಡಿಯೂ...' ಎನ್ನುವಾಗ ಹುಲ್ಲೆಂದರೆ ಯಃಕಶ್ಚಿತ್ ಎಂಬಂತೆ ಧ್ವನಿಯಿದೆ ಎಂದು ನನಗನಿಸುತ್ತದೆ. ಹಾಗಿದ್ದರೆ ಹುಲ್ಲು ಅಲ್ಪವೇ? ನಗಣ್ಯವೇ? ಆಲೋಚಿಸುತ್ತ ಹೋದಂತೆ ಈ ಪ್ರಪಂಚದಲ್ಲಿ ಹುಲ್ಲು ಕೂಡ ಅಸಾಮಾನ್ಯವಾದುದು ಎಂದು ನಮಗೆ ತಿಳಿಯುತ್ತದೆ. ಅಣು-ರೇಣು-ತೃಣ-ಕಾಷ್ಠಗಳಲ್ಲೂ ಭಗವಂತನಿದ್ದಾನೆ ಎಂದಮೇಲೆ ಹುಲ್ಲು(ತೃಣ) ದೈವಾಂಶಸಂಭೂತವೇ. ಭಗವಂತ ಎಷ್ಟು ಜವಾಬ್ದಾರಿಯವನೆಂದರೆ ಹುಟ್ಟಿಸಿದ ಮೇಲೆ ಹುಲ್ಲು ಮೇಯಿಸದೆ ಇರುವುದಿಲ್ಲ. ನಿಗರ್ವಿ, ನಿಷ್ಪಕ್ಷಪಾತಿ ಆಗಿರುವ ಅವನು ಹೂವ ತರುವರ ಮನೆಗೆ ಹುಲ್ಲನ್ನೂ ತರುತ್ತಾನೆ. ಸುಖವನ್ನು ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕಿದಂತೆ ಅರಸುತ್ತ ಇಹಲೋಕದ ಜಂಜಾಟಗಳಲ್ಲಿ ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯ ಆಸರೆ ತೋರುವವನೂ ದಯಾಪರನಾದ ಅವನೇ. ಅಷ್ಟಾಗಿ, ಭಗವಂತನು ನಮ್ಮಿಂದ ಬಯಸುವುದಾದರೂ ಏನನ್ನು? ಭಗವದ್ಗೀತೆಯಲ್ಲಿ ಕೃಷ್ಣನೇನೋ ಪತ್ರಂ-ಪುಷ್ಪಂ-ಫಲಂ-ತೋಯಂ (ಎಲೆ, ಹೂ, ಹಣ್ಣು, ನೀರು) ಇವಿಷ್ಟೇ ಧಾರಾಳ ಸಾಕು ಎಂದಿದ್ದಾನೆ; ನಮ್ಮೆಲ್ಲರ ನೆಚ್ಚಿನ ಗಣಪನ ಎಕ್ಸ್‌ಪೆಕ್ಟೇಷನ್ಸು ಅದಕ್ಕಿಂತಲೂ ಸಿಂಪಲ್: 'ಗರಿಕೆ ತಂದರೆ ನೀನು ಕೊಡುವೆ ವರವನ್ನ... ಗತಿ ನೀನೇ ಗಣಪನೇ ಕೈಹಿಡಿಯೊ ಮುನ್ನ...' ಗರಿಕೆ ಎಂದರೇನು, ಅದೂ ಒಂದು ನಮೂನೆಯ ಹುಲ್ಲೇ ತಾನೆ? 'ಹಾಲುಂಡ ತವರಿಗೆ ಏನೆಂದು ಹಾಡಲಿ ಹೊಳೆದಂಡೇಲಿರುವ ಕರಕೀಯ ಕುಡಿಹಾಂಗ ಹಬ್ಬಲಿ ಅವರ ರಸಬಳ್ಳಿ...' ಎನ್ನುವ ಜನಪದ ಗರತಿಯ ಹಾರೈಕೆಯಲ್ಲಿ ಆಕೆ ನೀಡುವುದು ಕರಕಿ(ಗರಿಕೆ)ಯ ಹೋಲಿಕೆಯನ್ನೇ. ಆದ್ದರಿಂದ, ಈ ದಿನ ಹುಲ್ಲನ್ನೇ ಪೋಣಿಸಿ ಒಂದು ತೋರಣ ಕಟ್ಟಬೇಕೆಂದಿದ್ದೇನೆ. ಬೇಕಿದ್ದರೆ ತೃಣತೋರಣ ಎನ್ನಬಹುದು, ಒಳ್ಳೆಯ ಅನುಪ್ರಾಸಯುಕ್ತ ಹೆಸರಾಗುತ್ತದೆ.

ತೃಣವನ್ನು ಕೇವಲವಾಗಿ ಅತ್ಯಲ್ಪವೆಂದ್ದೆಂಬ ಭಾವನೆಯಿಂದ ನೋಡುತ್ತೇವೆ, ಅದು ಬರೀ ದನಕರುಗಳ ಮೇವು ಎಂಬ ತಾತ್ಸಾರ ತೋರುತ್ತೇವೆ ಎಂದು ನನಗನಿಸುವುದು 'ಕ್ಷಣವೊಂದು ಯುಗವಾಗಿ ತೃಣಕಿಂತ ಕಡೆಯಾಗಿ ಎಣಿಸಲಾರದ ಭವದಿ ಕಡುನೊಂದೆ ನಾನು...' ರೀತಿಯ ದಾಸವಾಣಿಗಳಲ್ಲಿ; 'ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೋ...' ರೀತಿಯ ವಚನದ ಸಾಲುಗಳಲ್ಲಿ; 'ಹಾದಿ ಬೀದಿಯಲಿರುವ ಕಸದ ಹುಲ್ಲನು ಮೇಯ್ದು ಮನೆಗೈತಂದು ನಿನಗಮೃತವ ನಾನೀವೆ ನೀನಾರಿಗಾದೆಯೋ ಎಲೆ ಮಾನವ...' ರೀತಿಯ ಪದ್ಯಗಳಲ್ಲಿ; 'ಕಿಂ ಜೀರ್ಣಂ ತೃಣಮತ್ತಿ ಮಾನಮಹತಾಂ ಅಗ್ರೇಸರಃ ಕೇಸರೀ' ರೀತಿಯ ಸುಭಾಷಿತ ಸಾಲುಗಳಲ್ಲಿ (ಅದೊಂದು ಸಿಂಹದ ಸ್ವಾಭಿಮಾನ ಘನತೆಯನ್ನು ಸಾರುವ ಸುಭಾಷಿತ: 'ಕ್ಷುತ್‌ಕ್ಷಾಮೋಽಪಿ ಜರಾಕೃಶೋಽಪಿ ಶಿಥಿಲಪ್ರಾಯೋಽಪಿ ಕಷ್ಟಾಂ ದಶಾಮಾಪನ್ನೋಽಪಿ ವಿಪನ್ನಧೀಧೃತಿರಪಿ ಪ್ರಾಣೇಷು ನಶ್ಯತ್ಸ್ವಪಿ। ಮತ್ತೇಭೇಂದ್ರ ವಿಭಿನ್ನಕುಂಭಪಿಶಿತ ಗ್ರಾಸೈಕಬದ್ಧಸ್ಪೃಹಃ ಕಿಂ ಜೀರ್ಣಂ ತೃಣಮತ್ತಿಮಾನಮಹತಾಂ ಅಗ್ರೇಸರಃ ಕೇಸರೀ॥' ಎಂದು ಅದರ ಪೂರ್ಣರೂಪ. ಹಸಿವಿನಿಂದ ಬಳಲಿದ್ದರೂ ಮುಪ್ಪಿನಿಂದ ದುರ್ಬಲವಾಗಿದ್ದರೂ ಅಂಗಗಳೆಲ್ಲ ಕ್ಷೀಣಿಸಿದ್ದರೂ ಅತಿಕಷ್ಟದ ಸನ್ನಿವೇಶದಲ್ಲಿ ಸಿಲುಕಿದ್ದರೂ ತನ್ನ ಮನೋಸ್ಥೈರ್ಯವನ್ನೇ ಕಳೆದುಕೊಂಡಿದ್ದರೂ ಕಟ್ಟಕಡೆಯಲ್ಲಿ ಜೀವ ಹೋಗುವ ಸ್ಥಿತಿಯೇ ಉಂಟಾಗಿದ್ದರೂ, ಮದಿಸಿದ ಕಾಡಾನೆಗಳ ಸೀಳಿದ ಕುಂಭಸ್ಥಳದಲ್ಲಿರುವ ಮಾಂಸವನ್ನು ಮಾತ್ರ ಭಕ್ಷಿಸುವ ಸ್ವಭಾವವನ್ನು ತನ್ನ ಜೀವನದುದ್ದಕ್ಕೂ ಕಾಪಾಡಿಕೊಂಡು ಬಂದ, ಸ್ವಾಭಿಮಾನಿಗಳಲ್ಲಿ ಅಗ್ರಗಣ್ಯವಾದ ಸಿಂಹವು ಒಣಹುಲ್ಲನ್ನು ತಿಂದು ಬದುಕಿ ಉಳಿಯುತ್ತೇನೆಂದು ಎಂದಿಗೂ ಬಯಸುವುದಿಲ್ಲ ಅಂತ ಭಾವಾರ್ಥ).

'ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ'- ಮಂಕುತಿಮ್ಮನ ಕಗ್ಗದಲ್ಲಿ ಡಿವಿಜಿ ಹೇಳಿದ್ದಾರೆ. ದೂರದ ಬೆಟ್ಟ ನುಣ್ಣಗೆ ಇದೆಯೆಂತನಿಸುವುದು ಅಲ್ಲಿನ more greener grassನಿಂದ ಅಂತ ಮಂಕುತಿಮ್ಮನಿಗೂ ಗೊತ್ತು; ಬೆಟ್ಟದ ತಪ್ಪಲಲ್ಲಿ ಮತ್ತು ಮೇಲ್ಮೈಗೆ ಮುಳ್ಳುಕಂಟಿಗಳು ಇರುವುದಕ್ಕಿಂತ ಹುಲುಸಾದ ಹುಲ್ಲು ಬೆಳೆದಿದ್ದರೆ ಬೆಟ್ಟವನ್ನೇರುವವರಿಗೆ ಪ್ರಯಾಸ ಕಡಿಮೆ. ಕಠಿಣ ಹಾದಿಯನ್ನು ಕ್ರಮಿಸುವವರ ಶ್ರಮವಿಳಿಸಲು ಹುಲ್ಲು ಮಾಡುವ ಸಹಾಯವದು. ಆ ರೀತಿ ಹುಲ್ಲಿನಂತಿದ್ದು ಪರೋಪಕಾರಿ ಆಗಿರಬೇಕು ಎಂಬುದು ಮಂಕುತಿಮ್ಮನ ಮಾತಿನ ಇಂಗಿತ. ಬೆಟ್ಟಗುಡ್ಡಗಳನ್ನೇರುವ ಚಾರಣಿಗರಿಗೆ ನಡುವೆ ಹುಲ್ಲುಗಾವಲು ಸಿಕ್ಕಿದರೆ ಒಮ್ಮೆ ಆಯಾಸ ಪರಿಹಾರಕ್ಕಾಗಿ ಕೈಕಾಲು ಚಾಚಿ ಮೈ ಚೆಲ್ಲಿ ಮಲಗಿಬಿಡಲು ಬೇರೆ ಪ್ರಶಸ್ತ ಜಾಗ ಬೇಕೆ? ಕಲ್ಲುಮುಳ್ಳುಗಳಲ್ಲಿ ಪಾದರಕ್ಷೆಗಳನ್ನು ಧರಿಸಿ ನಡೆದ ಮೇಲೆ, ಹುಲ್ಲಿನ ಮೇಲೆ ಬರಿಗಾಲಲ್ಲಿ ಒಮ್ಮೆ ನಡೆದು ನೋಡಿ. ಗಲ್ಲಕ್ಕೆ ನವಿಲುಗರಿ ಸೋಕಿದಂಥ ಕಚಗುಳಿ ಹಿತಾನುಭವ, ತನ್ಮೂಲಕ ಆಯಾಸಪರಿಹಾರ ನಿಮ್ಮ ಪಾದಗಳಿಗಾಗದಿದ್ದರೆ ಆಗ ಹೇಳಿ. ಪಶ್ಚಿಮಘಟ್ಟದ ಕುದುರೆಮುಖ ಪರ್ವತ ಪ್ರದೇಶದಲ್ಲಿ ಹುಲ್ಲುಗುಡ್ಡೆ ಎಂಬ ಹೆಸರಿನದೇ ಒಂದು ಜಾಗವಿದೆ. ಅಲ್ಲಿಗೆ ತಲುಪಿದಾಗ ಚಾರಣದ ಒಂದು ಹಂತ ಮುಗಿದು ಅಲ್ಲೊಂದಿಷ್ಟು ಹೊತ್ತು ವಿಶ್ರಾಂತಿ ಪಡೆಯುವ ಅವಕಾಶ. ಹೊತ್ತೇರಿದರೂ ಹುಲ್ಲಿನ ಮೇಲಿನ ಇಬ್ಬನಿ ಸಹ ಇನ್ನೂ ಫಳಫಳ ಹೊಳೆಯುತ್ತಿದ್ದರಂತೂ ಮೈದಣಿವಷ್ಟೇ ಅಲ್ಲ ಮನಸ್ಸಿನ ದಣಿವೂ ಹೇಳಹೆಸರಿಲ್ಲವಾಗುತ್ತದೆ. ಚೆನ್ನವೀರ ಕಣವಿಯವರು 'ಮಾತು' ಕವಿತೆಯಲ್ಲಿ ಅಂಥದನ್ನು ಮಕಮಲ್ಲು ಹುಲ್ಲು ಎಂದು ಬಣ್ಣಿಸಿದ್ದಾರೆ: 'ಮುಂಜಾವಿನಲಿ ಹಸಿರು ಹುಲ್ಲು ಮಕಮಲ್ಲಿನಲಿ ಪಾರಿಜಾತವು ಹೂವು ಸುರಿಸಿದಂತೆ... ಮುಟ್ಟಿದರೆ ಮಾಸುತಿಹ ಮಂಜುಹನಿ ಮುತ್ತಿನಲಿ ಸೃಷ್ಟಿ ಸಂಪೂರ್ಣತೆಯ ಬಿಂಬಿಪಂತೆ...' ಆಹಾ ಆ ದೃಶ್ಯವನ್ನು ನೆನೆಸಿಕೊಂಡರೇ ಎಂಥ ಸೊಗಸು!

ನಮ್ಮಲ್ಲಿ ಹಿಂದೆಲ್ಲ ಬಡಜನರ ಗುಡಿಸಲುಗಳಿಗೆ, ಮಧ್ಯಮ ವರ್ಗದ ಮನೆಗಳಿಗೂ, ಮುಳಿಹುಲ್ಲಿನ ಚಾವಣಿ ಇರುತ್ತಿದ್ದದ್ದು. ಅದರ ಮೇಲೆ ಮುಂಜಾವಿನ ಬಿಸಿಲಿನ ಹೊಂಗಿರಣಗಳು ಬೀಳುವಾಗಿನ ಅಂದವನ್ನು ವರ್ಣಿಸುವಾಗಲೇ ಪಂಜೆ ಮಂಗೇಶ ರಾಯರು 'ಮಾಡಿನ ಹುಲ್ಲಲಿ ಚಿನ್ನದ ಗೆರೆಯನು ಎಳೆಯುವವನು ರವಿ ಹೊಳೆಯುವನು...' ಎಂದಿದ್ದು. ಈಗ ಹಂಚುಹೊದಿಕೆಯ ಅಥವಾ ಟೆರೇಸ್ ಮನೆಗಳ ಮೇಲೆ ಬೀಳುವ ಬೆಳಗಿನ ಬಿಸಿಲು ಪಂಜೆಯವರಿಗೆ ಕವನ ರಚನೆಯ ಸ್ಫೂರ್ತಿ ನೀಡುತ್ತಿತ್ತೆಂದು ಹೇಳಲಿಕ್ಕಾಗದು. ಮುಂಜಾವಿನ ಬಿಸಿಲು ಒಣಗಿದ ಮುಳಿಹುಲ್ಲಿನ ಮೇಲೆ ಬಿದ್ದಾಗ ನಿಜಕ್ಕೂ ಅದು ಬಂಗಾರದ ಸರಿಗೆಗಳಂತೆ ಕಂಡುಬರುತ್ತದೆ. ಬಡವರ ಬದುಕನ್ನು ಭ್ರಮೆಗಾದರೂ ಸ್ವರ್ಣಮಯವಾಗಿಸುವ ರವಿಯ ಪರಿ ಅದು. ಕವಿಗೆ ವರ್ಣನೆಗೆ ಅಷ್ಟು ಸಾಕಲ್ಲ!

ಹುಲ್ಲು ಮತ್ತು ಚಿನ್ನದ ಗೆರೆ ಎಂದಾಗ ಇನ್ನೊಂದು ಕುತೂಹಲಕಾರಿ ವಿಷಯವನ್ನೂ ಉಲ್ಲೇಖಿಸಲೇಬೇಕು. Grassroots politics (ಅಥವಾ ಅದರ ಮಮತಾ ಬ್ಯಾನರ್ಜಿ ಭಾಷಾಂತರದ 'ತೃಣಮೂಲ ರಾಜಕೀಯ') ಎಂಬ ಪದಪುಂಜವನ್ನು ಕೇಳಿದ್ದೀರಷ್ಟೆ? ಈ grassroots ಎಂಬ ಪದ ಮೂಲತಃ ಅಮೆರಿಕದ್ದು ಎಂಬ ವಿಚಾರ ನಿಮಗೆ ಗೊತ್ತೇ? ಇಲ್ಲಿ 19ನೆಯ ಶತಮಾನದ ಆರಂಭದಲ್ಲಿ ಗಣಿಗಾರಿಕೆ, ಚಿನ್ನದ ನಿಕ್ಷೇಪಗಳ ಪತ್ತೆಯ ವೇಳೆ ಚಾಲ್ತಿಗೆ ಬಂದ ಪದ ಅದು. ಆಗ ಚಿನ್ನ ಎಷ್ಟು ಹೇರಳವಾಗಿತ್ತೆಂದರೆ ಹುಲ್ಲಿನಡಿಯ ಮಣ್ಣನ್ನು ಅಗೆದರೆ ಅಲ್ಲೂ ಚಿನ್ನ ಸಿಗುತ್ತದೆ ಎಂಬಂತಿತ್ತು. ಆಮೇಲೆ ಹುಲ್ಲಿನ ಬೇರುಗಳ ಅರ್ಥವ್ಯಾಪ್ತಿ ಇನ್ನೂ ವಿಸ್ತಾರವಾಯ್ತೆನ್ನಿ. ಹುಲ್ಲನ್ನು ಅದರ ಬೇರುಗಳೇ ತಾನೆ ಜೀವಂತವಾಗಿ ಮತ್ತು ಬೆಳವಣಿಗೆಯ ಕ್ರಮದಲ್ಲಿ ಇಡುವುದು? ಅದೇ ಪ್ರಕಾರ ಯಾವುದೇ ವಿಷಯದ ಅಥವಾ ವಸ್ತುವಿನ ಆಮೂಲಾಗ್ರ ಅರಿವಾಗಬೇಕಾದರೆ ಅದರ ತಳಮಟ್ಟದ ಮಾಹಿತಿಯಿಂದಲೇ ಶುರುವಾಗಬೇಕಲ್ಲ? ರಾಜಕಾರಣಿಗಳು ಈ ಪದಪುಂಜವನ್ನು ಉಪಯೋಗಿಸಿ ಸಮಾಜದ ಕೆಳ ಸ್ತರದ ಜನಸಾಮಾನ್ಯರನ್ನೇ grassroots ಎಂದು ಕರೆದರು. ಭಾಷಣಗಳನ್ನು ಕೊರೆದರು. ಸಂಪತ್ತಿನ ಕೊಳ್ಳೆ ಹೊಡೆದರು. ಸಾಮಾನ್ಯ ಜನ ಹುಲ್ಲು ತಿನ್ನುವ ಪ್ರಾಣಿಗಳಂತಾದರು. ಇಲ್ಲಿ-ಅಲ್ಲಿ ಅಂತಲ್ಲ, ಪ್ರಪಂಚದಲ್ಲಿ ಎಲ್ಲೆಲ್ಲೂ!

ತಿಳಿರು ತೋರಣ

ಶ್ರೀವತ್ಸ ಜೋಶಿ

srivathsajoshi@yahoo.com

ಹುಲ್ಲು ತಿನ್ನುವ ಪ್ರಾಣಿಗಳಂತಾದರು ಅಂದಮಾತ್ರಕ್ಕೇ ಕೀಳಾಗಿ ತಿಳಿಯಬೇಕಾದ್ದೇನಿಲ್ಲ. ಸಸ್ಯಶಾಸ್ತ್ರೀಯವಾಗಿ ನೋಡಿದರೆ ಪ್ರಪಂಚದ ಪ್ರಮುಖ ಆಹಾರವರ್ಗವಾದ ಅಕ್ಕಿ, ಗೋಧಿ, ರಾಗಿ, ಜೋಳ, ಸಜ್ಜೆ, ನವಣೆ ಮುಂತಾದುವೆಲ್ಲವೂ ಹುಲ್ಲಿನ ಜಾತಿಯವೇ. ಕಬ್ಬು ಮತ್ತು ಬಿದಿರು ಸಹ ಹುಲ್ಲಿನದೇ ಪ್ರಭೇದಗಳು. ಆದ್ದರಿಂದ ಎಳೆಬಿದಿರು ಅರ್ಥಾತ್ ಕಳಲೆಯ ರುಚಿರುಚಿಯಾದ ಪಲ್ಯ, ಹುಳಿ, ವಡೆ ಮಾಡಿ ತಿಂದರೆ ಒಂದರ್ಥದಲ್ಲಿ ಹುಲ್ಲು ತಿಂದಂತೆಯೇ. ಭಾಷಾಸಕ್ತರಿಗೆ ಇನ್ನೂ ಒಂದು ಸ್ವಾರಸ್ಯಕರ ಸಂಗತಿ ಇಲ್ಲಿದೆ. ಬಿದಿರನ್ನು ಹುಲ್ಲು ಎಂದು ಪರಿಗಣಿಸುವುದರಿಂದ ಮತ್ತು ತಮಿಳಿನಲ್ಲಿ ಹುಲ್ಲನ್ನು ಪುಲ್ ಎನ್ನುವುದರಿಂದ, ಬಿದಿರಿನಿಂದ ನಿರ್ಮಿತವಾದ ಕೊಳಲು ತಮಿಳಿನಲ್ಲಿ 'ಪುಲ್ಲಾಂ'ಗುಳಲ್ ಎಂದು ಕರೆಯಲ್ಪಡುತ್ತದೆ. ಕನ್ನಡದಲ್ಲದು ಪಿಳ್ಳಂಗೋವಿ ಆಗಿದೆ. ಮುರಲೀಧರನ ಕೈಯಲ್ಲಿದ್ದುಕೊಂಡು ಮನಮೋಹಕ ನಾದಸುಧೆಯನ್ನು ಹರಿಸಿ ಎಲ್ಲರನ್ನೂ ಸೆಳೆಯುವ ವೇಣು ನಿಜಕ್ಕೂ Pull ಆಂಗುಳಲೇ ತಾನೆ! ಸರಿ, ಮತ್ತೊಮ್ಮೆ ಹುಲ್ಲು ತಿನ್ನುವ ವಿಷಯಕ್ಕೆ ವಾಪಸಾದರೆ- ಈಚೀಚೆಗೆ ಹೆಲ್ತ್ ಕಾನ್ಷಿಯಸ್ ನಟ್‌ಗಳು ಗೋಧಿ ಹುಲ್ಲು, ಬಾರ್ಲಿ ಹುಲ್ಲುಗಳನ್ನು ಅತ್ಯಮೋಘವಾದ ಆಹಾರವೆಂದೂ, ಬೇಕಿದ್ದರೆ ಅದನ್ನು ಯೋಗ ಫುಡ್ ಅಂತ ಪರಿಗಣಿಸಬಹುದು ಎಂದೂ ಪ್ರಚಾರ ಮಾಡುತ್ತಿದ್ದಾರೆ. ಲೆಮನ್ ಗ್ರಾಸ್ ಅಂತೂ ಔಷಧೀಯ ಗುಣಗಳನ್ನು ಹೊಂದಿರುವ ಸಸ್ಯವೆಂದು ಅದನ್ನು ಅಡುಗೆಯಲ್ಲಿ ಮತ್ತು ಆಯುರ್ವೇದ ಔಷಧಿಗಳಲ್ಲೂ ಬಳಸುತ್ತೇವೆ. ಅಂದಮೇಲೆ ನಾವೆಲ್ಲ ಹುಲ್ಲು ತಿನ್ನುವವರು ಎಂದು ಕರೆಸಿಕೊಳ್ಳಲಿಕ್ಕೆ ಏನೂ ನಾಚಿಕೆ ಬೇಡ. ಇದು ಹೀಗೇ ಮುಂದುವರಿದಲ್ಲಿ ದೇವರು ತಿನ್ನಿಸಲಿ ಬಿಡಲಿ ನಾವೇ ಸಿಕ್ಕಸಿಕ್ಕ ಹುಲ್ಲನ್ನೆಲ್ಲ ಮೇದುಬಿಡುತ್ತೇವೇನೋ? ಕೊಟ್ಟಿಗೆಯಲ್ಲಿ ಗೋಮಾತೆಗಳೊಡನೆ ಸಹಪಂಕ್ತಿ ಭೋಜನ ಮಾಡಿಯೇವು, ಅಥವಾ ಗೋಮಾತೆಗಳ ಊಟಕ್ಕೇ ಸಂಚಕಾರ ತಂದರೂ ತಂದೇವು! ಛೇ... ಒಂದೆರಡಲ್ಲ ಈ ಮನುಕುಲದ ಉಪದ್ವ್ಯಾಪಗಳು.

ಇರಲಿ, ಹುಲ್ಲನ್ನು ಹೊಟ್ಟೆಗೆ ಮೇವಾಗಿಸುವುದಕ್ಕಿಂತ, ಹುಲ್ಲಿನ ಬಗೆಗಿನ ಸ್ವಾರಸ್ಯಗಳೊಂದಿಷ್ಟನ್ನು ಮಿದುಳಿಗೆ ಮೇವಾಗಿಸೋಣ. ನಮ್ಮ ಪುರಾಣೇತಿಹಾಸಗಳಲ್ಲಿ ಬರುವ ಹುಲ್ಲಿನ ಉಲ್ಲೇಖಗಳನ್ನು ನೆನಪಿಸಿಕೊಳ್ಳೋಣ. ರಾಮಾಯಣದಲ್ಲಿ ಸೀತೆಯು ಅಶೋಕವನದಲ್ಲಿ ಕಾಲಕ್ಷೇಪ ಮಾಡುತ್ತಿದ್ದಾಗ ರಾವಣನು ಆಗಾಗ ಅವಳನ್ನು ಮಾತನಾಡಿಸಲಿಕ್ಕೆಂದು ಅಲ್ಲಿಗೆ ಬರುತ್ತಿದ್ದನಂತೆ. ಮಾತನಾಡಿಸುವುದೆಂದರೆ ಒಂದೋ ಪ್ರಲೋಭನೆ ಒಡ್ಡುವುದು, ಇಲ್ಲವೇ ಆಕೆಗೆ ಬೆದರಿಕೆ ಬೈಗುಳ ಉದುರಿಸುವುದು. ಒಟ್ಟಿನಲ್ಲಿ ಸೀತೆ ತನ್ನವಳಾಗಬೇಕೆಂದು ರಾವಣನ ಹಠ. ಆದರೆ ಸೀತೆ ರಾವಣನನ್ನು ಮುಖವೆತ್ತಿ ನೋಡುತ್ತಿರಲಿಲ್ಲ. ಆತನ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಳು, ಮುಖಾಮುಖಿಯಾಗಿ ಅಲ್ಲ. ಬದಲಿಗೆ ಕೈಯಲ್ಲೊಂದು ಹುಲ್ಲುಕಡ್ಡಿಯನ್ನು ಹಿಡಿದು ಅದರೊಡನೆ ಸಂಭಾಷಿಸುತ್ತಿದ್ದಳೇನೋ ಎಂಬಂತೆ. ಪರಪುರುಷನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಲಾರೆ ಎಂಬ ವ್ರತವುಳ್ಳ ಪತಿವ್ರತೆ ಸೀತಾಮಾತೆ. ಇನ್ನು, ಮಹಾಭಾರತದಲ್ಲಿ ಹುಲ್ಲು ಬರುವುದು ಕೌರವರು-ಪಾಂಡವರು ಚಿಕ್ಕವರಿದ್ದಾಗ, ಅವರೆಲ್ಲ ಸೇರಿ ಒಟ್ಟಿಗೇ ಆಟವಾಡಿಕೊಂಡಿದ್ದಾಗ ಚೆಂಡು ಹೋಗಿ ಒಂದು ಬಾವಿಯಲ್ಲಿ ಬೀಳುವ, ಅಲ್ಲಿಗೆ ಬಂದ ದ್ರೋಣಾಚಾರ್ಯರು ಒಂದಿಷ್ಟು ಹುಲ್ಲುಕಡ್ಡಿಗಳನ್ನು ಮಂತ್ರಿಸಿ ಬಾವಿಗೆ ಎಸೆಯಲು ಅವು ಒಂದರ ತುದಿಗೊಂದು ಅಂಟಿಕೊಂಡು ಸರಪಳಿಯಂತಾಗುವ, ಮತ್ತು ಅದರ ಮೂಲಕವೇ ದ್ರೋಣಾಚಾರ್ಯರು ಚೆಂಡನ್ನು ಬಾವಿಯಿಂದ ಹೊರತೆಗೆಯುವ ಪ್ರಸಂಗದಲ್ಲಿ. ಹುಡುಗರು ಹೋ ಎಂದು ಖುಷಿಪಟ್ಟರು ಮಾತ್ರವಲ್ಲ ದ್ರೋಣಾಚಾರ್ಯರೇ ತಮಗೆ ಶಸ್ತ್ರಾಸ್ತ್ರವಿದ್ಯೆ ಕಲಿಸುವ ಗುರುಗಳಾಗಬೇಕೆಂದು ಪಟ್ಟುಹಿಡಿದರು.

ಸತ್ಯಹರಿಶ್ಚಂದ್ರನ ಕಥೆಯಲ್ಲಿ, ಅವನ ಕಷ್ಟಕಾರ್ಪಣ್ಯಗಳು ಪರಮಾವಧಿ ಹಂತವನ್ನು ತಲುಪುವುದಕ್ಕೆ ಹುಲ್ಲೂ ಒಂದು ನೆಪವಾಗುತ್ತದೆ! ಹೇಗೆ? ಹೆಂಡತಿ ಚಂದ್ರಮತಿ ಮತ್ತು ಮಗ ಲೋಹಿತಾಶ್ವನನ್ನು ಬ್ರಾಹ್ಮಣನೊಬ್ಬನಿಗೆ ಮಾರಿದ ಹರಿಶ್ಚಂದ್ರ ಮಹಾರಾಜ ಕೊನೆಗೆ ತನ್ನನ್ನೇ ಮಾರಿಕೊಂಡು ಮಸಣದ ಕಾವಲುಗಾರನಾಗುವ ದುರ್ಭರ ಪ್ರಸಂಗ. ಚಂದ್ರಮತಿ ಮತ್ತು ಲೋಹಿತಾಶ್ವ ಬ್ರಾಹ್ಮಣನ ಮನೆಯ ಸೇವಕರಾಗಿ ದಿನಗಳೆಯುತ್ತಾರೆ. ಅಲ್ಲಿನ ದನಕರುಗಳಿಗೆ ಉಣಿಸಲು ಹುಲ್ಲು ಕತ್ತರಿಸಿ ತರುವುದು ಲೋಹಿತಾಶ್ವನ ಕೆಲಸ. 'ಕೆಲದ ಮೆಳೆಯೊತ್ತಿನೊಳಗಿರ್ದ ಹುತ್ತಿನೊಳುನಳ। ನಳಿಸಿ ಕೋಮಲತೆಯಿಂ ಕೊಬ್ಬಿ ಕೊನೆವಾಯ್ದುಕಂ। ಗಳವಟ್ಟು ಬೆಳೆದೆಳೆಯ ದರ್ಭೆಯಂ ಕಂಡು ಹಾರಯಿಸಿ...' ಅಡವಿಯಲ್ಲಿ ಒಂದೆಡೆ ಹುತ್ತದ ಮೇಲೆ ಹುಲುಸಾಗಿ ಬೆಳೆದಿದ್ದ ದರ್ಭೆಯ ಹುಲ್ಲು ಲೋಹಿತಾಶ್ವನ ಮನಸ್ಸನ್ನು ಸೆಳೆಯುತ್ತದೆ. ಹುಲ್ಲು ತೆಗೆಯುತ್ತಿರುವಾಗಲೇ ಹಾವು ಕಚ್ಚಿ ಆತ ಅಸುನೀಗುತ್ತಾನೆ. 'ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ ಮನನೊಂದಿದೇಕೆ ತಳುವಿದನೆನ್ನ ಕಂದನೆಂದೆನುತ ಸುಯ್ಯುತ್ತ ಮರುಗುತ್ತ ಬಸಿರಂ ಹೊಸೆದು ಕೊನೆವೆರಳ ಮುರಿದುಕೊಳುತ...' ಮರುಗುವ ಚಂದ್ರಮತಿಗೆ, ಮಗ ಸಾಯಲು ಕಾರಣವೇನು ಎಂಬುದೂ ಗೊತ್ತಾಗಿಬಿಡುತ್ತದೆ. 'ಮರದ ಕೆಲದ ಹುತ್ತಿನ ಹುಲ್ಲ ಕೊಯ್ಯೆ ಕೈಯ ನೂಕಿ ಫಣಿಯಗಿಯೆ...' ಎಂದು ಲೋಹಿತಾಶ್ವನೊಡನೆ ಹೋಗಿದ್ದ ಇತರ ಹುಡುಗರು ಬಂದು ವರದಿಯೊಪ್ಪಿಸುತ್ತಾರೆ. ಚಂದ್ರಮತಿಯ ಪ್ರಲಾಪ ಮುಗಿಲು ಮುಟ್ಟುತ್ತದೆ. ಕೇಳುವ, ಓದುವ ನಮಗೂ ಕರುಳು ಕಿತ್ತುಬಂದಂತಾಗುತ್ತದೆ.

ಹುಲ್ಲಿನ ಪ್ರಾಮುಖ್ಯದ ಇನ್ನೊಂದು ಉಜ್ವಲ ಇತಿಹಾಸವೆಂದರೆ ಚಾಣಕ್ಯ-ಚಂದ್ರಗುಪ್ತರ ಕಥೆ. ಸಂಕ್ಷಿಪ್ತವಾಗಿ ಆ ಪ್ರಸಂಗ ಹೀಗಿದೆ: ರಾಜ ಧನಾನಂದನಿಂದ ಅವಮಾನಗೊಂಡ ಚಾಣಕ್ಯನು ನಡೆದುಕೊಂಡು ಹೋಗುತ್ತಿರುತ್ತಾನೆ. ದಾರಿಯಲ್ಲಿದ್ದ ಒಣಗಿದ, ಬೇರುಬಿಟ್ಟ ಹುಲ್ಲು ಅವನ ಕಾಲಿಗೆ ಚುಚ್ಚುತ್ತದೆ. ಅದರಿಂದ ಅವನಿಗೆ ನೋವು ಉಂಟಾಗುತ್ತದೆ. ಮೊದಲೇ ಮಾನಸಿಕವಾಗಿ ಜರ್ಜರಿತನಾಗಿದ್ದವನನ್ನು ಈ ಭೌತಿಕ ನೋವು ಕೆರಳಿಸುತ್ತದೆ. ಕೋಪಗೊಂಡ ಚಾಣಕ್ಯನು ಉರಿಯುತ್ತಿರುವ ಬಿಸಿಲಿನಲ್ಲೇ ನಿಂತು ಹುಲ್ಲನ್ನು ಬೇರುಸಹಿತ ಕೀಳಲು ಪ್ರಾರಂಭಿಸುತ್ತಾನೆ. ಬೆವರಿಂದ ತೋಯ್ದುಹೋಗುತ್ತಾನೆ. ಅವನ ಆವೇಶ ಎಷ್ಟಿತ್ತೆಂದರೆ ನೋಡ ನೋಡುತ್ತಿದ್ದಂತೆ ಆ ಪ್ರದೇಶದಲ್ಲಿದ್ದ ಹುಲ್ಲನ್ನೆಲ್ಲ ಕಿತ್ತು ತೆಗೆದಿರುತ್ತಾನೆ! ಈ ದೃಶ್ಯವನ್ನು ಹತ್ತಿರದ ಕಟ್ಟಡದ ಕಿಟಕಿಯಿಂದ ನೋಡುತ್ತಿದ್ದ ಚಂದ್ರಗುಪ್ತನಿಗೆ ಚಾಣಕ್ಯನಲ್ಲಿ ಆಸಕ್ತಿ ಹುಟ್ಟುತ್ತದೆ. ಅವನು ಚಾಣಕ್ಯನ ಬಳಿ ಬಂದು ಮಾತನಾಡುತ್ತಾನೆ. ಇಬ್ಬರೂ ಸೇರಿ ಉದ್ದಿಶ್ಯ ಸಾಧಿಸಲು ನಿರ್ಧರಿಸುತ್ತಾರೆ. ಚಾಣಕ್ಯನು ನಿರ್ಮೂಲನ ಮಾಡಿದ್ದು ಹುಲ್ಲನ್ನು. ಅವನಿಂದ ಸ್ಫೂರ್ತಿ, ಮಾರ್ಗದರ್ಶನ ಮತ್ತು ಶಿಕ್ಷಣ ಪಡೆದ ಚಂದ್ರಗುಪ್ತನು ನಿರ್ಮೂಲನ ಮಾಡಿದ್ದು ಇಡೀ ನಂದ ವಂಶವನ್ನು!

ಹಿಸ್ಟರಿಯಲ್ಲಷ್ಟೇ ಅಲ್ಲ, ಸ್ಪೋರ್ಟ್ಸ್‌ನಲ್ಲೂ ಹುಲ್ಲು ಬರುತ್ತದೆ. ವಿಂಬಲ್ಡನ್ ಮತ್ತು ಫ್ರೆಂಚ್ ಓಪನ್ ಇವೆರಡೂ ಯುರೋಪ್‌ನಲ್ಲಿ ನಡೆಯುವ, ಜಗತ್ತಿನ ಗಮನ ಸೆಳೆಯುವ ಟೆನ್ನಿಸ್ ಪಂದ್ಯಾವಳಿಗಳು; ಅವುಗಳದೊಂದು ಮುಖ್ಯ ವ್ಯತ್ಯಾಸವಿದೆ, ಏನು? ಎಂದು ಯಾರಾದರೂ ನಿಮಗೆ ಸಾಮಾನ್ಯಜ್ಞಾನ ಪ್ರಶ್ನೆ ಕೇಳಿದರೆ ನೆನಪಿಡಬೇಕಾದ್ದು ಹುಲ್ಲನ್ನೇ. ಹೌದು, ವಿಂಬಲ್ಡನ್ (ಮತ್ತು ಯುಎಸ್ ಓಪನ್ ಕೂಡ) ಹುಲ್ಲುಮೈದಾನದಲ್ಲಿ ನಡೆಯುವ ಟೂರ್ನಮೆಂಟ್ ಆದರೆ, ಫ್ರೆಂಚ್ ಓಪನ್‌ನದು ಕೆಂಪುಮಣ್ಣಿನ ಮೈದಾನ. ಕ್ರಿಕೆಟ್ ಕ್ರೀಡಾಂಗಣದಲ್ಲಿ ಹುಲ್ಲಿನ ಪ್ರಮಾಣ ಆಟದ ಮೇಲೆ ಎಷ್ಟು ಪರಿಣಾಮ ಬೀರುತ್ತದೆಯೆಂಬುದನ್ನು ಆಟದ ವಿಶ್ಲೇಷಣೆಯಲ್ಲಿ ನೋಡಬೇಕು. ಸಿಂಗಲ್ಸ್, ಡಬಲ್ಸ್ ರನ್ನುಗಳನ್ನು ಪಡೆಯಲು ಹುಲ್ಲು ಅಡ್ಡಿಮಾಡುತ್ತಿತ್ತು ಎಂದು ಹುಲ್ಲಿನ ಮೇಲೆ ಆಪಾದನೆ ಮಾಡುವವರಿರುತ್ತಾರೆ. ಅಂತೂ ಹುಲ್ಲು ನಾವಂದುಕೊಂಡಷ್ಟು ತೃಣಮಾತ್ರ ವಿಷಯವಲ್ಲ. ವಿಶೇಷವಾದುದೇ.

ಡಿವಿಜಿಯವರದೊಂದು ಕಗ್ಗ ಪದ್ಯದಿಂದಲೇ ಮುಕ್ತಾಯಗೊಳಿಸೋಣ. 'ಇಲ್ಲಿ ಚೆನ್ನಲ್ಲಿ ಚೆನ್ನೆಲ್ಲೊ ಚೆನ್ನೆನುತೆಣಿಸಿ। ಹುಲ್ಲು ಬಯಲೊಂದೆಡೆಯಿನೊಂದಕ್ಕೆ ನೆಗೆದು। ಮೆಲ್ಲದೆಯೆ ಧಾವಿಸುತ ದಣಿವ ಕರುವನು ಪೋಲ್ತೊ। ಡೆಲ್ಲಿಯೋ ಸುಖ ನಿನಗೆ- ಮಂಕುತಿಮ್ಮ...' ವಿಶಾಲವಾದ ಹುಲ್ಲ ಬಯಲಲ್ಲಿ, ಆಕಳ ಕರು ಥಂಗನೆ ನೆಗೆಯುತ್ತ ಒಳ್ಳೆಯ ಹುಲ್ಲು ಇಲ್ಲಿದೆ, ಓ ಅಲ್ಲಿ ಚೆನ್ನಾಗಿದೆ, ಅಥವಾ ಇನ್ನೂ ಎಲ್ಲೋ ಚೆನ್ನಾಗಿರಬಹುದು... ಎಂದು ಯೋಚಿಸಿ, ಎಲ್ಲಕಡೆ ಓಡಿ, ಕಡೆಗೆ ಎಲ್ಲಿಯೂ ಮೆಲ್ಲದೆಯೇ ಓಡಿಓಡಿ ದಣಿವಂತೆ ಇದೆ ನಿನ್ನ ಪರಿಸ್ಥಿತಿ. ಈ ವಸ್ತುವಿನಲ್ಲಿ ಸುಖವಿದೆ, ಆ ವಸ್ತುವಿನಲ್ಲಿ ಆನಂದವಿದೆ ಅಥವಾ ನೀನು ಹುಡುಕುವ ಸುಖ ಮತ್ತು ಆನಂದ ಬೇರೆ ಯಾವ ವಸ್ತುವಿನಲ್ಲಿದೆಯೋ ಎಂದು ವಸ್ತುವಿನಿಂದ ವಸ್ತುವಿಗೆ ವಿಷಯದಿಂದ ವಿಷಯಕ್ಕೆ ನೆಗೆನೆಗೆದು ದಣಿಯುತ್ತಿದ್ದೀ. ನಿನಗಾವುದರೊಳಗೆ ಸುಖ? ನಾವೆಲ್ಲ ಪ್ರಪಂಚವೆಂಬ ಹುಲ್ಲುಗಾವಲಿನಲ್ಲಿ ಅಲೆಯುತ್ತಿರುವ ಕರುಗಳೇ ಅಲ್ಲವೇ?

ಸರಕಾರದ ಕೆಲಸವನ್ನು ಸರಕಾರವೇ ಮಾಡಿದರೆ ಚೆನ್ನ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakavbhat@autoaxle.com

ಬಯೋಕಾನ್ ಸಂಸ್ಥಾಪಕಿಯಾದ ಕಿರಣ್ ಮಜುಂದಾರ್ ಶಾ ಅವರು ಬೆಂಗಳೂರಿನಲ್ಲಿನ ಕಳಪೆ ರಸ್ತೆಗಳು ಮತ್ತು ಕಸ ನಿರ್ವಹಣೆಯ ಬಗ್ಗೆ ಇತ್ತೀಚೆಗೆ ಕಳವಳ ವ್ಯಕ್ತಪಡಿಸಿದ್ದರು. ''ನಾನು ಬಯೋಕಾನ್ ಪಾರ್ಕ್‌ಗೆ ಸಾಗರೋತ್ತರ ಸಂದರ್ಶಕರೊಬ್ಬರನ್ನು ಕರೆದುಕೊಂಡು ಹೋಗಿದ್ದೆ, 'ಇಲ್ಲಿ ರಸ್ತೆಗಳು ಏಕೆ ತುಂಬಾ ಕೆಟ್ಟದಾಗಿವೆ ಮತ್ತು ಸುತ್ತಲೂ ಏಕೆ ತುಂಬಾ ಕಸವಿದೆ? ಇಲ್ಲಿನ ಸರಕಾರ ಹೂಡಿಕೆಗೆ ಬೆಂಬಲ ನೀಡಲು ಬಯಸುವುದಿಲ್ಲವೇ?' ಎಂದು ನನ್ನ ಅತಿಥಿಗಳು ಕೇಳಿದರು. ನಾನು ಈಗಷ್ಟೇ ಚೀನಾದಿಂದ ಬಂದಿದ್ದೇನೆ, ಔದ್ಯಮಿಕ ವಾತಾವರಣ ಭಾರತಕ್ಕೆ ಅನುಕೂಲವಾಗಿರುವಾಗ, ಸರಕಾರಗಳು ತಮ್ಮ ಕಾರ್ಯವನ್ನು ಸರಿಯಾಗಿ ಮಾಡಿ ಉದ್ದಿಮೆಗಳಿಗೆ ಪೂರಕ ವಾತಾವರಣವನ್ನು ನಿರ್ಮಿಸಲು ಏಕೆ ಸಾಧ್ಯವಾಗುತ್ತಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ'' ಎಂದು ಅವರು ತಮ್ಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದರು. ಇನ್ಫೋಸಿಸ್‌ನ ಮಾಜಿ ಅಧಿಕಾರಿ, ಚಿಂತಕ ಮೋಹನ್ ದಾಸ್ ಪೈ ಅವರು ಕಿರಣ್ ಮಜುಂದಾರ್ ಶಾ ಅವರಿಗೆ ಬೆಂಬಲವಾಗಿ ನಿಂತರು. ಈಗ ಅಂತ ಅಲ್ಲ, ಕಿರಣ್ ಮಜುಂದಾರ್ ಶಾ ಮತ್ತು ಮೋಹನ್ ದಾಸ್ ಪೈ ಅವರು ಈ ತರಹದ ವಿಷಯದಲ್ಲಿ ಸರಕಾರದ ಕಿವಿಹಿಂಡುವ ಕೆಲಸವನ್ನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದಾರೆ.

ಆಗಿದ್ದು ಇಷ್ಟೇ, ಸರಕಾರದ ಮಂತ್ರಿಮಹೋದಯರೆಲ್ಲ ನಿದ್ದೆಯಿಂದ ಎದ್ದವರಂತೆ ಒಬ್ಬರಾದ ಮೇಲೆ ಒಬ್ಬರಂತೆ ಸಮರ್ಥನೆಗಿಳಿದರು. ಕಾಂಗ್ರೆಸ್ ಆಡಳಿತದಲ್ಲಿ ನಗರದ ಮೂಲಸೌಕರ್ಯಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಕ್ಕಾಗಿ, 'ಅವರಿಗೆ ರಾಜ್ಯ ಸರಕಾರದ ವಿರುದ್ಧ ವೈಯಕ್ತಿಕ ಕಾರ್ಯಸೂಚಿ ಇದೆ' ಎಂದು ಆರೋಪಿಸಲಾಯಿತು. 'ಅದೆಲ್ಲ ಸುಳ್ಳು, ನಾವು ಹಿಂದಿನ ಬಿಜೆಪಿ ಮತ್ತು ಜೆಡಿಎಸ್ ಸರಕಾರಗಳಿದ್ದಾಗಲೂ ನಮ್ಮ ನಗರದಲ್ಲಿ ಹದಗೆಡುತ್ತಿರುವ ಮೂಲಸೌಕರ್ಯಗಳ ಕುರಿತು ಟೀಕಿಸಿದ್ದೇವೆ. ನಮ್ಮ ಕಾರ್ಯಸೂಚಿ ಸ್ಪಷ್ಟವಾಗಿದೆ, ಬೆಂಗಳೂರನ್ನು ಸ್ವಚ್ಛಗೊಳಿಸುವುದು ಮತ್ತು ರಸ್ತೆಗಳನ್ನು ರಿಪೇರಿ ಮಾಡುವುದಷ್ಟೇ ನಮ್ಮ ಕಾಳಜಿಯಾಗಿದೆ' ಎಂದು ಶಾ ಮತ್ತು ಮೋಹನ್ ದಾಸ್ ಪೈ ಪ್ರತಿಕ್ರಿಯಿಸಿದರು.

''ಇಲ್ಲಿ ವ್ಯಾಪಾರ ಆರಂಭಿಸಿದವರು ಬೆಳೆದಿದ್ದಾರೆ. ದೊಡ್ಡದಾಗಿ ಬೆಳೆದ ನಂತರ, ತಾವು ಯಾವ ಹಂತದಿಂದ ಈಗ ಯಾವ ಹಂತಕ್ಕೆ ಬೆಳೆದಿದ್ದೇವೆ ಎಂಬುದನ್ನು ಮರೆತಿದ್ದಾರೆ. ನೀವು ಬೇರನ್ನು ಮರೆತರೆ ಹಣ್ಣು ಸಿಗುವುದಿಲ್ಲ, ಆದರೆ ಕೆಲವರು ಇದನ್ನೆಲ್ಲ ಮರೆತಿದ್ದಾರೆ ಮತ್ತು ಟ್ವೀಟ್ ಮಾಡುವ ಮೂಲಕ ಈಗ ಸರಕಾರವನ್ನು ಟೀಕಿಸುತ್ತಿದ್ದಾರೆ'' ಎಂದು ನಗರಾಭಿವೃದ್ಧಿ ಸಚಿವರೂ ಆದ ಉಪಮುಖ್ಯಮಂತ್ರಿ ಶಿವಕುಮಾರ್ ಅವರು ತಮ್ಮ ಪ್ರತಿಕ್ರಿಯೆ ನೀಡಿದರು. ''ನಾವು ಎಲ್ಲಾ ಟೀಕೆಗಳನ್ನು ಸ್ವಾಗತಿಸುತ್ತೇವೆ, ಟೀಕೆಗಳು ಪ್ರಜಾಪ್ರಭುತ್ವದ ಮೌಲ್ಯವನ್ನು ಹೆಚ್ಚಿಸುತ್ತವೆ. ಆದರೆ ಕೆಲವರು ಅದನ್ನು ಅತಿಯಾಗಿ ಮಾಡುತ್ತಿದ್ದಾರೆ'' ಎಂದು ಟೀಕಾಕಾರರನ್ನು ತಿವಿದರು.

ಗೃಹ ಸಚಿವ ಜಿ.ಪರಮೇಶ್ವರ್ ಅವರು ನಗರದ ಮೂಲಸೌಕರ್ಯಗಳ ಕುರಿತಾದ ಉದ್ದಿಮೆದಾರರ ಹೇಳಿಕೆಗಳ ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿದರು. ''ಟೀಕಿಸಬೇಡಿ ಎಂದು ನಾವು ಹೇಳುತ್ತಿಲ್ಲ, ಏಕೆಂದರೆ ಅವರು ನಮ್ಮನ್ನು ಎಚ್ಚರಿಸುವ ಹಕ್ಕನ್ನು ಹೊಂದಿರುತ್ತಾರೆ, ಆದರೆ ಅದರ ಪರಿಣಾಮ ಏನು ಎಂದು ಅವರು ಯೋಚಿಸಬೇಕು. ಡಾ.ಕಿರಣ್ ಮಜುಂದಾರ್ ಶಾ ಅವರ ಹೇಳಿಕೆಯು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಉತ್ಸುಕರಾಗಿರುವವರಿಗೆ ಯಾವ ಸಂದೇಶವನ್ನು ರವಾನಿಸುತ್ತದೆ ಎಂಬುದು ನಮ್ಮ ಕಳವಳವಾಗಿದೆ'' ಎಂದು ಅವರು ಹೇಳಿದರು. ಸಚಿವ ಪ್ರಿಯಾಂಕ್ ಖರ್ಗೆ, ''ಕಿರಣ್ ಶಾ ಅವರ ವಿದೇಶಿ ಅತಿಥಿಗಳು ಬೆಂಗಳೂರಿನ ಯಾವ ಭಾಗವನ್ನು ನೋಡಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೋ ತಿಳಿಯದು, ಬೆಂಗಳೂರಿನ ಸಂಪೂರ್ಣ ಚಿತ್ರವನ್ನು ಅವರು ನೋಡದಿರಬಹುದು; ಆದರೆ, ನಗರದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು ವೇಗವಾಗಿ ನಡೆಯುತ್ತಿವೆ'' ಎಂದು ತಮ್ಮ ದನಿ ಸೇರಿಸಿದರು.

ಕೆಲವು ನೆಟ್ಟಿಗರು ಕಿರಣ್ ಮಜುಂದಾರ್ ಶಾ ಮತ್ತು ಮೋಹನ್ ದಾಸ್ ಪೈ ಬಗ್ಗೆ ವಿವಾದ ಪ್ರಾರಂಭವಾದಾಗಿನಿಂದ ಅವರ 'ಗುಜರಾತಿ' ಮತ್ತು 'ಕೊಂಕಣಿ' ಮೂಲದ ಬಗ್ಗೆ ಪದೇ ಪದೆ ಉಲ್ಲೇಖಿಸಿದರು. ''ನಾವಿಬ್ಬರೂ ಬೆಂಗಳೂರಿನಲ್ಲಿಯೇ ಜನಿಸಿ, ಇಲ್ಲಿಯೇ ಬೆಳೆದವರಾಗಿದ್ದೇವೆ. ನಮ್ಮ ಪ್ರೀತಿಯ ಬೆಂಗಳೂರು ನಗರವನ್ನು ಉಳಿಸಲು, ಬೆಳೆಸಲು ಸಾಕಷ್ಟು ಸಹಾಯ ಮಾಡಿದ್ದೇವೆ. ನಮ್ಮನ್ನೇ ಹೊರಗಿನವರು ಎಂದು ಕರೆಯುವುದಾದರೆ, ನಿಜವಾದ ಬೆಂಗಳೂರಿಗರು ಯಾರು?'' ಎಂದು ಮೋಹನ್ ದಾಸ್ ಪೈ ಕೇಳಿದರು. ''ಇದು ಅನಾರೋಗ್ಯದ ಮನಸ್ಥಿತಿಯನ್ನು ತೋರಿಸುತ್ತವೆ. ಬೆಂಗಳೂರು ನಮ್ಮ ನಗರ, ಈ ನಗರದ ಅಭಿವೃದ್ಧಿಗಾಗಿ ನಾವು ಏನು ಮಾಡಿದ್ದೇವೆ ಎಂಬುದು ಜನರಿಗೆ ಚೆನ್ನಾಗಿ ತಿಳಿದಿದೆ'' ಎಂದರು. ಕಿರಣ್ ಮಜುಂದಾರ್ ಶಾ ಅವರು ತಮ್ಮನ್ನು 'ಗುಜರಾತಿ' ಎಂದು ಕರೆದಿರುವ ಪೋಸ್ಟ್‌ಗಳಿಗೆ ಪ್ರತಿಕ್ರಿಯಿಸುತ್ತಾ ''ನೀವು ಅಂದುಕೊಂಡಿದ್ದಕ್ಕಿಂತ ಹೆಚ್ಚು ನಾನು ಕನ್ನಡಿಗಳಾಗಿದ್ದೇನೆ, ನಾನು ಈ ಮಣ್ಣಿನ ಹೆಮ್ಮೆಯ ಮಗಳು, ನಾನು ಬೆಂಗಳೂರಿನಲ್ಲಿಯೇ ಜನಿಸಿದ್ದು, ನನ್ನ ಊರಿನ ಬಗ್ಗೆ ನನಗೆ ಹೆಮ್ಮೆ ಇದೆ'' ಎಂದು ಬರೆದುಕೊಂಡಿದ್ದಾರೆ.

ಸಮಾಜದ ಹಲವಾರು ಪ್ರಮುಖ ವ್ಯಕ್ತಿಗಳು, ಉದ್ಯಮದ ಮುಂದಾಳುಗಳು ಹಾಗೂ ಮಾಧ್ಯಮಗಳು, ಕಿರಣ್ ಶಾ ಮತ್ತು ಮೋಹನ್ ದಾಸ್ ಪೈ ಇಬ್ಬರಿಗೂ ಬೆಂಬಲವಾಗಿ ನಿಂತರು. ಕಳೆದ ಕೆಲವು ದಿನಗಳಿಂದ ಕಾಂಗ್ರೆಸ್ಸಿಗರು ಮತ್ತು ಪಕ್ಷದ ಬೆಂಬಲಿಗರು ಕಿರಣ್ ಮಜುಂದಾರ್ ಶಾ, ಮೋಹನ್ ದಾಸ್ ಪೈ ಮತ್ತು ಸುಧಾ ಮೂರ್ತಿ ಅವರ ಮೇಲೆ ದಾಳಿ ನಡೆಸುತ್ತಿದ್ದಾರೆ, ಬಯೋಕಾನ್ 16,500 ಉದ್ಯೋಗಗಳನ್ನು ಸೃಷ್ಟಿಸಿದೆ. ಇನ್ಫೋಸಿಸ್ 3,23,000 ಉದ್ಯೋಗಗಳನ್ನು ಸೃಷ್ಟಿಸಿದೆ. ಉದ್ಯೋಗ ಸೃಷ್ಟಿಕರ್ತರಿಗೆ ಸರಕಾರ ಕೃತಜ್ಞನಾಗಿರಬೇಕು, ಅವರನ್ನು ದ್ವೇಷಿಸಬೇಡಿ ಅಥವಾ ಅಪಹಾಸ್ಯ ಮಾಡಬೇಡಿ ಎಂದು ಅನೇಕ ಜನ ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಭಿಮತ ಹಂಚಿಕೊಂಡರು.

ಈ ಎಲ್ಲ 'ಹಮಾರಿ-ತುಮಾರಿ'ಗಳ ನಡುವೆ, 'ಅವಕಾಶ-ಅನುಮತಿ ಕೊಟ್ಟರೆ ನಾವೇ ರಸ್ತೆಗಳನ್ನು ನಿರ್ಮಿಸುತ್ತೇವೆ ಮತ್ತು ನಿರ್ವಹಿಸುತ್ತೇವೆ' ಎಂದು ಕಿರಣ್ ಮಜುಂದಾರ್ ಶಾ ಹೇಳಿಕೆ ನೀಡಿದರು. ''ಅವರು ಹೊಸ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಬಯಸಿ ನಮ್ಮನ್ನು ಬಂದು ಕೇಳಿದರೆ ನಾವು ಅವರಿಗೆ ರಸ್ತೆಗಳನ್ನು ಸೂಚಿಸುತ್ತೇವೆ, ಅವರಿಗೆ ಸರಕಾರದಿಂದ ಸಂಪೂರ್ಣ ಸಹಕಾರ ಸಿಗಲಿದೆ'' ಎಂದು ಸರಕಾರದ ಪರವಾಗಿ ಹೇಳಲು ಶಿವಕುಮಾರ್ ತಡಮಾಡಲಿಲ್ಲ. ಈ ಕಥೆ ಕೇಳುವಾಗ ನನಗೆ ಕನ್ನಡದ ಎರಡು ನಾಣ್ಣುಡಿಗಳು ನೆನಪಿಗೆ ಬರುತ್ತವೆ. ಮೊದಲನೆಯದು, 'ಕಳೆದು ಹೋದ ಶಾನುಭೋಗರ ಎಮ್ಮೆ ಕಂಡರೂ ಹೇಳಬಾರದು' ಎನ್ನುವುದು. ಮೊದಲು ಪ್ರತಿ ಗ್ರಾಮದಲ್ಲಿ 'ಶಾನುಭೋಗ' ಎನ್ನುವ ಸರಕಾರಿ ಹುದ್ದೆ ಇರುತ್ತಿತ್ತು (ಈಗಲೂ ಇದೆಯೋ ಇಲ್ಲವೋ ಗೊತ್ತಿಲ್ಲ), ಕಂದಾಯ ಇಲಾಖೆಯ ಅಡಿಯಲ್ಲಿ ಬರುವ ಹುದ್ದೆ ಅದು. ಗ್ರಾಮದಲ್ಲಿ ಶಾನುಭೋಗರನ್ನು ಕಂಡರೆ ಎಲ್ಲರಿಗೂ ಗೌರವ. ಊರ ಜನರ ಎಲ್ಲ ಸ್ಥಿರಾಸ್ತಿಗಳ ವಿವರ ಅವರ ಕೈಯಲ್ಲಿರುತ್ತಿತ್ತು. ಆಸ್ತಿ ಕರವನ್ನೂ ಅವರೇ ಸಂಗ್ರಹಿಸುತ್ತಿದ್ದರು. ಹಾಗಾಗಿ, ಶಾನುಭೋಗರ ಮಾತು ಅಂದ್ರೆ ಹಳ್ಳಿಯಲ್ಲಿ ಸುಗ್ರೀವಾಜ್ಞೆ ಇದ್ದಹಾಗೆ ಇರುತ್ತಿತ್ತು. ಊರ ಜನರಿಗೆ ತಹಶೀಲ್ದಾರನೂ, ಡಿ.ಸಿ.ಯೂ ಎಲ್ಲವೂ ಶಾನುಭೋಗರೇ ಆಗಿರುತ್ತಿದ್ದರು. ಸಾಮಾನ್ಯವಾಗಿ ಹಳ್ಳಿಯಲ್ಲೇ ವಾಸಮಾಡುತ್ತಿದ್ದ ಶಾನುಭೋಗರ ಮನೆಯ ಎಮ್ಮೆ ಒಮ್ಮೆ ಕಾಣೆಯಾಯಿತು. ದೂರದ ಊರಿಂದ ಬಂದ ಒಬ್ಬ, ''ನಿಮ್ಮ ಎಮ್ಮೆಯನ್ನು ಅಲ್ಲೆಲ್ಲೋ ನೋಡಿದ ಹಾಗಾಯಿತು'' ಎಂದ; ಆತ ಅಷ್ಟು ಹೇಳಿದ್ದೇ ತಡ, ''ಹಾಗಾದರೆ ನೀನೇ ಒಂಚೂರು ಹೋಗಿ ತಂದು ನಮ್ಮನೆ ಕೊಟ್ಟಿಗೆಯಲ್ಲಿ ಕಟ್ಟಿಬಿಡು'' ಎನ್ನುವ ಆಜ್ಞೆಯಾಯಿತು ಶಾನುಭೋಗರಿಂದ. ಅಲ್ಲಿಂದ 'ಶಾನುಭೋಗರ ಎಮ್ಮೆ ನೋಡಿದ್ದೆ ಎಂದು ಹೇಳಿದ್ದೇ ತಪ್ಪಾಯಿತು' ಎನ್ನುವ ನಾಣ್ಣುಡಿ ಬಂದಿರಬೇಕು. ಇದೇ ಧಾಟಿಯ ಇನ್ನೊಂದು ನಾಣ್ಣುಡಿಯಿದೆ- 'ಮದುವೆಯಾಗೋ ಗುಂಡ ಅಂದ್ರೆ ನೀನೇ ನನ್ನ ಹೆಂಡ್ತಿ ಆಗು ಅಂದ' ಅಂತ. ಏನೋ ಕಾಳಜಿಯಿಂದ ಆಕೆ ಹೇಳುವ ಮಾತು, ''ವಯಸ್ಸಾಗ್ತಾ ಬಂತು, ನೀನು ಮದುವೆ ಯಾಕೆ ಮಾಡ್ಕೋಬಾರ್ದು?'' ಅಂತ. ಅದಕ್ಕೆ ಆತ ಹೇಳಿದ ಮಾತು, ''ಹೌದಲ್ವ! ನೀನೇ ಯಾಕೆ ನನಗೆ ಹೆಂಡತಿಯಾಗಬಾರದು?'' ಅಂತ. ಅಯ್ಯೋ ದೇವ್ರೇ! ಈತನಿಗೆ ನಾನು ಮದುವೆಯಾಗು ಎಂದು ಹೇಳಿದ್ದೇ ತಪ್ಪಾಯ್ತಲ್ಲ ಅನಿಸಿರಬೇಕು ಆಕೆಗೆ. ನೀವು ರಸ್ತೆ ಮಾಡುವುದಾದರೆ ನಮ್ಮ ಸಹಕಾರವಿದೆ ಎನ್ನುವ ಸರಕಾರದ ಮಾತು ಈ ನಾಣ್ಣುಡಿಗಳಿಗೆ ಸರಿಯಾಗಿ ಹೊಂದಾಣಿಕೆಯಾಗುತ್ತದೆ.

ಸಮಾಜದ ಸಂಪನ್ಮೂಲಗಳನ್ನು ಬಳಸಿಕೊಂಡು ವ್ಯಾಪಾರ ವ್ಯವಹಾರ ಮಾಡಿ ಲಾಭಗಳಿಸುವ ಎಲ್ಲ ಸಂಸ್ಥೆಗಳೂ, ತಮ್ಮ ಲಾಭದ ಒಂದಿಷ್ಟು ಭಾಗವನ್ನು ಸಮಾಜಕ್ಕೇ ತಿರುಗಿ ನೀಡುವ ರೂಢಿಯಿಟ್ಟುಕೊಂಡಿವೆ. ಹೀಗೆ, ಕಾರ್ಪೊರೇಟ್ ಸಂಸ್ಥೆಗಳು ಸಾಮಾಜಿಕ ಜವಾಬ್ದಾರಿಯ ಅಡಿಯಲ್ಲಿ (ಸಿಎಸ್‌ಆರ್) ನೀಡುವ ಹಣ, ಸರಕಾರಕ್ಕೆ ಕೊಡುವ ತೆರಿಗೆ ಮುಂತಾದ ಪಾವತಿಗಳ ಹೊರತಾಗಿರುತ್ತದೆ. ಈ ಕುರಿತು ಕಂಪನಿಗಳ ಕಾಯ್ದೆ 1956ಕ್ಕೆ ಬದಲಾವಣೆ ತಂದು, ಪ್ರತ್ಯೇಕವಾದ ನಿಯಮಗಳನ್ನೂ ರೂಪಿಸಲಾಗಿದೆ. ಹಾಗಾಗಿ, ಸಂಸ್ಥೆಗಳಿಗೆ ಈ ಕೊಡುಗೆಗಳು ಈಗ ಐಚ್ಛಿಕವಾಗಿ ಉಳಿದಿಲ್ಲ, ಕಡ್ಡಾಯವೇ ಆಗಿದೆ. ಅದರಂತೆ, ವರ್ಷಂಪ್ರತಿ ಇಂಥ ಸಂಸ್ಥೆಗಳಿಂದ ಸಾವಿರಾರು ಕೋಟಿಗಳಷ್ಟು ಬಹಳ ದೊಡ್ಡ ಪ್ರಮಾಣದ ಹಣ ಸಮಾಜ ಸುಧಾರಣೆಗಾಗಿ ಹರಿದುಬರುತ್ತದೆ. 1500 ಕಂಪನಿಗಳಿಂದ, ಸುಮಾರು ಒಂದೂವರೆ ಸಾವಿರ ಕೋಟಿ ರುಪಾಯಿಗಳಷ್ಟು ಹಣ ಪ್ರತಿವರ್ಷ ಕರ್ನಾಟಕದಲ್ಲಿ ವ್ಯಯಿಸಲ್ಪಡುತ್ತದೆ.

ರಾಜ್ಯದ ಅತಿದೊಡ್ಡ ಐಟಿ ಕಂಪನಿಗಳಲ್ಲಿ ಒಂದಾಗಿರುವ ಇನ್ಫೋಸಿಸ್, ಕರ್ನಾಟಕದಲ್ಲಿ ಪ್ರಮುಖವಾಗಿ ಸಿಎಸ್‌ಆರ್ ವೆಚ್ಚ ಮಾಡುವ ಸಂಸ್ಥೆಯಾಗಿದೆ. ಇದರ ಸಿಎಸ್‌ಆರ್ ಅಂಗ ಸಂಸ್ಥೆಯಾದ ಸುಧಾ ಮೂರ್ತಿಯವರ ನೇತೃತ್ವದ 'ಇನ್ಫೋಸಿಸ್ ಫೌಂಡೇಶನ್', ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯ ಉಪಕ್ರಮಗಳ ಮೇಲೆ ಕೊಡುಗೆ ನೀಡುತ್ತದೆ. ಮತ್ತೊಂದು ಪ್ರಮುಖ ಐಟಿ ದೈತ್ಯ ವಿಪ್ರೊ, ಕರ್ನಾಟಕದಲ್ಲಿ ಬಲವಾದ ಸಿಎಸ್‌ಆರ್ ಉಪಸ್ಥಿತಿಯನ್ನು ಹೊಂದಿದೆ ಹಾಗೂ ಶಿಕ್ಷಣಕ್ಕೆ ಗಮನಾರ್ಹ ಕೊಡುಗೆ ನೀಡುತ್ತಿದೆ. ವಿಶೇಷವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಅದು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಕಂಪನಿಯು ಸಮುದಾಯ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿಯ ಮೇಲೆ ಕೇಂದ್ರೀಕರಿಸುವ ಕಾರ್ಯಕ್ರಮಗಳನ್ನು ಹೊಂದಿರುವ, ರಾಜ್ಯದ ಅಗ್ರಗಣ್ಯ ಸಿಎಸ್‌ಆರ್ ಕೊಡುಗೆದಾರ ಎಂದು ಗುರುತಿಸಲ್ಪಟ್ಟಿದೆ. ಹೀಗೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಅನೇಕ ಕಂಪನಿಗಳು, ಸಮಾಜದ ವಿವಿಧ ಸ್ತರಗಳಲ್ಲಿ ಬಹಳ ದೀರ್ಘಕಾಲೀನ ಅಥವಾ ಶಾಶ್ವತ ಬದಲಾವಣೆಗಳನ್ನು ತರಲು ತಮ್ಮ ಹಣವನ್ನು ಸತತವಾಗಿ ವಿನಿಯೋಗಿಸುತ್ತಿವೆ. ದೇಶಾದ್ಯಂತ ಸೇವೆ ಸಲ್ಲಿಸುತ್ತಿರುವ 'ಟಾಟಾ ಟ್ರಸ್ಟ್' ಬಗ್ಗೆಯಂತೂ ಹಿಂದೆ 'ದುಡಿಯಲೊಂದು ಕೈ, ದಾನಕ್ಕೊಂದು ಕೈ- ಟಾಟಾ ಮಾದರಿ' ಎನ್ನುವ ಅಂಕಣ ಬರಹದಲ್ಲಿ ನಾನು ವಿಸ್ತೃತವಾಗಿ ಬರೆದಿದ್ದೆ. ಕಾರ್ಪೊರೇಟ್ ಕಂಪನಿಗಳು ವ್ಯಯಿಸುವ ಸಾವಿರಾರು ಕೋಟಿ ಹಣ, ಹೆಚ್ಚಾಗಿ ಶಿಕ್ಷಣ, ಪರಿಸರ ಸಂರಕ್ಷಣೆ, ನೀರಿನ ಮೂಲಗಳ ಪುನರುತ್ಥಾನ, ವೈದ್ಯಕೀಯ ನೆರವು ಮುಂತಾದ ಕ್ಷೇತ್ರಗಳ ಕಡೆಗೆ ಹೋಗುತ್ತವೆ. ರಾಜ್ಯದಲ್ಲಿ ಬಿದ್ದುಹೋಗಲಿದ್ದ ಅನೇಕ ಸರಕಾರಿ ಶಾಲೆಗಳನ್ನು ಈ ಸಂಸ್ಥೆಗಳು ಎದ್ದುನಿಲ್ಲಿಸಿವೆ. ಶಾಲೆಗಳಲ್ಲಿ ಪಾಯಿಖಾನೆಗಳನ್ನು ನಿರ್ಮಿಸಲಾಗಿದೆ, ರಾಜ್ಯಾದ್ಯಂತ ನೂರಾರು ಕೆರೆಗಳಿಗೆ ಮರುಜೀವ ನೀಡಲಾಗಿದೆ, ಗ್ರಾಮೀಣ ಭಾಗದ ಅನೇಕ ಆಸ್ಪತ್ರೆಗಳಿಗೆ ಕಾಯಕಲ್ಪ ಒದಗಿಸಲಾಗಿದೆ. ಹಳ್ಳಿಯ ಅನೇಕ ಶಾಲೆಗಳು ಕಂಪ್ಯೂಟರ್‌ಗಳನ್ನು ಕಾಣುವಂತಾಗಿದೆ.

ಇದೇ ರೀತಿ ಕಿರಣ್ ಶಾ ಅವರು ಮುನ್ನಡೆಸುತ್ತಿರುವ ಬಯೋಕಾನ್ ಸಂಸ್ಥೆಯವರೂ ಬೆಂಗಳೂರಿನ ಹಾಗೂ ಇತರ ಸ್ಥಳಗಳ ಅಭಿವೃದ್ಧಿಗೆ ಬಹಳ ದೊಡ್ಡ ಪ್ರಮಾಣದ ನೆರವನ್ನು ನೀಡುತ್ತಾ ಬಂದಿದ್ದಾರೆ ಎನ್ನುವುದನ್ನು ಮರೆಯುವ ಹಾಗಿಲ್ಲ. ಆದರೆ ಅವರು, ''ನಾನೇ ಕೆಲವು ರಸ್ತೆಗಳನ್ನು ನಿರ್ಮಾಣಮಾಡಿ ನಿರ್ವಹಿಸುತ್ತೇನೆ'' ಎಂದಿರುವುದು ಯಾಕೋ ಸರಿಯೆನಿಸುತ್ತಿಲ್ಲ. ಹೀಗೆ ರಸ್ತೆ ನಿರ್ಮಾಣ-ನಿರ್ವಹಣೆ, ನೀರಿನ ಪೂರೈಕೆ ಮುಂತಾದ, ಸರಕಾರ ಮಾಡಲೇಬೇಕಾದ ಕೆಲಸವನ್ನೂ ಖಾಸಗಿ ಕಂಪನಿಗಳು ಮಾಡಲು ಶುರುಮಾಡಿದರೆ, ಸರಕಾರ ನಡೆಸುವವರಿಗಿಂತ ಸಂತೋಷ ಪಡುವವರು ಯಾರಿರುತ್ತಾರೆ ಹೇಳಿ? ಹೀಗೆ ಎಲ್ಲವನ್ನೂ ಖಾಸಗಿ ಸಂಸ್ಥೆಗಳೇ ಮಾಡುತ್ತಾ ಸಾಗಿದರೆ, ನಾಳೆ ಸರಕಾರಿ ನೌಕರರಿಗೆ ಸಂಬಳ ನೀಡುವ ಕೆಲಸವನ್ನೂ ಸಿಎಸ್ ಆರ್ ಯೋಜನೆಯ ಅಡಿಯಲ್ಲಿ ಸರಕಾರಗಳು ತಂದರೂ ಆಶ್ಚರ್ಯಪಡಬೇಕಿಲ್ಲ.

ಅಷ್ಟೇ ಅಲ್ಲದೆ, ಕಾರ್ಪೊರೇಷನ್‌ಗಳು ಅಥವಾ ಸರಕಾರಗಳು ಮಾಡಬೇಕಾದ ಕೆಲಸಗಳಲ್ಲಿ ಖಾಸಗಿ ಕಂಪನಿಗಳು ತಮ್ಮ ಹಣ ವಿನಿಯೋಗಿಸಲು ಶುರುವಿಟ್ಟುಕೊಂಡರೆ, ತೆರಿಗೆಯಿಂದ ಬಂದ ಹಣವನ್ನು ಸರಕಾರ ಪುಕ್ಕಟೆ ಗ್ಯಾರಂಟಿಗಳಂಥ ಮತ ವ್ಯಾಪಾರದ ಯೋಜನೆಗಳಿಗೆ ಸುಲಭವಾಗಿ ವಿನಿಯೋಗಿಸಬಹುದಾದ ಸಾಧ್ಯತೆಯಿದೆ. ಅಲ್ಲದೇ, ಬಯೋಕಾನ್ ಕಂಪನಿಯನ್ನು ಉದಾಹರಣೆಯಾಗಿಟ್ಟುಕೊಂಡು, ಈ ತರಹದ ಕೆಲಸವನ್ನು ನೀವೂ ಮಾಡಿ ಎಂದು ಇತರ ಸಂಸ್ಥೆಗಳ ಮೇಲೆ ಸರಕಾರ ಒತ್ತಡ ತರುವ ಸಾಧ್ಯತೆಯೂ ಇರುತ್ತದೆ. ಕಿರಣ್ ಶಾ ಅವರ ಸಂಸ್ಥೆಗಿರುವ ಹಣಕಾಸಿನ ಸುಸ್ಥಿತಿ ಉಳಿದ ಕಂಪನಿಗಳಿಗೂ ಇರಬೇಕಲ್ಲ. ಹಾಗಾಗಿ, ನಿಮ್ಮ ಸಮಾಜ ಸೇವೆಯನ್ನು ನೀವು ಮುಂದುವರಿಸಿ, ಆದರೆ ಸರಕಾರದ ಕೆಲಸವನ್ನು ಸರಕಾರವೇ ಮಾಡಲು ಬಿಡಿ ಎನ್ನುವುದು ಕಿರಣ್ ಮುಜುಂದಾರ್ ಶಾ ಅವರಿಗೆ ನನ್ನ ವಿನಂತಿ. ಒಮ್ಮೆ ಸರಕಾರಗಳು ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡದಿದ್ದಾಗ, ಎಂದಿನಂತೆ ನೀವೆಲ್ಲ ಸೇರಿ ಸರಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ಮುಂದುವರಿಸಬಹುದಂತೆ. ಬದಲಿಗೆ, ಸರಕಾರದ ಕೆಲಸವನ್ನು ನಾವೇ ಮಾಡುತ್ತೇವೆ ಎನ್ನುವ ಹೊಸ ಪರಿಪಾಠಕ್ಕೆ ನಾಂದಿಹಾಡುವುದು ಬೇಡವೇನೋ ಎನ್ನುವುದು ನನ್ನ ಅನಿಸಿಕೆ. ಹೀಗೆ ನನೆಗುದಿಗೆ ಬಿದ್ದಿರುವ ಸರಕಾರದ ಎಷ್ಟು ಕೆಲಸಗಳನ್ನು ಅಂತ ನೀವುಗಳು ಪೂರೈಸಲು ಸಾಧ್ಯ, ಅಲ್ವಾ?

ಇನ್ನು ಸರಕಾರಕ್ಕೆ ಒಂದು ಮಾತು ಹೇಳಲೇಬೇಕು- ಈ ಎಲ್ಲ ದಿಗ್ಗಜ ವಾಣಿಜ್ಯ ಸಂಸ್ಥೆಗಳು, ದಶಕಗಳ ಹಿಂದೆಯೇ ಬೆಂಗಳೂರಿನಲ್ಲಿ ಹೂಡಿಕೆಮಾಡಿ ಬೆಂಗಳೂರಿನ ಹಣೆಬರಹವನ್ನೇ ಬದಲಿಸಿವೆ. ಬೆಂಗಳೂರಿಗೆ ಒಂದು 'ಬ್ರ್ಯಾಂಡ್' ಬರುವಂತೆ ಮಾಡಿವೆ. ರಾಜ್ಯದಲ್ಲಿ ಲಕ್ಷಾಂತರ ನೇರ ಅಥವಾ ಪರೋಕ್ಷ ಉದ್ಯೋಗ ಸೃಷ್ಟಿಮಾಡಿವೆ, ರಾಜ್ಯದಲ್ಲಿ ಹೆಚ್ಚಿನ ಹೂಡಿಕೆಯಾಗುವಂತೆ ಇತರರನ್ನು ಉತ್ತೇಜಿಸುತ್ತಿವೆ. ಹಾಗಾಗಿ ಅವರನ್ನು ಎಲ್ಲರೂ ಗೌರವಿಸಬೇಕು, ಸರಕಾರಗಳು ಹೆಚ್ಚು ಗೌರವಿಸಬೇಕು. ಹೀಗೆ ಸಮಾಜದ ಅಭಿವೃದ್ಧಿಗೆ ದೊಡ್ಡಮಟ್ಟದಲ್ಲಿ ಕೊಡುಗೆ ನೀಡುತ್ತಿರುವ ಈ ಸಂಸ್ಥೆಗಳ ಸ್ಥಾಪಕರುಗಳು ಬೃಹಸ್ಪತಿಗಳಲ್ಲದಿರಬಹುದು; ಆದರೆ, ಸಂಪತ್ತನ್ನು ಸೃಜಿಸಿ ರಾಜ್ಯದ ಬೊಕ್ಕಸ ತುಂಬುತ್ತಿರುವ ಕುಬೇರಂತೂ ಹೌದು ಎನ್ನುವುದನ್ನು ಕೃತಜ್ಞತಾ ಪೂರ್ವಕವಾಗಿ ಸರಕಾರವು ಸ್ಮರಿಸಬೇಕು ಮತ್ತು ಇನ್ನೂ ಹೆಚ್ಚು ಕೊಡುಗೆ ನೀಡುವ ವಾತಾವರಣವನ್ನು ನಿರ್ಮಾಣ ಮಾಡುವುದು ರಾಜ್ಯಸರಕಾರದ ಕರ್ತವ್ಯವಾಗುತ್ತದೆ.

ನೊಬೆಲ್ ಪ್ರಶಸ್ತಿಗೆ ಪ್ರೇರಣೆ: ಶಿವನ ತಾಂಡವನೃತ್ಯ ಕಥಾನಕ!

ವಿಶ್ಲೇಷಣೆ
ಡಾ.ಡಿ.ಸಿ.ನಂಜುಂಡ
vveditoped@gmail.com

2025ರ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಈ ಬಾರಿ ಮೂವರು ಪ್ರಮುಖ ಆರ್ಥಿಕ ತಜ್ಞರು- ನಾರ್ತ್ ವೆಸ್ಟರ್ನ್ ವಿಶ್ವವಿದ್ಯಾಲಯದ ಜೋಯೆಲ್ ಮೊಕಿಯರ್, ಕಾಲೇಜ್ ಡೆ ಫ್ರಾನ್ಸ್ ಮತ್ತು ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನ ಫಿಲಿಪ್ ಆಗಿಯನ್, ಹಾಗೂ ಬ್ರೌನ್ ವಿಶ್ವವಿದ್ಯಾಲಯದ ಪೀಟರ್ ಹೋಯಿಟ್- ಇವರಿಗೆ ನೀಡಲಾಗಿದೆ. ಮೊಕಿಯರ್ ಅರ್ಧ ಬಹುಮಾನ ಪಡೆದಿದ್ದು, ಆಗಿಯನ್ ಮತ್ತು ಹೋಯಿಟ್ ಉಳಿದ ಅರ್ಧವನ್ನು ಹಂಚಿಕೊಂಡಿದ್ದಾರೆ. ಇವರು ನೀಡಿದ ಸಂಶೋಧನೆಗಳ ಸಾರವು ಒಂದೇ: ಸಮಾಜದ ಪ್ರಗತಿಯು ಹಳೆಯದನ್ನು ಹಿಡಿದುಕೊಳ್ಳುವುದರಿಂದ ಅಲ್ಲ, ಹೊಸದನ್ನು ಹುಟ್ಟುಹಾಕಲು ಹಳೆಯದನ್ನು ನಾಶ ಮಾಡುವುದರಿಂದ ಸಾಧ್ಯ. ಇದೇ ಅಂಶವು ಭಾರತೀಯ ತತ್ವಜ್ಞಾನದಲ್ಲಿ ಶಾಶ್ವತವಾಗಿ ಪ್ರತಿಫಲಿಸಿರುವುದನ್ನು ನಾವು ಶಿವನ ತಾಂಡವ ನೃತ್ಯದಲ್ಲಿ ಕಾಣುತ್ತೇವೆ ಎನ್ನುವ ಅಂಶ ಇದೀಗ ಬೆಳಕಿಗೆ ಬಂದಿದೆ. ಅಂದರೆ ಭಾರತೀಯ ಪುರಾಣಕ್ಕೆ ವೈಜ್ಞಾನಿಕ ಲೇಪನ.

ನೊಬೆಲ್ ನೀಡಿದ ರಾಯಲ್ ಸ್ವೀಡಿಷ್ ಅಕಾಡೆಮಿ ಈ ಪ್ರಶಸ್ತಿಯನ್ನು 'ನವೀನತೆ ಆಧಾರಿತ ಆರ್ಥಿಕ ಬೆಳವಣಿಗೆಯ ವಿವರಣೆಗಾಗಿ' ನೀಡಿದೆ. ಇವರ ಸಂಶೋಧನೆಗಳು ತಾಂತ್ರಿಕ ಪ್ರಗತಿ, ಜ್ಞಾನ ವ್ಯವಸ್ಥೆ ಮತ್ತು ಸಂಸ್ಥಾತ್ಮಕ ಮುಕ್ತತೆಯ ಮಹತ್ವವನ್ನು ವಿವರಿಸುತ್ತವೆ ಎಂದಿದೆ. ಮೇಲ್ಕಂಡ ಮೂವರು ಆರ್ಥಿಕ ತಜ್ಞರ ಸಮಾಜವು ಬದಲಾವಣೆಯನ್ನು ನಿರಾಕರಿಸಿದರೆ ಅದು ಕ್ರಮೇಣ ಕುಸಿಯುತ್ತದೆ ಎಂಬ ಗಾಢ ಸಂದೇಶವೂ ಇದರಲ್ಲಿ ಇದೆ. ತತ್ತ್ವಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ, ಈ ಪ್ರಶಸ್ತಿ ಹೊಸದರ ಸೃಷ್ಟಿ ಮತ್ತು ಹಳೆಯದರ ವಿನಾಶದಿಂದ ಉಂಟಾಗುವ ನವೀನತೆ ಮೂಲತಃ ಗೌರವದ ಸೂಚನೆಯಾಗಿದೆ. ಇದೇ ಈಗ ಸೃಜನಾತ್ಮಕ ವಿನಾಶ. ಅಂದರೆ ನಾಶದ ಮೂಲಕ ಹೊಸ ಬೆಳವಣಿಗೆ. ಇದು ಶಿವನ ರುದ್ರತಾಂಡವಕ್ಕೆ ಹೋಲುತ್ತದೆ ಎನ್ನುವುದು ಇದೀಗ ಸಂಚಲನೆ ಮೂಡಿಸಿದೆ.

ಹಿಂದೂ ಪೌರಾಣಿಕ ಪರಂಪರೆಯಲ್ಲಿ, ಶಿವನ ಆನಂದ ತಾಂಡವ ಎನ್ನುವುದು ಆನಂದದ ನೃತ್ಯ ಸೃಷ್ಟಿ, ಸ್ಥಿತಿ ಮತ್ತು ಲಯದ ಚಕ್ರವನ್ನು ಪ್ರತಿನಿಧಿಸುತ್ತದೆ. ಶಿವನ ನೃತ್ಯವು ಕೇವಲ ಸಂಹಾರವಲ್ಲ; ಅದು ಪರಿವರ್ತನೆ. ಹಳೆಯ ರೂಪಗಳು ಮುರಿದು ಹೊಸ ರೂಪಗಳು ಹುಟ್ಟುತ್ತವೆ. ಇದೇ ರೀತಿಯಾಗಿ, ಈಗ ನೊಬೆಲ್ ಪಡೆದ ಆಗಿಯನ್ ಮತ್ತು ಹೋಯಿಟ್ ಅವರ 'ಕ್ರಿಯೇಟಿವ್ ಡಿಸ್ಟ್ರಕ್ಷನ್' ಎಂಬ ಸಿದ್ಧಾಂತವು ಹೊಸ ಆವಿಷ್ಕಾರಗಳು, ಹಳೆಯ ಉದ್ಯಮಗಳು ಮತ್ತು ತಂತ್ರಜ್ಞಾನಗಳನ್ನು ನಾಶಮಾಡಿ ಹೊಸ ಪ್ರಗತಿಗೆ ದಾರಿ ಮಾಡಿಕೊಡುತ್ತವೆ ಎಂದು ಹೇಳುತ್ತದೆ. ಈ ಎರಡೂ ಸಂದರ್ಭಗಳಲ್ಲಿ ಸಂಹಾರವು ನಾಶವಲ್ಲ, ಅದು ಪುನರುತ್ಪತ್ತಿಯ ರೂಪ. ರುದ್ರತಾಂಡವ ಹಳೆಯದನ್ನು ಅಳಿಸಿ ಹೊಸದಕ್ಕೆ ದಾರಿ ಮಾಡಿಕೊಡುವ ಕಥೆ. ಶಿವನ ಡಮರುನಾದದಂತೆ, ನವೀನತೆಯು ಸೃಷ್ಟಿಯ ಬೀಜವನ್ನು ಬಿತ್ತುತ್ತದೆ. ಶಿವನ ಕೈಯಲ್ಲಿರುವ ಅಗ್ನಿಯು ಹಳೆಯ ಅಜ್ಞಾನವನ್ನು ನಾಶಮಾಡಿ ಹೊಸ ಬೆಳಕನ್ನು ತಂದಂತೆ, ವಿಜ್ಞಾನ ಮತ್ತು ತಂತ್ರಜ್ಞಾನಗಳು ಕೂಡ ಹಳೆಯದನ್ನು ಕರಗಿಸಿ ಹೊಸ ಮಾರ್ಗಗಳನ್ನು ತೆರೆಯುತ್ತವೆ. ಅರ್ಥಶಾಸ್ತ್ರದ ದೃಷ್ಟಿಯಲ್ಲಿ, ಆವಿಷ್ಕಾರಕಾರರು ಸ್ವತಃ ಶಿವನಂತೆಯೇ ಹಳೆಯ ವ್ಯವಸ್ಥೆಯನ್ನು ಮುರಿದು ಹೊಸ ಭವಿಷ್ಯವನ್ನು ನಿರ್ಮಿಸುವುದು ಎಂದರ್ಥ.

ಆಗಿಯನ್ ಮತ್ತು ಹೋಯಿಟ್ ಅವರ ಸಂಶೋಧನೆ ಆರ್ಥಿಕ ಬೆಳವಣಿಗೆ ಮತ್ತು ತಾಂತ್ರಿಕ ಪ್ರಗತಿಯ ತತ್ವಗಳನ್ನು ವಿವರಿಸುತ್ತದೆ. ಆರ್ಥಿಕ ತಜ್ಞ ಮೊಕಿಯರ್ ಅದರ ಸಾಂಸ್ಕೃತಿಕ ಮೂಲವನ್ನು ಗುರುತಿಸಿದ್ದಾರೆ. ಅವರು ಶಾಶ್ವತ ಪ್ರಗತಿಯ ತುರ್ತು ಮೂರು ಅಂಶಗಳನ್ನು ತಮ್ಮ ಸಂಶೋಧನೆಯಲ್ಲಿ ಸೂಚಿಸಿದ್ದಾರೆ: 1) ಉಪಯುಕ್ತ ಜ್ಞಾನ ಸಂಸ್ಕೃತಿ. ಇದು ನವೀನತೆ, ಸಂಶೋಧನೆ ಮತ್ತು ತತ್ತ್ವಾತ್ಮಕ ತಿಳಿವಳಿಕೆಯನ್ನು ಉತ್ತೇಜಿಸುತ್ತದೆ. 2) ತಾಂತ್ರಿಕ ನಿಪುಣತೆ. ಇದು ತಂತ್ರಜ್ಞಾನ, ಕೈಗಾರಿಕಾ ತಂತ್ರಗಳು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಸುಧಾರಿಸುತ್ತದೆ. 3) ಮುಕ್ತ ಸಂಸ್ಥಾತ್ಮಕ ಪರಿಸರ. ಇದು ನವೀನತೆ, ಪ್ರಾಯೋಗಿಕ ಪ್ರಯತ್ನ ಮತ್ತು ಸ್ವತಂತ್ರ ಚಿಂತನೆಗೆ ಅವಕಾಶ ನೀಡುತ್ತದೆ. ಈ ಮೂರೂ ಅಂಶಗಳು ಸಮನ್ವಯವಾಗಿ ಕೆಲಸ ಮಾಡಿದಾಗ ಮಾತ್ರ ಶಾಶ್ವತ, ಸ್ಥಿರ ಮತ್ತು ಸಮೃದ್ಧ ಬೆಳವಣಿಗೆ ಸಾಧ್ಯವಾಗುತ್ತದೆ. ಸಮುದ್ರಮಂಥನ ಕಥೆಯು ಸಹ ಇದನ್ನೇ ಹೋಲುತ್ತದೆ. ವಿಷದ ನಂತರ ಅಮೃತ ಅಂದರೆ ಪ್ರಗತಿಗಯು ಮೊದಲು ಸಮಸ್ಯೆಯನ್ನು ಉಂಟುಮಾಡುತ್ತದೆ. ಕೊನೆಗೆ ಅದೇ ನಮ್ಮನ್ನು ಉದ್ಧಾರ ಮಾಡುತ್ತದೆ.

ಅರಿವು (ಜ್ಞಾನ), ಕ್ರಿಯೆ (ಕರ್ಮ) ಮತ್ತು ನೀತಿ (ಧರ್ಮ) ಶಿವನ ತಾಂಡವದ ಮೂಲತತ್ತ್ವವೂ ಹೌದು. ಜ್ಞಾನವು ಕ್ರಿಯೆಯಾಗಿ ಪರಿವರ್ತನೆಯಾಗದಿದ್ದರೆ ಅಥವಾ ಕ್ರಿಯೆಗೆ ಧರ್ಮದ ಮಾರ್ಗದರ್ಶನವಿಲ್ಲದಿದ್ದರೆ, ಅಸ್ಥಿರತೆ ಉಂಟಾಗುತ್ತದೆ. ತಜ್ಞ ಮೊಕಿಯರ್ ಹೇಳುವಂತೆ, ತಂತ್ರಜ್ಞಾನ ಇರುವುದು ಮಾತ್ರ ಸಾಕಾಗುವುದಿಲ್ಲ; ಬದಲಾವಣೆಯನ್ನು ಸ್ವೀಕರಿಸುವ ಮತ್ತು ಕಲಿಕೆಯನ್ನು ಗೌರವಿಸುವ ಸಂಸ್ಕೃತಿ ಸಮಾಜಕ್ಕೆ ಬೇಕು. ಇದು ಭಾರತೀಯ ಸಮಾಜದ ನಿಲುವಿಗೆ ಒಪ್ಪುತ್ತದೆ. ನೈತಿಕತೆ ಮತ್ತು ಕೌಶಲದ ಸಮ್ಮಿಲನವೇ ನಿಜವಾದ ಪ್ರಗತಿ. ಪೌರಾಣಿಕ ಕಥೆಗಳಲ್ಲಿ ಅಥವಾ ಆರ್ಥಿಕ ಸಿದ್ಧಾಂತಗಳಲ್ಲಿ, ವಿನಾಶವು ಅಂತ್ಯವಲ್ಲ. ಅದು ಪುನರುತ್ಪತ್ತಿಯ ಪ್ರಾರಂಭ. ಶಿವನ ನೃತ್ಯವು ಅಜ್ಞಾನ ಮತ್ತು ಜಡತೆಯನ್ನು ಕರಗಿಸುತ್ತದೆ. ನೊಬೆಲ್ ಪುರಸ್ಕೃತರು ಹೇಳುವಂತೆ, ಆರ್ಥಿಕತೆಯೂ ಹಳೆಯ ಮೋನೋಪಲಿ, ಅಸಮರ್ಥ ಆಡಳಿತ ಮತ್ತು ಅಪ್ರಸ್ತುತ ವ್ಯವಸ್ಥೆಗಳನ್ನು ಮುರಿಯದಿದ್ದರೆ ಆರ್ಥಿಕ ಬೆಳವಣಿಗೆ ಕುಸಿಯುತ್ತದೆ. ಬದಲಾವಣೆ ಸ್ವೀಕರಿಸದ ಆರ್ಥಿಕತೆಗಳು ಶಕ್ತಿ ಕಳೆದುಕೊಳ್ಳುತ್ತವೆ.

ಈ ವರ್ಷದ ಆರ್ಥಿಕ ನೊಬೆಲ್ ಪ್ರಶಸ್ತಿಯು ನವೀನತೆ ಮತ್ತು ಒಳಗೊಳ್ಳುವಿಕೆಯ ನಡುವಿನ ಸೂಕ್ಷ್ಮ ಸಂಬಂಧವನ್ನೂ ತೋರಿಸುತ್ತದೆ. ಹೊಸ ತಂತ್ರಜ್ಞಾನಗಳು ಬಂದಾಗ ಕೆಲವರು ಲಾಭ ಪಡೆಯುತ್ತಾರೆ. ಇನ್ನು ಕೆಲವರು ಹೊರಗುಳಿಯುತ್ತಾರೆ. ಈ ಬದಲಾವಣೆಯ ಮಧ್ಯೆ ಸಮತೋಲನ ಕಾಯ್ದುಕೊಳ್ಳುವುದು ಮುಖ್ಯ. ನವೀಕರಣವು ವಿಲಕ್ಷಣರನ್ನು ಮತ್ತಷ್ಟು ದೂರ ಮಾಡಬಾರದು. ಇದೇ ತಾಂಡವದ ಸಂದೇಶವೂ ಹೌದು. ಸೃಷ್ಟಿ ಮತ್ತು ಸಂಹಾರದ ನಡುವಿನ ಸಮತೋಲನವೇ ಸ್ಥಿರತೆ. ಶಿವನ ತಾಂಡವವು ಕೇವಲ ದೇವತೆಯ ನೃತ್ಯವಲ್ಲ, ಅದು ಸೃಷ್ಟಿ, ಸ್ಥಿತಿ, ವಿನಾಶ ಮತ್ತು ಪರಿವರ್ತನೆಯ ಸಾಂಕೇತಿಕ ಪ್ರತೀಕವಾಗಿದೆ. ತಾಂಡವದ ಪ್ರತಿ ಚಲನೆಯಲ್ಲೂ ಆರ್ಥಿಕ, ಸಾಮಾಜಿಕ ಮತ್ತು ಮಾನವೀಯ ವಿಚಾರಗಳಿಗೆ ಸಂಬಂಧಿತ ಅರ್ಥವನ್ನು ಕಾಣಬಹುದು. ಉದಾಹರಣೆಗೆ, ಅಗ್ನಿಯು ಶಿವನ ತಾಂಡವದಲ್ಲಿ ಶುದ್ಧೀಕರಣ ಮತ್ತು ಪರಿವರ್ತನೆಯ ಸಂಕೇತವಾಗಿದ್ದು, ಆರ್ಥಿಕ ದೃಷ್ಟಿಯಿಂದ ಇದು ನವೀನತೆ ಮತ್ತು ಹಳೆಯ ಅಸಮರ್ಪಕ ವ್ಯವಸ್ಥೆಗಳ ವಿನಾಶವನ್ನು ಸೂಚಿಸುತ್ತದೆ. ಹಳೆಯ ಆವಿಷ್ಕಾರ ಮತ್ತು ನಿಯಮಗಳನ್ನು ಕರಗಿಸಿ ಹೊಸ ಚೇತನ ಹಾಗೂ ಆರ್ಥಿಕ ಪ್ರಗತಿಯ ಹಾದಿಯನ್ನು ತೆರೆಯುವುದು ಅಗತ್ಯವೆಂದು ಸೂಚಿಸುತ್ತದೆ.

ಡಮರು (ಸೃಷ್ಟಿಯ ನಾದ) ಜ್ಞಾನ ಮತ್ತು ಸಂಶೋಧನೆಯ ಸಂಕೇತವಾಗಿದೆ. ಆರ್ಥಿಕವಾಗಿ ಇದು ಹೊಸ ಆವಿಷ್ಕಾರಗಳು, ಸಂಶೋಧನೆ ಮತ್ತು ವಿಜ್ಞಾನದಿಂದ ಪ್ರಗತಿಯನ್ನು ರೂಪಿಸುವ ಶಕ್ತಿಯ ಪ್ರತೀಕವಾಗಿದೆ. ಶಿವನ ಎತ್ತಿದ ಕಾಲು ಮೋಕ್ಷದ ಸಂಕೇತವಾಗಿ, ಶಿಕ್ಷಣ ಮತ್ತು ಮುಕ್ತತೆಯ ಮೂಲಕ ವ್ಯಕ್ತಿ, ಸಮಾಜ ಮತ್ತು ಆರ್ಥಿಕತೆಯ ಬೆಳವಣಿಗೆಯನ್ನು ಸೂಚಿಸುತ್ತದೆ. ಇದು ಸಂಸ್ಕೃತಿಯ, ತಾಂತ್ರಿಕ ಸಾಮರ್ಥ್ಯದ ಮತ್ತು ಮಾನವ ಸಂಪನ್ಮೂಲದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಕಾಲಡಿಯಲ್ಲಿ ಕುಸಿದ ದೈತ್ಯನು ಅಜ್ಞಾನ ಮತ್ತು ಪಾಪದ ಸಂಕೇತ. ಅಂದರೆ ಹಳೆಯ ಕಾಲದ ಚಿಂತನೆಗಳು. ಇದು ಬದಲಾವಣೆಗೆ ವಿರೋಧಿಸುವ ಜಡ ಮತ್ತು ಅಸಮರ್ಪಕ ವ್ಯವಸ್ಥೆಗಳನ್ನು ಪ್ರತಿನಿಧಿಸುತ್ತದೆ. ಆರ್ಥಿಕವಾಗಿ ಹಳೆಯ ವ್ಯವಸ್ಥೆಗಳನ್ನು ಬದಲಾಯಿಸದೆ ಇರಿಸಿಕೊಳ್ಳುವುದು ಪ್ರಗತಿಗೆ ಅಡ್ಡಿಯಾಗುತ್ತದೆ. ಅಗ್ನಿವಲಯ, ಅರ್ಥಾತ್ ಪ್ರಭಾಮಂಡಲವು ಬ್ರಹ್ಮಾಂಡ ಚಕ್ರದ ಸಂಕೇತವಾಗಿ, ನಿರಂತರ ನವೀನತೆಯ ಚಕ್ರವನ್ನು ಸೂಚಿಸುತ್ತದೆ. ಆರ್ಥಿಕತೆಯಲ್ಲಿ ಇದು ಸದಾ ಸುಧಾರಣೆ, ನವೀನತೆ ಮತ್ತು ಪರಿವರ್ತನೆಯ ಮೂಲಕ ಸದೃಢತೆ ಹಾಗೂ ಸಮೃದ್ಧಿಯನ್ನು ಪಡೆಯಲು ಅಗತ್ಯವೆಂದು ಪ್ರತಿಬಿಂಬಿಸುತ್ತದೆ.

ಶಿವನ ತಾಂಡವದ ಪ್ರತಿ ಸಂಕೇತವೂ ಆರ್ಥಿಕ ಚಿಂತನೆಗೆ ಪಾಠ ನೀಡುತ್ತದೆ. ಹಳೆಯದನ್ನು ಶೋಧಿಸಿ, ಜ್ಞಾನ ಮತ್ತು ನವೀನತೆಯಿಂದ ಹೊಸ ವ್ಯವಸ್ಥೆಗಳನ್ನು ರೂಪಿಸಬೇಕು; ಅಜ್ಞಾನವನ್ನು ನಾಶಗೊಳಿಸಿ ಮುಕ್ತತೆ, ಶಿಕ್ಷಣ ಮತ್ತು ಪರಿವರ್ತನೆಯ ಮೂಲಕ ಸದೃಢ, ಸಮೃದ್ಧ ಆರ್ಥಿಕ ವ್ಯವಸ್ಥೆ ನಿರ್ಮಿಸಬೇಕು. ಇದೇ ತಾಂಡವವು ಸೃಷ್ಟಿ ವಿನಾಶದಲ್ಲಿ ಆಧುನಿಕ ಆರ್ಥಿಕ ತತ್ತ್ವಗಳನ್ನು ಕಾಣಬೇಕು. ಪ್ರಾಚೀನ ಭಾರತೀಯ ತತ್ವಜ್ಞಾನ ಮತ್ತು ಆಧುನಿಕ ಆರ್ಥಿಕ ವಿಜ್ಞಾನ ಒಂದೇ ಸತ್ಯವನ್ನು ಬೇರೆ ಭಾಷೆಯಲ್ಲಿ ಹೇಳುತ್ತಿವೆ.

ಭಾರತದ 1991ರ ಆರ್ಥಿಕ ಸ್ಥಿತಿ ತಾಂಡವ ಕಥೆಯನ್ನೇ ಹೋಲುತ್ತಿತ್ತು. ಲೈಸೆನ್ಸ್ ರಾಜ್ ವ್ಯವಸ್ಥೆ ಹೋಗಿ ಆರ್ಥಿಕ ಉದಾರೀಕರಣ ಬಂತು. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಈ ಸಂದೇಶ ಬಹು ಮುಖ್ಯ: ಬೆಳವಣಿಗೆಯು ಕೇವಲ ಹಣಕಾಸು ಅಥವಾ ಯೋಜನೆಗಳಿಂದ ಅಲ್ಲ, ಹೊಸದನ್ನು ಒಪ್ಪಿಕೊಳ್ಳಬೇಕು. ನವೀನತೆಯ ಶಕ್ತಿ ಮುಖ್ಯ. ಅದು ಗ್ರಾಮೀಣ ಸಮುದಾಯದಲ್ಲಿರಲಿ, ಅಥವಾ ತಂತ್ರಜ್ಞಾನ ಕೇಂದ್ರದಲ್ಲಿರಲಿ. ಹೊಸತನ ನಿಜವಾದ ಪ್ರಗತಿಯ ಎಂಜಿನ್. ಶಿವನ ತಾಂಡವ ಅಸ್ತವ್ಯಸ್ತ ನೃತ್ಯವಲ್ಲ; ಅದು ತಾಳದ, ನಿಯಮದ, ಶ್ರುತಿಯ ನೃತ್ಯ. ಆವಿಷ್ಕಾರ ಮತ್ತು ಪ್ರಗತಿಯೂ ಹಾಗೆಯೇ. ಅವುಗಳಿಗೆ ನೀತಿ, ಸಂಸ್ಥೆ ಮತ್ತು ಮಾನವೀಯ ಮೌಲ್ಯಗಳ ನಿಯಂತ್ರಿತ ರೀತಿ ಬೇಕು. ನಿಯಂತ್ರಣವಿಲ್ಲದ ವಿನಾಶ ಅನ್ಯಾಯ ಮತ್ತು ಅಸಮಾನತೆಯನ್ನು ಉಂಟುಮಾಡುತ್ತದೆ. ಆದ್ದರಿಂದ ಆರ್ಥಿಕ ವ್ಯವಸ್ಥೆಗೂ ಧರ್ಮದ ನೈತಿಕತೆ ಬೇಕು.

ಭಾರತ ಈಗ ಜ್ಞಾನಾಧಾರಿತ ಆರ್ಥಿಕತೆಯ ದಿಕ್ಕಿನಲ್ಲಿ ಸಾಗುತ್ತಿದೆ. ಇಂಥ ಸಮಯದಲ್ಲಿ ಈ ನೊಬೆಲ್ ಪ್ರಶಸ್ತಿ ಭಾರತಕ್ಕೆ ಮಹತ್ವದ ಪಾಠ ನೀಡುತ್ತದೆ. ನಿಜವಾದ ಅಭಿವೃದ್ಧಿ ಸ್ಥಿರತೆ ಅಲ್ಲ, ಅದು ಚಲನೆಯಲ್ಲಿರುವ ಒಳಗೊಳ್ಳುವಿಕೆಯ ನವೀಕರಣ. ಕರ್ನಾಟಕದಂಥ ರಾಜ್ಯಗಳಲ್ಲಿ ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ನವೀನತೆಗಳ ಹಾದಿಯಲ್ಲಿ ಈ ತತ್ತ್ವದ ಪ್ರಾಮುಖ್ಯ ಅಪಾರ. ಯಾಂತ್ರೀಕರಣ, ಹವಾಮಾನ ಬದಲಾವಣೆ ಮತ್ತು ಅಸಮಾನತೆಯ ಕಾಲದಲ್ಲಿ, ಶಿವನ ನೃತ್ಯ ನಮಗೆ ನೆನಪಿಸುತ್ತದೆ. ವಿನಾಶವೂ ದಯೆಯಿಂದ, ಸೃಷ್ಟಿಯೂ ಕರುಣೆಯಿಂದ ನಡೆಯಬೇಕು. ತಜ್ಞರಾದ ಮೊಕಿಯರ್, ಆಗಿಯನ್ ಮತ್ತು ಹೋಯಿಟ್ ಅವರ ಕೆಲಸವು ಶಿವನ ನೃತ್ಯಕ್ಕೆ ವೈಜ್ಞಾನಿಕ ರೂಪ ನೀಡುತ್ತದೆ. ಜ್ಞಾನ, ಆವಿಷ್ಕಾರ ಮತ್ತು ಬದಲಾವಣೆಯ ಸಮ್ಮಿಲನವೇ ನಿಜವಾದ ಪ್ರಗತಿ. ಇಂದಿನ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಹಳೆಯ ಉದ್ಯೋಗಗಳನ್ನು ಮಾಯಮಾಡಿ ಹೊಸದಕ್ಕೆ ಅವಕಾಶ ಮಾಡಿಕೊಡುತ್ತದೆ. 2025ರ ನೊಬೆಲ್ ಅರ್ಥಶಾಸ್ತ್ರ ಪ್ರಶಸ್ತಿ ಅಂಕಿಗಳಿಗಲ್ಲ. ಪರಿವರ್ತನೆ ಜಗದ ನಿಯಮ. ಶಿವನ ಪ್ರಭಾಮಂಡಲದೊಳಗೆ ನೃತ್ಯಮಾಡುವ ನಟರಾಜನಂತೆ, ಆರ್ಥಿಕ ಬೆಳವಣಿಗೆ ನವೀನತೆ, ನೈತಿಕತೆ ಮತ್ತು ಶಾಶ್ವತ ಬದಲಾವಣೆಯ ಲಯದಲ್ಲಿ ಚಲಿಸಿದಾಗ ಮಾತ್ರ ಆರ್ಥಿಕ ಪ್ರಗತಿ ಸಾಧ್ಯ.

(ಲೇಖಕರು ಸಹ-ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ)

ವಿರಾಟ್ ಕೊಹ್ಲಿ-ಡಕ್ ಡಕ್ ಕರ್‌ನೇ ಲಗಾ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

'ಕಾಂತಾರ' ಚಿತ್ರದ ಯಶಸ್ಸಿನ ನಂತರ ಚಿತ್ರಮಂದಿರಗಳಲ್ಲಿ ಯಾವ ಚಿತ್ರವೂ ಸದ್ದು ಮಾಡುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಸರಿಯಾದ ಯಾವ ಸಿನಿಮಾಗಳೂ ಬಿಡುಗಡೆ ಆಗುತ್ತಿಲ್ಲ ಎಂದರೂ ತಪ್ಪಿಲ್ಲ. ದೊಡ್ಡ ಹೀರೋಗಳ ಸಿನಿಮಾಗಳ ನಿರ್ಮಾಪಕರು ಸುಮ್ಮನೇ ಕಾಂಪಿಟೇಷನ್ ಯಾಕೆ ಅಂತ ತಮ್ಮ ಚಿತ್ರಗಳ ಬಿಡುಗಡೆಯನ್ನು ಮುಂದೆ ಹಾಕಿದರೆ, ಸಣ್ಣ ಪುಟ್ಟ ಚಿತ್ರಗಳ ನಿರ್ಮಾಪಕರು, 'ಅವರ ಮುಂದೆ ನಾವು ಕಾಂಪಿಟೇಷನ್ ಮಾಡೋಕಾಗುತ್ತಾ?' ಅಂತ ಸುಮ್ಮನಾಗಿದ್ದಾರೆ. ಹಾಗಾಗಿ ಎಂದಿನಂತೆ ಪರಭಾಷಾ ಚಿತ್ರಗಳ ಅಬ್ಬರ ಮುಂದುವರಿಯಲು ಇದು ಸಹಕಾರಿ ಆಗಿದೆ. ಪ್ರೇಮ್ ನಿರ್ದೇಶನ, ಧ್ರುವ ಸರ್ಜಾ ಅಭಿನಯದ 'ಕೆಡಿ', ಸುದೀಪ್ ಅಭಿನಯದ 'ಮಾರ್ಕ್' ಚಿತ್ರಗಳಿಗಾಗಿ ಕನ್ನಡ ಪ್ರೇಕ್ಷಕ ಕಾದು ಕುಳಿತಿದ್ದಾನೆ. ಆದರೆ ಅವುಗಳ ಬಿಡುಗಡೆಯ ಕ್ರೇಜ್ ಇನ್ನೂ ಶುರು ಆಗಿಲ್ಲ. ಇನ್ನು ದರ್ಶನ್ ಅವರಿಗೆ ಜೈಲಿಂದ ಬಿಡುಗಡೆ ಯಾವಾಗ ಅಂತ ಗೊತ್ತಿಲ್ಲದಿದ್ದರೂ ಅವರ 'ಡೆವಿಲ್' ಕೂಡಾ ಬಿಡುಗಡೆಯ ಹೊಸ್ತಿಲಲ್ಲಿದೆ. ಆದರೆ ದರ್ಶನ್ ಅವರದ್ದು ಏನಿದ್ದರೂ ಅವರೇ ಹೇಳಿಕೊಳ್ಳುವಂತೆ ಕೇವಲ ಕರ್ನಾಟಕಕ್ಕೆ ಮೀಸಲಾದ ಚಿತ್ರ. ಹಾಗಾಗಿ ಅದು ನಾಡಿನಿಂದ ಹೊರಗೆ ಸದ್ದು ಮಾಡೋ ಸಾಧ್ಯತೆಗಳಿಲ್ಲ. ಆದರೆ 'ಕೆಡಿ' ಮತ್ತು 'ಮಾರ್ಕ್' ಪರಭಾಷೆಯಲ್ಲೂ ಅಬ್ಬರಿಸುವ ಉತ್ಸಾಹ ತೋರಿಸುತ್ತಿವೆ. ಒಟ್ಟಾರೆ, 'ಕಾಂತಾರ' ನಂತರ ಬರುವ ಉಳಿದ ಚಿತ್ರಗಳೂ ಕನ್ನಡ ನಾಡಿನಿಂದ ಹೊರಗೆ ಗಲ್ಲಾಪೆಟ್ಟಿಗೆ ದೋಚುತ್ತವೆ ಅನ್ನೋ ನಂಬಿಕೆಯಲ್ಲಿ ಕನ್ನಡ ಪ್ರೇಕ್ಷಕ ಕಾಯ್ತಾ ಇದ್ದಾನೆ. ಅವನ ನಂಬಿಕೆ ಎಷ್ಟರ ಮಟ್ಟಿಗೆ ನಿಜ ಆಗುತ್ತೆ ಅನ್ನೋದಕ್ಕೆ ಕಾಲವೇ ಉತ್ತರ ಹೇಳಬೇಕು.

ಲೂಸ್ ಟಾಕ್ ▸▸ ವಿರಾಟ್ ಕೊಹ್ಲಿ

- **ಎನ್ರೀ, ಎರಡು ಮ್ಯಾಚಲ್ಲಿ ಸೊನ್ನೆ ಸುತ್ತಿಬಿಟ್ಟಿದ್ರಿ. ರಿಟೈರ್ ಆಗೋಕೆ ಅಂತ ರೆಡಿ ಆಗಿ ಬಂದಿದ್ರಾ?**

– ರೀ, ಹಂಗೆಲ್ಲಾ ಸುಲಭಕ್ಕೆ ಟೈರ್ಡ್, ರಿಟೈರ್ಡ್ ಆಗಲ್ಲ ನಾನು. ಬಲವಂತವಾಗಿ ರಿಟೈರ್ ಮಾಡಿಸಿದ್ರೆ ಅದು ರಿಟೈರ್ಡ್ 'ಹರ್ಟ್' ಆಗುತ್ತೆ ಅಷ್ಟೇ.

- **ಎರಡು ಸೊನ್ನೆ ಸುತ್ತಿದ ಮೇಲೆ, ಅಂತೂ ಕೊನೇ ಮ್ಯಾಚಲ್ಲಿ ಆಡಿಬಿಟ್ರಿ**

– ಸೀರೀಸ್ ಕೊನೆ ಮ್ಯಾಚು ಅಂತ ಹೇಳ್ರಿ. ಕೊನೇ ಮ್ಯಾಚು ಅಂದ್ರೆ ಮತ್ತೆ ರಿಟೈರ್ ಆಗಿದ್ದೀನಿ ಅಂತ ಅಂದ್ಕೊತಾರೆ ಜನ

- **ಸರಿ, ಸರಿ, ಆದ್ರೂ ನಿಮ್ಮ ವಿರುದ್ಧ ಪಿತೂರಿ ನಡೀತಾ ಇದೆ ಅಂತ ಹೇಳ್ತಾ ಇದ್ದಾರಲ್ಲ, ನಿಜನಾ?**

– ಇದ್ರೂ ಇರಬಹುದು. ನನ್ನ ಒಳ್ಳೆ ಆಟ ನೋಡಿ ಸಹಿಸೋಕಾಗದೆ, ಕೊಳ್ಳೇಗಾಲಕ್ಕೆ ಹೋಗಿ ಮಾಟ ಮಾಡಿಸೋ ಪ್ರಯತ್ನ ಮಾಡಿದ್ರೂ ಮಾಡಿರಬಹುದು.

- **ನೇರವಾಗಿ ಕೇಳ್ತೀನಿ, ಗಂಭೀರ್ ನಿಮಗೆ ಅಡ್ಡಗಾಲು ಹಾಕ್ತಾ ಇದ್ದಾರಾ?**

– ನಿಮಗೇನ್ ಗೊತ್ತಿಲ್ವ. ಹಳೇ ಕಾಲದಿಂದ ಮೊನ್ನೆಯ ಐಪಿಎಲ್ ವರೆಗೂ ಆವಯ್ಯ ನಂಜೊತೆ ಗಂಭೀರವಾಗಿ ಇದ್ದಿದ್ದು ಯಾವಾಗಾದ್ರೂ ನೋಡಿದ್ದೀರಾ?

- **ಸರಿ, ಮೊನ್ನೆ ಎರಡು ಸೊನ್ನೆ ಸುತ್ತಿದ ಮೇಲೆ, ಮೂರನೇ ಮ್ಯಾಚಲ್ಲಿ ಆಡೋಕೆ ಬರುವಾಗ ಏನನ್ನಿಸ್ತಾ ಇತ್ತು?**

– ಎದೆಯಲ್ಲಿ 'ಡಕ್' 'ಡಕ್' ಕರ್ ನೇ ಲಗಾ ಅಂತ ಹಾಡು ಕೇಳಿಸ್ತಾ ಇತ್ತು.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಮಧ್ಯೆ ದಿನಾ ಜಗಳ ಆಗ್ತಾ ಇತ್ತು. ಒಂದ್ ದಿನ ಸರಿ ಇದ್ರೆ, ಒಂದ್ ತಿಂಗಳು ಜಗಳ, ಕೊನೆಗೆ ಹಿಂಗೆ ದಿನಾ ಜಗಳ ಆಡ್ಕೊಂಡು ಬದುಕೋಕಾಗಲ್ಲ ಅಂತ ಇಬ್ಬರಿಗೂ ಅನ್ನಿಸಿತು. ಅದ್ಕೆ ಇಬ್ರೂ ಕೋರ್ಟ್ ಮೆಟ್ಟಿಲು ಹತ್ತಿ ಡೈವೋರ್ಸ್‌ಗೆ ಅಪ್ಲೈ ಮಾಡೋದು ಅಂತ ತೀರ್ಮಾನ ಮಾಡಿದ್ರು. ಹಂಗೇ ಮಾಡಿದ್ರು. ಆದರೆ ಜಡ್ಜ್ ತುಂಬಾ ಸಂಭಾವಿತರು. ಹಾಗಾಗಿ ಜತೆಯಾಗಿ ಬದುಕೋಕೆ ಇಬ್ಬರಿಗೂ ಒಳ್ಳೆ ಮಾತಿನಲ್ಲಿ ಸಲಹೆ ನೀಡಿದ್ರು. ಆದರೆ ನೋ ಯೂಸ್; ಖೇಮು, ಖೇಮುಶ್ರೀ ಇಬ್ರೂ ಸುತರಾಂ ಒಪ್ಪಲಿಲ್ಲ. ಅಂತೂ ಇಂತೂ ಎಲ್ಲ ಪ್ರಯತ್ನಗಳ ನಂತರ ಜಡ್ಜ್ ಇವರಿಬ್ಬರಿಗೂ ಡೈವೋರ್ಸ್ ಕೊಡೋಕೆ ಅನುಮತಿ ಕೊಟ್ರು, ಈಗ ವಿಷಯ ಜೀವನಾಂಶಕ್ಕೆ ಬಂತು. ಖೇಮುಶ್ರೀ ''ನಂಗೆ ತಿಂಗಳಿಗೆ 20 ಸಾವಿರ ರುಪಾಯಿ ಜೀವನಾಂಶ ಬೇಕು'' ಅಂತ ಪಟ್ಟು ಹಿಡಿದು ಕೂತಳು. ಖೇಮು ''ನನ್ ಕೈಲಿ ಸಾಧ್ಯಾನೇ ಇಲ್ಲ'' ಅಂತ ಕೂತ. ಕೊನೆಗೆ ಖೇಮುನ ಒಟ್ಟಾರೆ ಇನ್‌ಕಮ್, ಖೇಮುಶ್ರೀಯ ಅವಶ್ಯಕತೆ ಎಲ್ಲವನ್ನೂ ಪರಿಶೀಲಿಸಿದ ಜಡ್ಜ್ ಹೀಗೆ ತೀರ್ಪು ಕೊಟ್ಟರು: ''ಎಲ್ಲ ದಾಖಲೆಗಳನ್ನು ನೋಡಿ, ಖೇಮುಶ್ರೀಯ ಪರಿಸ್ಥಿತಿಯನ್ನು ಗಮನಿಸಿ ಆಕೆಗೆ ಪ್ರತಿ ತಿಂಗಳು 20 ಸಾವಿರ ರುಪಾಯಿಗಳ ಜೀವನಾಂಶ ಕೊಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ''. ಅದನ್ನು ಕೇಳಿದ ಖೇಮು ಫುಲ್ ಖುಷಿಯಾಗಿ ಹೇಳಿದ ''ನಿಮ್ದು ಭಾಳಾ ದೊಡ್ ಮನಸು ಸ್ವಾಮಿ, ಸಾಧ್ಯ ಆದ್ರೆ ಅವಳಿಗೆ ನಾನೂ ಆವಾಗಾವಾಗ ಅಲ್ಪ ಸ್ವಲ್ಪ ದುಡ್ ಕೊಡೋಕೆ ಟ್ರೈ ಮಾಡ್ತೀನಿ''.

ಲೈನ್‌ಮ್ಯಾನ್

- **ಫ್ರಿಜ್‌ನಲ್ಲಿ ಡೆಡ್ ಬಾಡಿ ಇಡೋ ಗಂಡ ಹೆಂಡತಿಯರ ಯುದ್ಧ**
– ಶೀತಲ ಸಮರ
- **ಹಳೆ ಗಾದೆ: ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ**
– ಹೊಸಗಾದೆ: ಗಂಡ ಹೆಂಡಿರ ಜಗಳ ಕೊಂದು ಮಲಗಿಸುವ ತನಕ
- **ಕೊಂದು ಫ್ರಿಜ್‌ನಲ್ಲಿ ಇಡುವ ಇವರಿಬ್ಬರ ನಡುವಿನ ಯುದ್ಧ**
– ಕೋಲ್ಡ್ ವಾರ್
- **ಈ ರೀತಿಯ ಕೊಲೆಗಳಿಗೆ ಹೆಸರು**
– ಕೋಲ್ಡ್ ಬ್ಲಡೆಡ್ ಮರ್ಡರ್
- **ಕಲಿಯುಗದ ಜ್ಞಾನೋದಯ**
– ಅರ್ಧ ರಾತ್ರಿಯಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು ಹೋದವನು- ಬುದ್ಧ
– ಚಾನ್ಸ್ ಸಿಕ್ಕರೂ ಹೋಗದವನು- ಬುದ್ದು
- **ಲೈಫಲ್ಲಿ ಏನೂ ಸಾಧನೆ ಮಾಡಿರದ ತಮ್ಮ ಮಕ್ಕಳನ್ನ ಬಾಲಿವುಡ್ ಮಂದಿ ಹೆಂಗೆ ಬಯ್ತಾರೆ?**
– ಆ ಹೀರೋನ ನೋಡಿ ಕಲಿತುಕೋ, ನಿನ್ ವಯಸ್ಸಿಗೆ ಮೂರ್ ಮೂರ್ ಮದ್ವೆ ಆಗಿದ್ದ ಅವ್ನು
- **ಹಂಗಾದ್ರೆ ಸಲ್ಮಾನ್ ಖಾನ್ ಕಥೆ?**
– ಅವ್ನಿಗೆ ಅವ್ನ್ ಅಪ್ಪ-ಅಮ್ಮನೇ ಬಯ್ತಾರೆ: ನಿನ್ ಜೊತೆಗಿದ್ದ 'ಹುಡಿಗೀರೆಲ್ಲಾ' ಮದ್ವೆ ಆಗಿ ಮಕ್ಕಳಾಯ್ತು, ನಿಂದ್ಯಾವಾಗ್ಲೋ?
- **ಕಿವಿ ಚುಚ್ಚುವವರ ಕೆಲಸಕ್ಕೆ ಏನಂತಾರೆ?**
– ಇಯರ್ ರಿಂಗ್ ಏಯ್ಡ್
- **ಡಿಕ್ಷ್‌ನರಿಗೆ ಇನ್ನೊಂದು ಹೆಸರು**
– 'ಅರ್ಥ' ಶಾಸ್ತ್ರ
- **ಅಮೆರಿಕಕ್ಕೆ ಸಂಬಂಧಪಟ್ಟ ಸುದ್ದಿ**
– 'ಸ್ಟೇಟ್ಸ್' ಲೆವೆಲ್ ಸುದ್ದಿ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 284

ಸಮಾಚಾರ ಸಣ್ಣದಲ್ಲ

ನಟ ಸತೀಶ್ ಶಾ ನಿಧನ

ಮುಂಬೈ: 'ಜಾನೆ ಬಿ ದೊ ಯಾರೊ'(1983) ಹಿಂದಿಯ ಹಾಸ್ಯ ಸಿನಿಮಾದಿಂದಾಗಿ ದೇಶಾದ್ಯಂತ ಜನಮೆಚ್ಚುಗೆ ಗಳಿಸಿದ್ದ ಬಾಲಿವುಡ್‌ನ ಹಿರಿಯ ನಟ ಸತೀಶ್ ಶಾ(74) ಶನಿವಾರ ಮಧ್ಯಾಹ್ನ 2.30ರಲ್ಲಿ ಮುಂಬೈನ ಹಿಂದೂಜಾ ಆಸ್ಪತ್ರೆಯಲ್ಲಿ ನಿಧನರಾದರು. ದೀರ್ಘಕಾಲದಿಂದ ಮೂತ್ರಪಿಂಡ

ಸಮಸ್ಯೆಯಿಂದ ಬಳಲುತ್ತಿದ್ದರು. ಇತ್ತೀಚೆಗೆ ಮೂತ್ರಪಿಂಡ ಕಸಿ ಮಾಡಿಸಿಕೊಂಡಿದ್ದರು. ಭಾನುವಾರ ಅಂತ್ಯಕ್ರಿಯೆ ನಡೆಯಲಿದೆ. ಮುಂಬೈನ ಮಾಂಡ್ವಿಯಲ್ಲಿ ಜನಿಸಿದ್ದ ಸತೀಶ್ ಶಾ, ಕ್ಸೇವಿಯರ್ಸ್ ಕಾಲೇಜಲ್ಲಿ ಪದವಿ, ಪುಣೆ ಚಲನಚಿತ್ರ-ದೂರದರ್ಶನ ಸಂಸ್ಥೆಯಲ್ಲಿ ನಟನೆ ತರಬೇತಿ ಪಡೆದಿದ್ದರು. 1970ರಲ್ಲಿ 'ಭಗವಾನ್ ಪರಶುರಾಮ್' ಹಿಂದಿ ಚಿತ್ರದ ಮೂಲಕ ವೃತ್ತಿಜೀವನ ಆರಂಭಿಸಿ, ಮೈ ಹೂ ನಾ(2004), ಕಲ್ ಹೋ ನಾ ಹೊ(2003), ಫನಾ(2006), ಓಂ ಶಾಂತಿ ಓಂ(2007) ಸೇರಿದಂತೆ ಹಲವು ಜನಪ್ರಿಯ ಸಿನಿಮಾಗಳಲ್ಲಿ ನಟಿಸಿದ್ದರು. ಟಿ.ಬಿ.ಶ್ರೀನಿವಾಸ್ ನಿರ್ದೇಶನದ 1998ರಲ್ಲಿ ತೆರೆ ಕಂಡ 'ಶಾಂತಿ ಶಾಂತಿ ಶಾಂತಿ' ಕನ್ನಡ ಸಿನಿಮಾದಲ್ಲಿ ಅನಂತ ಮೂರ್ತಿ ಎಂಬ ಪಾತ್ರದಲ್ಲಿ ಸತೀಶ್ ಶಾ ನಟಿಸಿದ್ದರು. ಇದೇ ಸಿನಿಮಾದಲ್ಲಿ ಅಬ್ಬಾಸ್, ಮಾಧವನ್ ಕೂಡ ನಟಿಸಿದ್ದರು. ಈ ಸಿನಿಮಾ ತನ್ನದೇ ಆದ ವೆಬ್‌ಸೈಟ್ ತೆರೆದಿತ್ತು. 'ಸಾರಾಭಾಯ್ ವರ್ಸಸ್ ಸಾರಾಭಾಯ್' ಮತ್ತು 'ಜಾನೆ ಭಿ ದೋ ಯಾರೋ' ಟಿವಿ ಸೀರಿಯಲ್ ಮೂಲಕ ಸತೀಶ್ ಶಾ ಖ್ಯಾತಿ ಪಡೆದಿದ್ದರು. 2008ರಲ್ಲಿ 'ಕಾಮಿಡಿ ಸರ್ಕಸ್' ಟಿವಿ ಶೋ ತೀರ್ಪುಗಾರರಾಗಿದ್ದರು. 1984ರಲ್ಲಿ ಯೇ ಜೊ ಹೈ ಜಿಂದಗಿ ಶೋ ನಲ್ಲಿ 55 ಕಂತುಗಳಲ್ಲಿ 55 ವಿಭಿನ್ನ ಪಾತ್ರಗಳನ್ನು ನಿರ್ವಹಿಸಿದರು.

ಕಾರಿಗೆ ಟ್ರಕ್ ಡಿಕ್ಕಿ: ಉ.ಪ್ರ ಸಚಿವೆ ಪಾರು

ಲಖನೌ: ಆಗ್ರಾ-ಲಖನೌ ಎಕ್ಸ್‌ಪ್ರೆಸ್ ವೇನಲ್ಲಿ ಶುಕ್ರವಾರ ರಾತ್ರಿ ಟ್ರಕ್ ಮತ್ತು ಕಾರಿನ ನಡುವಿನ ಅಪಘಾತದಲ್ಲಿ ಉತ್ತರ ಪ್ರದೇಶದ ಮಹಿಳಾ ಕಲ್ಯಾಣ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಂಪುಟ ದರ್ಜೆ ಸಚಿವೆ ಬೇಬಿ ರಾಣಿ ಮೌರ್ಯ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಸಚಿವೆ ಮೌರ್ಯ ಅವರು ಹತ್ರಾಸ್ ನಗರದಲ್ಲಿನ ಕಾರ್ಯಕ್ರಮವೊಂದರಲ್ಲಿ ಭಾಗಿಯಾದ ಬಳಿಕ ಲಖನೌಗೆ ಹಿಂದಿರುಗುತ್ತಿದ್ದಾಗ ಫಿರೋಜಾಬಾದ್ ಬಳಿ ರಾತ್ರಿ 8.40 ವೇಳೆ ಅಪಘಾತವಾಗಿದೆ. ಸಚಿವರ ಕಾರಿನ ಪಕ್ಕ ಚಲಿಸುತ್ತಿದ್ದ ದೊಡ್ಡ ಟ್ರಕ್‌ನ ಟೈರ್ ಏಕಾಏಕಿ ಸ್ಫೋಟಗೊಂಡಿದೆ. ಚಾಲಕನ ನಿಯಂತ್ರಣ ತಪ್ಪಿದ ಟ್ರಕ್, ಸಚಿವೆ ಮೌರ್ಯ ಅವರ ಕಾರಿಗೆ ಡಿಕ್ಕಿ ಹೊಡೆದಿದೆ. ರಾಣಿ ಮೌರ್ಯ ಅವರ ಚಾಲಕ ಸಮಯಪ್ರಜ್ಞೆ ಮೆರೆದು ತಕ್ಷಣವೇ ತಮ್ಮ ಕಾರನ್ನು ನಿಯಂತ್ರಣಕ್ಕೆ ತಂದಿದ್ದರಿಂದ ಪ್ರಾಣಾಪಾಯ ತಪ್ಪಿದೆ. ಆದರೆ, ಟ್ರಕ್ ಡಿಕ್ಕಿ ಹೊಡೆದ ರಭಸಕ್ಕೆ ಕಾರಿಗೆ ಸಾಕಷ್ಟು ದೊಡ್ಡ ಹಾನಿಯಾಗಿದೆ. ಸಚಿವೆ ಮೌರ್ಯ ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ. ಬಳಿಕ ಮತ್ತೊಂದು ವಾಹನದಲ್ಲಿ ಲಖನೌನತ್ತ ಪ್ರಯಾಣ ಮುಂದುವರಿಸಿದ್ದಾರೆ ಎಂದು ಸಿರ್ಸಗಂಜ್ ಉಪ ವಿಭಾಗಾಧಿಕಾರಿ ಅನಿವೇಶ್ ಕುಮಾರ್ ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಥಾಯ್ಲೆಂಡ್‌ನ ಮಾಜಿ ರಾಣಿ ಸಿರಿಕಿತ್ ನಿಧನ

ಬ್ಯಾಂಕಾಕ್: ಥಾಯ್ಲೆಂಡ್‌ನ ಮಾಜಿ ರಾಣಿ, ರಾಜಮಾತೆ ಸಿರಿಕಿತ್(93) ಶುಕ್ರವಾರ ರಾತ್ರಿ 9 ಗಂಟೆಯಲ್ಲಿ ನಿಧನರಾದರು. ಅವರಿಗೆ ರಕ್ತದ ಸೋಂಕು ಉಂಟಾಗಿತ್ತು. ವಯೋಸಹಜ

ಕಾಯಿಲೆಗಳೂ ಬಾಧಿಸುತ್ತಿದ್ದವು. ರಾಜಮಾತೆ ಸಿರಿಕತ್ ಅವರ ಅಂತ್ಯಸಂಸ್ಕಾರ ಬ್ಯಾಂಕಾಂಕ್‌ನಲ್ಲಿ ನಡೆಯಲಿದೆ ಎಂದು ತಿಳಿದು ಬಂದಿದೆ. 1932ರಲ್ಲಿ ರಟ್ಟನ್‌ಕೋಸಿನ್ ಸಾಮ್ರಾಜ್ಯಕ್ಕೆ ಸಾಮಂತ ರಾಜನಾಗಿದ್ದ ಚಂತಾಭುರಿ ರಾಜಮನೆತನದ 2ನೇ ರಾಜ ನಖ್ಯತ್ರ ಮಂಗಳ ಅವರ 3ನೇ ಮಗಳಾಗಿ ಸಿರಿಕತ್ ಅವರು ಜನಿಸಿದರು. ಸಿರಿಕತ್ ಪ್ಯಾರಿಸ್‌ನಲ್ಲಿ ಪಾಶ್ಚಾತ್ಯ ಸಂಗೀತ ಕಲಿಯುತ್ತಿದ್ದಾಗ ಆಕಸ್ಮಿಕವಾಗಿ ರಟ್ಟನ್‌ಕೋಸಿನ್ ಸಾಮ್ರಾಜ್ಯದ ಚಕ್ರಿ ರಾಜವಂಶದ 9ನೇ ದೊರೆ ಭೂಮಿಬೋಲ್ ಅತುಲ್ಯದೇವ್ ಅವರನ್ನು ಸಂಧಿಸಿದ್ದರು. ಆಗ ಅವರಿಬ್ಬರಲ್ಲಿ ಪ್ರೀತಿ ಒಡಮೂಡಿತ್ತು. ಬಳಿಕ 1950ರಲ್ಲಿ ಭೂಮಿಬೋಲ್ ಅತುಲ್ಯದೇವ್-ಸಿರಿಕತ್ ಮದುವೆಯಾಯಿತು. ಆ ಬಳಿಕ 66 ವರ್ಷಗಳ ಕಾಲ ಥಾಯ್ಲೆಂಡ್ ಸಾಮ್ರಾಜ್ಯದ ರಾಣಿಯಾಗಿದ್ದರು. ಪ್ರಸ್ತುತ, ರಾಣಿ ಸಿರಿಕತ್-ಅತುಲ್ಯದೇವ್ ದಂಪತಿ ಹಿರಿಯ ಪುತ್ರ ವಜಿರಲಾಂಗ್‌ಕಾರ್ನ್ ಥಾಯ್ಲೆಂಡ್‌ನ 10ನೇ ರಾಜನಾಗಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಚಂದ್ರಬಾಬು ನಾಯ್ಡು } ಆಂಧ್ರ ಸಿಎಂ

ನರೇಂದ್ರ ಮೋದಿ ಜಿ ಅವರು 11 ವರ್ಷಗಳಿಂದ ಪ್ರಧಾನಿ ಹುದ್ದೆಯಲ್ಲಿ ನಿರಂತರ ಮುಂದುವರಿದಿದ್ದಾರೆ. ಈ ದಶಕ ಮೋದಿ ಅವರದ್ದಾಗಿದೆ. ಎನ್‌ಡಿಎ ಮೈತ್ರಿಕೂಟ ಅಭಿವೃದ್ಧಿಪರ ಆಡಳಿತ ನೀಡುತ್ತಿದೆ. ಹಾಗಾಗಿಯೇ ದೇಶ ಪ್ರಗತಿಪಥದಲ್ಲಿ ಸಾಗಿದೆ. ಕೇಂದ್ರದಲ್ಲಿ ಆದಂತೆಯೇ ಬಿಹಾರ ವಿಧಾನಸಭೆ ಚುನಾವಣೆಯಲ್ಲಿಯೂ ಎನ್‌ಡಿಎ ಮೈತ್ರಿಕೂಟವೇ ಗೆಲ್ಲುತ್ತದೆ.



ಬಂಗಾಳಕೊಲ್ಲಿಯಲ್ಲಿ ಹೊಸ ಮೊಂಥಾ ಚಂಡಮಾರುತ

ಅ.28ಕ್ಕೆ 110 ಕಿಮೀ ವೇಗದಲ್ಲಿ ಆಂಧ್ರ ಕರಾವಳಿ ಪ್ರವೇಶ ನಿರೀಕ್ಷೆ
ಅರಬ್ಬಿ ಸಮುದ್ರದಲ್ಲೂ ಶನಿವಾರ ಬೆಳಗ್ಗೆ ವಾಯುಭಾರ ಕುಸಿತ

ದೆಹಲಿ: ದೇಶದ ಆಗ್ನೇಯ ಕರಾವಳಿ ಭಾಗದಲ್ಲಿ ಬಂಗಾಳಕೊಲ್ಲಿಯಲ್ಲಿ ಶನಿವಾರ ಬೆಳಗ್ಗೆ ಭಾರೀ ಪ್ರಮಾಣದಲ್ಲಿ ವಾಯುಭಾರ ಕುಸಿತವಾಗಿದ್ದು, ನಿಧಾನವಾಗಿ ಚಂಡಮಾರುತವಾಗಿ ರೂಪುಗೊಳ್ಳುತ್ತಿದೆ. ಅಂತಾರಾಷ್ಟ್ರೀಯ ನಿಯಮಗಳ ಪ್ರಕಾರ ಈ ಹೊಸ ಚಂಡಮಾರುತಕ್ಕೆ ಥಾಯ್ಲೆಂಡ್ ಮೂಲದ 'ಮೊಂಥಾ' ಎಂದು ಹೆಸರಿಡಲಾಗಿದೆ.

ಹೊಸ ಚಂಡಮಾರುತ ಅ.27ರ ವೇಳೆಗೆ ಪಶ್ಚಿಮ-ಮಧ್ಯ ಬಂಗಾಳಕೊಲ್ಲಿಯಲ್ಲಿ ತೀವ್ರಗೊಳ್ಳುವ ಸಾಧ್ಯತೆಯಿದೆ. ಬಳಿಕ ಅ.28ರ ವೇಳೆಗೆ ಆಂಧ್ರಪ್ರದೇಶದ ಕರಾವಳಿಯನ್ನು ಗಂಟೆಗೆ 110 ಕಿಮೀಗಳಷ್ಟು ವೇಗದ ಬಿರುಗಾಳಿಯೊಂದಿಗೆ ಪ್ರವೇಶಿಸುವ ಸಾಧ್ಯತೆ ಇದೆ ಎಂದಿರುವ 'ಭಾರತೀಯ ಹವಾಮಾನ ಇಲಾಖೆ'(ಐಎಂಡಿ), ಆಂಧ್ರಪ್ರದೇಶ, ಒಡಿಶಾ, ತಮಿಳುನಾಡು, ಕೇರಳ ಮತ್ತು ಮಾಹೆಯಲ್ಲಿ ಭಾರೀ ಮಳೆಯಾಗಲಿದೆ ಎಂಬ ಮುನ್ಸೂಚನೆಯನ್ನು ಶನಿವಾರ ಮಧ್ಯಾಹ್ನ 2.30ರಲ್ಲಿ ಹೊರಡಿಸಿದ ವರದಿಯಲ್ಲಿ ತಿಳಿಸಿದೆ.

ಆಗ್ನೇಯ ಬಂಗಾಳಕೊಲ್ಲಿಯಲ್ಲಿನ ಈ ವಾಯುಭಾರ ಕುಸಿತ, ಸದ್ಯ ಗಂಟೆಗೆ 7 ಕಿ.ಮೀ.ಗಳಷ್ಟು ನಿದಾನಗತಿಯಲ್ಲಿ ಪಶ್ಚಿಮಕ್ಕೆ ಸರಿದು ಶನಿವಾರ ಬೆಳಗ್ಗೆ 8.30ಕ್ಕೆ ಅದೇ ಪ್ರದೇಶದ ಮೇಲೆ (ಅಕ್ಷಾಂಶ 10.8 ಉತ್ತರ ಮತ್ತು ರೇಖಾಂಶ 88.8 ಪೂರ್ವ) ಕೇಂದ್ರೀಕೃತವಾಗಿತ್ತು. ಪೋರ್ಟ್ ಬ್ಲೇರ್‌ನಿಂದ 440 ಕಿ.ಮೀ ಪಶ್ಚಿಮ-ನೈಋತ್ಯದಲ್ಲಿ, ವಿಶಾಖಪಟ್ಟಣದಿಂದ 970 ಕಿ.ಮೀ ಆಗ್ನೇಯದಲ್ಲಿ, ಚೆನ್ನೈನಿಂದ 970 ಕಿ.ಮೀ ಪೂರ್ವ-ಆಗ್ನೇಯದಲ್ಲಿ, ಕಾಕಿನಾಡದಿಂದ 990 ಕಿ.ಮೀ ಆಗ್ನೇಯದಲ್ಲಿತ್ತು ಎಂದು ಐಎಂಡಿ ಮುನ್ಸೂಚನೆಯಲ್ಲಿ ತಿಳಿಸಿದೆ.

ನಂತರ, ಅ.28ರ ಬೆಳಿಗ್ಗೆ ವಾಯುವ್ಯ ದಿಕ್ಕಿಗೆ ಚಲಿಸುವ ಸಾಧ್ಯತೆಯಿದೆ. ಆನಂತರದಲ್ಲಿ ತೀವ್ರತೆ ಪಡೆದುಕೊಂಡು ಪ್ರಬಲ ಚಂಡಮಾರುತವಾಗಿ ಪರಿವರ್ತನೆಗೊಂಡು ಉತ್ತರ-ವಾಯುವ್ಯ ದಿಕ್ಕಿಗೆ ಚಲಿಸಲಿದೆ. ಹಾಗೆಯೇ ಮುಂದುವರೆಯುತ್ತಾ, ಅ.28ರ ಸಂಜೆ ಅಥವಾ ರಾತ್ರಿ ಆಂಧ್ರಪ್ರದೇಶದ ಕಾಕಿನಾಡದ ಸುತ್ತಲಿನ ಮಚಲಿಪಟ್ನಂ ಮತ್ತು ಕಳಿಂಗಪಟ್ಟಣಂ ನಡುವೆ ಆಂಧ್ರ ಕರಾವಳಿಯನ್ನು ದಾಟುವ ನಿರೀಕ್ಷೆಯಿದೆ. ಆಗ ಅದರ ಚಲನೆಯ ಗರಿಷ್ಠ ವೇಗ ಗಂಟೆಗೆ 90ರಿಂದ 100 ಕಿ.ಮೀ., ಇನ್ನೂ ಹೆಚ್ಚೆಂದರೆ ಗಂಟೆಗೆ 110 ಕಿ.ಮೀ. ವೇಗದಲ್ಲಿ ಬೀಸಲಿದೆ ಎಂದು ಐಎಂಡಿ ಹೇಳಿದೆ.

ಅದು ಚಂಡಮಾರುತವಾಗಿ ಬದಲಾದ ಬಳಿಕ ಥಾಯ್ಲೆಂಡ್ ದೇಶ ಸೂಚಿಸಿರುವಂತೆ 'ಮೊಂಥಾ' ಚಂಡಮಾರುತ ಎಂದು ಹೆಸರಿಸಲಾಗುತ್ತದೆ.

ತ.ನಾಡು 2-3 ದಿನ ಭಾರೀ ಮಳೆ ನಿರೀಕ್ಷೆ

ಚೆನ್ನೈ: ದೇಶದ ಬಂಗಾಳ ಕೊಲ್ಲಿ ಭಾಗದಲ್ಲಿ ವಾಯುಭಾರ ಕುಸಿತವಾಗಿರುವುದರಿಂದ ಮುಂದಿನ ಒಂದೆರಡು ದಿನದಲ್ಲಿ ದೇಶದ ಪೂರ್ವ ಕರಾವಳಿ ಭಾಗಕ್ಕೆ ಚಂಡಮಾರುತ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಶನಿವಾರ ಮುನ್ಸೂಚನೆ ನೀಡಿದೆ. ಬೆಂಗಳೂರಿನ ಮೇಲೆಯೂ ಇದರ ಪ್ರಭಾವ ಉಂಟಾಗಲಿದ್ದು, ಮಳೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ವಾಯುಭಾರ ಕುಸಿತದಿಂದಾಗಿ ಬಂಗಾಳ ಕೊಲ್ಲಿಯಲ್ಲಿ 'ಮೊಂಥಾ'(ಥಾಯ್ಲೆಂಡ್ ಮೂಲದ ಹೆಸರು) ಚಂಡಮಾರುತ ರೂಪುಗೊಳ್ಳುತ್ತಿದೆ. ಇದರಿಂದಾಗಿ ಆಂಧ್ರ, ತಮಿಳುನಾಡು, ಪುದುಚೇರಿ ಭಾಗಗಳಲ್ಲಿ 2-3 ದಿನಗಳ ಕಾಲ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಪ್ರತಿಕೂಲ ಪರಿಸ್ಥಿತಿಗಳನ್ನು, ಪ್ರವಾಹ ಸಂದರ್ಭಗಳನ್ನು ಕ್ಷಿಪ್ರಗತಿಯಲ್ಲಿ ಎದುರಿಸಲು ಸಿದ್ಧತೆ ಮಾಡಿಕೊಳ್ಳುವಂತೆ ತಮಿಳುನಾಡು ಸರಕಾರ ರಾಜ್ಯದ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಪ್ರಾಕೃತಿಕ ವಿಕೋಪ ಪರಿಸ್ಥಿತಿ ಎದುರಿಸಲೆಂದೇ ನುರಿತ ಅಧಿಕಾರಿಗಳೂ ಸೇರಿದಂತೆ 24 ಸಾವಿರ ಸಿಬ್ಬಂದಿಗಳ ದೊಡ್ಡ ತಂಡಗಳನ್ನು ರಾಜ್ಯ ಸರಕಾರದ ವಿವಿಧ ಇಲಾಖೆಗಳಿಂದ ಸಿದ್ಧಗೊಳಿಸಲಾಗಿದೆ. ಅಲ್ಲದೇ, 100ಕ್ಕೂ ಅಧಿಕ ಯಾಂತ್ರಿಕ ದೋಣಿಗಳು, 500 ಟ್ರ್ಯಾಕ್ಟರ್‌ಗಳು, 475ಕ್ಕೂ ಅಧಿಕ ಸಾಗಣೆ ವಾಹನಗಳು, 450ಕ್ಕೂ ಅಧಿಕ ಎಲೆಕ್ಟ್ರಿಕ್ ಗರಗಸಗಳು, 100 ಅಶ್ವಶಕ್ತಿ ಸಾಮರ್ಥ್ಯದ 150 ಪಂಪ್‌ಸೆಟ್‌ಗಳು,

ಅರಬ್ಬಿಸಮುದ್ರದಲ್ಲೂ ವಾಯುಭಾರ ಕುಸಿತ

ದೇಶದ ಪೂರ್ವ ಭಾಗದಲ್ಲಿ, ನೈಋತ್ಯ ಕರಾವಳಿಯಲ್ಲಿ, ಅಂದರೆ, ಅರಬ್ಬಿ ಸಮುದ್ರದಲ್ಲಿಯೂ ಶನಿವಾರ ಬೆಳಗ್ಗೆ 8.30ರಲ್ಲಿ ವಾಯುಭಾರ ಕುಸಿತವಾಗಿದೆ. ಕರ್ನಾಟಕದ ಮಂಗಳೂರು ಕರಾವಳಿ ತೀರದಿಂದ 620 ಕಿಮೀ ದೂರದಲ್ಲಿ, ಗೋವಾದ ಪಣಜಿಯಿಂದ 380 ಕಿಮೀ ದೂರದಲ್ಲಿ, ಮಹಾರಾಷ್ಟ್ರದ ಮುಂಬೈನಿಂದ 400 ಕಿಮೀ ದೂರದಲ್ಲಿ ಹಾಗೂ ಲಕ್ಷದ್ವೀಪದ ಅಮಿನಿದಿವಿ ಪ್ರದೇಶದಿಂದ 640 ಕಿಮೀಗಳಷ್ಟು ಅಂತರದಲ್ಲಿ ಶನಿವಾರ ಬೆಳಗ್ಗೆ 8.30ರಲ್ಲಿ ವಾಯುಭಾರ ಕುಸಿತವಾಗಿದೆ. ಇದು ನಂತರದ 24 ಗಂಟೆಗಳ ಅವಧಿಯಲ್ಲಿ ಈಸ್ಟ್ ಸೆಂಟ್ರಲ್ ಅರಬ್ಬಿ ಸಮುದ್ರದಲ್ಲಿ ವಾಯುವ ಭಾಗದತ್ತ ಚಲಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ಮಧ್ಯಾಹ್ನ 2.30ರಲ್ಲಿ ಹೊರಡಿಸಿದ ಮುನ್ಸೂಚನೆ ವರದಿಯಲ್ಲಿ ತಿಳಿಸಿದೆ.



ಮೀನುಗಾರರಿಗೆ ಸೂಚನೆ

ಈಗ ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ತಮಿಳುನಾಡಿನ ಕಡಲೂರು, ವಿಲ್ಲುಪುರಂ ಮತ್ತು ಚೆಂಗಲ್ಪಟ್ಟು ಜಿಲ್ಲೆಗಳು ಮತ್ತು ಪುದುಚೇರಿ, ಕರಾವಳಿ ಆಂಧ್ರಪ್ರದೇಶ ಮತ್ತು ರಾಯಲಸೀಮಾದ ವಿವಿಧೆಡೆ ಭಾರೀ ಮಳೆ ಸುರಿಸಲಿದೆ. ಭಾನುವಾರದವರೆಗೂ ತಮಿಳುನಾಡು, ಪುದುಚೇರಿ ಮತ್ತು ಕಾರೈಕಲ್ ಪ್ರದೇಶಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ತಜ್ಞರು ಶನಿವಾರ ಹೇಳಿದ್ದಾರೆ. ಚೆನ್ನೈ ಮತ್ತು ನೆರೆಯ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಕೆಲವು ಪ್ರದೇಶಗಳಲ್ಲಿ ಗುಡುಗು ಸಹಿತ ಒಂದು ಅಥವಾ ಎರಡು ಬಾರಿ ಹಗುರದಿಂದ ಮಧ್ಯಮ ಮಳೆಯಾಗುವ ಸಾಧ್ಯತೆ ಇದೆ. ತಮಿಳುನಾಡು ಕರಾವಳಿ, ದಕ್ಷಿಣ ಆಂಧ್ರಪ್ರದೇಶ ಕರಾವಳಿ, ಮನ್ನಾರ್ ಕೊಲ್ಲಿ ಮತ್ತು ಕೊಮೊರಿನ್ ಪ್ರದೇಶದ ಮೇಲೆ ಗಂಟೆಗೆ 55 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಅ.25-27ರ ಅವಧಿಯಲ್ಲಿ ಸ್ಥಳೀಯ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಸೂಚನೆ ನೀಡಲಾಗಿದೆ. ಭಾರತೀಯ ಕರಾವಳಿ ಕಾವಲು ಪಡೆ (ಐಸಿಜಿ), ಈಗಾಗಲೇ ಸಮುದ್ರಕ್ಕೆ ತೆರಳಿರುವ ನಾವಿಕರು ಮತ್ತು ಮೀನುಗಾರರಿಗೆ ಹತ್ತಿರದ ಬಂದರಿಗೆ ಹಿಂತಿರುಗುವಂತೆ ಸೂಚನೆ ನೀಡುತ್ತಿದೆ. 'ಐಸಿಜಿ'ಯ ಕಾವಲು ನೌಕೆಗಳು, ವಿಮಾನಗಳು ಮತ್ತು ರಾಡಾರ್ ಕೇಂದ್ರಗಳು ಸಮುದ್ರದಲ್ಲಿರುವ ಮೀನುಗಾರರಿಗೆ ನಿರಂತರ ಎಚ್ಚರಿಕೆ ನೀಡುತ್ತಿವೆ. ಸುರಕ್ಷತೆ ದೃಷ್ಟಿಯಿಂದ ಸಾಧ್ಯವಾದಷ್ಟು ಬೇಗ ಹತ್ತಿರದ ಬಂದರಿಗೆ ಹಿಂತಿರುಗುವಂತೆ ಮನವಿ ಮಾಡಲಾಗುತ್ತಿದೆ ಎಂದು ಕರಾವಳಿ ಕಾವಲು ಪಡೆ ತಿಳಿಸಿದೆ.

ಆಂಧ್ರ ಭಾರೀ ಮಳೆ

ಭಾನುವಾರದಿಂದ 5 ದಿನಗಳ ಕಾಲ ಆಂಧ್ರಪ್ರದೇಶದ ವಿವಿಧೆಡೆ ವ್ಯಾಪಕ ಮಳೆಯಾಗುವ ನಿರೀಕ್ಷೆಯಿದೆ. ಬಾಪಟ್ಲ, ಪ್ರಕಾಶಂ, ಶ್ರೀಪೊಟ್ಟಿಶ್ರೀರಾಮುಲು, ನೆಲ್ಲೂರು, ತಿರುಪತಿ ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆಯಾಗಿದೆ. ಗುಂಟೂರು, ಬಾಪಟ್ಲ, ಪ್ರಕಾಶಂ, ನೆಲ್ಲೂರು, ತಿರುಪತಿ ಜಿಲ್ಲೆಗಳಲ್ಲಿ ಭಾನುವಾರ ಭಾರೀ ಮಳೆಯಾಗಲಿದೆ. ಕಾಕಿನಾಡ, ಡಾ.ಬಿ.ಆರ್.ಅಂಬೇಡ್ಕರ್ ಕೋಣಸೀಮೆ, ಪಶ್ಚಿಮ ಗೋದಾವರಿ, ವೈ.ಎಸ್.ಆರ್. ಜಿಲ್ಲೆಗಳಲ್ಲಿಯೂ ಮಳೆ ಸಾಧ್ಯತೆ ಇದೆ ಎಂದು ಅಮರಾವತಿ ಹವಾಮಾನ ಕೇಂದ್ರ ತಿಳಿಸಿದೆ.

ಒಡಿಶಾ-ಹೈ ಅಲರ್ಟ್: ಒಡಿಶಾ ರಾಜ್ಯ ಭಾಗಕ್ಕೂ ಚಂಡಮಾರುತ ಮೊಂಥಾ ಅಪ್ಪಳಿಸಲಿರುವ ಭೀತಿಯಿಂದಾಗಿ ಕಟ್ಟೆಚ್ಚರ ವಹಿಸಲು ವಿಪತ್ತು ನಿರ್ವಹಣಾ ತಂಡಗಳಿಗೆ ಮುನ್ಸೂಚನೆ ನೀಡಲಾಗಿದೆ. ವ್ಯಾಪಕ ಮಳೆ ಮತ್ತು ಬಿರುಗಾಳಿಯನ್ನು ಉಂಟುಮಾಡುವ ಸಾಧ್ಯತೆಯಿದೆ.



ಭಾರತದ ಮೇಲೆ ಯುದ್ಧ ಮಾಡಿದರೆ ಪಾಕ್ ಸೋಲು

ಅಮೆರಿಕ 'ಸಿಐಎ' ಮಾಜಿ ಅಧಿಕಾರಿ ಭವಿಷ್ಯ ನುಡಿ | ಅಮೆರಿಕ ನಿಯಂತ್ರಣದಲ್ಲಿ ಪಾಕ್‌ನ ಅಣ್ವಸ್ತ್ರಗಳು

ದೆಹಲಿ: ಭಾರತದ ಮೇಲೆ ಏನಾದರೂ ಯುದ್ಧ ಮಾಡಲು ಮುಂದಾದರೆ ನಿಮಗೆ ಸೋಲು ಶೇ.100ರಷ್ಟು ಖಚಿತ ಎಂದು ಅಮೆರಿಕದ ಮಾಜಿ ಸಿಐಎ ಅಧಿಕಾರಿ ಜಾನ್ ಕಿರಿಯಾಕೌ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದಾರೆ.



ಜಾನ್ ಕಿರಿಯಾಕೌ, ಈ ಹಿಂದೆ, ಅಮೆರಿಕದ ಪ್ರಬಲ ಗುಪ್ತಚರ ವಿಭಾಗವಾದ 'ಕೇಂದ್ರ ಗುಪ್ತಚರ ಸಂಸ್ಥೆ'(ಸಿಐಎ)ಯ ಭಾಗವಾಗಿ ಪಾಕಿಸ್ತಾನದಲ್ಲಿ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳ ನೇತೃತ್ವ ವಹಿಸಿದ್ದರು.

'ನಾನು ಪರಮಾಣು ಶಸ್ತ್ರಾಸ್ತ್ರಗಳ ಕುರಿತು ಮಾತನಾಡುತ್ತಿಲ್ಲ. ಸಾಂಪ್ರದಾಯಿಕ ಯುದ್ಧದ ಬಗ್ಗೆ ಮಾತನಾಡುತ್ತಿರುವೆ. ಭಾರತ-ಪಾಕ್ ಯುದ್ಧವಾದರೆ ಪಾಕಿಸ್ತಾನ ಸೇನೆಯೇ ಸೋಲುತ್ತದೆ. ಹೀಗೆ ಯುದ್ಧ ಮಾಡುವುದರಿಂದ ಪಾಕ್‌ಗೆ ಸ್ವಲ್ಪವೂ ಅನುಕೂಲ ಆಗುವುದಿಲ್ಲ. ಆ ವಿಷಯ ಅಷ್ಟು ಸ್ಪಷ್ಟವಾಗಿದೆ' ಎಂದು ಕಿರಿಯಾಕೌ ಸುದ್ದಿಸಂಸ್ಥೆಯ ಸಂದರ್ಶನದಲ್ಲಿ ಹೇಳಿದ್ದಾರೆ.

ಭಾರತದ ಮೇಲೆ ಕಾಲು ಕೆರೆದು ಜಗಳಕ್ಕೆ ಸಿದ್ಧವಾಗಿರುವಂತೆ ಉತ್ತೇಜಿಸುವ ಮಾತನಾಡುತ್ತಿರುವ ಪಾಕ್ ರಕ್ಷಣಾ ಸಚಿವ ಖ್ವಾಜಾ ಮತ್ತು ಸೇನಾಮುಖ್ಯಸ್ಥ ಅಸೀಮ್ ಮುನೀರ್ ಅವರನ್ನು ಕುರಿತೇ ಕಿರಿಯಾಕೌ ಈ ಮಾತುಗಳನ್ನು ಹೇಳಿದಂತಿದೆ.

ಒಂದೂವರೆ ದಶಕದ ಕಾಲ ಪಾಕ್‌ನಲ್ಲೇ ಇದ್ದು, ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳಲ್ಲಿ ವೃತ್ತಿಜೀವನದ ದ್ವಿತೀಯಾರ್ಧ ಕಳೆದಿರುವ ಕಿರಿಯಾಕೌ, ಭಾರತವನ್ನು ಪ್ರಚೋದಿಸುವುದನ್ನು ಪಾಕ್ ನಾಯಕರು ಮೊದಲು ನಿಲ್ಲಿಸುವುದು ಉತ್ತಮ ಎಂದು ಕಿವಿಮಾತು ಹೇಳಿದ್ದಾರೆ.

2002ರಲ್ಲಿ ಪಾಕಿಸ್ತಾನದಲ್ಲಿದ್ದಾಗ ಕಿರಿಯಾಕೌ, ಪಾಕ್‌ನ ಅಣ್ವಸ್ತ್ರಗಳನ್ನು ಅಮೆರಿಕ ನಿಯಂತ್ರಿಸುತ್ತದೆ ಎಂದು ಅನಧಿಕೃತವಾಗಿ ಹೇಳುತ್ತಿದ್ದರು. ಪರ್ವೇಜ್ ಮುಷರಫ್ ಸರಕಾರವನ್ನು ಖರೀದಿಸಲು ಅಮೆರಿಕ ಹೇಗೆ ಪಾಕ್‌ಗೆ ಕೋಟ್ಯಂತರ ಡಾಲರ್ ನೆರವು ನೀಡಿತ್ತು ಎಂಬ ಬಗ್ಗೆ ಪ್ರಸ್ತಾಪಿಸಿದ್ದರು.

2026ರಲ್ಲಿ ಚುನಾವಣೆ ನಡೆಯುವ ಐದು ರಾಜ್ಯ ಸೇರಿ 15 ರಾಜ್ಯಗಳಲ್ಲಿ ಎಸ್‌ಐಆರ್

ದೇಶಾದ್ಯಂತ ಎಸ್‌ಐಆರ್: ಮುಂದಿನ ವಾರ ಆರಂಭ

ದೆಹಲಿ: ಈಗಾಗಲೇ ಬಿಹಾರ ರಾಜ್ಯದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ನಡೆಸಿರುವ ಭಾರತೀಯ ಚುನಾವಣಾ ಆಯೋಗ, ದೇಶದೆಲ್ಲೆಡೆ ಎಸ್‌ಐಆರ್ ನಡೆಸುವುದಕ್ಕೆ ಮುಂದಾಗಿದೆ. ಮೊದಲ ಹಂತದಲ್ಲಿ ದೇಶಾದ್ಯಂತದ ಎಸ್‌ಐಆರ್ ಪ್ರಕ್ರಿಯೆಯನ್ನು 10-15 ರಾಜ್ಯಗಳಲ್ಲಿ ಮುಂದಿನ ವಾರದಿಂದ ಆರಂಭಿಸಲು ಸಿದ್ಧತೆ ಮಾಡಿಕೊಂಡಿದೆ.

ಮತದಾರರ ಪಟ್ಟಿಯ ಮೊದಲ 'ಪ್ಯಾನ್ ಇಂಡಿಯ' ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್)ಯನ್ನು ಮುಂದಿನ ವಾರದಿಂದಲೇ ಜಾರಿಗೆ ತರುವ ಸಾಧ್ಯತೆಯಿದೆ. ಇದರಲ್ಲಿ ಕನಿಷ್ಠ 10 ರಿಂದ ಗರಿಷ್ಠ 15 ರಾಜ್ಯಗಳು ಸೇರಿಕೊಳ್ಳಲಿವೆ. ಅಸ್ಸಾಂ, ತಮಿಳುನಾಡು, ಪುದುಚೇರಿ, ಕೇರಳ ಮತ್ತು ಪಶ್ಚಿಮ ಬಂಗಾಳ 2026ರಲ್ಲಿ ವಿಧಾನಸಭೆ ಚುನಾವಣೆ ಎದುರಿಸಲಿದ್ದು, ಈ ರಾಜ್ಯಗಳಲ್ಲಿಯೂ ಮುಂದಿನ ವಾರದಿಂದಲೇ ಮತದಾರರ ಪಟ್ಟಿಯ ಶುದ್ಧೀಕರಣ ಕಾರ್ಯ ಆರಂಭವಾಗಲಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುತ್ತಿರುವ ರಾಜ್ಯಗಳಲ್ಲಿ 'ಎಸ್‌ಐಆರ್'



ನಡೆಸುವುದಿಲ್ಲ. ಏಕೆಂದರೆ ಚುನಾವಣಾ ಯಂತ್ರದ ತಳ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ಆ ಚುನಾವಣೆಗಳಲ್ಲಿ ನಿರತರಾಗಿರುತ್ತಾರೆ. ಅಂತಹ ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಂತರದ ದಿನಗಳಲ್ಲಿ ನಡೆಸಲಾಗುವುದು ಎಂದು ಅಧಿಕಾರಿ ಹೇಳಿದ್ದಾರೆ.

ಬಿಹಾರದಲ್ಲಿ ಎಸ್‌ಐಆರ್ ಮುಕ್ತಾಯಗೊಂಡ ಬೆನ್ನಲ್ಲೇ 'ದೇಶಾದ್ಯಂತ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಗೆ ಸನ್ನದ್ಧರಾಗಿರಿ' ಎಂದು ರಾಜ್ಯಗಳಿಗೆ ಕೇಂದ್ರ ಚುನಾವಣಾ ಆಯೋಗ ಸೂಚನೆ ನೀಡಿತ್ತು.

ಬಿಹಾರದಲ್ಲಿ ಮತದಾರರ ಪಟ್ಟಿ ಶುದ್ಧೀಕರಣ ಕಾರ್ಯ ಮುಕ್ತಾಯಗೊಂಡ ಬಳಿಕ ಸೆ.30ರಂದು 7.42 ಕೋಟಿ ಮತದಾರರಿರುವ ಅಂತಿಮ ಪರಿಷ್ಕೃತ ಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸಿದೆ.

ಬಿಹಾರದಲ್ಲಿ ಯಾದವ ಸಮುದಾಯ ಪ್ರಾಬಲ್ಯ

ಯಾದವ ಸಮುದಾಯದವರೇ ಆರ್‌ಜೆಡಿ ಸಿಎಂ ಅಭ್ಯರ್ಥಿ
ಪ್ರಮುಖ ಯಾದವ ನಾಯಕರಿಗೇ ಎನ್‌ಡಿಎ ಟಿಕೆಟ್ ಇಲ್ಲ

ಪಟನಾ: ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ)-ಕಾಂಗ್ರೆಸ್ ಪಕ್ಷದ ಜಂಟಿ ನೇತೃತ್ವ ಇರುವ 'ಮಹಾಘಟಬಂಧನ್' ಒಕ್ಕೂಟದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ಗುರುವಾರ ಘೋಷಿಸಲಾಗಿದೆ. ಇದರೊಂದಿಗೆ, ಬಿಹಾರದ ಚುನಾವಣಾ ರಾಜಕಾರಣದಲ್ಲಿ ಮತ್ತೊಮ್ಮೆ ಯಾದವ್ ಸಮುದಾಯದ ಪಾತ್ರವೇ ಪ್ರಮುಖವಾಗುವಂತಾಗಿದೆ.

ಇನ್ನೊಂದೆಡೆ, ಬಿಜೆಪಿ ಮತ್ತು ಜೆಡಿಯು ಜಂಟಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಈ ಬಾರಿ ಪ್ರಮುಖ ಯಾದವ ಸಮುದಾಯದ ಐದಾರು ಅಭ್ಯರ್ಥಿಗಳಿಗೆ ಟಿಕೆಟ್ ನಿರಾಕರಿಸಲಾಗಿದೆ. ಪಟನಾ ಸಾಹಿಬ್ ಕ್ಷೇತ್ರವನ್ನು ದೀರ್ಘಕಾಲದಿಂದ ಪ್ರತಿನಿಧಿಸುತ್ತಿರುವ ಪ್ರಸ್ತುತ ವಿಧಾನಸಭಾ ಸ್ಪೀಕರ್ ಆಗಿರುವ ನಂದ ಕಿಶೋರ್ ಯಾದವ್ ಮತ್ತು ಮಾನೇರ್ ವಿಧಾನಸಭಾ ಕ್ಷೇತ್ರದ ಪ್ರಭಾವಿ ನಾಯಕ, ಬಿಜೆಪಿಯ ರಾಷ್ಟ್ರೀಯ ವಕ್ತಾರ ಮತ್ತು ಒಬಿಸಿ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ನಿಖಿಲ್ ಆನಂದ್ ಅಂತಹವರಿಗೇ ಈ ಬಾರಿ ಸ್ಪರ್ಧೆ ಅವಕಾಶ ನೀಡಲಾಗಿಲ್ಲ. ಇದರಿಂದ ಯಾದವ ಸಮುದಾಯಕ್ಕೆ ಎನ್‌ಡಿಎಯಿಂದ ನಕಾರಾತ್ಮಕ ಸಂದೇಶ ರವಾನೆಯಾಗಿದೆ. ಇದರಿಂದಾಗಿ ಯಾದವ ಸಮುದಾಯದ ಮತಗಳನ್ನು ಕ್ರೋಢೀಕರಿಸಲು ದೀರ್ಘಕಾಲದಿಂದ ಪ್ರಯತ್ನಿಸುತ್ತಿರುವ ಬಿಜೆಪಿಗೆ ದೊಡ್ಡ ಸವಾಲ ಎದುರಾದಂತಾಗಿದೆ.

ಆರ್‌ಜೆಡಿ ಪಕ್ಷದ ಪರವಾಗಿರುವ ಯಾದವ ಮತದಾರರನ್ನು ಸೆಳೆಯಲು ಬಿಜೆಪಿ ಹಲವು ವರ್ಷಗಳಿಂದ ಯತ್ನಿಸುತ್ತಿದೆ. ಈವರೆಗೂ ಅದು ಸಾಧ್ಯವಾಗಿಲ್ಲ. ಈಗ ಯಾದವ ಸಮುದಾಯದ ಹಲವು ಸುಶಿಕ್ಷಿತ ಮತ್ತು ಪ್ರಭಾವಿ ನಾಯಕರನ್ನು ಕೈಬಿಡಲಾಗಿದೆ.

ಈ ಎಲ್ಲಾ ಬೆಳವಣಿಗೆಗಳಿಂದಾಗಿ ಆರ್‌ಜೆಡಿ ಪಕ್ಷ ಸಹಜವಾಗಿಯೇ ತನ್ನ ಸಾಂಪ್ರದಾಯಿಕ 'ಯಾದವ' ಮತ ಬ್ಯಾಂಕ್ ಅನ್ನು ಮತ್ತಷ್ಟು ಗಟ್ಟಿ ಮಾಡಿಕೊಳ್ಳಲು ಸಹಕಾರಿಯಾಗಲಿದೆ ಎಂದು ವಿಶ್ಲೇಷಣೆ ಮಾಡಲಾಗುತ್ತಿದೆ.

ಯಾದವ ಸಮುದಾಯ ಬಿಹಾರದಲ್ಲಿ ಅತಿದೊಡ್ಡ ಸಮುದಾಯವಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇ.14ರಷ್ಟು ಪ್ರಾತಿನಿಧ್ಯವನ್ನು ಹೊಂದಿದೆ. ಇವರಲ್ಲಿ ಹೆಚ್ಚಿನ ಮತದಾರರು ಆರ್‌ಜೆಡಿ ಪಕ್ಷಕ್ಕೆ ನಿಷ್ಠರಾಗಿದ್ದಾರೆ ಎಂಬುದು ಈವರೆಗಿನ ಹಲವು ಚುನಾವಣೆಗಳಲ್ಲಿ ಕಂಡುಬಂಧಿದೆ. ಈ ಸಮುದಾಯದ ಬಲವಾದ ಬೆಂಬಲ ಇರುವುದರಿಂದಾಗಿಯೇ 1990 ರಿಂದ 2005ರವರೆಗೂ ರಾಷ್ಟ್ರೀಯ ಜನತಾ ದಳ ಪಕ್ಷದ ನೇತಾರ ಲಾಲು ಪ್ರಸಾದ್ ಯಾದವ್, ನಂತರ ಪತ್ನಿ ರಾಬ್ರಿ ದೇವಿ ಬಿಹಾರ ರಾಜಕೀಯದಲ್ಲಿ ಪ್ರಾಬಲ್ಯ ಸಾಧಿಸಲು ಸಾಧ್ಯವಾಗಿದೆ.

ಬಿಹಾರ ಚುನಾವಣೆ: ಹಂತ-1ಕ್ಕೆ 12 ದಿನ

ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಮೊದಲ ಹಂತದ ಮತದಾನ ನ.6ರಂದು ನಡೆಯಲಿದ್ದು, ಅದಕ್ಕೀಗ 12 ದಿನಗಳಷ್ಟೇ ಬಾಕಿ ಇವೆ. ಬಿಜೆಪಿ-ಜೆಡಿಯು ಜಂಟಿ ನೇತೃತ್ವದ 'ಎನ್‌ಡಿಎ' ಮೈತ್ರಿಕೂಟದ ಅಭ್ಯರ್ಥಿಗಳ ಪರವಾಗಿ ದೆಹಲಿಯಿಂದಲೇ ದೊಡ್ಡ ನಾಯಕರು ಬಂದು ಪ್ರಚಾರ ಮಾಡಲಾರಂಭಿಸಿದ್ದಾರೆ.

'ಎನ್‌ಡಿಎ' ಪರವಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಬಿಹಾರ ಚುನಾವಣಾ ಕಣಕ್ಕೆ ತೆರಳಿ ದೊಡ್ಡ ಮಟ್ಟದಲ್ಲೇ ಪ್ರಚಾರ ಕಾರ್ಯ ಆರಂಭಿಸಿದ್ದಾರೆ.

ಆದರೆ, ಪ್ರಚಾರ ವಿಚಾರದಲ್ಲಿ ಆರ್‌ಜೆಡಿ-ಕಾಂಗ್ರೆಸ್ ಜಂಟಿ ನೇತೃತ್ವದ 'ಮಹಾಘಟಬಂಧನ್' ಒಕ್ಕೂಟ ಹಿಂದೆ ಬಿದ್ದಿದೆ. 'ಮಹಾಘಟಬಂಧನ್' ಪರವಾಗಿ ಆರ್‌ಜೆಡಿಯಿಂದ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್ ಬಿರುಸಿನ ಪ್ರಚಾರ ನಡೆಸಿದ್ದಾರೆ. ಕಾಂಗ್ರೆಸ್‌ನ ಪ್ರಮುಖ ನಾಯಕರು ಇನ್ನಷ್ಟೇ ಚುನಾವಣಾ ಪ್ರಚಾರಕ್ಕೆ ಬರಬೇಕಿದೆ.

ಮರ ಕೆಡವಿ ರಸ್ತೆ ತಡೆದ ಕಬಾಲಿ: ಕೇರಳ ಹೆದ್ದಾರಿ 18 ಗಂಟೆ ಬಂದ್

ಮಾರ್ಗದ ಎರಡೂ ಬದಿಯಲ್ಲಿ ಸಾಲುಗಟ್ಟಿ ನಿಂತ ನೂರಾರು ವಾಹನ | 33 ವರ್ಷದ ಒಂಟಿ ಸಲಗ ಕಬಾಲಿಯ ಸ್ಥಳಾಂತರಕ್ಕೆ ಚಾಲಕರ ಮನವಿ

ತ್ರಿಶೂರ್: ಕೇರಳದ ಹೆಸರಾಂತ ಒಂಟಿ ಸಲಗ 'ಕಬಾಲಿ' ಹೆದ್ದಾರಿಗೆ ಅಡ್ಡಲಾಗಿ ತಾಳೆಮರವನ್ನು ಕೆಡವಿ ಬೀಳಿಸಿದ್ದರಿಂದ 18 ಗಂಟೆ ಕಾಲ ಮಾರ್ಗ ಬಂದ್ ಆಗಿತ್ತು. ಪರಿಣಾಮ ಎರಡೂ ಮಾರ್ಗಗಳಲ್ಲಿ ಕಿ.ಮೀ.ಗಳಷ್ಟು ದೂರದವರೆಗೂ ನೂರಾರು ವಾಹನಗಳು ಸಾಲುಗಟ್ಟಿದ್ದವು.

ಮದವೇರಿದ್ದ ಕಾಡಾನೆ 'ಕಬಾಲಿ' ಹೆದ್ದಾರಿಗೆ ಅಡ್ಡಲಾಗಿ ಮರ ಬೀಳಿಸಿದ್ದಷ್ಟೇ ಅಲ್ಲದೇ, ಆ ಮರವನ್ನು ತೆರವುಗೊಳಿಸಲು ಅವಕಾಶ ಕೊಡುವುದಿಲ್ಲ ಎನ್ನುವಂತೆ ಅಲ್ಲಿಯೇ ಅತ್ತಿತ್ತ ಓಡಾಡುತ್ತಲೇ ಇದ್ದಿದ್ದರಿಂದ ಮುಕ್ಕಾಲು ದಿನದವರೆಗೂ ವಾಹನಗಳು ಹಿಂದೆ-ಮುಂದೆ ಚಲಿಸಲಾಗದೇ ಉಳಿಯುವಂತಾಯಿತು.

ಕೇರಳದ ಪಾಲಕ್ಕಾಡ್ ಜಿಲ್ಲೆಯ ಅತ್ತಿರಪ್ಪಿಲ್ಲಿ-ಮಲಕ್ಕಪ್ಪಾರಾ ವ್ಯಾಪ್ತಿಯಲ್ಲಿ ಬರುವ ಅಂತಾರಾಜ್ಯ ಹೆದ್ದಾರಿಯಲ್ಲಿ ಕೆಲ ದಿನಗಳ ಹಿಂದೆ ಕಬಾಲಿ ಕಾಡಾನೆಯ ಆಟಾಟೋಪ ಆ ಮಾರ್ಗದ ವಾಹನಗಳ ಚಾಲಕರು, ಪ್ರಯಾಣಿಕರನ್ನು 18 ಗಂಟೆಗಳ ಕಾಲ ಪರಿತಪಿಸುವಂತೆ ಮಾಡಿದೆ.

ಅರಣ್ಯ ಅಧಿಕಾರಿಗಳ ಸಿಬ್ಬಂದಿಗಳ ತಂಡದೊಡನೆ ಬಂದು ಗಂಟೆಗಳ ಕಾಲ ಪರಿಶ್ರಮ ಪಟ್ಟರೂ ಲೆಕ್ಕಿಸದ ಕಬಾಲಿ, ರಸ್ತೆಯಿಂದ ಜಾಗ ಖಾಲಿ ಮಾಡಲಿಲ್ಲ. ಗಂಟೆಗಳ ಕಾಲ ರಸ್ತೆಯಲ್ಲೇ ವಾಹನಗಳಿಗೆ ಅಡ್ಡಲಾಗಿ ನಿಂತು ತಾಳೆ ಮರದ ಗರಿಗಳನ್ನು ನಿದಾನವಾಗಿ ಮೆಲ್ಲುತ್ತಾ ನಿಂತಿತ್ತು. ಮೇವು ಖಾಲಿ ಆದ ಬಳಿಕ ಕಬಾಲಿ ನಸುಕಿನ ವೇಳೆಗೆ ರಸ್ತೆ ಬಿಟ್ಟು ಕಾಡಿನೊಳಕ್ಕೆ ತೆರಳಿತು. ಆ ನಂತರವಷ್ಟೇ ಆ ರಸ್ತೆಗಡ್ಡಲಾಗಿ ಬಿದ್ದಿದ್ದ ಮರವನ್ನು ತೆರವುಗೊಳಿಸಿ ಮಾರ್ಗವನ್ನು ಸಂಚಾರಕ್ಕೆ ಅನುವು ಮಾಡಿಕೊಡಲು ಸಾಧ್ಯವಾಯಿತು. ಈ ಸಂದರ್ಭದ 2.42 ನಿಮಿಷದ ವಿಡಿಯೊವನ್ನು ಕೆಪಿ ಆಶಿಷ್ ಎನ್ನುವವರು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.



ಕಬಾಲಿ ಸ್ಥಳಾಂತರಕ್ಕೆ ಮನವಿ

ಕಬಾಲಿ ಇದೇ ಭಾಗದಲ್ಲಿ ಕಳೆದ ವರ್ಷ ಆಂಬ್ಯುಲೆನ್ಸ್ ತಡೆದು ನಿಲ್ಲಿಸಿತ್ತು. ಮತ್ತೊಮ್ಮೆ ಮೋಟಾರ್ ಬೈಕ್ ಸವಾರ ಮೇಲೆ ದಾಳಿ ಮಾಡಿ ಗಾಯಗೊಳಿಸಿತ್ತು. 2022ರಲ್ಲಿ ಜೀಪ್ ಮೇಲೆ ದಾಳಿ ಮಾಡಿತ್ತು. 33 ವರ್ಷ ಪ್ರಾಯದ ಒಂಟಿ ಸಲಗಕ್ಕೆ ನಟ ರಜನಿ ಕಾಂತ್ ಅವರ 2016ನೇ ವರ್ಷದ ಸಿನಿಮಾ 'ಕಬಾಲಿ' ಹೆಸರನ್ನೇ ಜನರಿಟ್ಟಿದ್ದಾರೆ. ಪಾಲಕ್ಕಾಡ್ ಜಿಲ್ಲೆಯ ಅತ್ತಿರಪ್ಪಿಲ್ಲಿ-ಮಲಕ್ಕಪ್ಪಾರಾ ಭಾಗದಲ್ಲಿ ಕಬಾಲಿಯಿಂದ ಇಂತಹುದೇ ಸಮಸ್ಯೆ ಪದೇ ಪದೇ ಎದುರಾಗುತ್ತಿದೆ. ಇದರಿಂದ ಸ್ಥಳೀಯ ಜನರು, ಪ್ರಯಾಣಿಕರು, ವಾಹನ ಚಾಲಕರಿಗೆ ಬಹಳ ತೊಂದರೆ ಆಗುತ್ತಿದೆ. ಹಾಗಾಗಿ, ಕಬಾಲಿಯನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವಂತೆ ಅರಣ್ಯ ಇಲಾಖೆಗೆ ಜನರು, ವಾಹನ ಚಾಲಕರು ಮನವಿ ಮಾಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಪೊಲೀಸರಿಂದ ಸೈಬರ್ ಕ್ರೈಂ ಜಾಗೃತಿ ಜಾಥಾ

ಲಿಂಗಸುಗೂರು: ಸೈಬರ್‌ಕ್ರೈಂ ಜಾಗೃತಿ ಮತ್ತು ದ್ವಿಚಕ್ರ ವಾಹನ ಸವಾರರು ಮತ್ತು ಹಿಂಬದಿ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ಜಾಗೃತಿ ಅಭಿಯಾನವನ್ನು ಲಿಂಗಸುಗೂರು ಉಪವಿಭಾಗದ ವತಿಯಿಂದ ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಸೈಬರ್‌ಅಪರಾಧ ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಪೊಲೀಸ್ ರು ಪಟ್ಟಣದ ಬಸವ ಸಾಗರ್‌ಕ್ರಾಸ್, ಗುಡದನಾಳ ಕ್ರಾಸ್, ಬಸ್ಟ್ಯಾಂಡ್ ಸರ್ಕಲ್, ಜೂನಿಯರ್‌ಕಾಲೇಜ್ ಮುಖಾಂತರ ಪೊಲೀಸ್ ಠಾಣೆಯವರೆಗೆ ಬೈಕ್ ಜಾಥವನ್ನು ಹಮ್ಮಿಕೊಳ್ಳಲಾಗಿತ್ತು. ನಾಗರಿಕರಿಗೆ ಇತ್ತೀಚಿನ ಕಾಲದಲ್ಲಿ ಹೆಚ್ಚುತ್ತಿರುವ ಆನ್ಲೈನ್ ಮೋಸ, ಬ್ಯಾಂಕ್ ಓಟಿಪಿ ವಂಚನೆ, ಫೇಕ್ ಲಿಂಕ್ಗಳು, ಸಾಮಾಜಿಕ ಮಾಧ್ಯಮದ ಮೂಲಕ ನಡೆಯುವ ಮೋಸ ಪ್ರಕರಣಗಳ ಕುರಿತು, ಅಜ್ಞಾತ ಲಿಂಕ್ಗಳಿಗೆ ಕ್ಲಿಕ್ ಮಾಡಬಾರದು, ಖಾಸಗಿ ಮಾಹಿತಿಯನ್ನು ಯಾರಿಗೂ ಹಂಚಿಕೊಳ್ಳಬಾರದು. ನಾಗರಿಕರು ಯಾವುದೇ ರೀತಿಯ ಸೈಬರ್‌ವಂಚನೆಗೆ ಒಳಗಾದರೆ ತಕ್ಷಣ 1930 ಅಥವಾ ಡಿಡಿಡಿ. ಛ್ಠಚಿಟ್ಟಿಜೆಇಛಿ.ಜಟಡ.ಜ್ಞಿ ಗೆ ದೂರು ನೀಡುವಂತೆ ಎಚ್ಚರಿಕೆ ಸಂದೇಶ ನೀಡಿದರು. ಕಾರ್ಯಕ್ರಮವು ಡಿವೈಎಸ್ಪಿ ದತ್ತತ್ರೆಯ ಕರ್ನಾಡ್ ನೇತೃತ್ವದಲ್ಲಿ ಜರುಗಿದ್ದು, ಪೊಲೀಸ್ ಇನ್ಸಪೆಕ್ಟರ್‌ಪುಂಡಲೀಕ ಪಟೇದಾರ ಭಾಗವಹಿಸಿದ್ದರು.

ಮಳೆ: ಜಲಾಶಯ ಮತ್ತೊಮ್ಮೆ ಭರ್ತಿ

ಮಸ್ಕಿ: ತಾಲೂಕಿನಲ್ಲಿ ಮಳೆ ಅರ್ಭಟ ಜೋರಾಗಿದ್ದು ಈ ಭಾಗದ ರೈತರ ಜೀವ ನಾಡಿ ಮಸ್ಕಿ ನಾಲಾ ಯೋಜನೆ ಜಲಾಶಯ ಮತ್ತೊಮ್ಮೆ ಭರ್ತಿ ಯಾಗಿದೆ. ಗುರುವಾರ ರಾತ್ರಿ ಸುರಿದ ಮಳೆಯಿಂದಾಗಿ ಜಲಾಶಯಕ್ಕೆ ಒಳ ಹರಿವು ಹೆಚ್ಚಾದ ಕಾರಣ ಆಣೆಕಟ್ಟಿನ 2 ಗೇಟ್ ಗಳನ್ನು ಎತ್ತಿ 200 ಕ್ಯುಸೆಕ್ ನೀರು ಹಳ್ಳಕ್ಕೆ ಹರಿ ಬಿಡಲಾಗಿದೆ. ಕಳೆದ 2 ತಿಂಗಳಲ್ಲಿ ಮಸ್ಕಿ ಜಲಾಶಯ 3 ಸಲ ಭರ್ತಿಯಾಗಿದೆ. ಪಟ್ಟಣ ಸೇರಿ ಸುತ್ತಲಿನ ಹಳ್ಳಿ ಗಳಲ್ಲಿ ಮಳೆ ಅರ್ಭಟ ದಿಂದ ಜನ ಜೀವನ ಅಸ್ತವ್ಯಸ್ತಗೊಂಡಿದೆ. ಸೋಮನಾಥ ನಗರದ ತೆಗ್ಗು ಪ್ರದೇಶ ಗಳಿಗೆ ನೀರು ನುಗ್ಗಿದ ಕಾರಣ ನಿವಾಸಿಗಳು ಪಡಿಪಾಟಲು ಪಡಬೇಕಾಯಿತು. ಹದ ಗೆಟ್ಟ ರಸ್ತೆಗಳಿಗೆ ಪುರಸಭೆ ಆಡಳಿತ ಮಂಡಳಿ ಇತ್ತೀಚಿಗೆ ಹಾಕಿಸಿದ್ದ ಮರಂ ಮಳೆ ನೀರಿಗೆ ಕೊಚ್ಚಿ ಹೋಗಿದೆ. ಪಟ್ಟಣದ ಸುತ್ತಲಿನ ಹಳ್ಳಿ ಗಳಲ್ಲಿ ಕೂಡ ಮಳೆಯಾಗಿದ್ದು ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತಿವೆ.

ಕಿರು ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮಸ್ಕಿ: ಕೇಂದ್ರ ಸರಕಾರದ ಆತ್ಮ ನಿರ್ಭರ ನಿಧಿ ಯೋಜನೆಯಲ್ಲಿ ಬೀದಿ ಬದಿ ವ್ಯಾಪಾರಿ, ತಳ್ಳುವ ಬಂಡಿ ಇತರ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಕಿರು ಸಾಲ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ. ಗುರುತಿಸಿದ ಎಲ್ಲ ಬೀದಿ ಬದಿ ವ್ಯಾಪಾರಿಗಳು ಆಧಾರ್ ,ರೇಷನ್ ಕಾರ್ಡ್ , ಬ್ಯಾಂಕ್ ಖಾತೆ ಪಾಸ್ ಬುಕ್ ಪ್ರತಿ, ಜಾತಿ, ಆದಾಯ, ಭಾವ ಚಿತ್ರ ಜತೆ ಪಿಎಂ ಸ್ವ ನಿಧಿ ಯೋಜನೆಯ ಸಾಲ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಚೇರಿಗೆ ಬಂದು ಸಮುದಾಯ ಸಂಘಟನಾಧಿಕಾರಿ ನಾಗರಾಜ ಅವರನ್ನು ಭೇಟಿಯಾಗಲು ಮುಖ್ಯಾಧಿಕಾರಿ ಕೋರಿದ್ದಾರೆ.

ಸಮುದಾಯ ಭವನಕ್ಕೆ ಭೂಮಿಪೂಜೆ

ಮುದಗಲ್: ಪಟ್ಟಣ ಸಮೀಪದ ವ್ಯಾಕರನಾಳ ಗ್ರಾಮದ ಶ್ರೀ ಶಂಕರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಅಂಕಲಿಮಠ ದ ಫಕೀರೇಶ್ವರ ಶ್ರೀಗಳು ಭೂಮಿ ಪೂಜೆ ನೆರವೇರಿಸಿದರು. ನಾಗಲಾಪೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ವ್ಯಾಕರನಾಳ ಗ್ರಾಮದಲ್ಲಿ ಎಂ.ಎಲ್.ಸಿ ಶರಣಗೌಡ ಬಯ್ಯಾಪೂರ ಅವರ 19 ಲಕ್ಷ ರು. ಗಳ ಅನುದಾನದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು ಭವನದ ನಿರ್ಮಾಣ ಕಾರ್ಯಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಭೀಮನಗೌಡ್ರು ಪೊಲೀಸ್ ಪಾಟೀಲ್, ರಾಮನಗೌಡ್ರು, ವೀರಯ್ಯ ಸ್ವಾಮಿ ವ್ಯಾಕರನಾಳ, ರಮೇಶ, ಮಲ್ಲನಗೌಡ ಯರದಿಹಾಳ, ಶರಣಪ್ಪ ವ್ಯಾಕರನಾಳ, ಚಂದ್ರಣ್ಣ ಯಡಿವಾಳ, ಹನುಮನಗೌಡ ಪೊಲೀಸ್ ಪಾಟೀಲ್, ಮಂಜುನಾಥ ಕಂದಗಲ್ ಇದ್ದರು.

{ **ಡಿ.ಕೆ.ಶಿವಕುಮಾರ್,** } ಡಿಸಿಎಂ

ಎ ಖಾತಾ ಹಾಗೂ ಬಿ ಖಾತಾ ಪರಿವರ್ತನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಜೆಡಿಎಸ್ ಆರೋಪದ ಬಗ್ಗೆ ಪ್ರತಿಕ್ರಿಯಿಸುತ್ತಾ, ಬಹಿರಂಗ ಚರ್ಚೆಗೆ ಬನ್ನಿ ಎಂದು ನಾನು ಕರೆಯುತ್ತಲೇ ಇದ್ದೇನೆ. ಎ ಖಾತಾ, ಬಿ ಖಾತಾ ವಿಚಾರದಲ್ಲಿ ಯಾವ ಭ್ರಷ್ಟಾಚಾರ ನಡೆಯುತ್ತಿದೆ? ಬೆಂಗಳೂರು ನಾಗರಿಕರ ಆಸ್ತಿ ದಾಖಲೆ ಸರಿಪಡಿಸಿಕೊಳ್ಳಲು, ಅವರಿಗೆ ಮುಂದೆ ಬ್ಯಾಂಕ್ ಸಾಲ ಹಾಗೂ ಇತರೆ ಸೌಲಭ್ಯ ಸಿಗಬೇಕು.

ದೀಪಾವಳಿಗೆ ಹೊಸ ಭಾಷ್ಯ ಬರೆದ ಸಂಡೂರಿನ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ವಿದ್ಯಾರ್ಥಿಗಳು

ಪಟಾಕಿ ತ್ಯಾಗ, ವೃದ್ಧಾಶ್ರಮಗಳಿಗೆ ಪ್ರೀತಿ ಮತಾಪು

ಸಂಡೂರು : ಪರಿಸರಕ್ಕೆ ಹಾನಿ ಮಾಡುವ ಪಟಾಕಿಗಳನ್ನು ಸುಡುವ ಬದಲು, ಶ್ರೀಶೈಲೇಶ್ವರ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ತಮ್ಮ ಪಟಾಕಿ ಹಣವನ್ನು ಉಳಿಸಿ, ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಸಂಡೂರು, ಕೂಡ್ಲಿಗಿ ಮತ್ತು ಕೊಟ್ಟೂರಿನ ಮೂರು ಪ್ರತ್ಯೇಕ ವೃದ್ಧಾಶ್ರಮಗಳಿಗೆ ತೆರಳಿ ಅಲ್ಲಿರುವ ಹಿರಿಯ ನಾಗರಿಕರೊಂದಿಗೆ ಸಂತೋಷ ಹಂಚಿಕೊಂಡು ನಿಜವಾದ ದೀಪಾವಳಿಯ ''ಬೆಳಕಿನ ಸಂದೇಶ''ವನ್ನು ಸಮಾಜಕ್ಕೆ ಸಾರುವ ಮೂಲಕ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿ ದೀಪಾವಳಿ ಹಬ್ಬವನ್ನು ಆಚರಿಸಿದ್ದಾರೆ ಎಂದು ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಆಡಳಿತಾಧಿಕಾರಿ ಕುಮಾರ್‌ಎಸ್ ನಾನಾವಟೆ ತಿಳಿಸಿದರು.

ಅವರು ವರದಿಗಾರರೊಂದಿಗೆ ಮಾತನಾಡಿ, ಭಾರತೀಯ ಸುರಾಜ್ಯ ಸಂಸ್ಥೆಯ ಸಂಡೂರು ಘಟಕ ಹಾಗೂ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಸಹಯೋಗದಲ್ಲಿ ಶಾಲೆಯ ವಿದ್ಯಾರ್ಥಿಗಳು ಪರಿಸರಕ್ಕೆ ಹಾನಿ ಮಾಡುವ ಪಟಾಕಿಗಳನ್ನು ಸುಡದೇ ವೃದ್ಧಾಶ್ರಮಗಳಲ್ಲಿನ ನೊಂದವರ ಬದುಕಿನಲ್ಲಿ ಬೆಳಕನ್ನು ತರುವ ನಿಟ್ಟಿನಲ್ಲಿ ಅವರಿಗೆ ಅವಶ್ಯಕವಾದ ಬಟ್ಟೆ ಬರೆ, ಸಿಹಿತಿಂಡಿ ಹಾಗೂ ದೀಪಗಳನ್ನು ನಮ್ಮ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ವಿತರಿಸಿ

ಹೊಸೂರು ಗ್ರಾಮಕ್ಕೆ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಆಡಳಿತಾಧಿಕಾರಿ ಕುಮಾರ್‌ಎಸ್ ನಾನಾವಟೆ ಭೇಟಿ ನೀಡಿ, ಸಂಗ್ರಹಿಸಿದ ವಸ್ತುಗಳನ್ನು ವಿತರಿಸಿದರು.

ಆಚರಿಸಿದ್ದು ಸಮಾಜಕ್ಕೆ ಮಾದರಿಯಾಗಿದೆ.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಸನಾ ಉಲ್ಲಾ ಮಾತನಾಡಿ, ದೀಪಾವಳಿ ಎಂದರೆ ಪಟಾಕಿಗಳ ಸದ್ದು ಮತ್ತು ಹೊಗೆ ಎಂಬ ಭಾವನೆಯನ್ನು ಧಿಕ್ಕರಿಸಿ, ನಮ್ಮ ಶಾಲೆಯ ಮಕ್ಕಳು ಮಹತ್ವದ ನಿರ್ಧಾರವೊಂದನ್ನು ಕೈಗೊಂಡು ಪಟಾಕಿ ಸಿಡಿತದಿಂದ ಉಂಟಾಗುವ ವಾಯು ಮತ್ತು ಶಬ್ದ ಮಾಲಿನ್ಯವನ್ನು ತಡೆಯಲು ಅವರು ಈ ವರ್ಷ ಪಟಾಕಿಗಳನ್ನು ಹಚ್ಚದಿರಲು ಶಪಥ ಮಾಡಿದರು. ಇದರ ಬದಲಾಗಿ, ಪಟಾಕಿಗಳಿಗಾಗಿ ಖರ್ಚು ಮಾಡುವ ಹಣವನ್ನು ಸಾರ್ಥಕ ಕಾರ್ಯಕ್ಕೆ ಬಳಸಲು ನಿರ್ಧರಿಸಿದರು.

ಭಾರತೀಯ ಸ್ವರಾಜ್ಯ ಸಂಸ್ಥೆಯ ಸಂಡೂರು ಘಟಕದ ಮಾರ್ಗದರ್ಶನದಲ್ಲಿ ದೇಣಿಗೆ ಸಂಗ್ರಹ ಅಭಿಯಾನವನ್ನು ಪ್ರಾರಂಭಿಸಿ ತಮಗೆ ನೀಡಿದ ಪಟಾಕಿ ಹಣ ಹಾಗೂ ತಮ್ಮ ಪಾಲಿನ ಸ್ವಲ್ಪ ಹಣವನ್ನು ಉಳಿಸಿ, ತಮ್ಮ ಮನೆಗಳಿಂದ ಮತ್ತು ಸ್ನೇಹಿತರಿಂದ ವೃದ್ಧಾಶ್ರಮಗಳ ನಿರ್ವಹಣೆಗೆ ಆರ್ಥಿಕ ಸಹಾಯಕ್ಕೆ ಹಣ, ಪ್ರಣತಿ ಮತ್ತು ಎಣ್ಣೆ ಬೆಳಕಿನ ಹಬ್ಬವನ್ನು ಆಚರಿಸಲು, ಸಿಹಿ ತಿಂಡಿ ಮತ್ತು ಹಣ್ಣು ಹಿರಿಯರಿಗೆ ಹಬ್ಬದ ಖುಷಿ ನೀಡಲು, ಹೊಸ ಬಟ್ಟೆಗಳು ಪ್ರೀತಿಯ ಕಾಣಿಕೆಯಾಗಿ ವೃದ್ಧರಿಗೆ ನೀಡಲು ಸಂಗ್ರಹಿಸಿದ ಎಲ್ಲ ವಸ್ತುಗಳನ್ನು ವಿದ್ಯಾರ್ಥಿಗಳು ಮತ್ತು ನಮ್ಮ ಸಂಸ್ಥೆಯ ಪ್ರತಿನಿಧಿಗಳು ಕೂಡ್ಲಿಗಿ ಮತ್ತು ಕೊಟ್ಟೂರಿನ ಮೂರು ವೃದ್ಧಾಶ್ರಮಗಳಿಗೆ ಹಾಗೂ ಸಂಡೂರು ತಾಲೂಕಿನ ಹೊಸೂರು ಗ್ರಾಮಕ್ಕೆ ಭೇಟಿ ನೀಡಿ, ಸಂಗ್ರಹಿಸಿದ ವಸ್ತುಗಳನ್ನು ನೀಡುವುದಲ್ಲದೆ, ಆಶ್ರಮದಲ್ಲಿರುವ ಹಿರಿಯರೊಂದಿಗೆ ಆತ್ಮೀಯವಾಗಿ ಸಮಯ ಕಳೆದು. ನಮ್ಮ ವಿದ್ಯಾರ್ಥಿಗಳು ಹಿರಿಯರ ಬಳಿ ಕುಳಿತು, ಅವರ ಜೀವನದ ಅನುಭವಗಳನ್ನು ಕೇಳಿದರು, ತಮ್ಮ ಶಾಲಾ ಚಟುವಟಿಕೆಗಳ ಬಗ್ಗೆ ಹೇಳಿದರು.

ಮಕ್ಕಳು ತೋರಿಸಿದ ಪ್ರೀತಿ ಮತ್ತು ಕಳಕಳಿಯಿಂದ ವೃದ್ಧಾಶ್ರಮಗಳಲ್ಲಿದ್ದ ಹಿರಿಯರ ಮುಖದಲ್ಲಿ ಸಂತೋಷದ ನಗೆ ಮೂಡಿತು. ತಾವು ಕಳೆದುಕೊಂಡ ಮಕ್ಕಳ ಪ್ರೀತಿಯನ್ನು ಈ ವಿದ್ಯಾರ್ಥಿಗಳಲ್ಲಿ ಕಂಡುಕೊಂಡರು. ಹಬ್ಬ ಎಂದರೆ ನಮ್ಮ ಸಂತೋಷವನ್ನು ಹಂಚಿಕೊಳ್ಳುವುದು, ವಿಶೇಷವಾಗಿ ಅಗತ್ಯವಿರುವವರ ಬದುಕಿನಲ್ಲಿ ಬೆಳಕು ತರುವುದು ಎಂಬುದನ್ನು ನಮ್ಮ ಶಾಲಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ತಮ್ಮ ಕಾರ್ಯದ ಮೂಲಕ ತೋರಿಸಿಕೊಟ್ಟಿದ್ದಾರೆ.ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿಯರಾದ ಸುಜಾತಾ ಘೋರ್ಪಡೆ, ರುಕ್ಮಿಣಿ ಕದಮ್, ದಿವಾಕರ್‌ಬೇಲೇರಿ ಹಾಗೂ ಎಲ್ಲ ಶಿಕ್ಷಕ ಶಿಕ್ಷಕಿಯರಿದ್ದರು.

> **ಈ ಆಚರಣೆಯು ಸಾಂಪ್ರದಾಯಿಕ ದೀಪಾವಳಿಗೆ ಒಂದು ಹೊಸ ಮಾನವೀಯ ಆಯಾಮ ನೀಡಿದೆ. ಪಟಾಕಿ ತ್ಯಜಿಸುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಲಾಗಿದೆ. ಹಿರಿಯರಿಗೆ ಗೌರವ ನೀಡುವುದು ಮತ್ತು ಸಮಾಜದ ದುರ್ಬಲ ವರ್ಗದ ಬಗ್ಗೆ ಕಾಳಜಿ ವಹಿಸುವ ಮೌಲ್ಯವನ್ನು ವಿದ್ಯಾರ್ಥಿಗಳಲ್ಲಿ ಬಿತ್ತಲಾಗಿದೆ.**
> **– ಕುಮಾರ್‌ಎಸ್.ನಾನಾವಟಿ, ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಆಡಳಿತಾಧಿಕಾರಿ**

ಮೂಲ ಸೌಕರ್ಯಕ್ಕಾಗಿ ದಸಂಸ ಪ್ರತಿಭಟನೆ

ಮುದಗಲ್: ಹಲ್ಕಾವಟಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮ ಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸ್ಥಿರಿದಂತೆ ಕರವಸೂಲಿಗಾರ ಜಗದೀಶನ ದುರಾಡಳಿತ ವಿರೋಧಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಒಕ್ಕೂಟದಿಂದ ಹಲ್ಕಾವಟಗಿ ಗ್ರಾ ಪಂ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ಗ್ರಾ.ಪಂಗೆ ಸರಕಾರದಿಂದ ಬರುವ ಮೂಲ ಹಾಗೂ ವಿವಿಧ ಸೌಲಭ್ಯಗಳಾದ ಕುಡಿಯುವ ನೀರು, ಚರಂಡಿ, ರಸ್ತೆ ಕಾಮಗಾರಿಹಾಗೂ ಶೌಚಾಲಯ ನಿರ್ಮಾಣ , ಬೀದಿ ದೀಪಗಳ ಅಳವಡಿಕೆ ಕೆ ಗ್ರಾಪಂ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದು, ಕೂಡಲೇ ಮೂಲ ಸೌಕರ್ಯಗಳನ್ನು ಒದಗಿಸುವುದು. ವಿವಿಧ ವಸತಿ ಯೋಜನೆಗಳಿಗೆ ಆಯ್ಕೆಯಾದ ಫಲಾನುಭವಿಸಗಳಿಂದ ಜಿ.ಪಿ.ಎಸ್. ಮಾಡಲು ಕರ ವಸೂಲಿಗಾರ ಜಗದೀಶ ಹಣದ ಬೇಡಿಕೆ ಇಟ್ಟಿದ್ದು ಕೂಡಲೇ ಅವನನ್ನು ಸೇವೆಯಿಂದ ಅಮಾನತುಗೊಳಿಸಬೇಕು.

ಅಂಕನಾಳ ಉಪನಾಳ ಗ್ರಾಮದಲ್ಲಿ ಸರಕಾರಿ ಗೈರಾಣಾದ ಸ.ನಂ. 36 ದಲಿತ ರುದ್ರಭೂಮಿ ಅಭಿವೃದ್ಧಿ ಮಾಡುವುದು, ಅಂಕನಾಳ ಉಪನಾಳ ಗ್ರಾಮದ ಕರಡಿ

ಲಿಂಗಸಗೂರು ತಾಲೂಕು ಪಂಚಾಯತ್ ವ್ಯವಸ್ಥಾಪಕ ಅಮರೇಶ ಗೌಡರ್‌ಗೆ ಗ್ರಾಮದ ಮಖಂಡರು ಮನವಿ ಸಲ್ಲಿಸಲಾಯಿತು.

ರಾಮಣ್ಣ ಮನೆಯಿಂದ ದರ್ಗಾದೇವಿ ದೇಗುಲದವರೆಗೆ ಸಿಸಿ ರಸ್ತೆ ನಿರ್ಮಿಸುವುದು, ಪಲಗಲದಿನ್ನಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಚರಂಡಿ ನಿರ್ಮಾಣ ಹಾಗೂ ರುದ್ರಭೂಮಿ ಅಭಿವೃದ್ಧಿ ಪಡಿಸುವುದು. ತೊಂಡಿಹಾಳ ಗ್ರಾಮದಲ್ಲಿ ದಲಿತ ಸಮುದಾಯಕ್ಕೆ ರುದ್ರಭೂಮಿ ಹಾಗೂ ಕುಡಿಯುವ ನೀರು , ಸಿಸಿ ರಸ್ತೆ ನಿರ್ಮಿಸುವುದು, ಅಂಕನಾಳ, ಉಪನಾಳ, ಹಲ್ಕಾವಟಗಿ ಗ್ರಾಮಗಳಲ್ಲಿ ಮಹಿಳೆರಿಗೆ ಹೈಟೆಕ್ ಶೌಚಾಲಯಗಳ ನಿರ್ಮಾಣ ಮಾಡುವುದು ಸೇರಿದಂತೆ ಗ್ರಾಪಂ ವ್ಯಾಪ್ತಿಯ ಕೆಲ ಗ್ರಾಮಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಧರಣಿ ನಿರತರು ಆಗ್ರಹಿಸಿದರು. ಲಿಂಗಸಗೂರು ತಾಲೂಕು ಪಂಚಾಯತ್ ವ್ಯವಸ್ಥಾಪಕ ಅಮರೇಶ ಗೌಡರ್‌ಗೆ ಗ್ರಾಮದ ಮಖಂಡರು ಮನವಿ ಸಲ್ಲಿಸಿ ಕೂಡಲೇ ನಮ್ಮ ಬೇಡಿಕೆಗಳಿಗೆ ಸ್ಪಂದಿಸುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ದಲಿತ ಧ್ವನಿ ಸಂಘಟನೆಯ ರಾಜ್ಯಾಧ್ಯಕ್ಷ ಬರಮರೆಡ್ಡಿ, ಹನುಮಂತಪ್ಪ ಚಲುವಾದಿ, ಜಾಂಬವಸೇನೆ ಮುಖಂಡ ಹನುಮಂತ, ವಿದ್ಯಾರ್ಥಿ ಯುವ ಮುಖಂಡ ಶಶಿಕುಮಾರ್,ದಲಿತ ಹೋರಟಗಾರರಾದ ಹನುಮಪ್ಪ ಕೊಡಗಲಿ, ಶಿವಪ್ಪ ಹೊಸಮನಿ, ಕೆಂಚಪ್ಪ ಅಂಕನಾಳ, ಯಮುನಪ್ಪ ಪ್ರಜಾರ್,ಶಿವಪ್ಪ ಎಚ್.ಹೊಸಮನಿ, ರಾಯಪ್ಪ ಬಯ್ಯಾಪೂರ ಗ್ರಾಮಸ್ಥರಿದ್ದರು.

ಕಿತ್ತೂರು ರಾಣಿ ಚನ್ನಮ್ಮಾಜಿಯ ಜಯಂತಿ ಆಚರಣೆ

ಸಂಡೂರು: ದತ್ತು ಮಕ್ಕಳಿಗೆ ಹಕ್ಕಿಲ್ಲ ಎನ್ನುವ ನೀತಿಯ ವಿರುದ್ಧ ಕಪ್ಪಕೊಡದೇ ಹೋರಾಡಿದ ಮೊದಲ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮ ಎಂದು ತಾಲೂಕು ನೌಕರರ ಸಂಘದ ಅಧ್ಯಕ್ಷ ಸಿದ್ದಣ್ಣ ಯಾಳವಾರ್‌ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚನ್ನಮ್ಮಾಜಿಯ ಜಯಂತಿ ಹಾಗೂ 201ನೇ ವಿಜಯೋತ್ಸವದಲ್ಲಿ ಮಾತನಾಡಿ, ಚನ್ನಮ್ಮಾಜಿಯ ಹೋರಾಟದ ಪ್ರಭಾವದಿಂ ದಲೇ ಕಿತ್ತೂರು ಪ್ರಖ್ಯಾತವಾಗಲು ಕಾರಣ ಎಂದು ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚನ್ನಮ್ಮಾಜಿಯ ಜಯಂತಿ ಹಾಗೂ 201ನೇ ವಿಜಯೋತ್ಸವವನ್ನು ಉದ್ದೇಶಿಸಿ ಮಾತನಾಡಿ, ಚನ್ನಮ್ಮಾಜಿಯ ಹೋರಾಟದ ಪ್ರಭಾವದಿಂದಲೇ ಕಿತ್ತೂರು ಪ್ರಖ್ಯಾತವಾಗಲು ಕಾರಣ ಎಂದರು.ನಿಕಟಪೂರ್ವ ತಾಲೂಕು ಅಧ್ಯಕ್ಷ ಪಿ ರವಿಕುಮಾರ ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮನವರು ಎಳೆ ವಯಸ್ಸಿನಲ್ಲಿಯೇ ಕುದುರೆ ಸವಾರಿ ಹಾಗೂ ಬಿಲ್ಲು ವಿದ್ಯೆಗಳನ್ನು ಕರಗತ ಮಾಡಿಕೊಂಡು ಕಿತ್ತೂರಿನ ಉಳುವಿಗಾಗಿ ಹೋರಾಟ ಮಾಡಿದವರಲ್ಲಿ ಪ್ರಮುಖರು ಎಂದರು.

ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ರಮೇಶ್ ಗಡಾದ ಮಾತನಾಡಿ, ಕನ್ನಡ ನಾಡಿನ ಹೆಮ್ಮೆಯ ಪುತ್ರಿ, ಸ್ವಾತಂತ್ರ್ಯ ಚಳುವಳಿಯ ಮೊದಲ ಹೋರಾ ಟಗಾರ್ತಿ,

ಸಂಡೂರಿನಲ್ಲಿ ಕಿತ್ತೂರು ರಾಣಿ ಚನ್ನಮ್ಮಾಜಿಯ ಜಯಂತಿ ಹಾಗೂ 201ನೇ ವಿಜಯೋತ್ಸವ ಹಮ್ಮಿಕೊಳ್ಳಲಾಯಿತು.

> **ಬೆಳಗಾವಿ ಜಿಲ್ಲೆಯ ಕಿತ್ತೂರು ಸಂಸ್ಥಾನದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಹೋರಾಡಿ ಗೆದ್ದ ಮಹಿಳೆ ಚೆನ್ನಮ್ಮಾಜಿಯಾಗಿದ್ದಾಳೆ.**
> **– ಬಪ್ಪಕಾನ್ ಕುಮಾರಸ್ವಾಮಿ, ಜಿಲ್ಲಾ ಪಂಚಮಸಾಲಿ ಅಧ್ಯಕ್ಷ**

ಬ್ರಿಟಿಷರನ್ನು ಸೋಲಿಸುವ ಮೂಲಕ ಇಡೀ ಕಿತ್ತೂರನ್ನು ಕಟ್ಟಿದ ಮಹಾನ್ ಮಹಿಳೆ ರಾಣಿ ಚನ್ನಮ್ಮ, ಇತಿಹಾಸದಲ್ಲಿಯೇ ತನ್ನದೇ ಅದ ಛಾಪನ್ನು ಮೂಡಿದ ಮಹಿಳೆ ರಾಣಿ ಚನ್ನಮ್ಮ ಎಂದರು.

ಸಮಾರಂಭದಲ್ಲಿ ಎಲ್ಲ ಗಣ್ಯರು ರಾಣಿ ಚೆನ್ನಮ್ಮನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ತಾಲೂಕು ಕಚೇರಿಯ ಶಿರಸ್ತೇದಾರ ಕೆ.ಎಂ.ಶಿವಕುಮಾರ್ ,ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಅರುಂಧತಿ, ತಾರಾನಗರದ ಬಸಟ್ಟಿ ಕುಮಾರಸ್ವಾಮಿ, ಉಳ್ಳಿ ಸುಬ್ಬಯ್ಯ, ಮೂಲಿಮನಿ ಸೋಮಣ್ಣ, ಬಳ್ಳಾರಿ ಜಿಲ್ಲಾ ಪಂಚಮಸಾಲಿ ಅಧ್ಯಕ್ಷ ಬೊಪ್ಪಖಾನ್ ಕುಮಾರಸ್ವಾಮಿ, ಬಾಗ್ಯಮ್ಮ, ಅನುಪಮಾ, ಬಸವರಾಜ ಕೊಟ್ಟಗಿ, ಉಗ್ರಾಣದ ವಿಶಾಲಾಕ್ಷಿ, ಕುಮಾರ ಸ್ವಾಮಿ, ಉಪಸ್ಥಿತರಿದ್ದರು.

ಜನ್ಮದಿನದಂದೇ ಸಾವು; ಶವದ ಕೈಹಿಡಿದು ಆಚರಣೆ

ಕನಕಗಿರಿ: ಕಳೆದ 15 ದಿನದ ಹಿಂದೆ ಹಾಸನ ಸಮೀಪ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಯುವಕ ಆರ್ಯನ್ ವಸ್ತ್ರದ (22) ಮೃತಪಟ್ಟಿದ್ದಾನೆ.

ಕಳೆದ 15 ದಿನದ ಹಿಂದೆ ಆರ್ಯನ್ ಗೆ ಅಪಘಾತವಾಗಿ ಸಾವು- ಬದುಕಿನ ನಡುವೇ ಹೋರಾಟ ಮಾಡಿದ್ದ. ಅ.24ರಂದು ಹುಟ್ಟಿದ ದಿನವೇ ಆರ್ಯನ್ ಮೃತಪಟ್ಟಿದ್ದು, ಆತನ ಪಾಲಕರು ಹಾಗೂ ಸ್ನೇಹಿತರು ಶವದ ಕೈಹಿಡಿದು ಕೇಕ್ ಕತ್ತರಿಸಿ ಹುಟ್ಟು ಹಬ್ಬ ಆಚಸಿದ್ದಾರೆ. ವಿಡಿಯೋ ವೈರಲ್ ಆಗಿದ್ದು, ನೋಡುಗರ ಮನಸ್ಸು ಕಲುಕುತ್ತಿದೆ. ಕುಟುಂಬದ ಅಕ್ರಂದನ ಮುಗಿಲು ಮುಟ್ಟಿತು.

ಪಟ್ಟಣದ ನಿವಾಸಿ ಗವಿಸ್ವಾಮಿ ವಸ್ತ್ರದ ಅನೇಕ ವರ್ಷದಿಂದ ಬೆಂಗಳೂರಿನಲ್ಲಿ ಸಿನಿಮಾ, ಕಿರುತೆರೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಇವರ ಮಗ ಆರ್ಯನ್ ಬೆಂಗಳೂರಿನಿಂದ ಹಾಸನಕ್ಕೆ ಬೈಕ್ ಮೂಲಕ ಪ್ರವಾಸಕ್ಕೆ ತೆರಳಿದ್ದಾಗ ಅಪಘಾತವಾಗಿತ್ತು. ತೀವ್ರವಾಗಿ ಗಾಯಗೊಂಡ ಯುವಕನಿಗೆ ಪ್ರಥಮ ಚಿಕಿತ್ಸೆ ನಂತರ ಬೆಂಗಳೂರಿಗೆ ರವಾನಿಸಲಾಗಿತ್ತು. ಸುಮಾರು 15 ದಿನ ಚಿಕಿತ್ಸೆ ನೀಡಿದರೂ ಫಲಕಾರಿ ಆಗಿಲ್ಲ.

ಅಂಗಾಂಗ ದಾನ: ಮೃತ ಆರ್ಯನ್ ದೇಹದ ಅಂಗಾಂಗವನ್ನು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ದಾನ ಮಾಡುವ ಮೂಲಕ ಮೃತ ಯುವಕ ಹಾಗೂ ಆತನ ಪಾಲಕರು ಮಗನ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಆರ್ಯನ್ ಕಳೆಬರಹದ ಅಂತ್ಯ ಸಂಸ್ಕಾರ ಆತನ ಹುಟ್ಟೂರು ಕನಕಗಿರಿಯಲ್ಲಿ ಅ.25ರ ನಡೆಯಲಿದೆ.

2ನೇ ಬೆಳೆಗೆ ನೀರು ಹರಿಸಿ: ರೈತ ಸಂಘ ಆಗ್ರಹ

ರಾಯಚೂರು: ತುಂಗಭದ್ರ ಜಲಾಶಯದ ಕ್ರಸ್ಟ್ ಗೇಟ್ ಕೂರಿಸಲು ಸರಕಾರ ಮುಂದಾಗಿದ್ದು, ಅದಕ್ಕಾಗಿ ಬೇಸಿಗೆ ಬೆಳೆಗೆ ನೀರು ಕೊಡುವುದಿಲ್ಲ ಎಂಬ ನಿರ್ಧಾರವನ್ನು ಸರಕಾರ ಮತ್ತು ಅಧಿಕಾರಿಗಳು ಸ್ಪಷ್ಟಪಡಿಸಿದ್ದು, ಬೇಸಿಗೆಯಲ್ಲಿ ನೀರು ಕೊಟ್ಟು ಕೂಡ ಗೇಟ್ ಗಳನ್ನು ಅಳವಡಿಸಬಹುದಾಗಿ ದೆ. ಈ ಕುರಿತು ಚರ್ಚಿಸಲು ವಾರದೊಳಗೆ ಅಧಿಕಾರಿಗಳು, ರೈತರು ಮತ್ತು ಜನ ಪ್ರತಿನಿಧಿಗಳ ತುರ್ತು ಸಭೆ ಕರೆಯಬೇಕು ಇಲ್ಲವಾದರೆ. ಹೋರಾಟಕ್ಕೆ ಮುಂದಾ ಗುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಪಾಟೀಲ್ ಎಚ್ಚರಿಕೆ ನೀಡಿದರು.ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಡಿಸಿಎಂ ಡಿ.ಕೆ. ಶಿವಕುಮಾರ ಜಿಲ್ಲೆಗೆ ಆಗಮಿಸಿದ್ದ ಸಂದರ್ಭದಲ್ಲಿ ಅವರೊಂದಿಗೆ ಜಿಲ್ಲೆಯ ಲ್ಲಿರುವ ನೀರಾವರಿ ಸಮಸ್ಯೆ, ತುಂಗಭದ್ರ ಕ್ರಸ್ಟ್ ಗೇಟ್ ಅಳವಡಿಕೆಯ ಕುರಿತು ಮಹತ್ವದ ವಿಚಾರಗಳನ್ನು ಚರ್ಚಿಸಲಾಗಿದೆ ಎಂದರು. ನಿರಂತರವಾಗಿ ತುಂಗಭದ್ರ ಜಲಾಶಯಕ್ಕೆ 27 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಪ್ರಸ್ತುತ 80 ಟಿಎಂಸಿ ನೀರನ್ನು ಸಂಗ್ರಹ ಮಾಡಬಹುದಾಗಿದೆ. ನವೆಂಬರ್‌ವರೆಗೂ ಒಳಹರಿವು ಬರುವ ಸಾಧ್ಯತೆ ಯಿದ್ದು, 15 ಟಿಎಂಸಿ ನವೆಂಬರ್‌ನಲ್ಲಿ, 15 ಟಿಎಂಸಿ ಡಿಸೆಂಬರ್‌ನಲ್ಲಿ ಬಿಡಬಹುದು. ನಂತರ ಜನವರಿಯಲ್ಲಿ 25 ಟಿಎಂಸಿ ನೀರು ಬೇಕಾಗುತ್ತದೆ. ನಂತರ ಫೆಬ್ರವರಿಯಲ್ಲಿ ಮೆಣಸಿನಕಾಯಿ ಬೆಳೆಗೆ ಮಾತ್ರ ನೀರು ಬೇಕಾಗುವುದರಿಂದ 18 ಟಿಎಂಸಿ ನೀರು ಬೇಕಾಗುತ್ತದೆ. ಮಾರ್ಚ್ 30 ರವರೆಗೆ ಒಟ್ಟು 88 ಟಿಎಂಸಿ ನೀರು ಬೇಕಾಗಬಹುದು. ಆದ್ದರಿಂದ ನೀರನ್ನು ನಿರ್ವಹಣೆ ಮಾಡುವ ಕುರಿತು ಚರ್ಚೆಯಾಗಬೇಕು ಎಂದರು. ತುಂಗಭದ್ರ ಎಡದಂಡೆ ಕಾಲುವೆ ಭಾಗದಲ್ಲಿ ಹಲವು ಸಮಸ್ಯೆಗಳಿದ್ದು, ಇವುಗಳನ್ನು ಚರ್ಚಿಸಲು ಸರಕಾರ ಕೂಡಲೇ ತುರ್ತು ಸಭೆ ಕರೆಯಬೇಕು. ಸಭೆ ಕರೆಯಲು ರಾಯಚೂರು, ಕೊಪ್ಪಳ, ಬಳ್ಳಾರಿ ಭಾಗದ ಜನ ಪ್ರತಿನಿಧಿಗಳು ಆಸಕ್ತಿ ವಹಿಸಿ, ಸರಕಾರವನ್ನು ಎಚ್ಚರಗೊಳಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಗಂಗಾಧರ ನಾಯಕ, ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ ಇಂಗಳದಾಳ, ಜಾನ್ವೆಸ್ಲಿ, ಬೂದಯ್ಯ ಸ್ವಾಮಿ, ಚಂದ್ರಶೇಖರ ಉಪಸ್ಥಿತರಿದ್ದರು.

ವಿಶ್ವವಾಣಿ ದಿನಪತ್ರಿಕೆಯು ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಸಂಡೂರು ವಿಧಾನಸಭೆ ಕ್ಷೇತ್ರದ ಶಾಸಕಿ ಅನ್ನಪೂರ್ಣ ತುಕಾರಾಂ ಬಿಡುಗಡೆ ಮಾಡಿದರು. ಜಿಲ್ಲಾವರದಿಗಾರ ಅನಂತ ಪದ್ಮನಾಭ ರಾವ್, ತಾಲೂಕು ವರದಿಗಾರ ಚಿದಂಬರಂ ನಾನಾವಟೆ ಇದ್ದರು.

ಹರಪನಹಳ್ಳಿ ಪಟ್ಟಣದಲ್ಲಿ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಅವರು ವಿಶ್ವವಾಣಿ ಪತ್ರಿಕೆಯ ದೀಪಾವಳಿ ವಿಶೇಷ ಸಂಚಿಕೆ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ತಿಮ್ಮನಾಯ್ಕ, ಓ. ಮಾಹಂತೇಶ್, ಮೈದೂರು ರಾಮಣ್ಣ, ಸಣ್ಣ ಹಾಲಪ್ಪ, ಗುಡಿ ನಾಗರಾಜ್, ಬಡಗಿ ರಹಮತ್ ಉಲ್ಲಾ, ಅಂಜಿನಪ್ಪ ಇತರರಿದ್ದರು.

ಮಳೆಗೆ ಭತ್ತ ಬೆಳೆ ನಾಶ; ರೈತ ಆತ್ಮಹತ್ಯೆಗೆ ಯತ್ನ

ಕೊಪ್ಪಳ: ತಾಲೂಕಿನ ಬಸಾಪುರ ಗ್ರಾಮದಲ್ಲಿ ಭತ್ತದ ಬೆಳೆ ನಾಶವಾದ ಹಿನ್ನೆಲೆ ರೈತ ಲಕ್ಷ್ಮಣ ರಾಜರಾಮಪೇಟೆ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶುಕ್ರವಾರ ನಡೆದಿದೆ.

ಬಸಾಪುರ ಗ್ರಾಮದ ಸರ್ವೆ ನಂ. 24 ಮತ್ತು 25ರಲ್ಲಿ ಒಟ್ಟು 8 ಎಕರೆಯಲ್ಲಿ ಭತ್ತ ಬೆಳೆದಿರುವ ರೈತ ಲಕ್ಷಾಂತರ ರು. ಖರ್ಚು ಮಾಡಿದ್ದಾನೆ. ಜೊತೆಗೆ ರೈತ ಸುಮಾರು 4 ಲಕ್ಷ ರು. ಸಾಲ ಮಾಡಿದ್ದಾನೆ. ಈ ನಡುವೆ ಸತತ ಮಳೆಯಿಂದ ಭತ್ತ ನೆಲಕಚ್ಚಿದ್ದು, ಕಟಾವು ಮಾಡುವುದು ಕಷ್ಟ ಸಾಧ್ಯವಾಗಿದೆ. ಇದರಿಂದ ನೊಂದ ರೈತ ಲಕ್ಷ್ಮಣ ಸೋಮವಾರ ಜಮೀನಿನಲ್ಲಿ ಕ್ರಿಮಿನಾಶಕ ಸೇವಿಸಲು ಮುಂದಾ ಗಿದ್ದಾನೆ. ವಿಷಯ ತಿಳಿದ ಪಕ್ಕದ ಜಮೀನಿನ ರೈತರು ರೈತನಿಗೆ ಬುದ್ಧಿವಾದ ಹೇಳಿ, ಅವಘಡ ತಪ್ಪಿಸಿದ್ದಾರೆ.

ಈ ಭಾರಿ ಉತ್ತಮ ಮಳೆಯಾದ ಹಿನ್ನೆಲೆ ತಾಲೂಕಿನಲ್ಲಿ ಭತ್ತ ಬೆಳೆದ ರೈತರು ಉತ್ತಮ ಇಳುವರಿ ನಿರೀಕ್ಷೆಯಲ್ಲಿದ್ದರು. ಆದರೆ, ತೆನೆ ಬಂದ ಈ ವೇಳೆ ಮಳೆಯಾಗಿದ್ದರಿಂದ ಭತ್ತದ ಬೆಳೆ ಕಟಾವು ಮಾಡಲು ಸಮಸ್ಯೆಯಾಗಿದೆ. ನಾಲ್ಕೈದು ದಿನದಿಂದ ಗಾಳಿ ಸಹಿತ ಮಳೆ ಸುರಿದು, ಭತ್ತದ ಬೆಳೆ ನೆಲಕಚ್ಚಿದೆ. ಕೆಲವೆಡೆ ಅರ್ಧದಷ್ಟು ನೆಲ ಕಚ್ಚಿದ್ದರೆ ಮತ್ತಷ್ಟು ಕಡೆ ಸಂಪೂರ್ಣ ಬೆಳೆ ನೆಲಕ್ಕುರುಳಿದೆ. ತಾಲೂಕಾದ್ಯಂತ ಭತ್ತದ ಬೆಳೆ ನೆಲ ಕಚ್ಚಿದ್ದು, ರೈತರು ಹಾನಿ ಅನುಭವಿ ಸುವಂತಾಗಿದೆ. ದೀಪಾವಳಿ ನಂತರ ಭತ್ತದ ಬೆಳೆ ಕಟಾವು ಮಾಡಬೇಕು ಎಂದುಕೊಂಡಿದ್ದ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಸತತ ಮಳೆಯಾದ ಹಿನ್ನೆಲೆ ಕೊಪ್ಪಳ ತಾಲೂಕಿನ ಹಿಟ್ನಾಳ, ಹುಲಿಗಿ, ಅಗಳಕೇರಾ, ಬಂಡಿ ಹರ್ಲಾಪುರ, ಬಸಾಪುರ, ರಾಜರಾಮಪೇಟೆ, ಮಹ್ಮದ್ ನಗರ, ನಾರಾಯಣ ಪೇಟೆ, ಅಯೋಧ್ಯ ಗ್ರಾಮದಲ್ಲಿ ಸುಮಾರು ನೂರಕ್ಕೂ ಅಧಿಕ ರೈತರ ಜಮೀನಿನಲ್ಲಿ ಭತ್ತ ನೆಲಕಚ್ಚಿದೆ. ಇಷ್ಟೆಲ್ಲ ಸಮಸ್ಯೆಯಾದರೂ ಜನ ಪ್ರತಿನಿಧಿಗಳು, ಅಧಿಕಾರಿಗಳು ಇತ್ತ ಸುಳಿದಿಲ್ಲ.

ಬಸಾಪುರ ಗ್ರಾಮದಲ್ಲಿ ಭತ್ತದ ಬೆಳೆ ನಾಶವಾದ ಹಿನ್ನೆಲೆ ರೈತ ಲಕ್ಷ್ಮಣ ರಾಜರಾಮಪೇಟೆ ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.

> **ಬೆಳೆದು ನಿಂತಿದ್ದ ಭತ್ತದ ಬೆಳೆ ನೆಲಕ್ಕೆ ಉರುಳಿದ್ದು, ಕಟಾವು ಮಾಡುವುದು ಕಷ್ಟಸಾಧ್ಯವಾಗಿದೆ. ಭತ್ತದ ಬೆಳೆ ನೆಲ ಕಚ್ಚಿದ ಪರಿಣಾಮ ಕಟಾವು ಮಾಡಲು ಹೆಚ್ಚು ಹಣ ಖರ್ಚಾಗುತ್ತಿದೆ. ನಾನು ಸಾಲ ಮಾಡಿ ಭತ್ತ ಬೆಳೆದಿದ್ದು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎನ್ನುವಂತಾಗಿದೆ. ನೂರಾರು ಎಕರೆ ಪ್ರದೇಶದಲ್ಲಿ ಬೆಳೆದ ಭತ್ತ ನೀರಿನಲ್ಲಿ ಮುಳುಗಿದೆ. ಕೂಡಲೇ ಸರಕಾರ ಬೆಳೆ ಪರಿಹಾರ ಕೊಡಬೇಕು. ಇಲ್ಲ ನಮ್ಮನ್ನು ಆತ್ಮಹತ್ಯೆ ಮಾಡಿಕೊಳ್ಳಲು ಬಿಡಬೇಕು.**
> **– ಲಕ್ಷ್ಮಣ ರಾಜರಾಮಪೇಟೆ, ರೈತ**

ಅಂಜನಾದ್ರಿ ಅಭಿವೃದ್ಧಿ ಕಾಮಗಾರಿ ಶೀಘ್ರ ಪೂರ್ಣ

ಕೊಪ್ಪಳ: ಹನುಮಂತನ ಜನ್ಮಸ್ಥಳ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ 1350 ಕೋಟಿ ರೂಪಾಯಿ ಅನುದಾನ ನೀಡುವಂತೆ ಶಾಸಕ ಜನಾರ್ದನ ರೆಡ್ಡಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿರು ವುದು ಒಳ್ಳೆಯ ವಿಚಾರ. ರಾಜ್ಯ ಸರಕಾರದಿಂದ ಈಗಾಗಲೇ ಅಂಜನಾದ್ರಿ ಬೆಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿ ಡಿಸೆಂಬರ್‌ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಎಚ್. ಕೆ.ಪಾಟೀಲ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, ರಾಜ್ಯ ಸರಕಾರ ಈಗಾಗಲೇ ಮಂಜೂರಾತಿ ನೀಡಿರುವ ಕಾಮಗಾರಿ ಶೀಘ್ರ ಪೂರ್ಣಗೊಳಿಸಲಾಗುವುದು. ಹೆಚ್ಚಿನ ಅಭಿವೃದ್ಧಿಗೆ ಭೂ ಸ್ವಾಧಿನ ಮಾಡಿಕೊಳ್ಳಬೇಕಿದೆ. ಈ ಬಗ್ಗೆ ಚರ್ಚಿಸಿ ತೀರ್ಮಾಣ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಗಂಗಾವತಿ ತಾಲೂಕು ಹಿರೇಬೆಣಕಲ್ ಗ್ರಾಮದ ಮೋರೇರ್ ತಟ್ಟೆಯ ಪ್ರದೇಶವನ್ನು ಯುನಿಸ್ಕೋ ಪಟ್ಟಿಗೆ ಸೇರಿಸುವ ಬಗ್ಗೆ ಪ್ರಯತ್ನ ನಡೆದಿದೆ. ಇದಕ್ಕೆ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ರಾಜ್ಯದಲ್ಲಿ ಗಾಂಧೀಜೀ ಸಂಚರಿಸಿರುವ ಎಲ್ಲ ಸ್ಥಳದಲ್ಲಿ ಅವರ ಸ್ತಂಭಚಿತ್ರ ನಿರ್ಮಿಸಲಾಗುವುದು. ಗಾಂಧಿ ಭವನಗಳು ಶೇ.80 ರಷ್ಟು ಪೂರ್ಣಗೊಂಡಿವೆ ಎಂದು ಮಾಹಿತಿ ನೀಡಿದರು.

ನವೆಂಬರ್‌ಕ್ರಾಂತಿ ಬಗ್ಗೆ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಪಕ್ಷದ ವೇದಿಕೆಯಲ್ಲಿ ಮಾತ್ರ ಈ ವಿಚಾರ ಮಾತನಾಡಬೇಕು ಎಂದು ಹೈಕಮಾಂಡ್ ಸೂಚಿಸಿದೆ. ಈ ಹಿನ್ನೆಲೆ ನಾನು ಯಾವುದೇ ಕಾರಣಕ್ಕೂ ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಹಿರಿಯ ಸದಸ್ಯನಾದರೂ ನಾನು ಈ ಬಗ್ಗೆ ಏನೂ ಹೇಳುವುದಿಲ್ಲ ಎಂದರು.

ಸಹಕಾರ ರಂಗದಲ್ಲಿ ರಾಜಕೀಯ ಪ್ರವೇಶ ಆಗಿರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಸಹಕಾರ ಕ್ಷೇತ್ರ ರಾಜಕಾರಣದಿಂದ ದೂರ ಇರಬೇಕು. ಆದರೆ, ಅನೇಕ ಕಡೆ ರಾಜಕಾರಣ ಬಂದಾಗಿದೆ. ಆದಷ್ಟು ರಾಜಕಾರಣದಿಂದ ದೂರವಿದ್ದರೆ ಸಹಕಾರ ಸಂಘ ಬಲಗೊಳ್ಳುತ್ತವೆ ಎಂದು ಅಭಿಪ್ರಾಯಪಟ್ಟರು.

> **ಕೊಪ್ಪಳ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆದ ಬಗ್ಗೆ ಶಾಸಕ ಬಸವರಾಜ ರಾಯರಡ್ಡಿ ಪತ್ರ ಬರೆದದ್ದು ತಪ್ಪಲ್ಲ. ಅಕ್ರಮ ನಡೆದಿದ್ದರೆ ಸಿಎಂ ಗಮನಕ್ಕೆ ತಂದಿದ್ದು ಅವರಿಗೆ ಬಿಟ್ಟ ವಿಚಾರ. ಈ ಕುರಿತು ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳುತ್ತಾರೆ.**
> **– ಎಚ್.ಕೆ.ಪಾಟೀಲ್, ಸಚಿವ**

ಸಮಾಚಾರ ಸಣ್ಣದಲ್ಲ

ಭಾರತಕ್ಕೆ ಆಸೀಸ್ ಎದುರಾಳಿ

ಇಂದೋರ್: ಇಲ್ಲಿನ ಹೋಳ್ಕರ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ 2025ರ ಅಂತಿಮ ಲೀಗ್ ಪಂದ್ಯದಲ್ಲಿ ಆಸೀಸ್ ತಂಡ ದಕ್ಷಿಣ ಆಫ್ರಿಕಾವನ್ನು ಏಳು ವಿಕೆಟ್‌ಗಳಿಂದ ಸೋಲಿಸಿ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿದೆ. ಇದರೊಂದಿಗೆ ಭಾರತ ತಂಡ ಸೆಮಿಫೈನಲ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾವನ್ನು ಎದುರಿಸಬೇಕಾಗಿದೆ. ಇನ್ನೊಂದು ಸೆಮಿಫೈನಲ್‌ನಲ್ಲಿ ತೃತೀಯ ಸ್ಥಾನಿ ಇಂಗ್ಲೆಂಡ್ ತಂಡ ದ್ವಿತೀಯ ಸ್ಥಾನಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡ, ಶ್ರೀಲಂಕಾ ಮತ್ತು ಪಾಕಿಸ್ತಾನ ವಿರುದ್ಧ ಸತತ ಗೆಲುವುಗಳೊಂದಿಗೆ ತನ್ನ ಅಭಿಯಾನವನ್ನು ಪ್ರಾರಂಭಿಸಿತ್ತು. ಆದರೆ ನಂತರ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ವಿರುದ್ಧ ಸತತ ಮೂರು ಸೋಲುಗಳನ್ನು ಅನುಭವಿಸಿತ್ತು. ಗುರುವಾರ ನವಿ ಮುಂಬೈನ ಡಾ. ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ವಿರುದ್ಧ ಭರ್ಜರಿ ಜಯ ಸಾಧಿಸಿದ ಆತಿಥೇಯ ತಂಡ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತ್ತು. ಭಾರತವು ಬಾಂಗ್ಲಾದೇಶದ ವಿರುದ್ಧದ ಕೊನೆಯ ಪಂದ್ಯ ಆಡಲಿದ್ದು ಇದರಲ್ಲಿ ಸೋತರೂ ಸಹ, ಅವರು ಗೆಲುವಿನ ಸಂಖ್ಯೆಯ ಆಧಾರದ ಮೇಲೆ ಸೆಮಿಫೈನಲ್ ಪ್ರವೇಶ ಖಚಿತವಾಗಿದೆ. ನ್ಯೂಜಿಲೆಂಡ್ ಮತ್ತು ಬಾಂಗ್ಲಾದೇಶ ತಮ್ಮ ಕೊನೆಯ ಪಂದ್ಯಗಳಲ್ಲಿ ಜಯಗಳಿಸಿದರೆ ಆರು ಅಂಕಗಳನ್ನು ಗಳಿಸಲು ಅವಕಾಶವಿದೆ. ಅಜೇಯ ಆಸ್ಟ್ರೇಲಿಯಾ, ಏಳು ಪಂದ್ಯಗಳಿಂದ 13 ಅಂಕಗಳೊಂದಿಗೆ ಎಂಟು ತಂಡಗಳ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ರೋಹಿತ್ ಶತಕ, ಕೊಹ್ಲಿ ಅರ್ಧಶತಕ: ಕ್ಲೀನ್‌ಸ್ವೀಪ್ ತಪ್ಪಿಸಿಕೊಂಡ ಟೀಮ್ ಇಂಡಿಯಾ

ಸಿಡ್ನಿಯಲ್ಲಿ ರೋ-ಕೋ ಗರ್ಜನೆ

ಸಿಡ್ನಿ: ಹಿಟ್ ಮ್ಯಾನ್ ರೋಹಿತ್ ಶರ್ಮಾ (ಅಜೇಯ 123 ರನ್) ಅವರ ಶತಕ ಮತ್ತು ರನ್ ಮೆಷಿನ್ ವಿರಾಟ್ ಕೊಹ್ಲಿ (ಅಜೇಯ 74) ಅವರ ಅರ್ಧಶತಕದ ನೆರವಿನಿಂದ ಆಸ್ಟ್ರೇಲಿಯಾ ವಿರುದ್ಧದ 3ನೇ ಮತ್ತು ಅಂತಿಮ ಏಕದಿನ ಪಂದ್ಯದಲ್ಲಿ ಭಾರತ 9 ವಿಕೆಟ್ ಗಳ ಭರ್ಜರಿ ಜಯ ದಾಖಲಿಸಿದೆ.

ಶನಿವಾರ ಆಸ್ಟ್ರೇಲಿಯಾದ ನೆಲದಲ್ಲಿ ಕೊನೆಯ ಬಾರಿಗೆ ಆಡಳಿಲಿದ ಕ್ರಿಕೆಟ್ ದಿಗ್ಗಜರಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅವರನ್ನು ಕಣ್ಣು ತುಂಬಿಕೊಳ್ಳಲು ಅಭಿಮಾನಿಗಳ ದಂಡೇ ಐತಿಹಾಸಿಕ ಸಿಡ್ನಿ ಕ್ರಿಕೆಟ್ ಮೈದಾನದತ್ತ ಆಗಮಿಸಿತ್ತು. ಅಭಿಮಾನಿಗಳಿಗೆ ನಿರಾಸೆ ಮಾಡದ ರೋಹಿತ್ ಹಾಗೂ ವಿರಾಟ್ ಜೋಡಿ ತಮ್ಮ ಗತ ವೈಭವದ ದಿನಗಳನ್ನು ನೆನಪಿಸುವಂತೆ ಬ್ಯಾಟಿಂಗ್ ಪ್ರದರ್ಶನ ನೀಡಿ ಭಾರತಕ್ಕೆ ನಿರಾಯಾಸದ ಗೆಲುವು ತಂದುಕೊಟ್ಟರು. ಈ ಮೂಲಕ ತಂಡವನ್ನು ಕ್ಲೀನ್ ಸ್ವೀಪ್ ಭೀತಿಯಿಂದ ಪಾರು ಮಾಡಿದರು.

ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ ಹರ್ಷಿತ್ ರಾಣಾ (39 ರನ್‌ಗೆ 4 ವಿಕೆಟ್) ಅವರ ಬೌಲಿಂಗ್ ದಾಳಿಗೆ ಸಿಲುಕಿ 237 ರನ್‌ಗಳಿಗೆ ಸರ್ವಪತನ ಕಂಡಿತು. ಈ ಸಾಧಾರಣ ಗುರಿಯನ್ನು ಬೆನ್ನು ಹತ್ತಿದ ಟೀಮ್ ಇಂಡಿಯಾ ಉತ್ತಮ ಆರಂಭ ಪಡೆಯಿತು. ನಾಯಕ ಶುಭಮನ್ ಗಿಲ್ ಜೊತೆಗೆ ಇನಿಂಗ್ಸ್ ಆರಂಭಿಸಿದ ಮಾಜಿ ನಾಯಕ ರೋಹಿತ್ ಶರ್ಮಾ, ಆರಂಭದಿಂದಲೂ ಎದುರಾಳಿ ಬೌಲರ್ ಗಳನ್ನು ದಂಡಿಸಿದರು. ಕೇವಲ 10.2 ಓವರ್‌ಗಳಲ್ಲಿ ಈ ಜೋಡಿ 69 ರನ್ ಸೇರಿಸಿತು. 26 ಬಾಲ್‌ಗಳಲ್ಲಿ 24 ರನ್ ಪೇರಿಸಿದ ನಾಯಕ ಶುಭಮನ್ ಗಿಲ್, ಜೋಶ್ ಹ್ಯಾಜಲ್‌ವುಡ್ ಎಸೆತದಲ್ಲಿ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿಗೆ ಕ್ಯಾಚ್ ನೀಡಿ ಹೊರ ನಡೆದರು. ಮೂರನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಮೈದಾನಕ್ಕೆ ಇಳಿಯುತ್ತಿದ್ದಂತೆ ಪ್ರೇಕ್ಷಕರು ಸುದೀರ್ಘ ಕರತಾಡನದೊಂದಿಗೆ ಸ್ವಾಗತಿಸಿದರು.

ಹಿಂದಿನ ಎರಡು ಪಂದ್ಯಗಳಲ್ಲಿ ಸೊನ್ನೆ ಸುತ್ತಿ ನಿರಾಶೆ ಮೂಡಿಸಿದ್ದ ಕೊಹ್ಲಿ, ಈ ಪಂದ್ಯದಲ್ಲಿ ಮಾಜಿ ನಾಯಕ ರೋಹಿತ್ ಶರ್ಮಾ ಅವರೊಂದಿಗೆ ಅಮೋಘ ಜೊತೆಯಾಟದ ಕಾಣಿಕೆ ನೀಡಿದರು. ತಮ್ಮ ಅನುಭವವನ್ನೇ ಬಂಡವಾಳ ಮಾಡಿಕೊಂಡು ಆಡಿದ ವಿರಾಟ್ ಹಾಗೂ ರೋಹಿತ್ ಜೋಡಿ ಎರಡನೇ ವಿಕೆಟ್‌ಗೆ 170 ಎಸೆತಗಳಲ್ಲಿ ಅಜೇಯ 168 ರನ್ ಜೊತೆಯಾಟ ಪ್ರದರ್ಶಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ರೋಹಿತ್ ಶರ್ಮಾ 125 ಎಸೆತಗಳಲ್ಲಿ 13 ಬೌಂಡರಿ, 3 ಸಿಕ್ಸರ್ ಸಹಾಯದಿಂದ ಅಜೇಯ 121 ರನ್ ಸಿಡಿಸಿದರು. ಇದು ರೋಹಿತ್ ಶರ್ಮಾ ಅವರ ಅಂತಾರಾಷ್ಟ್ರೀಯ ವೃತ್ತಿ ಜೀವನದ 50ನೇ ಶತಕವಾಗಿದೆ. ಇನ್ನು ವಿರಾಟ್ ಕೊಹ್ಲಿ 81 ಎಸೆತಗಳಲ್ಲಿ 7 ಬೌಂಡರಿ ಸಹಿತ ಅಜೇಯ 74 ರನ್ ಸಿಡಿಸಿದರು. ಈ ಮೂಲಕ ವಿರಾಟ್ ಸಹ ಹಲವು ದಾಖಲೆ ಬರೆದರು.

ಅಂತಿಮವಾಗಿ ಭಾರತ 38.3 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 237 ರನ್ ಸೇರಿಸಿ ಜಯ ಸಾಧಿಸಿತು. ಟಾಸ್ ಗೆದ್ದು ಬ್ಯಾಟ್ ಮಾಡಿದ ಆಸೀಸ್ ಆಸ್ಟ್ರೇಲಿಯಾದ ಪರ ನಾಯಕ ಮಿಚೆಲ್ ಮಾರ್ಷ್ (41) ಹಾಗೂ ಟ್ರಾವಿಸ್ ಹೆಡ್ (29) ಜೋಡಿ 61 ರನ್‌ಗಳ ಜೊತೆಯಾಟದ ಕಾಣಿಕೆ ನೀಡಿತು. ಮ್ಯಾಥ್ಯೂ ಶಾರ್ಟ್ 30, ಅಲೆಕ್ಸ್ ಕ್ಯಾರಿ 24, ಕೂಪರ್ 23 ರನ್ ಬಾರಿಸಿ ತಂಡಕ್ಕೆ ಆಧಾರವಾದರು. ಮ್ಯಾಟ್ ರೆನ್ಶಾ 2 ಬೌಂಡರಿ ನೆರವಿನಿಂದ 56 ರನ್ ಸಿಡಿಸಿ ತಂಡಕ್ಕೆ ಆಧಾರವಾದರು. ಅಂತಿಮವಾಗಿ ಆಸೀಸ್ 46.4 ಓವರ್‌ಗಳಲ್ಲಿ 236 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ ಹರ್ಷಿತ್ ರಾಣಾ 4, ವಾಷಿಂಗ್ಟನ್ ಸುಂದರ್ 2 ವಿಕೆಟ್ ಪಡೆದರು.

ಆಸೀಸ್ ನೆಲದಲ್ಲಿ ಹಲವು ದಾಖಲೆಗಳನ್ನು ಅಳಿಸಿ ಹಾಕಿದ ದಿಗ್ಗಜರು

ವಿರಾಟ್, ರೋಹಿತ್ ವಿಶ್ವದಾಖಲೆ

ಸಿಡ್ನಿ ಮೈದಾನದಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ತಮ್ಮ ನೈಜ ಆಟ ಕಂಡುಕೊಂಡ ಕ್ರಿಕೆಟ್ ದಿಗ್ಗಜರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಹಲವು ದಾಖಲೆಗಳನ್ನು ಬರೆದಿದ್ದಾರೆ.

ಅಂತಾರಾಷ್ಟ್ರೀಯ ಏಕದಿನ ಪಂದ್ಯದಲ್ಲಿ ತಮ್ಮ 33ನೇ ಮತ್ತು ಆಸೀಸ್ ನೆಲದಲ್ಲಿ 6 ನೇ ಶತಕ ದಾಖಲಿಸಿದ ರೋಹಿತ್, ಆಸ್ಟ್ರೇಲಿಯಾದಲ್ಲಿ ಪ್ರವಾಸಿ ಬ್ಯಾಟ್ಸ್‌ಮನ್ ಒಬ್ಬ ಅತಿ ಹೆಚ್ಚು ಶತಕಗಳನ್ನು ಬಾರಿಸಿದ ವಿಶ್ವದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡರು.

ಈ ಹಿಂದೆ ಆಸ್ಟ್ರೇಲಿಯಾದಲ್ಲಿ ವಿರಾಟ್ ಕೊಹ್ಲಿ ಮತ್ತು ಶ್ರೀಲಂಕಾದ ಕುಮಾರ ಸಂಗಕ್ಕಾರ ತಲಾ 5 ಶತಕ ಸಿಡಿಸಿದ ದಾಖಲೆ ಹೊಂದಿದ್ದರು. ರೋಹಿತ್ ಶರ್ಮಾ ಆಸ್ಟ್ರೇಲಿಯಾ ವಿರುದ್ಧ ಏಕದಿನ ಕ್ರಿಕೆಟ್‌ನಲ್ಲಿ ಸಿಡಿಸಿದ 9ನೇ ಶತಕ ಇದಾಗಿದೆ. ಈ ಮೂಲಕ 8 ಶತಕ ದಾಖಲಿಸಿದ ಕೊಹ್ಲಿ ದಾಖಲೆ ಮುರಿದ ರೋಹಿತ್, ಆಸ್ಟ್ರೇಲಿಯಾ ವಿರುದ್ಧ ಏಕದಿನ ಕ್ರಿಕೆಟ್‌ನಲ್ಲಿ 9 ಶತಕ ಸಿಡಿಸಿದ ಸಚಿನ್ ತೆಂಡೂಲ್ಕರ್ ದಾಖಲೆ ಸರಿಗಟ್ಟಿದರು. ತೆಂಡುಲ್ಕರ್ 74 ಪಂದ್ಯಗಳಲ್ಲಿ ಈ ದಾಖಲೆ ಮಾಡಿದರೆ,ಕೊಹ್ಲಿ 51 ಪಂದ್ಯಗಳಲ್ಲಿ 8 ಶತಕ ದಾಖಲಿಸಿದ್ದಾರೆ. ರೋಹಿತ್ ಕೇವಲ 49 ಪಂದ್ಯಗಳಲ್ಲಿ 9 ಶತಕ ದಾಖಲಿಸಿದ್ದಾರೆ.

ರೋಹಿತ್ ಶರ್ಮಾಗೆ ಈ ಶತಕ 50ನೇ ಅಂತಾರಾಷ್ಟ್ರೀಯ ಶತಕವಾಗಿದ್ದು, ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ (49) ದಾಖಲೆಯನ್ನು ಹಿಂದಿಕ್ಕಿದ್ದಾರೆ. ಒಟ್ಟಾರೆ ಮೂರು ಮಾದರಿಯಲ್ಲಿ ಹೆಚ್ಚು ಶತಕ ಸಿಡಿಸಿದ ಪಟ್ಟಿಯಲ್ಲಿ 10ನೇ ಸ್ಥಾನಕ್ಕೇರಿದ್ದಾರೆ. ಶತಕ ಸಾಧನೆಯಲ್ಲಿ ಸಚಿನ್ ತೆಂಡೂಲ್ಕರ್ (100) ಮತ್ತು ವಿರಾಟ್ ಕೊಹ್ಲಿ (82) ಅಗ್ರಸ್ಥಾನದಲ್ಲಿದ್ದಾರೆ.

ವಿರಾಟ್ ಕೊಹ್ಲಿ ಈ ಪಂದ್ಯದಲ್ಲಿ 71 ರನ್ ಗಳಿಸುವ ಮೂಲಕ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಲಂಕಾದ ದಿಗ್ಗಜ ಬ್ಯಾಟರ್ ಕುಮಾರ್ ಸಂಗಕ್ಕಾರರನ್ನು (14234) ಹಿಂದಿಕ್ಕಿ 2ನೇ ಸ್ಥಾನಕ್ಕೇರಿದರು. ಈ ಪಟ್ಟಿಯಲ್ಲಿ ಸಚಿನ್ ತೆಂಡೂಲ್ಕರ್ (18426) ಅಗ್ರಸ್ಥಾನದಲ್ಲಿದ್ದರೆ, ವಿರಾಟ್ 14,255 ರನ್‌ಗಳೊಂದಿಗೆ 2ನೇ ಸ್ಥಾನಕ್ಕೇರಿದ್ದಾರೆ.

ಏಕದಿನದಲ್ಲಿ ಅತೀ ಹೆಚ್ಚು ಶತಕದ ಜೊತೆಯಾಟ

ರೋಹಿತ್-ವಿರಾಟ್ ಜೋಡಿ ಅತಿ ಹೆಚ್ಚು ಬಾರಿ ಶತಕ ಜೊತೆಯಾಟವಾಡಿದ ಜಗತ್ತಿನ ಮೂರನೇ ಯಶಸ್ವಿ ಜೋಡಿ ಎಂಬ ಕೀರ್ತಿಗೆ ಭಾಜನವಾಗಿದೆ. ಸಚಿನ್ ತೆಂಡೂಲ್ಕರ್ ಮತ್ತು ಸೌರವ್ ಗಂಗೂಲಿ ಜೋಡಿ 26 ಬಾರಿ ಶತಕದ ಜೊತೆಯಾಟದಲ್ಲಿ ಭಾಗಿಯಾಗಿ ಅಗ್ರಸ್ಥಾನದಲ್ಲಿದ್ದಾರೆ. ಲಂಕಾದ ದಿಲ್ಶಾನ್ ಮತ್ತು ಸಂಗಕ್ಕಾರ ಜೋಡಿ 20 ಬಾರಿ ಶತಕದ ಜೊತೆಯಾಟವಾಡಿ 2ನೇ ಸ್ಥಾನದಲ್ಲಿದ್ದಾರೆ.

ಆಸೀಸ್ ಆಟಗಾರ್ತಿಯರಿಗೆ ಕಿರುಕುಳ: ಆರೋಪಿ ಸೆರೆ

ಭೋಪಾಲ್: ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್‌ಗಾಗಿ ಭಾರತಕ್ಕೆ ಆಗಮಿಸಿರುವ ಆಸ್ಟ್ರೇಲಿಯಾದ ಇಬ್ಬರು ಮಹಿಳಾ ಕ್ರಿಕೆಟಿಗರಿಗೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ಬೈಕ್ ನಲ್ಲಿ ಹಿಂಬಾಲಿಸಿ, ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆಸ್ಟ್ರೇಲಿಯಾ ತಂಡದ ಭದ್ರತಾ ವ್ಯವಸ್ಥಾಪಕ ಡ್ಯಾನಿ ಸಿಮ್ಮನ್ಸ್ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿದ ಇಂದೋರ್ ಪೊಲೀಸರು ಶುಕ್ರವಾರ ಸಂಜೆ ಖಜ್ರಾನಾ ಪ್ರದೇಶದ ನಿವಾಸಿ ಆರೋಪಿ ಅಕೀಲ್‌ನನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ. ಇಂದೋರ್‌ನ ಹೋಲ್ಕರ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ತಂಡ, ಇಂಗ್ಲೆಂಡ್ ವಿರುದ್ಧ ಆರು ವಿಕೆಟ್‌ಗಳಿಂದ ಗೆಲುವು ಸಾಧಿಸಿದ ಒಂದು ದಿನದ ನಂತರ ಈ ಘಟನೆ ನಡೆದಿದೆ.

ಅಕ್ಟೋಬರ್ 23 ರಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಇಬ್ಬರು ಆಟಗಾರ್ತಿಯರು ತಾವು ತಂಗಿದ್ದ ರ್ಯಾಡಿಸನ್ ಬ್ಲೂ ಹೋಟೆಲ್‌ನಿಂದ ಸಮೀಪದ ಜನಪ್ರಿಯ ಕೆಫೆಗೆ ಜಾಗಿಂಗ್ ಮಾಡುತ್ತಿದ್ದಾಗ ಈ ಘಟನೆ ನಡೆದಿದೆ. ಹೆಲ್ಮೆಟ್ ಇಲ್ಲದೆ ಬೈಕ್ ನಲ್ಲಿ ಬಂದ ಆರೋಪಿ ಯುವಕ, ಕೆಫೆಗೆ ಜಾಗಿಂಗ್ ಹೋಗುತ್ತಿದ್ದ ಇಬ್ಬರು ಆಟಗಾರ್ತಿಯರನ್ನು ಹಿಂಬಾಲಿಸಿದ್ದಾನೆ. ಆರೋಪಿ ಮೊದಲು ಇಬ್ಬರಲ್ಲಿ ಒಬ್ಬರನ್ನು ಹಿಡಿಯಲು ಪ್ರಯತ್ನಿಸಿ ಅಲ್ಲಿಂದ ಹೊರಟುಹೋಗಿದ್ದ. ನಂತರ ಹಿಂದಿನಿಂದ ಬಂದು ಇನ್ನೊಬ್ಬ ಮಹಿಳಾ ಆಟಗಾರ್ತಿಯನ್ನು ಹಿಡಿದು ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ಇದರಿಂದ ಆಘಾತಕ್ಕೊಳಗಾದ ಇಬ್ಬರೂ ತಂಡದ ಭದ್ರತಾ ವ್ಯವಸ್ಥಾಪಕ ಡ್ಯಾನಿ ಸಿಮ್ಮನ್ಸ್‌ಗೆ ಫೋನ್ ಮೂಲಕ ತಾವು ತೊಂದರೆಯಲ್ಲಿರುವ ಸಂಕೇತವನ್ನು ಕಳುಹಿಸಿದರು.

ಸಿಮನ್ಸ್ ಮಧ್ಯ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್‌ನ ಮುಖ್ಯ ಆಡಳಿತ ಅಧಿಕಾರಿ(ಸಿಎಒ) ರೋಹಿತ್ ಪಂಡಿತ್ ಅವರ ಸಹಾಯದಿಂದ ಇಂದೋರ್ ಪೊಲೀಸರಿಗೆ ಈ ವಿಷಯವನ್ನು ವರದಿ ಮಾಡಿದರು. ಸಿಸಿಟಿವಿ ದೃಶ್ಯಗಳ ಆಧಾರದಲ್ಲಿ ಆರೋಪಿಯನ್ನು ಬಂಧಿಸಲಾಯಿತು.

ಮೊದಲ ದಿನದಾಂತ್ಯಕ್ಕೆ ಗೋವಾ ವಿರುದ್ಧ 5 ವಿಕೆಟ್ ನಷ್ಟಕ್ಕೆ 222 ರನ್

ರಣಜಿ: ರಾಜ್ಯಕ್ಕೆ ಕರುಣ್ ನಾಯರ್ ಆಸರೆ

ಶಿವಮೊಗ್ಗ: ಇಲ್ಲಿನ ನವಲೆಯ ಕೆ.ಎಸ್.ಸಿ.ಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆತಿಥೇಯ ಕರ್ನಾಟಕ ತಂಡವು, ಗೋವಾ ತಂಡದ ವಿರುದ್ಧ ಮೊದಲ ದಿನದ ಅಂತ್ಯಕ್ಕೆ 5 ವಿಕೆಟ್ ಕಳೆದುಕೊಂಡು 222 ರನ್ ಗಳಿಸಿದ್ದು, ಬ್ಯಾಟಿಂಗ್ ವೈಫಲ್ಯ ಕಂಡ ರಾಜ್ಯ ತಂಡಕ್ಕೆ ಕರುಣ್ ನಾಯರ್ ಆಸರೆಯಾಗಿದ್ದಾರೆ.

ಮಳೆಯಿಂದ ತಡವಾಗಿ ಪ್ರಾರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಗೋವಾ ತಂಡ ಮೊದಲು ಬೌಲಿಂಗ್ ಆಯ್ದುಕೊಂಡಿತು. ಮಳೆಯಿಂದ ಒದ್ದೆಯಾದ ಪಿಚ್‌ನ ಲಾಭ ಪಡೆದ ಗೋವಾ ಬೌಲರ್‌ಗಳು ಕರ್ನಾಟಕದ ಬ್ಯಾಟರ್‌ಗಳನ್ನು ಕಾಡಿದರು. 65 ರನ್‌ಗಳಿಗೆ 4 ಕಳೆದುಕೊಂಡ ಕರ್ನಾಟಕ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಆರಂಭಿಕರಾದ ನಿಖಿನ್ ಜೋಸ್ ಹಾಗೂ ನಾಯಕ ಮಾಯಂಕ್ ಅಗರ್‌ವಾಲ್ ಅವರು ನಿಧಾನಗತಿಯಲ್ಲಿ ಬರುತ್ತಿದ್ದ ಚೆಂಡನ್ನು ಎದುರಿಸಲು ಪರದಾಡಿದರು. ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ 3 ವಿಕೆಟ್ ಪಡೆದು ವಿಜೃಂಭಿಸಿದರು. ನಿಖಿನ್ (3), ಕೃಷ್ಣನ್ ಶ್ರೀಜಿತ್ (0), ಉತ್ತಮವಾಗಿ ಆಡುತ್ತಿದ್ದ ಅಭಿನವ್ ಮನೋಹರ್ ಅವರನ್ನು ಪೆವಿಲಿಯನ್‌ಗೆ ಕಳುಹಿಸಿದರು.

ಒಂದೆಡೆ ವಿಕೆಟ್ ಉರುಳುತ್ತಿದ್ದರೂ, ನೆಲಕಚ್ಚಿ ಆಡಿದ ನಾಯಕ ಮಾಯಾಂಕ್ ಅಗರ್‌ವಾಲ್ 69 ಎಸೆತಗಳಲ್ಲಿ 28 ರನ್ ಗಳಿಸಿದ್ದಾಗ ವಾಸುಕಿ ಕೌಶಿಕ್ ಅವರಿಗೆ ವಿಕೆಟ್ ಒಪ್ಪಿಸಿದರು. ಐದನೇ ಕ್ರಮಾಂಕದಲ್ಲಿ ಆಡಲು ಬಂದ ಸಮರನ್ ರವಿಚಂದ್ರನ್ 3 ರನ್‌ಗೆ ಔಟಾದರು.

ಶತಕದತ್ತ ಕರುಣ್ ನಾಯರ್: ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ವೈಫಲ್ಯ ಕಂಡು ಹೊರಬಿದ್ದಿರುವ ಕರುಣ್ ನಾಯರ್ ದೇಶೀ ಟೂರ್ನಿಗಳಲ್ಲಿ ತಮ್ಮ ಅದ್ಭುತ ಪ್ರದರ್ಶನವನ್ನು ಮುಂದುವರಿಸಿದರು. 138 ಎಸೆತಗಳಲ್ಲಿ 86 ರನ್ ಗಳಿಸಿದ್ದಾರೆ. ಶ್ರೇಯಸ್ ಗೋಪಾಲ್ 48 ರನ್ ಗಳಿಸಿದ್ದು, ಇಬ್ಬರೂ ನಾಳೆಗೆ ಕ್ರೀಸ್ ಕಾಯ್ದುಕೊಂಡಿದ್ದಾರೆ. ಶ್ರೇಯಸ್ ಗೋಪಾಲ್ ಹಾಗೂ ಕರುಣ್ ನಾಯರ್ 94 ರನ್‌ಗಳ ಜೊತೆಯಾಟದಿಂದ ತಂಡವು ದಿಢೀರ್ ಕುಸಿತದಿಂದ ಚೇತರಿಸಿಕೊಂಡು, ದಿನದಾಂತ್ಯಕ್ಕೆ 222 ರನ್ ಗಳಿಸಿತು. ಗೋವಾ ಪರವಾಗಿ ಅರ್ಜುನ್ ತೆಂಡೂಲ್ಕರ್ 17 ಓವರ್ ಎಸೆದು 3 ವಿಕೆಟ್ ಪಡೆದರೆ, ಕೌಶಿಕ್ 18 ಓವರ್‌ಗಳಲ್ಲಿ 24 ರನ್ ನೀಡಿ 2 ವಿಕೆಟ್ ಪಡೆದರು. ಮಳೆಯಿಂದಾಗಿ 69 ಓವರ್‌ಗಳನ್ನಷ್ಟೇ ಎಸೆಯಲು ಸಾಧ್ಯವಾಯಿತು.

ಡಿಕೆಡಿಗೆ ಮರಳಿದ ಶಿವಣ್ಣ

ಕಿರುತೆರೆಯಲ್ಲಿ ಹತ್ತು ಹಲವು ರಿಯಾಲಿಟಿ ಶೋಗಳು ಮೂಡಿಬರುತ್ತಿವೆ. ಅದರಲ್ಲಿಯೂ ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿದ್ದ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಎಲ್ಲರ ಅಚ್ಚುಮೆಚ್ಚಾಗಿತ್ತು. ಈ ಶೋನಲ್ಲಿ ಪಾಲ್ಗೊಂಡ ಹಲವು ಸ್ಪರ್ಧಿಗಳು ಪ್ರಸಿದ್ಧಿ ಪಡೆದಿದ್ದಾರೆ. ಸಿನಿಮಾಗಳಲ್ಲಿ ಅಭಿನಯಿಸುವ ಅವಕಾಶ ಪಡೆದಿದ್ದಾರೆ. ಡಿಕೆಡಿಯಲ್ಲಿ ಶಿವಣ್ಣ ಅವರೇ ಕೇಂದ್ರಬಿಂದು ಅವರು ಇದ್ದಲ್ಲಿ ಹೊಸ ಎನರ್ಜಿ. ಹಾಗಾಗಿಯೇ ಡಿಕೆಡಿ ರಿಯಾಲಿಟಿ ಶೋ ಅಷ್ಟೊಂದು ಜನಪ್ರಿಯತೆ ಪಡೆದಿತ್ತು.

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಮುಂದಿನ ಸೀಸನ್ ಯಾವಾಗ ಶುರುವಾಗಲಿದೆ ಎಂದು ಎಲ್ಲರೂ ಕಾಯುತ್ತಿದ್ದರು. ಹಾಗೇ ಕಾಯುತ್ತಿದ್ದವರಿಗೆ ಸಿಹಿ ಸುದ್ದಿ ಸಿಕ್ಕಿದೆ. ಶೀಘ್ರದಲ್ಲಿಯೇ ಡಿಕೆಡಿ ಹೊಸ ಸೀಸನ್ ಆರಂಭವಾಗಲಿದೆ. ಸದ್ಯ ಈ ಶೋನ ಪ್ರೋಮೊ ರಿಲೀಸ್ ಆಗಿದ್ದು, ಕಿರುತೆರೆ ಪ್ರಿಯರನ್ನು ಸೆಳೆಯುತ್ತಿದೆ. ಅದರಲ್ಲಿಯೂ ಶಿವಣ್ಣ ಅವರ ಪ್ರೋಮೊ ನೋಡಿ ಎಲ್ಲರೂ ಬಹುಪರಾಕ್ ಎಂದಿದ್ದಾರೆ. ಪತ್ರಿಕೆ ಓದುತ್ತಾ ಕುಳಿರುವ ಶಿವಣ್ಣ, ಆಗ ಸಂಗೀತ ಕೇಳುತ್ತದೆ. ಹಾಲ್‌ನಲ್ಲಿದ್ದ ಟೀ ಮಗ್, ಟೀ ಕಪ್, ಪುಸ್ತಕಗಳು, ಹೂದಾನಿ ನಡುಗುತ್ತವೆ. ಬೀಟ್ಸ್ ಶುರುವಾಯಿತು ಅಂದ್ರೆ ಮುಗಿತು. ಸ್ಟೇಜ್ ಮೇಲೆ ಭೂಕಂಪ ಬರೋ ಟೈಮ್ ಆಯಿತು ಅಂತ ಅರ್ಥ ಎಂದು ಶಿವಣ್ಣ ಹೇಳುವ ಡೈಲಾಗ್ ಸಖತ್ತಾಗಿದೆ. ಅದನ್ನು ಕೇಳಿ ಫ್ಯಾನ್ಸ್ ಖುಷಿಯಾಗಿದ್ದಾರೆ. ಅಂದರೆ ಶೀಘ್ರದಲ್ಲಿಯೇ ಡಿಕೆಡಿ ಪ್ರಸಾರವಾಗಲಿದೆ ಎಂದು ಪ್ರೊಮೋದಲ್ಲಿ ಸ್ಪಷ್ಟವಾಗಿದೆ.

ಗ್ರಾಮೀಣ ಸೊಗಡಿನ ವರ್ಣ

ದೇವಶರ್ಮ ನಿರ್ದೇಶಿಸಿರುವ ವರ್ಣ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಖತ್ ಸದ್ದು ಮಾಡುತ್ತಿದೆ. ವರ್ಣ ಗ್ರಾಮೀಣ ಭಾಗದಲ್ಲಿ ನಡೆಯುವ ಕಥೆಯಾಗಿದ್ದು, ಲವ್, ಆ್ಯಕ್ಷನ್, ಸೆಂಟಿಮೆಂಟ್ ಹೀಗೆ ಎಲ್ಲಾ ಅಂಶಗಳು ಬೆರೆತಿದೆ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ. ಕಿರುತೆರೆಯಲ್ಲಿ ಪ್ರಸಿದ್ಧಿ ಪಡೆದಿರುವ ಅರ್ಜುನ್ ಯೋಗಿ ನಾಯಕನಾಗಿ ನಟಿಸಿದ್ದು, ಆ್ಯಂಗ್ರಿ ಯಂಗ್ ಮ್ಯಾನ್ ಆಗಿ ಆ್ಯಕ್ಷನ್‌ನಲ್ಲಿ ಅಬ್ಬರಿಸಿದ್ದಾರೆ. ಭವ್ಯಾಗೌಡ ನಾಯಕಿಯಾಗಿ ಅಭಿನಯಿಸಿದ್ದು, ಹಳ್ಳಿ ಹುಡುಗಿಯಾಗಿ ಕಂಗೊಳಿಸಿದ್ದಾರೆ. ಲಂಕೇಶ್ ರಾವಣ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಅಮೃತಾ, ಶಿವಾನಿ, ಪ್ರಣಯ್ ಮೂರ್ತಿ, ಮಂಡ್ಯ ಸಿದ್ದು ಮುಂತಾದವರು ತಾರಾಗಣದಲ್ಲಿದ್ದಾರೆ.

ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವ ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ ಎಂಬ ಮಾತೇ ಈ ಚಿತ್ರದ ಕಥೆಗೆ ಸ್ಫೂರ್ತಿ. ಮೊದಲು ಇದನ್ನು ಕಿರುಚಿತ್ರ ಮಾಡಲು ಹೊರಟಿದ್ದೆವು. ಆದರೆ ಕಥೆ ಕೇಳಿದ ನಿರ್ಮಾಪಕರು ಕಥೆ ಚೆನ್ನಾಗಿದೆ. ಕಿರುಚಿತ್ರ ಬೇಡ, ಒಳ್ಳೆಯ ಸಿನಿಮಾ ಮಾಡೋಣ ಎಂದು ನಮ್ಮ ಬೆನ್ನೆಲುಬಾಗಿ ನಿಂತರು. ಜೀವನದಲ್ಲಿ ತಾನಂದುಕೊಂಡ ಗುರಿ ಸಾಧಿಸಲು ಹೊರಟ ನಾಯಕ, ತನ್ನನ್ನು ತಡೆಯಲು ಬರುವ ದುರುಳರ ವಿರುದ್ಧ ಹೇಗೆ ಹೋರಾಡುತ್ತಾನೆ ಎಂಬುದನ್ನು ರೋಚಕವಾಗಿ ಕಟ್ಟಿಕೊಡಲಾಗಿದೆ ಎಂದು ನಿರ್ದೇಶಕ ದೇವ ಶರ್ಮ ಹೇಳಿದರು.

ನಿರ್ದೇಶಕರು ಹೇಳಿದ ಕಥೆ ಇಷ್ಟವಾಯಿತು, ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ವರ್ಣ ಎಲ್ಲರಿಗೂ ಹಿಡಿಸುವ ಚಿತ್ರವಾಗುವ ಭರವಸೆಯಿದೆ. ಒಳ್ಳೆಯ ಸಂದೇಶವೂ ಸಿನಿಮಾದಲ್ಲಿ ಅಡಕವಾಗಿದೆ ಎಂದು ನಿರ್ಮಾಪಕ ಮಲ್ಲೇನೇನಿ ನವೀನ್ ಚೌಧರಿ ತಿಳಿಸಿದರು.

ನಿರ್ದೇಶಕ ದೇವ ಶರ್ಮ ಅವರು ನಾಲ್ಕು ವರ್ಷಗಳ ಹಿಂದೆ ಈ ಚಿತ್ರದ ಕಥೆ ಹೇಳಿದ್ದರು. ಕಾರಣಾಂತರದಿಂದ ಚಿತ್ರ ಆರಂಭವಾಗಿರಲಿಲ್ಲ. ಕಳೆದ ವರ್ಷದ ನವೆಂಬರ್‌ನಲ್ಲಿ ಚಿತ್ರೀಕರಣ ಆರಂಭವಾಯಿತು. ಸರಿಯಾಗಿ ಒಂದು ವರ್ಷಕ್ಕೆ ನಮ್ಮ ಚಿತ್ರ ಬಿಡುಗಡೆ ಹಂತ ತಲುಪಿದೆ. ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿವೆ. ನಾನು ವರ್ಣ ಎಂಬ ಪಾತ್ರದಲ್ಲಿ ನಟಿಸಿದ್ದೇನೆ. ತಪ್ಪನ್ನು ಸಹಿಸದ, ತಪ್ಪು ಮಾಡಿದವರನ್ನು ಬಿಡದ ಹಳ್ಳಿ ಹುಡುಗನಾಗಿ ಅಭಿನಯಿಸಿದ್ದೇನೆ. ಇದೊಂದು ಹಳ್ಳಿ ಸೊಗಡಿನ ಕಥೆ ಎಂದು ನಾಯಕ ಅರ್ಜುನ್ ಯೋಗಿ ಹೇಳಿದರು.

ಮಲ್ಲೇನೇನಿ ನವೀನ್ ಚೌಧರಿ ವರ್ಣ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ರಮೇಶ್ ಕೃಷ್ಣ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಗೌರಿ ವೆಂಕಟೇಶ್ ಛಾಯಾಗ್ರಹಣ, ಹೈಟ್ ಮಂಜು ನೃತ್ಯ ನಿರ್ದೇಶನ, ಚಿನ್ನಯ್ಯ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಆದರೆ ಇದೊಂದು ಕಾಮಿಡಿ ಥ್ರಿಲ್ಲರ್ ಕಥಾಹಂದರದ ಚಿತ್ರವಾಗಿದೆ. ನಾಗರಾಜ ಸೋಮಯಾಜಿ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ಯುವಿಜಿ ಸ್ಟುಡಿಯೊ ಬ್ಯಾನರ್‌ನಲ್ಲಿ ವಿದ್ಯಾ ಗಾಂಧಿರಾಜನ್ ಸಿನಿಮಾಗೆ ಬಂಡವಾಳ ಹೂಡುತ್ತಿದ್ದಾರೆ. ಎಸ್.ಕೆ.ರಾವ್ ಛಾಯಾಗ್ರಹಣ ಹಾಗೂ ಪ್ರಸಾದ್.ಕೆ.ಶೆಟ್ಟಿ ಸಂಗೀತ ನಿರ್ದೇಶನ ದೇವಿ ಮಹಾತ್ಮೆ

ನಾಗರಾಜನ ದೇವಿ ಮಹಾತ್ಮೆ

ಈ ಹಿಂದೆ ಮರ್ಯಾದೆ ಪ್ರಶ್ನೆ ಸಿನಿಮಾ ಮೂಲಕ ಮಧ್ಯಮ ವರ್ಗದ ಜನರ ಮನಸ್ಥಿತಿ ಮತ್ತು ಅವರ ಪರಿಸ್ಥಿತಿಯನ್ನು ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದ ನಿರ್ದೇಶಕ ನಾಗರಾಜ ಸೋಮಯಾಜಿ ಈಗ ಹೊಸ ಕಥೆಯನ್ನು ಹೊತ್ತು ಬರುತ್ತಿದ್ದಾರೆ. ವಿಶೇಷ ಎಂದರೆ ಈ ಬಾರಿ ದೇವಿ ಮಹಾತ್ಮೆ ಹೇಳಲು ಬರುತ್ತಿದ್ದಾರೆ. ಸದ್ಯ ಈ ಚಿತ್ರದ ಟೈಟಲ್ ಪೋಸ್ಟರ್ ರಿಲೀಸ್ ಆಗಿದೆ. ಪೋಸ್ಟರ್‌ನಲ್ಲಿ ಎರಡು ಶೇಡ್‌ಗಳನ್ನು ಕಾಣಬಹುದು. ಹಳ್ಳಿ ಹಾಗೂ ಸಮುದ್ರದ ಹಿನ್ನೆಲೆಯಲ್ಲಿ ಪೋಸ್ಟರ್ ಆಕರ್ಷಕವಾಗಿ ಮೂಡಿಬಂದಿದೆ. ಇದನ್ನು ಗಮನಿಸಿದರೆ ಕರಾವಳಿ ಭಾಗದ ಕಥೆ ತೆರೆಯಲ್ಲಿ ಸಾಗಬಹುದು ಎಂಬ ಕುತೂಹಲವೂ ಕಾಡುತ್ತದೆ.

ದೇವಿ ಮಹಾತ್ಮೆ ಶೀರ್ಷಿಕೆ ಕೇಳಿದಾಕ್ಷಣ ಇದು ದೇವರ ಸಿನಿಮಾ ಅನ್ನಿಸಬಹುದು, ಸಿನಿಮಾಗಿದೆ. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇರಲಿದ್ದು, ಹಿರಿಯ ಕಲಾವಿದರ ಜತೆಗೆ ಹೊಸಬರಿಗೂ ಚಿತ್ರತಂಡ ಮಣೆ ಹಾಕಲಿದೆ.

ಸವಾಲು ಗೆದ್ದ ಭಾರತಿ ಟೀಚರ್

ಚಂದನವನದಲ್ಲಿ ವಿಭಿನ್ನ ಶೀರ್ಷಿಕೆಯ ಸಿನಿಮಾಗಳು ಗಮನಸೆಳೆಯುತ್ತಿವೆ. ಅವುಗಳಲ್ಲಿ ಭಾರತಿ ಟೀಚರ್ ಏಳನೇ ತರಗತಿ ಚಿತ್ರವೂ ಒಂದು. ಈ ಸಿನಿಮಾದ ಹಾಡುಗಳು ಬಿಡುಗಡೆಯಾಗಿವೆ. ಚಿತ್ರದಲ್ಲಿ ಹತ್ತು ಹಾಡುಗಳಿದ್ದು, ಒಂದಕ್ಕಿಂತ ಒಂದು ಹಾಡುಗಳು ಕೇಳಲು ಮಧುರವಾಗಿವೆ. ನಿರ್ದೇಶಕ ಪ್ರಸನ್ನ ಅವರೇ ಸಂಗೀತ ಸಂಗೀತ ಸಂಯೋಜಿಸಿದ್ದಾರೆ. ಎಂ.ಎಲ್.ಪ್ರಸನ್ನ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ಪೂಜ್ಯಾಯ ಫಿಲಂಸ್ ಬ್ಯಾನರ್‌ನಲ್ಲಿ ರಾಘವೇಂದ್ರ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಯಶಿಕಾ ಭಾರತಿ ಟೀಚರ್ ಆಗಿ ಕಾಣಿಸಿಕೊಂಡಿದ್ದು, ಸಚಿವ ಸಂತೋಷ್ ಲಾಡ್ ಜಿಲ್ಲಾಧಿಕಾರಿಯಾಗಿ ಅಭಿನಯಿಸಿದ್ದಾರೆ. ಸಿಹಿಕಹಿ ಚಂದ್ರು ಶಿಕ್ಷಕರಾಗಿ ಬಣ್ಣಹಚ್ಚಿದ್ದಾರೆ. ಗೋವಿಂದೇಗೌಡ, ಅಶ್ವಿನ್ ಹಾಸನ್, ಕಾಮಿಡಿ ಕಿಲಾಡಿಗಳು ಖ್ಯಾತಿಯ ದಿವ್ಯಾ ಅಂಚನ್, ಬೇನಕಾ ನಂಜಪ್ಪ, ರೋಹಿತ್ ರಾಘವೇಂದ್ರ, ಸೌಜನ್ಯಾ ಸುನಿಲ್, ಎಂ.ಜೆ.ರಂಗಸ್ವಾಮಿ ಮುಂತಾದವರು ತಾರಾಗಣದಲ್ಲಿದ್ದಾರೆ. ಭಾರತಿ ಎನ್ನುವ ಏಳನೇ ತರಗತಿ ವಿದ್ಯಾರ್ಥಿಯೊಬ್ಬಳು ತನ್ನ ಊರಿನವರೆಲ್ಲರನ್ನು ಸಾಕ್ಷರನ್ನಾಗಿ ಮಾಡಬೇಕೆಂದು ಕನಸು ಕಾಣುತ್ತಾಳೆ. ಈ ಹಾದಿಯಲ್ಲಿ ಆಕೆ ಯಾವೆಲ್ಲಾ ಸವಾಲುಗಳನ್ನು ಎದಿರಿಸುತ್ತಾಳೆ, ಅದೆಲ್ಲವನ್ನು ನಿಭಾಯಿಸಿ ಹೇಗೆ ತಾನಂದುಕೊಂಡನ್ನು ಸಾಧಿಸುತ್ತಾಳೆ ಎಂಬುದೇ ಚಿತ್ರದ ಸಾರಾಂಶವಾಗಿದೆ. ನವೆಂಬರ್‌ನಲ್ಲಿ ಭಾರತಿ ಟೀಚರ್ ಏಳನೇ ತರಗತಿ ತೆರೆಗೆ ಬರಲಿದೆ.

ಕಾನನದಲ್ಲಿ ಕಾಡುವ ರಾಕ್ಷಸ

ಹಸಿರೆ ಉಸಿರು, ಕಾಡು ಬೆಳಸಿ ನಾಡು ಉಳಿಸಿ, ಹೀಗೆ ಹಲವು ಘೋಷ ವಾಕ್ಯಗಳು ಮಾರ್ಧನಿಸುತ್ತವೆ. ಆದರೆ ನಿಜವಾಗಿಯೂ ನಮಗೆ ಕಾನನದ ಬಗ್ಗೆ ಕಾಳಜಿ ಇದೆಯೆ ಎಂಬುದಕ್ಕೆ ಉತ್ತರ ಸಿಗೋದು ಕಷ್ಟ. ಒಂದು ವೇಳೆ ಕಾಡು ನಾಶವಾದರೆ ನಾಡಿನ ಕಥೆ ಏನು ಎಂಬುದನ್ನು ಗ್ರೀನ್ ಚಿತ್ರದಲ್ಲಿ ಬಲು ಸೂಕ್ಷ್ಮವಾಗಿ, ಸೂಚ್ಯವಾಗಿ ಕಟ್ಟಿಕೊಡಲಾಗಿದೆ. ತಾಯಿಯ ಸಾವಿನಿಂದ ಆಘಾತಕ್ಕೊಳಗಾದ ನಾಯಕ ಭ್ರಮಲೋಕದಲ್ಲಿ ಮುಳುಗಿರುತ್ತಾನೆ. ಆ ಭ್ರಮೆಯಲ್ಲಿ ಕಾಡಿನಲ್ಲಿರುವ ಒಬ್ಬ ದೊಡ್ಡ ರಾಕ್ಷಸ ಕಾಡುತ್ತಿರುತ್ತಾನೆ. ಆತ ಕಾಡಿಗೆ ಹೋಗುವ ಜನರನ್ನು ಕೊಲ್ಲುತ್ತಿರುತ್ತಾನೆ, ಅದು ಯಾಕೆ ಎಂಬುದು ಯಾರಿಗೂ ಅರ್ಥವಾಗುವುದಿಲ್ಲ. ಆ ರಾಕ್ಷಸ ಯಾರು ಎಂಬುದನ್ನು ತಿಳಿಯಲು ಸಿನಿಮಾ ನೋಡಲೇಬೇಕು. ಗ್ರೀನ್ ಸಿನಿಮಾ ಅರ್ಥವಾಗಲೂ ಕ್ಲೈಮ್ಯಾಕ್ಸ್‌ವರೆಗೂ ಕಾಯಲೇಬೇಕು. ಅಷ್ಟೊಂದು ಸಸ್ಪೆನ್ಸ್, ಟ್ವಿಸ್ಟ್ ಕಥೆಯಲ್ಲಿ ಬೆರೆತಿದೆ.

ಮರಗಳಿಗೂ ಜೀವವಿದೆ. ನಮ್ಮ ಸ್ವಾರ್ಥಕ್ಕಾಗಿ ಮರಗಳನ್ನು ನಾವು ಬಲಿ ತೆಗೆದುಕೊಳ್ಳುತ್ತಿದ್ದೇವೆ. ಒಂದು ವೇಳೆ ಕಾಲ ಬದಲಾಗಿ ಮರಗಳು ಮನುಷ್ಯರನ್ನು ಬಲಿ ತೆಗೆದುಕೊಂಡರೆ ಹೇಗಿರುತ್ತದೆ ಎಂಬುದನ್ನು ಮನಕ್ಕೆ ಮುಟ್ಟುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ರಾಜ್ ವಿಜಯ್ ಯಶಸ್ವಿಯಾಗಿದ್ದಾರೆ. ಕಥೆಯೇ ಇಲ್ಲಿ ಮುಖ್ಯವಾಗಿದ್ದು ಅದಕ್ಕೆ ತಕ್ಕ ಪಾತ್ರಗಳನ್ನು ಹೆಣೆದಿದ್ದಾರೆ. ಭ್ರಮಲೋಕದಲ್ಲಿ ಮುಳುಗಿರುವ ನಾಯಕನ ಪಾತ್ರದಲ್ಲಿ ಗೋಪಾಲ ಕೃಷ್ಣ ದೇಶಪಂಡೆ ಅದ್ಭುತವಾಗಿ ನಟಿಸಿದ್ದಾರೆ. ಸಿನಿಮಾ ನೋಡುತ್ತಿದ್ದರೆ ಆ ಭ್ರಮೆ ನಮ್ಮನ್ನು ಕಾಡುತ್ತಿದೆಯೆ ಅನ್ನಿಸುತ್ತದೆ. ಉಳಿದಂತೆ ಆರ್.ಜೆ.ವಿಕ್ಕಿ, ಶಿವಮಂಜು, ಬಾಲಾಜಿ ಮನೋಹರ್, ಡಿಂಪಿ ಹೀಗೆ ಎಲ್ಲರೂ ತಮ್ಮ ಪಾತ್ರಗಳನ್ನು ಮೆಚ್ಚುವಂತೆ ನಿರ್ವಹಿಸಿದ್ದಾರೆ. ಚಿತ್ರದ ಸಂಗೀತ ಕಥೆಗೆ ಪೂರವಾಗಿದೆ. ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಕಾಡು ಉಳಿಸಿ ಎಂಬ ಸಂದೇಶ ಸಾರುವ ಗ್ರೀನ್ ಚಿತ್ರವನ್ನು ಎಲ್ಲರೂ ಒಮ್ಮೆಯಾದರು ನೋಡಲೇಬೇಕು.

ದೀಪಾವಳಿಯ ನಾಲ್ಕನೇ ದಿನದಿಂದ ಆರಂಭವಾಗಿ ಏಳನೇ ದಿನದ ತನಕ ನಡೆಯುವ ಛಠ್ ಪೂಜೆಯನ್ನು ಭಾರತದ ವಿವಿಧ ಭಾಗಗಳಲ್ಲಿ, ಮುಖ್ಯವಾಗಿ ಉತ್ತರ ಭಾರತದಲ್ಲಿ, ಅಪಾರ ಭಕ್ತಿ ಮತ್ತು ಉತ್ಸಾಹದಿಂದ ಆಚರಿಸಲಾಗುತ್ತದೆ. ಕರ್ನಾಟಕವೂ ಸೇರಿದಂತೆ, ವಿವಿಧ ಭಾಗಗಳಲ್ಲಿರುವ ಉತ್ತರ ಭಾರತೀಯರು ಇದನ್ನು ಭಕ್ತಿಯಿಂದ ಆಚರಿಸುತ್ತಿರುವುದರಿಂದ, ಅದರ ಭವ್ಯತೆ ಈಗ ಪ್ರಪಂಚದಾದ್ಯಂತ ಗೋಚರಿಸುತ್ತಿದೆ. ಈ ಹಬ್ಬಕ್ಕೆ ಜಾಗತಿಕ ಮನ್ನಣೆ ನೀಡುವಲ್ಲಿ ಭಾರತೀಯ ವಲಸಿಗರು ಪ್ರಮುಖ ಪಾತ್ರ ವಹಿಸಿದ್ದಾರೆ. ಇಂದು ಛಠ್ ಪೂಜೆಯನ್ನು ಭಾರತವಲ್ಲದೆ ನೇಪಾಳ, ಮಾರಿಷಸ್, ಫಿಜಿ, ಸುರಿನಾಮ್, ಟ್ರಿನಿಡಾಡ್, ಯುನೈಟೆಡ್ ಸ್ಟೇಟ್ಸ್, ಯುನೈಟೆಡ್ ಕಿಂಗ್‌ಡಮ್, ಗಲ್ಫ್ ದೇಶಗಳಲ್ಲೂ ಆಚರಿಸಲಾಗುತ್ತದೆ. ಛಠ್ ಪೂಜೆಯ ಮೂಲಭೂತ ಸಾರವು ಪ್ರಕೃತಿಯ ಮೇಲಿನ ಆಳವಾದ ಗೌರವ ಮತ್ತು ಕೃತಜ್ಞತೆಯಲ್ಲಿ ಬೇರೂರಿದೆ. ಛಠ್ ಹಬ್ಬ ಆಚರಿಸಲು ಯಾವುದೇ ದೇವಸ್ಥಾನ ಅಥವಾ ಪುರೋಹಿತರ ಅವಶ್ಯಕತೆ ಇಲ್ಲ. ನದಿ, ಕೊಳ, ಸಮುದ್ರ, ಸರೋವರ ಅಥವಾ ಜಲಾಶಯದ ತೀರಗಳಲ್ಲಿ ವ್ರತಾಧಾರಿಗಳಿಂದಲೇ ಆಚರಿಸಲಾಗುತ್ತದೆ. ಷಷ್ಠಿ ದಿನ ಸೂರ್ಯಾಸ್ತಮಾನದ ಸೂರ್ಯನಿಗೆ ಮತ್ತು ಸಪ್ತಮಿ ದಿನ ಉದಯಿಸುತ್ತಿರುವ ಸೂರ್ಯನಿಗೆ ಅರ್ಘ್ಯಪ್ರಧಾನ ಜೊತೆ ಛಠ್ ವ್ರತ ಕೊನೆಗೊಳ್ಳುತ್ತದೆ. ಮಹಿಳೆ ಸ್ವತಃ ಉಪವಾಸ ವ್ರತ ಮಾಡುವ ಮೂಲಕ ಪೂಜೆಯನ್ನು ಪೂರ್ಣಗೊಳಿಸುತ್ತಾಳೆ. ಮಹಿಳೆಯರೇ ಪ್ರಧಾನವಾಗಿ ಆಚರಿಸುವ ಈ ಹಬ್ಬವು, ಸ್ತ್ರೀ ಶಕ್ತಿಯನ್ನು ಬಿಂಬಿಸುತ್ತದೆ.

ಸೂರ್ಯನ ಆರಾಧನೆಯ ವಿಶಿಷ್ಟ ಆಚರಣೆ
ಪ್ರಕೃತಿಯ ಸಾಂಗತ್ಯದಲ್ಲಿ
ಛಠ್ ಪರ್ವ!

» ಶ್ರೀನಿವಾಸ ಜೋಕಟ್ಟೆ, ಮುಂಬಯಿ

ಕಾರ್ತಿಕ ಮಾಸವನ್ನು ಉಪವಾಸ ಮತ್ತು ಹಬ್ಬಗಳ ತಿಂಗಳು ಎಂದು ವಿಶೇಷವಾಗಿ ಪರಿಗಣಿಸಲಾಗುತ್ತದೆ. ಈ ವರ್ಷ ಅಕ್ಟೋಬರ್ 20 ರಿಂದ ದೇಶಾದ್ಯಂತ ದೀಪಾವಳಿಯನ್ನು ಆಚರಿಸಲಾಯಿತು. ಅನಂತರ ಜನಪದರ ನಂಬಿಕೆಯ ಭವ್ಯ ಹಬ್ಬವಾದ ಛಠ್ ಪೂಜೆಗೆ ಸಿದ್ಧತೆಗಳು ಪ್ರಾರಂಭವಾಗಿವೆ. ಛಠ್ ಪೂಜೆಯು ಛಠ್ ಮೈಯಾ ಮತ್ತು ಭಗವಾನ್ ಸೂರ್ಯದೇವನ ಆರಾಧನೆಗೆ ಮೀಸಲಾಗಿರುವ ವಿಶಿಷ್ಟ ಹಬ್ಬವಾಗಿದೆ. ಈ ಹಬ್ಬವು ಪ್ರಕೃತಿ ಮತ್ತು ನಂಬಿಕೆಯ ಸಂಗಮವನ್ನು ಸೂಚಿಸುತ್ತದೆ.

ಉದಯಿಸುವ ಸೂರ್ಯನಿಗೆ ಅರ್ಘ್ಯಪ್ರದಾನ ಮಾಡುವುದು ಎಲ್ಲರಿಗೂ ಗೊತ್ತು. ಆದರೆ ಮುಳುಗುತ್ತಿರುವ ಸೂರ್ಯನಿಗೂ ಅರ್ಘ್ಯಪ್ರದಾನ ಮಾಡುವ ಪರ್ವ ಒಂದಿದೆ. ವಿಶ್ವದಲ್ಲೇ ಮುಳುಗುತ್ತಿರುವ ಸೂರ್ಯನಿಗೂ ಅರ್ಘ್ಯ ಪ್ರದಾನಿಸುವ ಪರ್ವ ಅದುವೇ ಛಠ್ ಪರ್ವ. ಸೂರ್ಯನು ದಿನವಿಡೀ ತನ್ನ ಕಿರಣಗಳ ಮೂಲಕ ಜೀವ ಸಂಕುಲವನ್ನು ರಕ್ಷಿಸುತ್ತಾನೆ.

ನಮ್ಮ ದೇಶದಲ್ಲಿ ನಾನಾ ರೀತಿಯ ಉಪವಾಸಗಳನ್ನು ಆಚರಿಸುವ ಪದ್ಧತಿ ಇದೆ. ಇವೆಲ್ಲ ಉಪವಾಸಗಳಲ್ಲಿ ಛಠ್ ಪರ್ವದ ಉಪವಾಸವನ್ನು ಬಹಳ ಕಷ್ಟಕರವೆಂದು ಪರಿಗಣಿಸಲಾಗಿದೆ. ಇದರಲ್ಲಿ ಕಠಿಣ ನಿಯಮಗಳನ್ನು ಅನುಸರಿಸಿ 36 ಗಂಟೆಗಳ ಕಾಲ ಉಪವಾಸವನ್ನು ಆಚರಿಸಲಾಗುತ್ತದೆ. ಅದರಲ್ಲೂ ಛಠ್ ಪೂಜೆಯ ಉಪವಾಸವನ್ನು ಆಚರಿಸುವ ಬಹುಪಾಲು ಜನರು ಇಪ್ಪತ್ತನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ನೀರು ಕುಡಿಯದೆಯೇ ಉಪವಾಸವನ್ನು ಮಾಡುತ್ತಾರೆ. ಈ ಹಬ್ಬದ ಮುಖ್ಯ ಉಪವಾಸವನ್ನು ಷಷ್ಠಿ ತಿಥಿಯಂದು ಆಚರಿಸಲಾಗುತ್ತದೆ. ನಾಲ್ಕು ದಿನಗಳ ಛಠ್ ಪೂಜೆಯು ಕಾರ್ತಿಕ ಮಾಸದ ಶುಕ್ಲ ಪಕ್ಷದ ಚೌತಿಯಿಂದ ಆರಂಭವಾಗಿ ಸಪ್ತಮಿ ತಿಥಿಗೆ ಬೆಳಿಗ್ಗೆ ಸೂರ್ಯೋದಯ ಸಮಯ ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸಿದ ನಂತರ ಕೊನೆಗೊಳ್ಳುತ್ತದೆ.

ನಾಲ್ಕು ದಿನಗಳ ಹಬ್ಬ

ನಾಲ್ಕು ದಿನಗಳ ಛಠ್ ಹಬ್ಬವು ಅತ್ಯಂತ ಭಾವನಾತ್ಮಕ ಮತ್ತು ಭಕ್ತಿಪೂರ್ಣ ಕ್ಷಣವಾಗಿದೆ. ಮಹಿಳೆಯರು ತಮ್ಮ ಕುಟುಂಬಗಳ ಸಂತೋಷ ಮತ್ತು ಸಮೃದ್ಧಿಗಾಗಿ ಮತ್ತು ತಮ್ಮ ಮಕ್ಕಳ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸಲು ನದಿ ತೀರಗಳಿಗೆ, ಸಮುದ್ರ ತೀರಗಳಿಗೆ ತೆರಳುತ್ತಾರೆ. ನಾಲ್ಕನೇ ದಿನ ಬೆಳಿಗ್ಗೆ ಉಷಾ ಅರ್ಘ್ಯ ಎಂದು ಕರೆಯಲ್ಪಡುವ ಉದಯಿಸುತ್ತಿರುವ ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸುವುದರೊಂದಿಗೆ ಅವರ ಉಪವಾಸವು ಕೊನೆಗೊಳ್ಳುತ್ತದೆ. ಈ ನಾಲ್ಕು ದಿನಗಳ ಹಬ್ಬವು ನಂಬಿಕೆ, ಸಂಯಮ ಮತ್ತು ಸೂರ್ಯ ಭಗವಾನರ ಮೇಲಿನ ಭಕ್ತಿಯನ್ನು ಪ್ರತಿನಿಧಿಸುತ್ತದೆ.

ಸೂರ್ಯ ಆರಾಧನೆಯ ಈ ವಿಶಿಷ್ಟ ಜಾನಪದ ಹಬ್ಬವನ್ನು ಭಾರತದಲ್ಲಿ ಮುಖ್ಯವಾಗಿ ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಪೂರ್ವ ಉತ್ತರ ಪ್ರದೇಶ ಮತ್ತು ನೇಪಾಳದ ತರೈ ಪ್ರದೇಶದಲ್ಲಿ ವಿಶೇಷರೂಪದಿಂದ ಆಚರಿಸಲಾಗುತ್ತದೆ.

ಇದು ಮೈಥಿಲಿ, ಮಗಾಹಿ ಮತ್ತು ಭೋಜ್‌ಪುರಿ ಜನರ ಅತಿದೊಡ್ಡ ಹಬ್ಬ. ಇದು ಅವರ ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಛಠ್ ಹಬ್ಬವನ್ನು ಬಿಹಾರದಲ್ಲಿ ಬಹಳ ವೈಭವದಿಂದ ಆಚರಿಸ ಲಾಗುತ್ತದೆ. ಈ ಹಬ್ಬವು ಬಿಹಾರ ಅಥವಾ ಪೂರ್ವೋತ್ತರ ಭಾರತದಲ್ಲಿ ವೈದಿಕ ಕಾಲದಿಂದಲೂ ನಡೆದುಕೊಂಡು ಬಂದಿರುವ ಏಕೈಕ ಹಬ್ಬವಾಗಿದೆ. ಈಗಂತೂ ಅದು ಬಿಹಾರದ ಸಂಸ್ಕೃತಿಯೇ ಆಗಿದೆ. ಈ ಹಬ್ಬವು ಬಿಹಾರದ ವೈದಿಕ ಆರ್ಯ ಸಂಸ್ಕೃತಿಯ ಒಂದು ಕಿರುನೋಟವನ್ನೂ ಪ್ರದರ್ಶಿಸುತ್ತದೆ. ಈ ಹಬ್ಬವನ್ನು ಋಗ್ವೇದ ಮತ್ತು ಆರ್ಯ ಸಂಪ್ರದಾಯದಲ್ಲಿ ವಿವರಿಸಿದ ಸೂರ್ಯ ಪೂಜೆ ಮತ್ತು ಉಷಾ ಪೂಜೆಯ ಪ್ರಕಾರವೇ ಆಚರಿಸುತ್ತಾ ಬರಲಾಗಿದೆ. ಈ ಹಬ್ಬದ ಸಮಯ ದಲ್ಲಿ, ಪುರುಷರು ಮತ್ತು ಮಹಿಳೆಯರು ಇಬ್ಬರೂ ತಮ್ಮ ಮಕ್ಕಳ ಸಂತೋಷ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸುತ್ತಾ ನೀರು ಕುಡಿಯದೇ ಉಪವಾಸವನ್ನು ಆಚರಿಸುತ್ತಾರೆ. ಪೂಜೆಯಲ್ಲಿ ಬಳಸುವ ತಟ್ಟೆಯೂ ವಿಶೇಷ ಮಹತ್ವವನ್ನು ಹೊಂದಿದೆ.

ಪೂಜಾತಟ್ಟೆಯಲ್ಲಿ ಏನಿರಬೇಕು?

ಛಠ್ ಪೂಜಾ ಹರಿವಾಣವನ್ನು ಪವಿತ್ರವೆಂದು ಪರಿಗಣಿಸಲಾಗುತ್ತದೆ ಮತ್ತು ಅದರಲ್ಲಿನ ಪ್ರತಿಯೊಂದು ವಸ್ತುವು ವಿಶೇಷ ಧಾರ್ಮಿಕ ಮಹತ್ವವನ್ನು ಹೊಂದಿದೆ. ಛಠ್ ಪೂಜೆಯ ಮುಖ್ಯ ನೈವೇದ್ಯವೆಂದರೆ ಗೋಧಿ ಹಿಟ್ಟು, ಬೆಲ್ಲ ಮತ್ತು ತುಪ್ಪದಿಂದ ತಯಾರಿಸಿದ ಠೆಕುವಾ. ಇದನ್ನು ಸೂರ್ಯ ದೇವರಿಗೆ ಅರ್ಪಿಸಲಾಗುತ್ತದೆ. ಹರಿವಾಣದಲ್ಲಿ ಬಾಳೆಹಣ್ಣು, ತೆಂಗಿನ ಕಾಯಿ, ಪೇರಳೆ, ನಿಂಬೆಹಣ್ಣು, ಕಬ್ಬು, ಸೇಬು, ಸಿಹಿ ಗೆಣಸು ಮತ್ತು ಕಿತ್ತಳೆ ಮುಂತಾದ ಹಣ್ಣುಗಳನ್ನು ಸೇರಿಸುವುದು ಶುಭವೆಂದು ಪರಿಗಣಿಸಲಾಗುತ್ತದೆ. ಹರಿವಾಣದಲ್ಲಿನ ತೆಂಗಿನ ಕಾಯಿ ಸಂಪೂರ್ಣತೆ ಮತ್ತು ಶುದ್ಧತೆಯನ್ನು ಸಂಕೇತಿಸುತ್ತದೆ. ಇದನ್ನು ಕಲಶದ ಮೇಲೆ ಅಥವಾ ಥಾಲಿಯ ಮೇಲೆ ಇಡಲಾಗುತ್ತದೆ. ಪ್ರಸಾದ ಮತ್ತು ಕಾಣಿಕೆಗಳನ್ನು ಬಿದಿರಿನ ಬುಟ್ಟಿ, ಸೂಪ್‌ನಲ್ಲಿ ಇಡಲಾಗುತ್ತದೆ. ತಂಬಿಗೆಯಲ್ಲಿ ನೀರನ್ನು ತುಂಬಿಸಿ ಸೂರ್ಯ ದೇವರಿಗೆ ಅರ್ಪಿಸಲಾಗುತ್ತದೆ. ಸೂರ್ಯ ದೇವರ ಪೂಜೆಯಲ್ಲಿ ಇತರ ವಸ್ತುಗಳು ಸಹ ವಿಶೇಷ ಮಹತ್ವವನ್ನು ಹೊಂದಿವೆ. ಇವುಗಳನ್ನು ಪ್ರಸಾದದ ಭಾಗವೆಂದು ಪರಿಗಣಿಸಲಾಗುತ್ತದೆ.

ಜಾಗತಿಕ ಹಬ್ಬ

ಛಠ್ (ಷಷ್ಠಿ) ಉಪವಾಸ ವ್ರತವು ದೈಹಿಕ ಶಿಸ್ತನ್ನು ಮಾತ್ರವಲ್ಲದೆ ಮಾನಸಿಕ ಗಮನ, ಕುಟುಂಬ ಮತ್ತು ಸಮಾಜಕ್ಕೆ ಸಮರ್ಪಣೆ ಮತ್ತು ಪರಿಸರದೊಂದಿಗೆ ಸಾಮರಸ್ಯವನ್ನು ಸಂಕೇತಿಸುತ್ತದೆ. ಛಠ್ ಪೂಜೆ ಈಗ ಜಾಗತಿಕ ಹಬ್ಬವಾಗುತ್ತಿರುವುದು ಗಮನಾರ್ಹ. ಇದನ್ನು ಯುನೆಸ್ಕೋದ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸುವ ಪ್ರಯತ್ನ ನಡೆದಿದ್ದು, ಸೇರ್ಪಡೆಗೊಂಡರೆ ಭಾರತದ ಈ ವಿಶಿಷ್ಟ ಸಂಪ್ರದಾಯವು ಜಾಗತಿಕವಾಗಿ ಇನ್ನೂ ಹೆಚ್ಚಿನ ಮನ್ನಣೆಯನ್ನು ಪಡೆಯುತ್ತದೆ. ಛಠ್ ಪೂಜೆಯು ಸೂರ್ಯನನ್ನು ಆರಾಧಿಸುವುದರ ಜೊತೆಗೆ, ಜಲ ಮೂಲಗಳ ಸ್ವಚ್ಛತೆ ಮತ್ತು ಸಂರಕ್ಷಣೆಗೆ ವಿಶೇಷ ಒತ್ತು ನೀಡುತ್ತದೆ ಎಂಬುದು ವಿಶೇಷ ಎನಿಸಿದೆ. ಆಧುನಿಕ ಕಾಲದಲ್ಲಿ, ಪರಿಸರ ಬಿಕ್ಕಟ್ಟುಗಳು ಹೆಚ್ಚು ತೀವ್ರವಾಗುತ್ತಿರುವಾಗ ಛಠ್ ಹಬ್ಬ ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಸಮತೋಲಿತ ಜೀವನವನ್ನು ನಡೆಸುವ ಮಾರ್ಗವನ್ನು ನಮಗೆ ತೋರಿಸುತ್ತವೆ.

ಸ್ವಚ್ಛತೆಯ ಬಗ್ಗೆ ಕಾಳಜಿ

ಛಠ್ ಪೂಜೆಯ ಸಮಯದಲ್ಲಿ ಸ್ವಚ್ಛತೆಗೆ ವಿಶೇಷ ಗಮನ ನೀಡುತ್ತಾರೆ. ಪೂಜಾ ಸ್ಥಳದಿಂದ ಮನೆಯವರೆಗೆ ಸ್ವಚ್ಛತೆಗೆ ವಿಶೇಷ ಗಮನ ಕೊಡುತ್ತಾರೆ. ಪೂಜಾ ಸಾಮಗ್ರಿಗಳು, ಬಟ್ಟೆಗಳು, ಹಣ್ಣುಗಳು ಮತ್ತು ತರಕಾರಿಗಳನ್ನು ಶುದ್ಧ ಮತ್ತು ಸ್ವಚ್ಛ ವಾತಾವರಣದಲ್ಲಿ ತಯಾರಿಸುತ್ತಾರೆ.

ದೀಪಾವಳಿ ಹಬ್ಬ ಕಳೆದು ನಾಲ್ಕನೇ ದಿನಕ್ಕೆ ಅಂದರೆ ಕಾರ್ತಿಕ ಮಾಸದ ಶುಕ್ಲ ಪಕ್ಷದ ಚತುರ್ಥಿ ತಿಥಿಯಂದು ನಹಯ್-ಖಯ್ ಎಂಬ ಸಂಪ್ರದಾಯದಿಂದ ಆರಂಭವಾಗುತ್ತದೆ. ಈ ದಿನ ಕೆಲವು ವಿಶೇಷ ಸಂಪ್ರದಾಯಗಳನ್ನು ಅನುಸರಿಸಲಾಗುತ್ತದೆ. ಈ ದಿನ ಮನೆಯನ್ನು ಶುದ್ಧೀಕರಿಸಲಾಗುತ್ತದೆ. ಇದರ ನಂತರ ಛಠ್ ಭಕ್ತರು ಸ್ನಾನ ಮಾಡಿ ಶುದ್ಧ ಸಾತ್ವಿಕ ಆಹಾರವನ್ನು ಸೇವಿಸುವ ಮೂಲಕ ತಮ್ಮ ಉಪವಾಸವನ್ನು ಪ್ರಾರಂಭಿಸುತ್ತಾರೆ. ಉಪವಾಸ ಮಾಡುವವರು ಊಟ ಮುಗಿಸಿದ ನಂತರವೇ ಕುಟುಂಬದ ಉಳಿದ ಸದಸ್ಯರು ಮಹಾಪ್ರಸಾದವನ್ನು ಸೇವಿಸುತ್ತಾರೆ. ಮಹಾರಾಷ್ಟ್ರ ಮತ್ತು ನಮ್ಮ ದೇಶದ ಇತರ ನಗರಗಳಲ್ಲೂ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಪರ್ವಗಳಲ್ಲಿ ಒಂದು ಎಂದು ಪ್ರಸಿದ್ಧಿ ಪಡೆದಿದೆ. ಅದಕ್ಕೆ ಮುಖ್ಯ ಕಾರಣ, ಅಲ್ಲಿ ನೆಲೆಸಿರುವ ಬಿಹಾರಿನ ಮತ್ತು ಉತ್ತರಪ್ರದೇಶದ ಜನರು. ಛಠ್ ಮಹಾಪರ್ವವು ಸೂರ್ಯನ ಆರಾಧನೆಯ ಅತಿದೊಡ್ಡ ಹಬ್ಬವಾಗಿದೆ. ಈ ಹಬ್ಬದಲ್ಲಿ, ಛಠ್ ಮಾತೆಯನ್ನು ಭಗವಾನ್ ಸೂರ್ಯನೊಂದಿಗೆ ಸಮಾನವಾದ ಆಚರಣೆಗಳೊಂದಿಗೆ ಪೂಜಿಸಲಾಗುತ್ತದೆ. ನಾಲ್ಕು ದಿನದ ಛಠ್ ಪೂಜೆಯ ಮೊದಲ ದಿನದಂದು ನಹಾಯ್-ಖಾಯ್, ಎರಡನೇ ದಿನ ಖಾರ್ನಾ, ಮೂರನೇ ದಿನ ಸೂರ್ಯನಿಗೆ ಸಂಧ್ಯಾ ಅರ್ಘ್ಯ ಪ್ರದಾನ ಮತ್ತು ನಾಲ್ಕನೇ ದಿನ ಉಷಾಕಾಲದ ಅರ್ಘ್ಯವನ್ನು ಅರ್ಪಿಸುವ ಮೂಲಕ ಛಠ್ ಪರ್ವ ಮುಕ್ತಾಯವಾಗುತ್ತದೆ.

ಬ್ರಹ್ಮನ ಮಗಳು

ಛಠ್ ಮಾತೆಯನ್ನು ಬ್ರಹ್ಮನ ಮಾನಸಿಕ ಮಗಳು ಎಂದು ಹೇಳಲಾಗುತ್ತದೆ. ಇವರನ್ನು ಪೂಜಿಸುವುದರಿಂದ ಸಂತಾನ ಪ್ರಾಪ್ತಿ ಹಾಗೂ ಆಯುಷ್ಯದ ಆಸೆ ಈಡೇರುತ್ತದೆ ಎಂದು ಹೇಳಲಾಗುತ್ತದೆ. ಮತ್ತೊಂದು ನಂಬಿಕೆಯ ಪ್ರಕಾರ, ಛಠ್ ಮಾತೆಯನ್ನು ಸೂರ್ಯ ದೇವರ ಸಹೋದರಿ ಎಂದೂ ಕರೆಯುತ್ತಾರೆ. ಪೌರಾಣಿಕ ನಂಬಿಕೆಗಳ ಪ್ರಕಾರ, ಛಠ್ ಹಬ್ಬವು ಮಹಾಭಾರತದ ಅವಧಿಯಲ್ಲಿ ಪ್ರಾರಂಭವಾಯಿತು.

ದೇಶದ ಪ್ರಮುಖ ಪರ್ವಗಳಲ್ಲಿ ಒಂದೆನಿಸಿದರುವ ಈ ಛಠ್, ಕೇರಳದಲ್ಲಿ ಓಣಂ ತಮಿಳುನಾಡಿನಲ್ಲಿ ಪೊಂಗಲ್, ಪಂಜಾಬ್‌ನಲ್ಲಿ ಬೈಸಾಕಿ ಪರ್ವ ಆಚರಿಸಿದಂತೆ ಬಿಹಾರ, ಝಾರ್ಖಂಡ್, ಪೂರ್ವಉತ್ತರಪ್ರದೇಶದ ಜನರು ಎಲ್ಲೆಲ್ಲಿದ್ದಾರೋ ಅಲ್ಲೆಲ್ಲ ಈ ಪರ್ವವನ್ನು ಅತಿ ಉತ್ಸಾಹದಿಂದ ಆಚರಿಸುತ್ತಾರೆ. ಇದು ಭಗವಾನ್ ಸೂರ್ಯನ ಆರಾಧನೆಯಾಗಿದೆ.

ಛಠ್ ಅನ್ನೋದು ಷಷ್ಠಿಯ ಅಪಭ್ರಂಶವಾಗಿದೆ. ಛಠೀ ಮೈಯಾ ಪೂಜೆ ಅಂತಲೂ ಕರೆಯುತ್ತಾರೆ .ಇದನ್ನು 'ಸೂರಜ್ ಬಾಬಾ ಮತ್ತು ಸೂರಜ್ ಮಲ್ಲ ಪೂಜೆ'ಯೆಂದೂ ಕರೆಯುತ್ತಾರೆ. ಈ ದಿನಗಳಲ್ಲಿ ಛಠೀ ಮಯ್ಯ ಹಾಡುಗಳನ್ನು ಹಾಡುತ್ತಾರೆ. ಇವುಗಳನ್ನು ರಚಿಸಿದವರು ಜನಪದ ಕವಿಗಳು. ಭೋಜಪುರಿ ಛಠ್ ಹಾಡುಗಳು ಬಹು ಪ್ರಖ್ಯಾತಿ. ಮಾತೆಯ ರೂಪದಲ್ಲಿ ಪ್ರಸ್ತುತಪಡಿಸುವ ಹಾಡುಗಳಲ್ಲಿ ಮಹಿಳೆಯಲ್ಲಿ ದೇವತ್ವ ಭಾವವನ್ನು ಪೂರ್ಣ ಪ್ರತಿಷ್ಠಿತ ಗೊಳಿಸುವ ದೃಶ್ಯ ಇಲ್ಲಿದೆ. ಈ ಗೀತೆಗಳಿಗೆ ಗ್ರಾಮೀಣ ಮಹಿಳೆಯರು ಪೂರ್ಣವಾಗಿ ತಮ್ಮ ಸ್ವರ ನೀಡುತ್ತಾರೆ.

ಸೂರ್ಯಾಸ್ತದ ಸಮಯದ ಪೂಜೆ

ಷಷ್ಟಿ ತಿಥಿಯ ಸಂಜೆಗೆ ಸೂರ್ಯಾಸ್ತದ ಸಮಯ (ಅಸ್ತಮಿಸುವ) ಸೂರ್ಯನಿಗೆ ಅರ್ಘ್ಯ ನೀಡುವುದು ಪೂಜೆಯ ವಿಶೇಷತೆ. ಆ ದಿನ ಮನೆಯ ಅಂಗಳಕ್ಕೆ ಸೆಗಣಿ ಹಾಕಿ ಸಾರಿಸುತ್ತಾರೆ; ರಂಗೋಲಿಯನ್ನು ಹಾಕುತ್ತಾರೆ. ಇದರಲ್ಲಿ ಹಿಟ್ಟು, ಅಕ್ಕಿ ಇತ್ಯಾದಿಗಳನ್ನು ಬಳಸುತ್ತಾರೆ. ರಂಗೋಲಿಯ ನಡುವೆ ಒಂದು ಪ್ರಕಾರದ ಮಂಟಪವನ್ನು ಕಬ್ಬಿನ ಜಲ್ಲೆಗಳನ್ನು ಇರಿಸಿ ರಚಿಸುತ್ತಾರೆ. ನಾಲ್ಕು ಕಡೆ ದೀಪವನ್ನು ಹೊತ್ತಿಸುತ್ತಾರೆ. ಹಣ್ಣು-ಹಂಪಲು ಇರಿಸಿ ಪೂಜಿಸುತ್ತಾರೆ. ರಾತ್ರಿಯಿಡೀ ದೀಪವನ್ನು ಹೊತ್ತಿಸುತ್ತಾರೆ. ಮುಖ್ಯವಾಗಿ ನದಿ ತೀರಗಳಲ್ಲಿ ಸರೋವರಗಳ ತೀರದಲ್ಲಿ ಇದನ್ನು ಮಾಡುತ್ತಾರೆ. ರಾತ್ರಿ ಇಡೀ ಛಠ್ ಗೀತೆಗಳನ್ನು ಹಾಡುವ ಈ ಮಹಿಳೆಯರಲ್ಲಿ ಆನಂದ ಮತ್ತು ಶ್ರದ್ಧೆ ಎದ್ದು ಕಾಣುತ್ತದೆ. ಸೂರ್ಯದೇವನ ಕುರಿತಾದ ವರ್ಣನೆಗಳು ಇಲ್ಲಿ ವಿಶೇಷವೆನಿಸಿದೆ. ಛಠ್ ಪರ್ವವನ್ನು ವರ್ಷದಲ್ಲಿ ಎರಡು ಬಾರಿ ಆಚರಿಸುವ ಸಂಪ್ರದಾಯವಿದೆ. ಚೈತ್ರ (ಮಾರ್ಚ್) ಮತ್ತು ಕಾರ್ತಿಕ (ನವಂಬರ್) ದೀಪಾವಳಿಯ ಆರನೇ ದಿನ ಪ್ರಮುಖ ಛಠ್ ಪರ್ವ ಆಗಿದ್ದು ಮರುದಿನ ಬೆಳಿಗ್ಗೆ ಸೂರ್ಯೋದಯಕ್ಕೆ ಪೂಜಾವ್ರತ ಮುಗಿಯುತ್ತದೆ.

ಯುನೆಸ್ಕೋ ಮಾನ್ಯತೆಗೆ ಪ್ರಯತ್ನ

ಪ್ರಧಾನಿ ನರೇಂದ್ರ ಮೋದಿಯವರು ಇತ್ತೀಚೆಗೆ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್ ನಲ್ಲಿ ಒಂದು ಮಾಹಿತಿಯನ್ನು ಹಂಚಿಕೊಂಡಿದ್ದರು. ಭಾರತ ಸರ್ಕಾರವು ಛಠ್ ಮಹಾಪರ್ವವನ್ನು ಯುನೆಸ್ಕೋದ ಸಂಭಾವ್ಯ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸಲು ಸಕ್ರಿಯವಾಗಿ ಪ್ರಯತ್ನಿಸುತ್ತಿದೆ ಎಂದು ಅಲ್ಲಿ ಹೇಳಿದ್ದರು. ಛಠ್ ಪೂಜೆ ಈ ಪಟ್ಟಿಯಲ್ಲಿ ಸೇರ್ಪಡೆಯಾದ ದಿನ, ಪ್ರಪಂಚದ ಮೂಲೆ ಮೂಲೆಯಲ್ಲಿರುವ ಭಾರತೀಯರು ಈ ಹಬ್ಬದ ಭವ್ಯತೆ ಮತ್ತು ದೈವತ್ವವನ್ನು ಇನ್ನಷ್ಟು ಅನುಭವಿಸಲು ಸಾಧ್ಯವಾಗುತ್ತದೆ.



ನನ್ನ ದನಿಗೆ ನಿನ್ನ ದನಿಯು...

ಜಾಹೀರಾತು ಎಂದಾಕ್ಷಣ ಅಬ್ಬರದ ಪ್ರಚಾರ ಮಾತ್ರವಲ್ಲ, ಅದರಲ್ಲೂ ಕಲಾತ್ಮಕ ಕೌಶಲಕ್ಕೆ ಮತ್ತು ಜನರ ಗಮನವನ್ನು ವಿಭಿನ್ನವಾಗಿ ಸೆಳೆಯುವಂತೆ ಮಾಡಲು ಅವಕಾಶವಿದೆ ಎಂದು ತೋರಿಸಿಕೊಟ್ಟವರು ಪಿಯೂಷ್ ಪಾಂಡೆ. ಅವರ ಜಾಹೀರಾತುಗಳು ಟಿವಿಯಲ್ಲಿ ಪ್ರಸಾರವಾಗತೊಡಗಿದರೆ, ವೀಕ್ಷಕರು ತಕ್ಷಣ ಚಾನೆಲ್ ಬದಲಾಯಿಸದೇ, ಆ ಜಾಹೀರಾತಿನಲ್ಲಿರುವ ಹಾಸ್ಯವನ್ನೋ, ಸಂದೇಶವನ್ನೋ ಮತ್ತೆ ಮತ್ತೆ ನೋಡುತ್ತಾರೆ. ಜಾಹೀರಾತಿನಲ್ಲೂ ಸೃಜನಶೀಲತೆಯನ್ನು ತಂದ ಪಿಯೂಷ್ ಪಾಂಡೆ (1955-2025) ಮೊನ್ನೆ ಇಹಲೋಕ ತ್ಯಜಿಸಿದ್ದಾರೆ.

» ರವೀ ಸಜಂಗದ್ದೆ

'ಕೇಳುಗರು, ನೋಡುಗರು ಮತ್ತು ಗ್ರಾಹಕರ ಮನಸು ಮತ್ತು ಹೃದಯವನ್ನು ತಲುಪುವ ಜಾಹೀರಾತುಗಳು ಮಾತ್ರ ಜನರ ನಡುವೆ ಮೋಡಿ ಮಾಡಬಲ್ಲವು, ಸಂಚಲನ ಸೃಷ್ಟಿಸಬಲ್ಲವು. ಜಾಹೀರಾತು ನೀಡುವ ಸಂಸ್ಥೆಯ ದೃಷ್ಟಿಕೋನದ ಬದಲಾಗಿ, ಜನರ



ದೃಷ್ಟಿಕೋನಕ್ಕೆ ಒಪ್ಪುವ ಮತ್ತು ಹೃದಯಕ್ಕೆ ಮುಟ್ಟುವ ಕಂಟೆಂಟ್ ಯಾವತ್ತಿಗೂ ಸೋತ ಉದಾಹರಣೆ ಇಲ್ಲ.' ಇದು ಮೊನ್ನೆ ನಿಧನರಾದ ಜಾಹೀರಾತು ಜಗತ್ತಿನ ಕಂಟೆಂಟ್ ಬ್ರಹ್ಮ, ಹೊಸತನದ ಹರಿಕಾರ, ಪದ್ಮಶ್ರೀ ಪಿಯೂಷ್ ಪಾಂಡೆ ಹೇಳಿದ ಮಾತುಗಳು. ಟೀವಿ ಜಾಹೀರಾತು ಮತ್ತು ಇತರ ಜಾಹೀರಾತು ವಿಭಾಗದಲ್ಲಿ 4 ದಶಕಗಳ ಕಾಲ ವಿಶಿಷ್ಟ ಆಲೋಚನೆಗಳು ಮತ್ತು ಜಾಹೀರಾತು ಕಂಟೆಂಟ್ ಮೂಲಕ, ಹೊಸತನ ತೋರಿ, ಮನೆಮಾತಾಗಿರುವ 'ಆ್ಯಡ್

ಮ್ಯಾನ್' ಇವರು! ಅದೊಂದು ಕ್ರಿಕೆಟ್ ಪಂದ್ಯ. ಆಟಗಾರ 99 ರನ್ನಿನೊಂದಿಗೆ ಬ್ಯಾಟಿಂಗ್ ಮಾಡುತ್ತಿ ದ್ದಾನೆ. ಬಾರಿಸಿದ ಮುಂದಿನ ಎಸೆತ ಗಾಳಿಯಲ್ಲಿ ಹೋಗಿ ಕೊನೆಗೆ ಸಿಕ್ಸರ್ ಆಗಿ ಪರಿವರ್ತನೆಯಾಗಿ ಶತಕ ದಾಖಲಾದಾಗ ಗ್ಯಾಲರಿಯಲ್ಲಿ ಕ್ಯಾಡ್ಬರಿ ಚಾಕೋಲೇಟ್ ಚಪ್ಪರಿಸುತ್ತಿದ್ದ ಆತನ ಗೆಳತಿ, ಭದ್ರತಾ ಸಿಬ್ಬಂದಿಯ ತಡೆಯನ್ನು ಲೆಕ್ಕಿಸದೇ ಮೈದಾನದೊಳಕ್ಕೆ ಬಂದು ಡ್ಯಾನ್ಸ್ ಮಾಡುವಾಗ ಬರುವ ಹಿನ್ನೆಲೆ ಸಂಗೀತ ಮತ್ತು 'ಕ್ಯಾ ಸ್ವಾದ್ ಹೇ ಝಿಂದಗೀ ಮೇ' ಸಾಲುಗಳ ಟೀವಿ ಜಾಹೀರಾತು ಇಂದಿಗೂ ಎಲ್ಲರ ನೆನಪಿನಲ್ಲಿದೆ!

ಕೋಲಿಗೆ ಅಂಟಿದ ಮೀನು!: ಇವರ ಪರಿಕಲ್ಪನೆಯ ಇನ್ನೊಂದು ವಿನೂತನ ಜಾಹೀರಾತು ಕೆಲವು ವರ್ಷಗಳ ಹಿಂದೆ ಪ್ರದರ್ಶನಗೊಂಡಿತು. ದಕ್ಷಿಣ ಭಾರತದವನಂತೆ ಕಾಣುವ ಒಬ್ಬ ವ್ಯಕ್ತಿ ಸಣ್ಣ ಕೋಲಿಗೆ ಫೆವಿಕ್ವಿಕ್ ಅಂಟಿಸಿ ಕೆಲವೇ ಸೆಕೆಂಡುಗಳಲ್ಲಿ ಮೀನು ಹಿಡಿದ,

▸▸ ನಾಲ್ಕನೇ ಪುಟ

ವಿಶ್ವವಾಣಿ
26.10.2025 ಭಾನುವಾರ

ಪುಸ್ತಕ ವಿಮಾನ

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ.

ನಿಜದ ನಿಲುವಿನ ಅನಾವರಣ

ಕನ್ನಡದ ಹಿರಿಯ ತಲೆಮಾರಿನ ಕವಿ ಸಾಹಿತಿಗಳಲ್ಲಿ ವಿ.ಸೀ ಅವರದು ಎದ್ದು ಕಾಣುವ ಹೆಸರು. ಅವರ ವ್ಯಕ್ತಿಮತ್ತೆ, ಸಾಹಿತ್ಯ ಸಾಧನೆಯ ಅವಲೋಕನ ಪ್ರಸ್ತುತ ಕೃತಿಯಲ್ಲಿ ಸೊಗಸಾಗಿ ಪಡಿಮೂಡಿದೆ.

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ವಿ. ಸೀತಾರಾಮಯ್ಯ ಅವರ ಕೊಡುಗೆ ಬಹುಮುಖವಾದುದು. ತಮ್ಮ ಮಾತು ಕೃತಿಗಳ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಸಮೃದ್ಧಗೊಳಿಸಿದ ಅವರ ಸೃಜನಶೀಲತೆ ಅಗಾಧವಾದುದು.

> ಜೀವಕಾರುಣ್ಯ ಪರಂಪರೆ ಮತ್ತು ವಿ. ಸೀ
> ಸಂ : ನ. ರವಿಕುಮಾರ, ನಾಗರಾಜ ಹೆಗಡೆ
> ಚಾತುರ್ಮಾಸಿಕ ಸಂಚಿಕೆ
> ಪ್ರ: ಅಭಿನವ, ಬೆಂಗಳೂರು
> ಬೆಲೆ ರೂ 500/-

ಸದಭಿರುಚಿಗೆ ಸಂಕೇತ, ಸಜ್ಜನಿಕೆ, ಸಹೃದಯತೆ, ಸುಸಂಸ್ಕೃತ ವ್ಯಕ್ತಿತ್ವಕ್ಕೆ ಮಾದರಿಯಾಗಿದ್ದ ಅಪರೂಪದ ಧೀಮಂತ ಚೇತನ ವಿ.ಸೀ. ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು ನಿಜದ ನೇರಕೆ ನಡೆವ ನಿಶ್ಚಲತೆಯೊಂದು, ಅನ್ಯಾಯಕೆಂದೆಂದು ಬಾಗದೆಚ್ಚರವೊಂದು ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು –ಅಭೀಃ ! ಅಭೀಃ ! ಅಭೀಃ ! ಎಂಬ ತಾರಕವಾಕ್ಯ ನಾಡಿಯನು ನಡೆಸುತಿರೆ, ಬಾಳನ್ನು ತಿದ್ದುತಿರೆ ನಡೆ ಮುಂದಕೆನ್ನುತ್ತೆ ಕೂಗುತಿವೆ ನುಗ್ಗಿಸುತಿವೆಇದು ವಿ. ಸೀ ಅವರ ಸೃಜನ ಸೃಷ್ಟಿ ಹಾಗೂ ಉದಾರ ಜೀವನದೃಷ್ಟಿ.

'ಜೀವಕಾರುಣ್ಯ ಪರಂಪರೆ ಮತ್ತು ವಿ.ಸೀ' ಇದು ಅಭಿನವದ ಇತ್ತೀಚಿನ ವಿಶೇಷ ಸಂಚಿಕೆ.ಇದನ್ನು ರವಿಕುಮಾರ ಹಾಗೂ ನಾಗರಾಜ ಹೆಗಡೆ ಅವರು ಸಂಪಾದಿಸಿಕೊಟ್ಟಿದ್ದಾರೆ. ವಿ. ಸೀ ಅವರ ವ್ಯಕ್ತಿಮತ್ತೆ, ಜೀವನಯಾನ, ಸಾಹಿತ್ಯ ಸಾಧನೆಗಳನ್ನು ವಿಭಿನ್ನ ನೆಲೆಗಳಲ್ಲಿ ಅನಾವರಣಗೊಳಿಸಲಾಗಿದೆ. ವಿ. ಸೀ ಅವರನ್ನು ಹತ್ತಿರದಿಂದ ಕಂಡ, ಕೇಳಿದ, ಓದಿದ, ಸಹವಾಸ ವಾತ್ಸಲ್ಯಗಳ ತೆಕ್ಕೆಯಲ್ಲಾಡಿದ ನೋಟ ನಿಲುವು ಸಂಸ್ಮರಣೆ ಇಲ್ಲಿ ಆಪ್ತವಾಗಿ ದಾಖಲಾಗಿದೆ.

ನಾಡಿನ ಹಿರಿಯ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರುವಿ. ಸೀ.ಅವರನ್ನು ಕಂಡರಿಸಿದ ಬಗೆ ಹೀಗಿದೆ: ವಿ.ಸೀ. ನಮ್ಮ ನಡುವಿನ ಅಪರೂಪದ ವಿದ್ವಾಂಸರು. ಕವಿ, ನಾಟಕಕಾರ, ವಿಮರ್ಶಕ, ಪ್ರಬಂಧಕಾರ ಹೀಗೆ



ಅವರದು ಚದುರಿದ ಪ್ರತಿಭೆ. ಸೂಕ್ಷ್ಮ ಸಂವೇದನೆಯ ವಿ.ಸೀ. ಜಗತ್ತಿನ ಸಾಹಿತ್ಯಕ್ಕೆ ತಮ್ಮನ್ನು ಮುಕ್ತವಾಗಿ ತೆರೆದುಕೊಂಡಿದ್ದ ವಿಸ್ತಾರ ಅಧ್ಯಯನದ ವಿರಳವ್ಯಕ್ತಿಯಾಗಿದ್ದರು. ಇಂಗ್ಲಿಷ್, ಕನ್ನಡ, ಸಂಸ್ಕೃತ, ತೆಲುಗು, ಬಂಗಾಳಿ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದ ಅವರದು ಬಹುಮುಖ ಆಸಕ್ತಿ. ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರಕಲೆ, ರಾಜಕೀಯ, ಅರ್ಥಶಾಸ್ತ್ರ ಹೀಗೆ ಹಲವು ಕ್ಷೇತ್ರಗಳಲ್ಲಿ ಅವರು ಪ್ರಭುತ್ವ ಪಡೆದಿದ್ದರು.

ಭಾರತೀಯ ಹಾಗೂ ಪಾಶ್ಚಾತ್ಯ ಸಾಹಿತ್ಯ ಈ ಎರಡು ಜಗತ್ತುಗಳಲ್ಲೂ ವಿ.ಸೀ. ಸಹಜವಾಗಿ ಹೊಕ್ಕು ಬರಬಲ್ಲವರಾಗಿದ್ದರು.

ವಿ.ಸೀ. ಅವರ ಬದುಕು ಬರಹಗಳನ್ನು ಇಡಿಯಾಗಿ ಗಮನಿಸಿದಾಗ ಎರಡು – ಪಶ್ಚಿಮ, ಜಗತ್ತುಗಳ ನಡುವೆ ಅವರು ತೊಳಲಾಡಿದಂತೆ ತೋರುತ್ತದೆ. ಪೂರ್ವ ಪರಂಪರೆ ಆಧುನಿಕತೆ, ಶಾಸ್ತ್ರ – ಸಾಹಿತ್ಯ, ವಾಸ್ತವ ಆದರ್ಶ ಹೀಗೆ ಹತ್ತು ಹಲವು ನೆಲೆಗಳಲ್ಲಿ ಅವರು ಸಂಘರ್ಷವನ್ನೆದುರಿಸಿದರು. ಬದುಕಿಡೀ ಹೋರಾಟ ನಡೆಸಿದರು. ಅವರ ಪ್ರತಿಭೆ, ಪರಿಶ್ರಮಗಳಿಗೆ ತಕ್ಕ ಸ್ಥಾನಮಾನ ದೊರಕದಿದ್ದಾಗಲೂ ಮನಸ್ಸನ್ನು ಕಹಿಮಾಡಿಕೊಳ್ಳದೇ ಮಾದರಿಯಾಗಿ ಬದುಕಿದರು.

ವಿ.ಸೀ. ನಿಸ್ಸಂದೇಹವಾಗಿ ನಮ್ಮ ಕಾಲದ ಧೀಮಂತ ಚೇತನಗಳಲ್ಲೊಬ್ಬರು. ಅವರ ಬಗೆಗಿನ ಮರುಚಿಂತನೆ ಇಂದಿನ ಕನ್ನಡ ಸಂದರ್ಭದ ಅಗತ್ಯಗಳಲ್ಲೊಂದುಈ ಆಶಯ ಸಹ ಸಾಂಪ್ರತ ಕೃತಿಯಲ್ಲಿ ಚೆನ್ನಾಗಿ ನೆರವೇರಿದೆ. ಹಿರಿಯ ಜತೆ ಜತೆಗೆ ಹೊಸ ತಲೆಮಾರಿನ ಲೇಖಕರಾದ ಸಂಧ್ಯಾ ಹೆಗಡೆ, ಕಲಾ ಭಾಗ್ವತ್, ಜಿನದೇವ ನಾಯಕ, ವೀಣಾದೇವಿ, ಡಾ. ವೆಂಕಟಗಿರಿ ದಳವಾಯಿ, ನಮಿರಾಜ ಮಲ್ಲ ಅವರು ವಿ. ಸೀ ಅವರ ಸಾಹಿತ್ಯದ ವಿವಿಧ ಮುಖಗಳನ್ನು ತೂಗಿ ನೋಡಿ ಮರು ವಿವೇಚನೆಗೆ ಗುರಿ ಪಡಿಸಿರುವುದು ಅವಲೋಕನೀಯ ಅಂಶ.

ವಿ.ಸೀ ಅವರ ಜೀವನ, ಸಮಗ್ರ ಸಾಹಿತ್ಯ ಸಾಧನೆಯ ಕುರಿತ ಸಂಚಿಕೆ ಇದು. ಹಳೆಯ ತಲೆಮಾರಿನವರ ಅನುಭವ ಕಥನವೂ ಹೊಸ ತಲೆಮಾರಿನ ಕಣ್ಣ ನೋಟವೂ ಇಲ್ಲಿದೆ. ಜೀವ ಕಾರುಣ್ಯ ಪರಂಪರೆಯ ಪ್ರತಿನಿಧಿ ವಿ. ಸೀತಾರಾಮಯ್ಯ ಅವರೇ ಹೇಳಿರುವ ಈ ಮಾತುಗಳನ್ನು ಗಮನಿಸಿ: 'ಎಲ್ಲರೂ ಬುದ್ಧಿವಂತರೂ ಅದೃಷ್ಟಶಾಲಿಗಳೂ ಆಗುವುದು ಶಕ್ಯವಿಲ್ಲ. ಆದರೆ ಎಲ್ಲರೂ ಸಜ್ಜನರಾಗಬಹುದು' ಎಂಬ ಮನೋಧರ್ಮ ಮಾನವ ತತ್ತ್ವವನ್ನೇ ಪ್ರತಿಪಾದಿಸಿದೆ. ಬಾಳು ಬೆಲೆಯುಳ್ಳದ್ದು, ಸುಂದರವಾದದ್ದು. ನಮ್ಮ ಆಸೆ ಆಕಾಂಕ್ಷೆ ಪ್ರಯತ್ನಗಳು ಉಚ್ಚವಾಗಿರಬೇಕು, ಲೋಕದಲ್ಲಿ ಪ್ರಿಯರಾಗಿ ಬಾಳಬೇಕು. ಸಾಹಿತ್ಯ ಜೀವನಕ್ಕೆ ಸಂಜೀವಿನಿಯಾಗಿದೆ. ಆ ದಿಶೆಯಲ್ಲಿ ನಮ್ಮ ಮನಸ್ಸು ಸಂಚರಿಸಿ ಸಂಸ್ಕಾರಗೊಳ್ಳಬೇಕು. ಲೋಕದ ಅನುಭವದಲ್ಲಿ ಎಲ್ಲಿ ದೊಡ್ಡತನ ಕಂಡರೂ ಅದು ದೊಡ್ಡದೇ. ಸುಖ ದುಃಖ, ಹಗೆ ಕೆಳೆ, ನಿಷ್ಠುರತೆ ವಂಚನೆ, ನಯ ಪ್ರಾಮಾಣಿಕತೆಗಳು ಅಕ್ಕಪಕ್ಕದಲ್ಲಿ ಹಾಸುಹೊಕ್ಕಾಗಿವೆ. ಆದ್ದರಿಂದ ಯಾವ ಕ್ಷಣದಲ್ಲಿಯೂ ಎದೆಗೆಡದೆ ಶ್ರೇಷ್ಠತೆಯನ್ನು ಸಾಧಿಸಲು ಹೆಣಗಬೇಕು. ಆಗ ಜೀವನ ಸಾರ್ಥಕವಾದಂತೆ ಕಾಣುತ್ತದೆ. ಹಿರಿದರಲ್ಲಿ ನಂಬಿಕೆ ಸಲ್ಲುತ್ತದೆ. ಹತ್ತು ಯುಗಗಳ ಕಷ್ಟವನ್ನು ದಾಟಬಲ್ಲೆನೆಂಬ ದೃಢ ಸ್ಫೂರ್ತಿ ಬರುತ್ತವೆ. ರಾಜ್ಯ ಸಾಮ್ರಾಜ್ಯಗಳ ದರ್ಪವನ್ನು ಪ್ರತಿಭಟಿಸಬಲ್ಲೆನೆಂಬ ನಿಶ್ಚಯ, ಸಾಹಸ ಉಂಟಾಗುತ್ತದೆ'.

ಸಾಹಿತ್ಯದ ಔಷಧೀಯ ಗುಣದ ಬಗೆಗೆ ಇದಕ್ಕಿಂತ ಚಂದ ಹೇಳಲಾಗದು ಎಂಬ ಮಾತಿನಲ್ಲಿ ಅತ್ಯುಕ್ತಿಯಿಲ್ಲ. ಒಂದು ವಿಶ್ವವಿದ್ಯಾಲಯ, ಅಕಾಡೆಮಿ ಮಾಡಬಹುದಾದ ಕಾರ್ಯವನ್ನು, ಈ ಸಂಚಿಕೆಯ ಮೂಲಕ 'ಅಭಿನವ' ಮಾಡಿರುವುದು ಮಾದರಿ ಉಪಕ್ರಮ.

ಪ್ರಾಮಾಣಿಕ ದೇಸಿ ಕಥನದ ವಿಸ್ತಾರ

ಕುವೆಂಪು ಅವರ ಸಮಾನತೆಯ ಆಶಯ, ಶಾಂತವೇರಿ ಗೋಪಾಲ ಗೌಡರ ಸಾಮಾಜಿಕ ಚಿಂತನೆಗಳು ಮೊಳೆತ ಪ್ರದೇಶದ ಪರಿವರ್ತನೆಗಳನ್ನು ಕೃತಿ ಸೇಂದ್ರಿಯವಾಗಿ ಚಿತ್ರಿಸುತ್ತದೆ.

» ಎನ್.ಎಸ್.ಶ್ರೀಧರಮೂರ್ತಿ

ಕಡಿದಾಳ್ ಪ್ರಕಾಶ್ ಅವರು ಶಿಕ್ಷಣ ಮುಗಿಸಿ ತಮ್ಮ ಹಳ್ಳಿಗೆ ಹಿಂದಿರುಗಿ ಅಲ್ಲಿಯೇ ಬದುಕನ್ನು ಕಟ್ಟಿಕೊಂಡವರು. ಸುದೀರ್ಘ ಕಾಲದಲ್ಲಿ ಅಲ್ಲಿನ ಪರಿಸರದ ಪಲ್ಲಟಗಳನ್ನು ಕಂಡವರು. ಬದಲಾವಣೆಯನ್ನು ವ್ಯಕ್ತಿಗಳ ಮೂಲಕ ಹಿಡಿಯುವ ಪ್ರಾಮಾಣಿಕ ಪ್ರಯತ್ನವನ್ನು ಈ ಕೃತಿಯ ಮೂಲಕ ಮಾಡಿದ್ದಾರೆ. ಇದು ಕೊಂಚವೂ ಕಲ್ಪನೆಯ ಲೇಪವಿಲ್ಲದೆ ಅಂತರಾಳದಿಂದ ಮೂಡಿ ಬಂದ ಚಿತ್ರಣವೆನ್ನುವುದನ್ನು ಪ್ರತಿಯೊಂದು ವ್ಯಕ್ತಿಚಿತ್ರವೂ ಹಿಡಿದಿಡುತ್ತದೆ. ಅವರನ್ನು ಒಂದು ರೀತಿಯಲ್ಲಿ ಮರುಸೃಷ್ಟಿಸಿ ಕಾಲಘಟ್ಟವನ್ನು ನಮ್ಮ ಅನುಭವಕ್ಕೆ ತಂದಿದ್ದಾರೆ. ಇಲ್ಲಿ ಸಂಭ್ರಮದಂತೆ ದಟ್ಟ ವಿಷಾದವೂ ಇದೆ. ಒಂದು ಕಾಲಘಟ್ಟ ಮುಗಿಯುವಲ್ಲಿಯೇ ಆಗಿರುವ ಸಾಮಾಜಿಕ ಪರಿವರ್ತನೆ ನಮ್ಮ ಆಧುನಿಕತೆಯ ಕುರಿತು ಚಿಂತಿಸುವಂತೆ ಮಾಡುತ್ತದೆ. ಕುವೆಂಪು ಅವರ ಸಮಾನತೆಯ ಆಶಯ, ಶಾಂತವೇರಿ ಗೋಪಾಲ ಗೌಡರ ಸಾಮಾಜಿಕ ಚಿಂತನೆಗಳು ಮೊಳೆತ ಪ್ರದೇಶದ ಪರಿವರ್ತನೆಗಳನ್ನು ಕೃತಿ ಸೇಂದ್ರಿಯವಾಗಿ ಚಿತ್ರಿಸುತ್ತದೆ.

> (ಮಲೆನಾಡು ಪರಿಸರದ ವ್ಯಕ್ತಿಚಿತ್ರಗಳು)
> ಲೇ: ಕಡಿದಾಳ್ ಪ್ರಕಾಶ್
> ಪ್ರ ಅಭಿರುಚಿ ಪ್ರಕಾಶನ ಸರಸ್ವತಿಪುರಂ, ಮೈಸೂರು-560 009
> ಬೆಲೆ: ರೂ 150/-

ಕಡಿದಾಳ್ ಪ್ರಕಾಶ್ ಅವರು ರೈತ ಹೋರಾಟಗಾರ ಕಡಿದಾಳ್ ಶಾಮಣ್ಣನವರ ಕೊನೆಯ ಸಹೋದರ. ಕುಪ್ಪಳಿಯ ಕುವೆಂಪು ಪ್ರತಿಷ್ಠಾನವನ್ನು ಕಟ್ಟುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದವರು. ಸಾಮಾಜಿಕ ಸಂಘಟನೆಯಲ್ಲಿಯೂ ಗಟ್ಟಿತನ ತೋರಿದವರು. ಅವರ ಒಡನಾಟದ ವ್ಯಾಪ್ತಿ ಸಹಜವಾಗಿಯೇ

ದೊಡ್ಡದು. ಕಡಿದಾಳ್ ತಮ್ಮಯ್ಯಗೌಡ, ರಾಮಪ್ಪ ಗೌಡ, ಪಟೇಲ್ ಬಸಪ್ಪ ಗೌಡರಂತಹ ಕೆಲವರನ್ನು ಬಿಟ್ಟರೆ ಬಹುತೇಕರು ಸಾಮಾನ್ಯರಲ್ಲಿ ಸನ್ಮಾನ್ಯರು. ಅವರ ವ್ಯಕ್ತಿಚಿತ್ರ ಕಟ್ಟುವಾಗ ಪ್ರಕಾಶ್ ಅವರು ಯಾವುದೇ ವೈಯಕ್ತಿಕ ಇಲ್ಲವೆ ಸಾಮಾಜಿಕ ಪ್ರಭಾವಳಿ ಮೂಡದ ಹಾಗೆ ಎಚ್ಚರಿಕೆ ವಹಿಸುತ್ತಾರೆ. ಹೀಗಾಗಿ ಅವರ ಉಸಿರಾಟದ ಏರಿಳಿತವೂ ನಮಗೆ ಕೇಳಿಸುವಷ್ಟು ಆಪ್ತತೆ ಮೂಡಿ ಬಿಡುತ್ತದೆ. ಪ್ರಾಮಾಣಿಕತೆಯೇ ಮೂರ್ತರೂಪವಾದಂತಿರುವ ನಾಗೇಂದ್ರ ಭಟ್ಟರು, ಗ್ರಾಮಪಂಚಾಯತಿ ಅಟೆಂಡರ್ ಆಗಿ ಇಡೀ ಊರಿನ ಹೊಣೆಯನ್ನೇ ತನ್ನ ಮೇಲೆ ಹೊರುವ ಅಪ್ಪಯ್ಯ ಗೌಡ, ಗ್ರಾಮದ ಆರೋಗ್ಯಕ್ಕಾಗಿ ಮಳೆ ಗಾಳಿ ಎನ್ನದೆ ತಿರುಗಾಡುತ್ತಿದ್ದ ಮಿಡ್ ವೈಫ್ ತಾರಮ್ಮ, ಗ್ರಾಮದಲ್ಲಿ ಅರಳಿದ ಕಲಾ ಪ್ರತಿಭೆ ಎ.ಪಿ.ರಾಮಪ್ಪ, ಪ್ರಾಮಾಣಿಕ ವ್ಯಾಪಾರಿ ಅಹಮದ್ ಬ್ಯಾರಿ ಹೀಗೆ ಹೆಜ್ಜೆ ಹೆಜ್ಜೆಗೂ ಮಲೆನಾಡಿನ ಸ್ವಂತಿಕೆಯನ್ನು ತಮ್ಮದಾಗಿಸಿ ಕೊಂಡ ವ್ಯಕ್ತಿಗಳ ಚಿತ್ರಣ ಸಿಕ್ಕುತ್ತದೆ.

ಕಂಬಳಿ ಪಾಂಡುರಂಗನ ಚಿತ್ರಣದಲ್ಲಿ ಫ್ಯಾಂಟಸಿಯ ಛಾಯೆ ಕಾಣಿಸಿದರೂ ಅದು ಮಲೆನಾಡಿನ ಪರಿಸರದಲ್ಲಿ ಎಬ್ಬಿಸುತ್ತಿದ್ದ ತರಂಗಗಳು ನವಿರಾಗಿ ದಾಖಲಾಗಿವೆ. ಎತ್ತಿನ ವ್ಯಾಪಾರದ ದಲ್ಲಾಳಿ ಕುಳ್ಳ ತಮ್ಮಯ್ಯ, ಪಶು ಆಸ್ಪತ್ರೆಯನ್ನೇ ಸಾಂಸ್ಕೃತಿಕ ಕೇಂದ್ರವಾಗಿಸಿದ ಆಸ್ಪತ್ರೆ ನರಸಿಂಹಣ್ಣ ಮೊದಲಾದ ಚಿತ್ರಣಗಳು ಅಂತಹ ವ್ಯಕ್ತಿಗಳು ಮಾತ್ರವಲ್ಲ ಅಂತಹ ಸಾಂಸ್ಕೃತಿಕ ಪರಿಸರ ಕೂಡ ಮಾಯವಾಗುತ್ತಿರುವುದನ್ನು ಚಿತ್ರಿಸುತ್ತದೆ. ಇದು ಸಾಮಾಜಿಕ ಬದುಕಿನಲ್ಲಿದ್ದ ಸಂಭ್ರಮಗಳ ಚಿತ್ರಣವೂ ಹೌದು. ಅವು ಮಾಯವಾಗುತ್ತಿರುವ ಕಾರಣಗಳನ್ನು ನಾವೆಲ್ಲರೂ ಗಂಭೀರವಾಗಿ ಚಿಂತಿಸುವಂತೆ ಕೃತಿ ಮಾಡುತ್ತದೆ.

ಇಲ್ಲಿ 'ಗ್ರಾಮ ಪಂಚಾಯತಿ ಮಂದಿರ' ಎಂದು ಕರೆದ ತಮ್ಮಯ್ಯ ಗೌಡರಿದ್ದಾರೆ. ಊರಿಗೆ ಸದಾ ನೆರವಾಗುವ ವರ್ಣರಂಜಿತ ವ್ಯಕ್ತಿತ್ವದ ಪಟೇಲ್ ಬಸಪ್ಪಗೌಡರಿದ್ದಾರೆ. ಅಪಾರ ಜೀವನ ಪ್ರೀತಿಯನ್ನು ಹೊಂದಿದ್ದ ರಾಮಪ್ಪ ಗೌಡರಿದ್ದಾರೆ, ಊರಿನವರ ಕಷ್ಟಸುಖಕ್ಕೆ ಪ್ರಾಮಾಣಿಕವಾಗಿ ಮಿಡಿಯುತ್ತಿದ್ದ ಸಸಿಹಿತ್ಲು ನಾಗೇಂದ್ರನಂತವರಿದ್ದಾರೆ. ಒಂದು ರೀತಿಯಲ್ಲಿ ಇದು ಸಾಂಸ್ಕೃತಿಕ ವೈವಿಧ್ಯದ ಹಿನ್ನೆಲೆಯಲ್ಲಿನ ಸಾಮಾಜಿಕ ವೈಶಾಲ್ಯದ ಚಿತ್ರಣವಾಗಿದೆ. ಇವೆಲ್ಲರೂ ತಮ್ಮ ತಮ್ಮ ಅಸ್ಮಿತೆಯನ್ನು ಉಳಿಸಿ ಕೊಂಡವರು. ಹೀಗಾಗಿ ಕಾಡುವ ಗುಣವನ್ನು ಹೊಂದಿದ್ದಾರೆ. ನಗರದ ಧಾವಂತದ ಬದುಕಿನಲ್ಲಿ ಎಲ್ಲಾ ಪ್ರಭಾವಳಿಗಳನ್ನು, ಸಾಮಾಜಿಕ ಪ್ರಭಾವವನ್ನು ಹೊಂದಿದ್ದರೂ ಅಸ್ಮಿತೆಯನ್ನು ಉಳಿಸಿ ಕೊಂಡವರು ಎಷ್ಟು ಜನರಿದ್ದಾರೆ ಎನ್ನುವುದು ದೇಸಿತನದ ಸೊಗಡನ್ನು ಬಿಂಬಿಸುತ್ತದೆ. ಇಂತಹ ವಿಶಿಷ್ಟ ಅನುಭವಗಳ ಕೃತಿಯನ್ನು ನೀಡಿದ ಕಡಿದಾಳ್ ಪ್ರಕಾಶರು ನಿಜಕ್ಕೂ ಅಭಿನಂದನಾರ್ಹರು.



» ಆರ್.ಬಿ.ಗುರುಬಸವರಾಜ

ವಿಜ್ಞಾನದ ಒಳನೋಟಗಳು

ವಿಜ್ಞಾನದ ಓದು ಎಂದ ಕೂಡಲೇ ಕೆಲವರು ಹಿಂದೆ ಸರಿಯುವರು. ಇನ್ನು ಕೆಲವರು ಅದರಲ್ಲಿನ ಸಾರಸತ್ವವನ್ನು ಅನುಭವಿಸಲು ಧಾವಿಸುವರುವಿಜ್ಞಾನ ಎಲ್ಲರಿಗೂ ರುಚಿಸುವುದಿಲ್ಲ. ಅದೊಂದು ರೀತಿಯ ಮೌನ ನದಿ ಇದ್ದಂತೆ. ಅಂತಹ ಮೌನದ ನದಿಯ ಪಯಣ ರೋಚಕತೆಯನ್ನು ನೀಡದಿದ್ದರೂ ಬದುಕಿಗೊಂದು ಸಾರ್ಥಕತೆಯನ್ನು ನೀಡುತ್ತದೆ. ಅಂತಹ ವಿಜ್ಞಾನದ ಬರಹಗಳ ಸುನಿಲ್ ಬಾರ್ಕೂರ್ ಅವರು ಗುರುತಿಸಿಕೊಂಡಿದ್ದಾರೆ.

ಸಾಮಾನ್ಯ ಓದುಗನೂ ಸಹ ವಿಜ್ಞಾನವನ್ನು ಅರ್ಥಮಾಡಿಕೊಳ್ಳುವಂತೆ ಬರೆಯುವ ಅವರ ಶೈಲಿ ಸುಲಲಿತವಾಗಿದೆ. ಸುನಿಲ್ ಬಾರ್ಕೂರ್ ಅವರು ಬರೆದ ಒಂಟಿ ತೋಳಗಳ ಬೆನ್ನುಹತ್ತಿದವರು ಮತ್ತು ಇತರೆ

> ಒಂಟಿ ತೋಳಗಳ ಬೆನ್ನುಹತ್ತಿದವರು
> ಲೇ: ಸುನೀಲ್ ಬಾರ್ಕೂರ್
> ಪ್ರ: ಬುಕ್ಸ್‌ಲೋಕ. ಕಾಂ

ಸ್ವಾರಸ್ಯಗಳು ಎನ್ನುವ ಕೃತಿ, ವಿಜ್ಞಾನದ ಸಾಂಗತ್ಯಕ್ಕಷ್ಟೇ ಸೀಮಿತವಾಗಿಲ್ಲ. ಇಲ್ಲಿ ಕ್ರೀಡೆ ಇದೆ, ಸಿನಿಮಾದ ತಂತ್ರಜ್ಞಾನ ಇದೆ, ವಿಜ್ಞಾನ ಇದೆ, ಜೀವವಿಜ್ಞಾನ ಇದೆ, ಪರಿಸರ ವಿಜ್ಞಾನ, ಅಣು ವಿಜ್ಞಾನ ಇದೆ, ಕೃತಕ ಬುದ್ಧಿಮತ್ತೆ ಇದೆ, ಜೀವಪರ ಕಾಳಜಿ ಇದೆ.

ಈ ಕೃತಿಯಲ್ಲಿ 25 ವಿವಿಧ ಲೇಖನಗಳಿದ್ದು, ಪ್ರತಿಯೊಂದು ಲೇಖನವೂ ಓದುಗನಿಗೆ ಆಪ್ತ ಎನಿಸುತ್ತದೆ. ಓದುಗ ಪ್ರತಿ ಪ್ಯಾರವನ್ನು ಓದಿದ ನಂತರ ಮುಂದೇನೋ ಹೊಸತನವಿದೆ ಎಂಬಂತೆ ಕಾತುರತೆಯಿಂದ ಓದುವಂತೆ ಮಾಡುತ್ತದೆ. ಸುತ್ತಲಮುತ್ತಲೂ ನಡೆಯುವ ಸಾಮಾನ್ಯ ಸಂಗತಿಗಳಲ್ಲೂ ವಿಜ್ಞಾನವನ್ನು ಹುಡುಕುವ ಪ್ರಯತ್ನ ಇಲ್ಲಿದೆ. ಪ್ರತಿ ವಿಷಯವನ್ನು ಓದುಗರಿಗೆ ಸಹ್ಯ ಎನಿಸುವಂತೆ ಮಾಡಲು ನೈಜ ಜೀವನದ ಘಟನೆಗಳ ಒಗ್ಗರಣೆ ಹಾಕುತ್ತಾರೆ. ಈ ಒಗ್ಗರಣೆಯ ಘಮ ಘಮ ವಾಸನೆ ಓದುಗರಿಗೆ ಆಪ್ತ ಎನಿಸುತ್ತದೆ.

ಮಳೆಗಾಲ ಬಂತೆಂದರೆ ಕೆಲ ಅನಿರೀಕ್ಷಿತ ಅತಿಥಿಗಳು ಮನೆಯೊಳಗೆಲ್ಲ ಬರುತ್ತಾರೆ. ಅಂತಹ ಅನಿರೀಕ್ಷಿತ ಅತಿಥಿಯಾದ ಕಪ್ಪೆಯ ಕುರಿತ ಬರಹ ವಿಶಿಷ್ಟ. ಹದ್ದಿನ ಕಣ್ಣಿನ ಹಿಂದೆ ಮತ್ತು ಕೃತಕ ಬುದ್ಧಿಮತ್ತೆಯ ವರ್ಲ್ಡ್ ಕಪ್ ಎಂಬ ಬರಹಗಳು ಆಧುನಿಕ ಕ್ರೀಡೆಯಲ್ಲಿ ಬಳಸುವ ವಿಜ್ಞಾನ ಮತ್ತು ತಂತ್ರಜ್ಞಾನದ ಪರಿಕರಗಳನ್ನು ಪರಿಚಯಿಸುತ್ತವೆ. ತಾಪಮಾನ ಇಳಿಕೆಗೊಂದು ಶಾರ್ಟ್ ಕಟ್ ಎಂಬ ಲೇಖನವು ಭವಿಷ್ಯಕ್ಕೆ ಬೇಕಾದ ಸುಸ್ಥಿರ ಕಾಳಜಿಯನ್ನು ಹೊಂದಿದೆ.

ಬಣ್ಣದ ಲೋಕದಲ್ಲಿ ಬದುಕುತ್ತಿರುವ ನಮಗೆ ಕೃತಕ ಬಣ್ಣಗಳಿಂದ ಆಗುವ ಅನಾಹುತಗಳ ಬಗ್ಗೆ ಎಚ್ಚರಿಸುವ ಬರಹವೂ ಇಲ್ಲಿದೆ. ಎವರೆಸ್ಟ್ ಚಾರಣದ ಕಥೆ ವ್ಯಥೆ ಎಂಬ ಬರಹದಲ್ಲಿ ಎಡ್ಮಂಡ್ ಹಿಲರಿ ಮತ್ತು ತೇನ್‌ಸಿಂಗ್ ಅವರು ಎವರೆಸ್ಟ್ ಏರಿದ ರೋಚಕ ಕಥನವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾ ಎವರೆಸ್ಟ್ ಚಾರಣಿಗರು ಅನುಸರಿಸಬೇಕಾದ ತಂತ್ರಗಳನ್ನು, ಎಚ್ಚರಿಕೆಗಳನ್ನು ತಿಳಿಸುತ್ತಾರೆ.

ಒಂಟಿ ತೋಳಗಳ ಬೆನ್ನುಹತ್ತಿದವರು ಮತ್ತು ಇತರೆ ಸ್ವಾರಸ್ಯಗಳು ಎನ್ನುವ ಪುಸ್ತಕವನ್ನು ಮಕ್ಕಳು ಓದಿದರೆ, ಅವರಲ್ಲಿರುವ ಸಂಶೋಧಕ ಜಾಗೃತಗೊಳ್ಳಬಹುದು!

ಎಂಎಸ್‌ಎನ್ ಬರೆದ ಬಾಲಸಾಹಿತ್ಯ!

ನಗೆ ಬರಹಗಳ ಸಾಹಿತಿಯಾಗಿ, ಧಾರಾವಾಹಿಗಳ ಮೂಲಕ, ನಗೆಹಬ್ಬಗಳ ಮೂಲಕ ಎಂ.ಎಸ್.ನರಸಿಂಹಮೂರ್ತಿ ಅವರು ನಾಡಿಗೆ ಪರಿಚಿತರು. ಪ್ರತಿ ವರ್ಷ ಅವರ ಜನ್ಮದಿನದ ನಿಮಿತ್ತ, ಕನಿಷ್ಟ ಒಂದಾದರೂ ಪುಸ್ತಕ ಹೊರತರುವ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ. ಈ ವರ್ಷ ಅಂತಹ ಶುಭಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವುದು ಒಂದು ಮಕ್ಕಳ ಪುಸ್ತಕ; ಬಾಲಸಾಹಿತ್ಯದಲ್ಲೂ ಕೌಶಲ ತೋರಿರುವ ಎಂ.ಎಸ್.ಎನ್. ಅವರ ಬರವಣಿಗೆ ಶಕ್ತಿಯ ಕುರಿತು ಎಲ್ಲರಿಗೂ ಬೆರಗು! ನಗೆ ಸಾಹಿತಿ ಬರೆದ ಮಕ್ಕಳ ಪುಸ್ತಕ ಹೇಗಿರಬಹುದು ಎಂಬ ಕುತೂಹಲ ಅವರ ಅಭಿಮಾನಿಗಳಿಗೆ, ಸಾರಸ್ವತ ಲೋಕಕ್ಕೆ ಇದ್ದೇ ಇದೆ. ಮಕ್ಕಳ ಪುಸ್ತಕವನ್ನು ಬರೆದ ಎಂ.ಎಸ್.ಎನ್. ಆ ಮೂಲಕ ಮತ್ತೊಂದು ದಾಖಲೆಯನ್ನೇ ಬರೆದಿದ್ದಾರೆ ಎನ್ನಬಹುದು.

ಎಂ.ಎಸ್.ಎನ್. ಅವರು ಜನ್ಮದಿನವಿರುವ ಇದೇ ವಾರ ಬಿಡುಗಡೆಯಾಗಿರುವ (26.10.2025) ಈ ಪುಸ್ತಕದ ಕುರಿತು, ಪ್ರೊ. ಎಂ.ಕೃಷ್ಣೇಗೌಡ ಅವರು ಪುಸ್ತಕದ ಬೆನ್ನುಡಿಯಲ್ಲಿ ಬರೆದ ಮಾತುಗಳು ಅರ್ಥಪೂರ್ಣ: ''ತೆಗೆದಷ್ಟೂ ಅಧಿಕವಾಗುವ ಅಕ್ಷಯ ನಿಧಿ, ಮೊಗೆದಷ್ಟೂ ಉಕ್ಕುವ ಚಿಲುಮೆ ಇದು. ಈ ಎಂ.ಎಸ್. ನರಸಿಂಹಮೂರ್ತಿ ಎಂಬ ಮನುಷ್ಯ ಜೀವಿಗೆ ಯಾವ ಬೆಂಕಿ ತಾಗಿದೆಯೋ, ಯಾವ ರಸವು ಸೋಕಿದೆಯೋ, ಎಷ್ಟು ಬರೆದರೂ ಈ ಕತೆಗಳ ಕಡಲು ಆನಂದವಾಗಿ ಅಲೆಯಾಡುತ್ತಲೇ ಇದೆ. ಅದೊಂದು ಅಗಾಧ ಅಚ್ಚರಿ ನನಗೆ !

ಪಾ.ಪ. ಪಾಂಡು, ಸಿಲ್ಲಿ ಲಲ್ಲಿ, ಪಾರ್ವತಿ ಪರಮೇಶ್ವರ, ಕಂಡಕ್ಟರ್ ಕರಿಯಪ್ಪ, ಕ್ರೇಜಿ ಕರ್ನಲ್, ಇನ್ನೂ ಮುಂತಾದ ಹಲವಾರು ಟಿ. ವಿ. ಧಾರಾವಾಹಿಗಳ ಸಾವಿರ ಸಾವಿರ ಸಂಚಿಕೆಗಳನ್ನು ಬರೆದು ನಾಡನ್ನು ನಗಿಸಿದ ಮಹಾ ಪ್ರತಿಭಾವಂತರು. ಅಷ್ಟು ಮಾತ್ರವೇ ಅಲ್ಲದೆ ಸಾವಿರಾರು ನಗೆ

> ಬಂಟಿ ಹೇಳಿದ ಕತೆಗಳು
> ಲೇ: ಎಂ.ಎಸ್.ನರಸಿಂಹಮೂರ್ತಿ
> ಪ್ರ: ಸಂಸ್ಕೃತಿ ಪಬ್ಲಿಷಿಂಗ್ ಹೌಸ್, ಮೈಸೂರು
> ದೂ: 9448037762

ಲೇಖನಗಳು, ಹತ್ತಾರು ನಾಟಕಗಳು, ಕಾದಂಬರಿಗಳು, ವಿಚಾರ ಸಾಹಿತ್ಯ, ಜೀವನ ಚರಿತ್ರೆಗಳು..ಒಂದೊಂದೂ ಮುತ್ತು, ಮಾಣಿಕ್ಯ. ಇಂಥ ಲಕ್ಷಾಂತರ ಪುಟಗಳನ್ನು ಬರೆದ. ನಮ್ಮ ನಾಡು ಹೆಮ್ಮೆ ಪಡುವ ಯಶಸ್ವಿ ಬರಹಗಾರರು ನಮ್ಮ ಎಮ್ಮೆಸೆನ್. ಇಷ್ಟು ಬರೆದೂ ಅಷ್ಟೊಂದು ವಿನಯ, ಸಜ್ಜನಿಕೆ, ಯಾರನ್ನೂ ನೋಯಿಸದ ಅತ್ಯುಚ್ಚ ಸಂಸ್ಕಾರ ನರಸಿಂಹಮೂರ್ತಿ ಅವರದು.

ಇದೊಂದು ಹೊಸ ಪ್ರಯೋಗ. ಮಕ್ಕಳ ಮುಖ ಮನಸ್ಸುಗಳನ್ನು ಅರಳಿಸುವ, ಅವರ ಈ ಹೊತ್ತಿಗೆ ನಿಮ್ಮ ಕೈಯಲ್ಲಿದೆ. ಎಂದಿನಂತೆ ಪ್ರತೀ ಕತೆಯಲ್ಲೂ ಅದೇ ಮಾಂತ್ರಿಕ ಸ್ಪರ್ಶ. ಮಕ್ಕಳು ಅವರ ಬಾಲ್ಯವನ್ನು ಸಂತೋಷಿಸುವ ಮತ್ತು ದೊಡ್ಡವರೂ, ಕೆಲಹೊತ್ತು ಅವರ ಬಾಲ್ಯಕ್ಕೆ ಹಿಂದಿರುಗುವ ಸುಖವನ್ನು ಪ್ರಸಾದಿಸುವ ಸವಿ ಸವಿ ಪೆಪ್ಪರಮೆಂಟುಗಳು ಇವು. ಸವಿದು ಸುಖಪಡಿ, ಚಪ್ಪರಿಸಿ ಆನಂದಪಡಿ. ಮೈಸೂರಿನ ಸಂಸ್ಕೃತಿ ಬುಕ್ ಹೌಸ್– ಕನ್ನಡದ ಸೊಗಸು. ಸಮೃದ್ಧಿಯನ್ನು ನಾಡಿಗೆ ಪ್ರಕಾಶಿಸುವ ದೀಕ್ಷೆ ತೊಟ್ಟ ಪ್ರಕಾಶನ ಸಂಸ್ಥೆ– ಈ ಕೃತಿಯನ್ನು ಪ್ರಕಟಿಸುತ್ತಿದೆ.'' (ಬೆನ್ನುಡಿಯಲ್ಲಿ ಪ್ರೊ. ಎಂ. ಕೃಷ್ಣಗೌಡ)

ಕಥೆಯೊಂದು ಜನ್ಮತಾಳುವ ಸಡಗರ!

» ವಿಕಾಸ್ ನೇಗಿಲೋಣಿ

''. . .ಲೆಕ್ಕದಲ್ಲಿ ನಾಲ್ಕನೇ ಕಥಾಸಂಕಲನ ಇದು. ಪ್ರತಿ ಸಂಕಲನವೂ ಹಿಂದಿನದಕ್ಕಿಂತ ಬೇರೆಯೇ ಆಗಿರುತ್ತದೆ, ಆಗದೇ ಇದ್ದರೆ ಅದು ಬೆಳವಣಿಗೆ ಆಗುವುದಿಲ್ಲ. ಆದರೆ, ಹಿಂದಿನ ಸಂಕಲನದಿಂದ ಈ ಸಂಕಲನಕ್ಕೆ ಹೊರಳುವಾಗ ಒಂದು ವಿಶೇಷ, ವಿಚಿತ್ರ ಬದಲಾವಣೆ ಆಗಿದೆ. ಈ ಕತೆಗಳ ಕಥನ ಅಥವಾ ಸ್ಟೆಕ್ಚರ್‌ನಲ್ಲಿ ಒಂದು ರೋಚಕತೆ ನುಸುಳಿದೆ. ಅದಕ್ಕೆ ಕಾರಣ ವಿಶ್ಯುವಲ್ ಮೀಡಿಯಂನ ಪ್ರಭಾವ. ಕತೆಗಳು ಕೊನೆಯ ತನಕ ಕೌತುಕದಿಂದ ಓದಿಸಿಕೊಳ್ಳದೇ ಹೋದರೆ ಅದು ಎಷ್ಟೇ ಒಳ್ಳೆಯ ಕತೆಯಾಗಿದ್ದರೂ ಪ್ರಯೋಜನವಿಲ್ಲ ಅಂತ ಒಂದು ಜ್ಞಾನೋದಯ ಆಗಿದೆ. ಹಾಗಂತ ಕತೆಗಳು ರೋಚಕತೆಗೇ, ಕುತೂಹಲಕ್ಕೇ ಪಕ್ಕಾಗಬೇಕೆಂಬ ಧೋರಣೆ ಅಲ್ಲ. ಬೀದಿ ಜಗಳಕ್ಕೆ ಟ್ರಾಕ್ಷನ್ ಸಿಗುತ್ತದೆ ಅಂತ ಅದೇ ಒಳ್ಳೆಯ ಕತೆ ಆಗಲಾರದು. ಆದರೆ ಯಾವ ವಸ್ತುವನ್ನೇ ಹೇಳಿದರೂ, ಎಂಥ ಗಾಂಭೀರ್ಯವೇ ಇದ್ದರೂ ಕತೆಯನ್ನು ಸ್ವಾರಸ್ಯಗೊಳಿಸುವುದು ಮುಖ್ಯ ಅನ್ನುವುದು ನನ್ನ ವಿನಮ್ರ ಅನಿಸಿಕೆ.

ಹಾಗಂತ ಈ ಸಂಕಲನದ ಕತೆಗಳನ್ನು ರೋಚಕತೆಯ ಕೈಗಿತ್ತು, ಆತ್ಮವನ್ನು ಮರೆತಿಲ್ಲ, ಪ್ರಾಮಾಣಿಕತೆಯಲ್ಲಿ ರಾಜಿ ಆಗಿಲ್ಲ. ಹಾಗೆ ನೋಡಿದರೆ ಈ ನಾಲ್ಕೈದು ವರ್ಷಗಳಲ್ಲಿ ನೋಡಿದಷ್ಟು ಸಿನಿಮಾ, ವೆಬ್ ಸೀರೀಸು ನನ್ನ ಜನ್ಮದಲ್ಲೇ ನೋಡಿರಲಿಕ್ಕಿಲ್ಲ. ಎಷ್ಟೋ ರಾತ್ರಿಗಳು ಇದಕ್ಕೆ ವ್ಯಯವಾಗಿದ್ದಿದೆ, ಕಥೆ ಹೇಳುವ ಹೊಸ ಹೊಸ ಮಾದರಿಗಳು ಕಂಗೆಡಿಸಿಯೂ ಇವೆ. ಆದರೂ ಈ ನಾಲ್ಕೈದು ವರ್ಷಗಳಲ್ಲೇ ನನಗೆ ಹೆಚ್ಚುಹೆಚ್ಚು ಕತೆ ಬರೆಯಬೇಕೆಂದು ಅನ್ನಿಸಿದೆ. ಯಾಕೆಂದರೆ ಎಷ್ಟೇ ಕತೆಗಳನ್ನು ನಾವು ನೋಡಿದರೂ, ಕೇಳಿದರೂ ಯಾರೋ ಎದುರು ಸಿಕ್ಕು, 'ನಿನಗೆ ವಿಷ್ಯ ಗೊತ್ತಾಯ್ತಾ?' ಅಂತ ಕೇಳಿದ ತಕ್ಷಣ ಕಿವಿ, ಕಣ್ಣುಗಳು ಅರಳುವುದು ಕತೆಗೆ ಇರುವ ಶುದ್ಧ ಶಕ್ತಿಗೋಸ್ಕರ ಮಾತ್ರ. ಬರೆಯಬೇಕೆಂದು ಕೂತಾಗ, ಎಲ್ಲ ಪ್ರಭಾವಗಳಿಂದ ಬಿಡಿಸಿಕೊಂಡೆದ್ದ ಕತೆಯೊಂದು ಜನ್ಮ ತಾಳುವ ಸಡಗರಕ್ಕೆ



> ರುಕುಮಣಿ ರುಕುಮಣಿ
> ಕಥೆಗಳು
> ಲೇ: ವಿಕಾಸ್ ನೇಗಿಲೋಣಿ
> ಪ್ರ: ಅಂಕಿತ ಪುಸ್ತಕ
> 9019190502
> ಬೆಲೆ ರು.150/-

ನಮಸ್ಕರಿಸುತ್ತಾ ಮತ್ತೊಂದು ಸಂಕಲನವನ್ನು ಕೈಗಿಡುತ್ತಿದ್ದೇನೆ.

ನನಗೆ ಮೊದಮೊದಲು ಕತೆ ಹೇಳಿದವಳು ಅಮ್ಮ, ಪುರಾಣವಷ್ಟೇ ಅಲ್ಲ, ಮ್ಯಾಗಜಿನ್ನು, ಪುಸ್ತಕ ಕೊಟ್ಟು ಓದಲು ಹಚ್ಚಿದವಳೇ ಅಮ್ಮ. ಅಷ್ಟೇ ಚೆನ್ನಾಗಿ ಕತೆ ಹೇಳಿ, ನನ್ನ ಬಾಲ್ಯವನ್ನು ವರ್ಣಮಯವಾಗಿಸಿದವರು ರತ್ನ, ಪದ್ದಿ ಮೊದಲಾದವರು. ಅವರು ಓದಿದವರಲ್ಲ, ಆದರೆ ನಾವೆಷ್ಟೇ ಓದಿಕೊಂಡರೂ ಅವರಷ್ಟು ಅದ್ಭುತವಾಗಿ, ಸರಳವಾಗಿ ಮನ ಮುಟ್ಟುವಂತೆ, ಸ್ವಲ್ಪವೂ ಅಟೆನ್‌ಶನ್ ಸ್ಪ್ಯಾಮ್ ಹೋಗದ ಹಾಗೆ ಕತೆ ಹೇಳಿದ್ದನ್ನು ಈವರೆಗೂ ಯಾರಲ್ಲೂ ನೋಡಿಲ್ಲ. ಅವರೆಲ್ಲರೂ ನನ್ನೊಳಗೆ ತುಂಬಿದ ಕತೆಗಳಿಗೆ ನಮಸ್ಕಾರ. . .''

(ಇತ್ತೀಚೆಗೆ ಪ್ರಕಟಗೊಂಡ ವಿಕಾಸ್ ನೇಗಿಲೋಣಿ ಅವರ, 15 ಕಥೆಗಳ ಕಥಾಸಂಕಲನ 'ರುಕುಮಣಿ ರುಕುಮಣಿ' ಇದರ ಪ್ರವೇಶಿಕೆಯಲ್ಲಿ ಕಥೆಗಾರ ವಿಕಾಸ್ ನೇಗಿಲೋಣಿ ಅವರ ಮಾತುಗಳ ಆಯ್ದ ಭಾಗ ಇದು.)

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ಬಡವರ ರಾಜಕುಮಾರ
(ಖ್ಯಾತ ನಟ ರಾಜಕುಮಾರ ಅವರ ಬದುಕು, ನಟಿಸಿದ ಚಿತ್ರಗಳ ಹಿನ್ನಲೆಯಲ್ಲಿ ಕರ್ನಾಟಕದ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ನಿರೂಪಿಸಿದ್ದಾರೆ.)
ಲೇ: ಡಾ। ಮಂಜುನಾಥ ಅದ್ದೆ
ಪ್ರ: ಕೌದಿ ಪ್ರಕಾಶನ, ಆನೇಕಲ್
ಬೆಲೆ: ರೂ 400/-

2
ಶಾಕ್ಯಶಕ್ತ ಶಿಲ್ಪ
(ಕಾಂಬೋಡಿಯಾ ದೇಶವನ್ನು ಆಳಿದವರು ಹಿಂದೂ ರಾಜರೇ? ಕಾಂಬೋಡಿಯಾದ ಶತಮಾನಗಳ ರೋಚಕ ಚರಿತ್ರೆ ಇಲ್ಲಿ ಕಾದಂಬರಿ ರೂಪ ತಾಳಿದೆ)
ಲೇ: ಡಾ। ಕೆ.ಎನ್. ಗಣೇಶಯ್ಯ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 450/-

3
ಮೈಸೂರು ಒಡೆಯರ ಚರಿತ್ರೆ
(1399 ರಿಂದ 1766 ರ ವರೆಗೆ ರಾಜ್ಯಭಾರ ಮಾಡಿದ ಮೈಸೂರು ಅರಸರ ಚಿತ್ರಣ ಇಲ್ಲಿದೆ.)
ಲೇ: ಎಂ. ಕೃಷ್ಣಯ್ಯ
ಪ್ರ: ಗಾನವಿ ಪ್ರಕಾಶನ, ಬೆಂಗಳೂರು
ಬೆಲೆ: ರೂ 700/-

4
ಜುಗಾರಿ ಕ್ರಾಸ್
(ತೇಜಸ್ವಿಯವರ ಪ್ರಸಿದ್ಧ ಕಾದಂಬರಿ. ಈಗ ಚಲನಚಿತ್ರವಾಗುತ್ತಿದೆ)
ಲೇ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ
ಪ್ರ: ಪುಸ್ತಕ ಪ್ರಕಾಶನ, ಮೂಡಿಗೆರೆ
ಬೆಲೆ: ರೂ 246/-

5
ಚಂದ್ರಭಾಗಾ
(ಮತಗಳ – ಮತಗಳ ನಡುವಿನ ಸಂಘರ್ಷ, ಸನ್ಯಾಸ, ಮಾನುಷ ಪ್ರೀತಿ ಸಂಬಂಧಗಳ ಕುಣಿಕೆಯಲ್ಲಿ ಸಿಕ್ಕು ಸಿಕ್ಕಾಗುವ ಪರಿ ಇವುಗಳ ಸುತ್ತ ಹೆಣೆದ ಕಾದಂಬ)
ಲೇ:ಶ್ರೀನಿಧಿ ಕರಣಂ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 650/-

6
ಸೊಂಟಕ್ ಬೆಲ್ಟು ಕಟ್ಟಿಕೊಂಡು
(ಹೊಸ ರೀತಿಯ ಪ್ರವಾಸ ಕಥನ. ಕೇವಲ ಪ್ರೇಕ್ಷಣೀಯ ಸ್ಥಳಗಳ ವಿವರಣೆಯಲ್ಲ. ಅದಕ್ಕಿಂತ ಭಿನ್ನವಾದ ನಿರೂಪಣೆ)
ಲೇ: ಭಾರತಿ ಬಿ.ವಿ.
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ: ರೂ 200/-

7
ರಾಮಾನುಜನ್
(ಗಣಿತ ಕ್ಷೇತ್ರದ ದಂತಕಥೆ ರಾಮಾನುಜನ್ ರ ಬಾಲ್ಯದ ಕಥನ ಹಾಸ್ಯ, ವ್ಯಂಗ್ಯ ಮತ್ತು ವಿನೋದವಾಗಿ ಇಲ್ಲಿ ಚಿತ್ರಿತವಾಗಿದೆ)
ಲೇ: ಅರುಂಧತಿ ವೆಂಕಟೇಶ್
ಅನು: ವಿ. ಎಸ್. ಎಸ್. ಶಾಸ್ತ್ರಿ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: ರೂ 175/-

8
ಎಲ್ಲಾ ನಮ್ಮ ಕರ್ಮ
(ಇದೊಂದು ಆಧ್ಯಾತ್ಮಿಕ ಕೃತಿ. ಆಧ್ಯಾತ್ಮಿಕ ಕರ್ಮದ ಬೆಳಕಿನಿಂದ ಲೌಕಿಕ ಕರ್ಮದ ವಿಶ್ಲೇಷಣೆ ಇಲ್ಲಿದೆ)
ಲೇ: ಪ್ರವೀಣ್ ಕುಮಾರ್ ಬಸ್ರೂರ್
ಪ್ರ: ರವೀಂದ್ರ ಪುಸ್ತಕಾಲಯ, ಸಾಗರ
ಬೆಲೆ: ರೂ 250/-

9
ಮಾಗಧ
(ಸಾಮ್ರಾಟ್ ಅಶೋಕನ ಕಾಲದ ರಾಜಕೀಯ-ಧಾರ್ಮಿಕ ಸ್ಥಿತಿಗತಿಗಳ ಚಿತ್ರಣ)
ಲೇ: ಸಹನಾ ವಿಜಯಕುಮಾರ್
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 915/-

10
ಸ್ವಚ್ಛಮೇವ ಜಯತೆ
(ದಿನ ನಿತ್ಯದ ಬಳಕೆಯಲ್ಲಿ ನಮ್ಮ ಶರೀರ ಕುರಿತಂತೆ ಗೊತ್ತಿಲ್ಲದೆ ಮಾಡುವ ತಪ್ಪುಗಳು ಮತ್ತು ಅವುಗಳ ನಿವಾರಣೆ ಕುರಿತ ಈ ಕೃತಿ ಶರೀರ ಸ್ವಚ್ಛತೆಗೊಂದು ಕೈಗನ್ನಡಿ)
ಲೇ: ಡಾ। ನಾ ಸೋಮೇಶ್ವರ
ಪ್ರ: ವಿಕ್ರಮ್ ಪ್ರಕಾಶನ, ಬೆಂಗಳೂರು
ಬೆಲೆ: ರೂ 300/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ವಿರಾಮ

ಬಿಪಿಎಲ್ಲಾ ಎಪಿಎಲ್ಲಾ?

ಗಣತಿಗೆ ಬಂದ ಮೇಡಂ, ನಮ್ಮ ಮಾಹಿತಿ ಜಾಸ್ತಿ ಕೇಳಲೇ ಇಲ್ಲ, ಆದರೆ ಪಕ್ಕದ ಮನೆಯ ಮಾಹಿತಿ ಪಡೆದು ಹೊರಟೇ ಹೋದರು! ಏಕಿರಬಹುದು?

» ತುರುವೇಕೆರೆ ಪ್ರಸಾದ್

'ಹಲೋ,ಯಾರಿದೀರಿ ?' ಅಂತ ಒಂದು ಸುಶ್ರಾವ್ಯ ಕಂಠ ಉಲಿದು ಬಾಗಿಲು ತಟ್ಟಿದಾಗ ಪರ್ಮೇಶಿ ಓಡಿ ಬಂದು ಬಾಗಿಲು ತೆಗೆದ.

ಎದುರಿಗೆ ಒಬ್ರು ಮೇಡಂ ನಿಂತಿದ್ದರು: 'ನಮಸ್ಕಾರ, ನಾನು ಗಣತಿಗೆ ಬಂದಿದೀನಿ.'

'ಓಹ್! ಹೌದಾ? ಬನ್ನಿ ಬನ್ನಿ..' ಒಳಗೆ ಕರೆದ ಪರ್ಮೇಶಿ.

'ನೀವೊಬ್ರೇ ನೋಡಿ, ಗಣತಿ ಮಾಡೋರನ್ನ ಇಷ್ಟು ಅತ್ಮೀಯವಾಗಿ ಒಳಗೆ ಕರೆದದ್ದು!' ಅಂತ ಮೆಚ್ಚುಗೆ ಸೂಚಿಸುದ್ರು ಗಣತಿ ಮೇಡಂ.

ಅಷ್ಟರಲ್ಲಿ ಪದ್ದಮ್ಮ ಒಳಗಿನಿಂದ ಬಂದ್ರು. ಅಯ್ಯೋ ಇವಳು ಕೇಳಿಸ್ಕೊಂಡ್ ಬಿಟ್ಳೋ ಏನೋ? ಇನ್ನು ಇಡೀ ದಿನ ತಿವೀತಾಳೆ ಮೂತಿ ಎಂದು ತಲೆ ಕೆರೆದುಕೊಂಡ ಪರ್ಮೇಶಿ.

'ಹಾಂ! ಅವರು ಹಾಗೇ! ಯಾರೇ ಹೆಂಗಸ್ರು ಬಂದ್ರೂ ಇದೇ ತರ ವಾರ್ಮ್ ಟ್ರೀಟ್‌ಮೆಂಟ್ ಕೊಡ್ತಾರೆ. ಅಲ್ವೇನ್ರೀ?' ಎಂದರು ಪದ್ದಮ್ಮ ವ್ಯಂಗ್ಯವಾಗಿ. ಪರ್ಮೇಶಿ ಹೆ ಹೆ ಹೆ ಎಂದು ಉಗುಳು ನುಂಗಿದ. ಪದ್ದಮ್ಮ ಗಣತಿ ಮೇಡಂ ಸೀರೆ ನೋಡಿ ಫಿಧಾ ಆದ್ರು. 'ನಿಮ್ಮ ಸೀರೆ ತುಂಬಾ ಚೆನ್ನಾಗಿದೆ' ಅಂದ್ರು.

'ಥ್ಯಾಂಕ್ಯೂ ಮೇಡಂ, ಇಲ್ಲೇ ಟೆನ್ತ್ ಕ್ರಾಸಲ್ಲಿ ಸಿಗುತ್ತೆ ತಗೊಳಿ'

'ಓಹ್!ಹೌದಾ? ಇಲ್ಲೇ ಸಿಗುತ್ತಾ? ಅಯ್ಯೋ ನನಗೆ ಗೊತ್ತೇ ಇರ್ಲಿಲ್ಲ, ಹೌದು, ನಿಮ್ ಕೊರಳಲ್ಲಿರೋ ಸರ ಎಲ್ ತಗೊಂಡ್ರಿ?'

'ಅದು ಇಲ್ಲೇ ಹತ್ತರ ಜಾಯ್ ಕುಲುಕಾಸ್.. ಅದರ ಶೋರೂಮೂ ಇಲ್ಲೇ ಮಲ್ಲೇಶ್ವರಂನಲ್ಲೇ ಇದ್ಯಲ್ಲ..ಒಳ್ಳೊಳ್ಳೆ ಡಿಸೈನ್ಸ್ ಬಂದಿವೆ'

'ಹೌದಾ? ಜಾಯ್ ಕುಲುಕಾಸ್ ಕಡೆ ಹೋಗಕ್ಕೇ ಆಗಿಲ್ಲ ಮೇಡಂ, ನಮ್ ಮನೆಯೋರೇ ಹೋಗಿ ಅರ್ಧ ಕೆಜಿ ಕೋಸು ಗಡ್ಡೆ ತಗಂಡು ಬಂದ್ಬಿಡ್ತಾರೆ'ಆಕ್ಷೇಪಿಸಿದರು ಪದ್ದಮ್ಮ.

'ಅಯ್ಯೋ ಅದು ಹಾಗಲ್ಲ, ರಸ್ತೆಯೆಲ್ಲಾ ಗುಂಡಿ ಬಿದ್ದು ಮೈ ಕೈ ಎಲ್ಲಾ ಎರ್‍ರಾಬಿರ್‍ರಿ ನೋವು. ಜಾಯ್ ಹೋಗಿ ಕುಯ್ಯೋ ಮುರ್‍ರೋ ಕುಲುಕಾಸ್ ಆಗೋಗಿದೆ. ಮನೆಯಿಂದ ಆಚೆ ಹೋಗಕ್ಕೇ ಬೇಜಾರಾಗುತ್ತೆ' ಎಂದ ಪರ್ಮೇಶಿ.

'ಅಯ್ಯೋ ಅದಕ್ಕೇನಂತೆ! ನೀವು ಒಂದು ಕಾಲ್ ಮಾಡುದ್ರೆ ಎಲ್ಲಾ ಹೊಸ ಹೊಸ ಡಿಸೈನ್ಸ್ ತಗೊಂಡು ಅವರೇ ನಿಮ್ ಮನೆ ಬಾಗಿಲಿಗೆ ಬರ್‍ತಾರೆ' ಅಂದ್ರು ಗಣತಿ ಮೇಡಂ.

ತಥ್, ಈ ವಮ್ಮ, ಇವತ್ತು ನನ್ ತಿಥಿ ಮಾಡಕ್ಕೇ ಬಂದಿರೋ ಹಾಗಿದೆ ಎಂದು ಒಳಗೇ ಬೈದುಕೊಂಡ ಪರ್ಮೇಶಿ

'ತುಂಬಾ ಚೆನ್ನಾಗಿ ರೆಡಿಯಾಗಿ ಬಂದಿದೀರಿ' ಅಂದ್ರು ಪದ್ದಮ್ಮ.

'ಇದೇನ್ ರೆಡಿ ಮೇಡಂ. ಬಿಸ್ಲಲ್ಲಿ ಅಲೆದು ಅರ್ಧ ಆಗೋಗಿದೀನಿ! ಮನೆಯಿಂದ ಹೊರಟಾಗ ನೋಡ್ಬೇಕಿತ್ತು ನೀವು! ನಾನು ಎಲ್ಲೇ ಹೊರಗಡೆ ಹೋಗೋದಾದ್ರು ಪೂರ್ತಿ ರೆಡಿಯಾಗೇ ಹೊರಗೆ ಬರೋದು'

ಹೌದು ಬಿಡಮ್ಮ, ನಿನ್ನ ನೋಡ್ತಿದ್ರೆ ಎಷ್ಟೋ ಜನ ಗಂಡಸರು ಆಧಾರ್ ಇರಲಿ, ಹೆಂಡ್ತಿ ಮಕ್ಕಳ ಡೀಟೈಲ್ಸೇ ಮರ್‍ತು ಹೋಗ್ತಾರೆ ಎಂದುಕೊಂಡ ಪರ್ಮೇಶಿ.

'ಮೇಕಪ್ ಕಿಟ್ ಯೂಸ್ ಮಾಡ್ತೀರಾ?'

'ಹಾಂ! ಎರಡು ಮೂರು ಇವೆ. ಅಮೆಜಾನಲ್ಲಿ ತರಿಸ್ಕೊಂಡೆ. ಫಾರಿನ್ ಬ್ರಾಂಡ್..ಮೇಡ್ ಇನ್ ಪ್ಯಾರೀಸ್, ಬೇಕಾದ್ರೆ ನಿಮಗೂ ಲಿಂಕ್ ಕಳಿಸ್ತೀನಿ.. ಹಾಂ! ಮೇಡಂ, ಒಂದು ಒಳ್ಳೇ ಸ್ಯಾಂಡಲ್ಲೂ ಆಫರ್ ಇದೆ, ಬೇಗ ಆರ್ಡರ್ ಮಾಡಿ' ಅಂದ್ರು ಮೇಡಂ.

ಬಂತು, ಖರ್ಚಿಗೆ ದಾರಿ ಎಂದು ತಲೆ ಚಚ್ಚಿಕೊಂಡ ಪರ್ಮೇಶಿ. ಮೇಡಂ ಇರೋ ಬರೋ ಮನೆಹಾಳ ಲಿಂಕೆಲ್ಲಾ ಶೇರ್ ಮಾಡುದ್ರು. ಪದ್ದಮ್ಮ ಸೀರೆ, ಸರ ಎಲ್ಲದರ ಫೋಟೋ ತಗೊಂಡ್ರು.

'ನೀವು ಗಂಡ ಹೆಂಡತಿ ತುಂಬಾ ಸೋಶಿಯಲ್ ಅನ್ನುತ್ತೆ. ಹೀಗಿದ್ರೆ ನಮಗೆ ಸೆನ್ಸಸ್ ಬಹಳ ಸುಲಭ ಆಗುತ್ತೆ. ಕೆಲವು ಕಡೆ ಹೆಂಗಸರೇ ನಮ್ ಮೇಲೇ ರೇಗಾಡ್ತಾರೆ. ಲೇಡೀಸೇ ಲೇಡೀಸ್ನ ಅರ್ಥ ಮಾಡ್ಕೊಳಲ್ಲ ಅಂದ್ರೆ, ಹೇಗೆ? ನಾವೇನ್ ಮಾಡಕ್ಕಾಗುತ್ತೆ. ಏನಿರುತ್ತೋ ಅದನ್ನ ಕೇಳ್ತೀವಪ್ಪ'

'ಯಾಕ್ ಮೇಡಂ, ಅಂತಾದ್ದೇನಾಯ್ತು?' ಕೇಳಿದ ಪರ್ಮೇಶಿ

'ಒಂದು ಮನೆಗೆ ಹೋದೆ. ಒಬ್ರು ಲೇಡಿ ಬಾಗಿಲು ತೆಗುದ್ರು. ಮದುವೆ ಆಗಿದ್ಯಾ ಅಂದೆ. ಅದಕ್ಕವರು ಇಲ್ಲ ಅಂದ್ರು. ನಾನು ಮುಂದಿನ ಪ್ರಶ್ನೆ ಪಟ್ಟಿ ನೋಡಿ, ಮಕ್ಕಳು ಎಷ್ಟು? ಅಂತ ಕೇಳ್ದೆ. ಅದಕ್ಕೆ ಅವರು ಹೊಡೆಯೋಕೇ ಬರೋದಾ?'

'ಛೇ!ಛೇ! ತುಂಬಾ ತಪ್ಪು ಬಿಡಿ' ಎಂದ ಪರ್ಮೇಶಿ.

'ಸಾಕು ಸುಮ್ನಿರ್‍ರೀ, ತಪ್ ಹೇಗ್ರೀ ಆಗುತ್ತೆ? ಮದುವೇನೇ ಆಗಿಲ್ಲ ಅಂದ್ಮೇಲೆ ಮಕ್ಕಳಿದೆಯಾ ಅಂತ ಕೇಳ್ತಾರೇನ್ರೀ? ಮಾನ ಮರ್ಯಾದೆ ಬೇಡ್ವಾ? ಆಮೇಲ್ ಏನ್ ಮಾಡುದ್ರಿ, ಮೇಡಂ?'

'ಮೇಲಿನೋರಿಗೆ ಹೋಗಿ ಕೇಳ್ದೆ. ಸರ್ ಹೀಗಾಯ್ತು ಅಂತ. ಅದಕ್ಕವರು ಸ್ವಲ್ಪ ಹಿಂದು ಮುಂದು ಮಾಡ್ಕೊಂಡು ಕೇಳಿ ಮೇಡಂ ಅಂದ್ರು. ಇನ್ನೊಂದು ಮನೆಗೆ ಬಂದೆ. ಅಲ್ಲೂ ಒಬ್ರು ಲೇಡಿನೇ ಬಾಗಿಲು ತೆಗುದ್ರು. ನಾನು ತುಂಬಾ ಹುಶಾರಾಗಿ ಮಕ್ಕಳೆಷ್ಟು ಮೇಡಂ? ಅಂದೆ. ಅದಕ್ಕವರು ಎರಡು ಅಂದ್ರು. ಆಮೇಲೆ, ಮೊದಲನೇ ಪ್ರಶ್ನೆ ಬಾಕಿ ಇತ್ತಲ್ಲಾ ಅಂತ ಕೇಳಿದೆ; ಮದುವೆ ಆಗಿದ್ಯಾ? ಅಂತ. ಅವರೂ ನನ್ನ ಮೇಲೆ ಸಿಕ್ಕಾಪಟ್ಟೆ ಎಗರಾಡಿ ಬಾಗಿಲು ಹಾಕ್ಕೊಂಡು ಬಿಟ್ರು' ಎಂದು ಬೇಜಾರು ಮಾಡ್ಕೊಂಡ್ರು ಗಣತಿ ಮೇಡಂ.

'ಹೋಗ್ಲಿ ಬಿಡಿ ಮೇಡಂ, ಇನ್ಮೇಲೆ ಕಿಟಕಿಲೋ, ಗವಾಕ್ಷಿಲೋ ಸೆನ್ಸಸ್ ಮಾಡಿ' ಎಂದು ಸಮಾಧಾನ ಮಾಡಿದ ಪರ್ಮೇಶಿ. ಮೇಡಂ ಕಿಟಕಿ ಕಡೆ ನೋಡುದ್ರು.

'ಯಾಕೆ ನಿಮ್ಮನೆ ಕಿಟಕಿ ಎಲ್ಲಾ ಕ್ಲೋಸ್ ಮಾಡಿದೀರಿ?' ಮೇಡಂ ಕೇಳುದ್ರು.

'ಅದನ್ನ ಏನು ಹೇಳೋದು ಮೇಡಂ? ಪಕ್ಕದೋರ್‍ದು ಭಾರೀ ಕಿರಿಕಿರಿ. ಕಾಲ್ ಕೆರ್‍ಕಂಡು ಜಗಳ ಆಡ್ತಾನೇ ಇರ್‍ತಾರೆ. ಅದಕ್ಕೇ ಅವರ ಸಹವಾಸನೆ ಬೇಡ ಅಂತ ಎಲ್ಲಾ ಕ್ಲೋಸ್ ಮಾಡಿದೀವಿ' ಅಂದ ಪರ್ಮೇಶಿ.

'ಒಳ್ಳೇದಾಯ್ತು ಬಿಡಿ, ಅವರದ್ದು ಏನು ಕೆಲಸ? ಅವರ ಆದಾಯ ಎಷ್ಟು? ಬಿಪಿಎಲ್‌ಆ?'

'ನೋಡಿ ಮೇಡಂ. ಇವರು ನೋಡೋರ್ ಕಣ್ಣಿಗೆ ಬಡವ್ರ ತರ ಸ್ಟಂಟು ಮಾಡ್ತಾರೆ. ಆದರೆ ಒಳಗೊಳಗೇ ಮನಿ ಮಿಂಟ್ ಮಾಡ್ತಾರೆ. ಸರ್ಕಾರಿ ಕೆಲಸದಲ್ಲಿ ಲಂಚ, ಆಚೆ ಕಡೆ ರಿಯಲ್ ಎಸ್ಟೇಟು, ಕಮಿಶನ್ ಬಿಜಿನೆಸ್ಸು ಎಲ್ಲಾ ಇದೆ. ಎರಡು ಮೂರು ಕಾರಿದೆ. ಮನೆ ಮುಂದೆ ನಿಲ್ಸುದ್ರೆ ಡೌಟ್ ಬರುತ್ತೆ ಅಂತ ಯಾವ್ದೋ ಅಪಾರ್ಟ್‌ಮೆಂಟಲ್ಲಿ ನಿಲ್ಸಿ ಬರ್‍ತಾರೆ. ಮುಂಚೆ ಎಪಿಎಲ್ ಕಾರ್ಡಿತ್ತು.. ಯಾರ್‍ದೋ ಕೈ ಕಾಲು ಹಿಡಿದು ವಶೀಲಬಾಜಿ ಮಾಡಿ ಬಿಪಿಎಲ್ ಕಾರ್ಡು ಮಾಡಿಸ್ಕೊಂಡಿದಾರೆ' ಎಂದ ಪರ್ಮೇಶಿ

'ಒಳ್ಳೊಳ್ಳೇ ಇನ್ಫರ್ಮೇಶನ್ ಕೊಟ್ರಿ..ತುಂಬಾ ಥ್ಯಾಂಕ್ಸ್. ನಾನಿನ್ನು ಬರ್‍ತೀನಿ'

'ಅಯ್ಯೋ! ನೀವು ನಮ್ ಬಗ್ಗೆ ಏನೂ ಕೇಳ್ಳೇ ಇಲ್ಲ. ಗಣತಿ ಅಂದೋರು ಹಾಗೇ ಹೋಗ್ತಿದೀರಿ? ನಮ್ದು ಎಪಿಎಲ್ಲಾ ಬಿ ಪಿ ಎಲ್ಲಾ ಕೇಳೇ ಇಲ್ಲ! ಬೇರೆ ಪಂಗಡ ಎಲ್ಲಾ ಕೇಳೇ ಇಲ್ಲ?'

'ಪಕ್ಕದ ಮನೆಯೋರನ್ನ ಕೇಳ್ತೀನಿ ಬಿಡಿ. ಅವರು ನಿಮ್ ತರನೇ ಎಲ್ಲಾ ಸತ್ಯ ಹೇಳ್ತಾರೆ. ಈಗ ನೀವು ಕೊಟ್ಟದ್ದನ್ನೆಲ್ಲಾ ಪಕ್ಕದ ಮನೆಯವರ ಮಾಹಿತಿಗೆ ಸೇರಿಸ್ತೀನಿ, ಥ್ಯಾಂಕ್ಸ್!' ಮೇಡಂ ವಯ್ಯಾರದಿಂದ ನಕ್ಕು ಆಚೆ ಹೋದ್ರು. ಪರ್ಮೇಶಿ, ಪದ್ದು ಮಕ್ಕರ್ ಆಗಿ ಮುಖ ಮುಖ ನೋಡ್ತಾ ನಿಂತ್ಕೊಂಡ್ರು.

ಗುಬ್ಬಚ್ಚಿ ಬಾಳೆ ಹುಳಿ ಚಿಕ್ಕಿ ಸೊಪ್ಪು

» ವಿಭದಾ

ಮಳೆಗಾಲ ಮುಗಿದು ಸರ್ವತ್ರವೂ ಹಸಿರುಮಯವಾಗಿರುವಾಗ ನೆಲವನ್ನು ಸಿಂಗರಿಸುವ ಸಸ್ಯಜಾತಿಗಳೆಷ್ಟೋ. ನೆಲದಿಂದ ಮೇಲೆದ್ದು ತೋಳ್ ಅಗಲಿಸಿ ಬೆಳೆಯುವ ಮರಗಳದ್ದು ಒಂದು ಸಂಭ್ರಮವಾದರೆ, ಹಂದರವಾಗಿ ಹಸಿರಾಗುವ ಪೊದೆಗಳದ್ದು ಮತ್ತೊಂದು ನವಿರೇ. ಇವುಗಳ ಮಧ್ಯೆ ನೆಕ್ಕಚ್ಚಿಕೊಂಡು ಉದ್ದುದ್ದ, ಅಗಲಗಲ ವ್ಯಾಪಿಸುತ್ತಾ, ಮಣ್ಣನ್ನು ಎದೆಗಾವಿನಲ್ಲಿ ರಕ್ಷಿಸುವಂತೆ ಅವೆಷ್ಟು ಚಿಕ್ಕ ಚಿಕ್ಕ ಸಸ್ಯ ವೈಶಿಷ್ಟ್ಯಗಳಿವೆಯಲ್ಲ. ನಡೆದರೆ ಪಾದದಡಿಯಲ್ಲಿ ಬರುವಷ್ಟು ಕುಬ್ಜವಾದರೂ, ಇವುಗಳ ಚಂದ, ಉಪಯೋಗಗಳು ಬಾನೆತ್ತರ.

ಮಳೆ ಬಿದ್ದು ನೆಲ ತಂಪಾಗುವ ಕಾಲಕ್ಕೆ ಅಲ್ಲಲ್ಲಿ ನೇರಳೆಯ ಕಣ್ಣುಗ್ಗಳಂತಿರುವ ಫಳಫಳನೆ ಹೊಳೆಯುವ ಪುಟ್ಟ ಸುಮಗಳ ಸಸ್ಯ ಗುಬ್ಬಚ್ಚಿ ಬಾಳೆ. ತೆಂಗಿನ ಬುಡದಲ್ಲೋ, ಗದ್ದೆಯ ಅಂಚಲ್ಲೋ, ಹಸಿಮಣ್ಣಿನ ಅಂಗಳದಲ್ಲೂ ಕಂಡುಬರುವ ಈ ಸಸ್ಯವನ್ನು ಹುಲ್ಲಿನ ಜೊತೆ ತಳುಕುಹಾಕುವುದಿದೆ. ಹುಲ್ಲಿನ ಹೋಲಿಕೆಯಲ್ಲಿ ಸ್ವತಂತ್ರವಾಗಿ ನಿಲ್ಲುವ ಈ ಗುಬ್ಬಚ್ಚಿ ಬಾಳೆ, ಕನ್ನೇಯ ಸೊಪ್ಪು, ಬೆಂಗಾಲ್ ಡೇಫ್ಲವರ್ ಎಂದೂ ಹೆಸರಾಗಿದೆ. ಸುಮಾರು ಒಂದು ಇಂಚಿನ ಉದ್ದದ ಗೋಳಾಕಾರದ ಎಲೆ ಹೋಲಿಕೆಯಲ್ಲಿ ಬಾಳೆಯ ಎಲೆಯಂತೆಯೇ. ಹೆಚ್ಚೆಂದರೆ ಒಂದಡಿಯಷ್ಟು ಮೇಲೇಳುವ ಈ ಗಿಡ ತನ್ನ ಬಾಹುಗಳನ್ನು ಸಮತಲದಲ್ಲಿ ಚಾಚುತ್ತಾ ಸಾಗುತ್ತದೆ.

ತಿಳಿ ಹಸಿರು ಬಣ್ಣದ, ನೀರಿನಿಂದಾವೃತ ಪಾರದರ್ಶಕ ಕಡ್ಡಿಗಳ ಹಾಗಿರುವ ಮೆತ್ತನೆಯ ಕಾಂಡಗಳು. ಮೃದುವಾದ ಕಾಂಡಗಳು ಹುಲ್ಲಿನಷ್ಟು ಶಕ್ತಿಯುತವಲ್ಲ, ಹುಲ್ಲಿನ ಹಾಗೆ ಗಂಟು ಗಂಟಲ್ಲ. ಇದೊಂದು ಕಳೆ ಎಂಬ ಅಪವಾದವಿದ್ದರೂ ಸುಲಭವಾಗಿ ಕಿತ್ತುತೆಗೆಯಬಹುದು. ಬಿಳಿಯ ಬಟ್ಟಲಿನ ಮೇಲೆ ಮಕರಂದ ಹೀರುತ್ತಿರುವ ನೀಲಿ-ನೇರಳೆ ಪಾತರಗಿತ್ತಿಯಂತೆ ಕಾಣುವ ಹೂವುಗಳು ಪ್ರಮುಖ ಆಕರ್ಷಣೆ. ಕೆಲ ಕಡೆಗಳಲ್ಲಿ ಸೊಪ್ಪಿನ ಬೋಂಡಾ ವನ್ನು ಕರಿದು ಅಘ್ರಾಣಿಸಿದರೆ, ಪಶು ಮೇವಿನಲ್ಲಿಯೂ ಗುಬ್ಬಚ್ಚಿಬಾಳೆಗೆ ಸ್ಥಾನವಿದೆ. ನೆಲ, ಹವಾಮಾನವನ್ನು ಮೀರಿ, ತಂಪನೆಯ ನೆಲದಲ್ಲಿ ಗುಬ್ಬಚ್ಚಿ ಬಾಳೆಯನ್ನು ಕಾಣಬಹುದು.

ಇನ್ನೊಂದು ಇಂಥದೇ ಗಿಡವೆಂದರೆ, ಹುಳಿಚಿಕ್ಕಿ ಗಿಡ! ಒಂದೆಲಗವನ್ನು ಹೋಲುವ, ಆದರೆ ಮೂರೆಲೆಯ ಗಿಡ ಇದು; ಹುಳಿಚಿಕ್ಕಿ ಎಂದು ಕರೆಸಿಕೊಳ್ಳುವ ಹುಳಿ ರುಚಿಯ ಆಮ್ಲ ಪತ್ರವಿದು. ಉದ್ದನೆಯ ತೊಟ್ಟಿನ ಮೇಲೆ ಮೂರೆಲೆಯ ಕೊಡೆಯಂತೆ ಎದ್ದು ನಿಲ್ಲುತ್ತವೆ. ಕೆಸುವಿನೆಲೆಯ ಮೇಲೆ ಗುಂಡನೆಯ ನೀರಬಿಂದುವು ನಿಲ್ಲುವಂತೆ ಮಳೆಬಂದಾಗ ಇದರ ಎಲೆಯನ್ನೊಮ್ಮೆ ನೋಡಬೇಕು!

ಮಳೆಯು ಇಳೆಗೆ ಬಿದ್ದಾಕ್ಷಣ ನಾನಾ ಗಿಡಗಳಿಗೆ ಜೀವಸಂಭ್ರಮ. ನೆಲದಿಂದ ಮೇಲೆದ್ದು ಹಸಿರನ್ನೇ ಹೊದ್ದು ಕೂರುವ ಇಂತಹ ಸಸ್ಯಗಳು, ಜೀವ ಜಗತ್ತಿನ ಅಚ್ಚರಿಗಳು.

ಪ್ರತಿದಿನ ಸಂಜೆ ಬೆಳಕು ಮಸುಕಾಗುತ್ತಿದ್ದಂತೆ ತನ್ನ ಎಲೆಗಳು ಮತ್ತು ಹೂವುಗಳನ್ನು ಮಡಿಸುವ 'ಸ್ಲೀಪಿಂಗ್ ಬ್ಯೂಟಿ' ಯೂ ಇದೇನೇ. ತುದಿಯಲ್ಲಿ ಅಗಲವಾಗಿರುವ, ಹೃದಯಾಕಾರದ ಮೂರು ಪ್ರತ್ಯೇಕ ಎಲೆಗಳಿರುವ ಕಾಂಡವನ್ನು ಅಗೆದರೆ ಪುಟಾಣಿ ಗಡ್ಡೆಯನ್ನು ನೋಡಬಹುದು. ಬೆಳಕು ಆರಿದಂತೆ ಕೊಡೆಯಂತೆ ಎಲೆಗಳು ಮಡಚಿ ಕೊಂಡು, ಸಸ್ಯದ ನೀರಿನಂಶವನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ, ಮತ್ತು ಆಮೂಲಕ ತಾಪಮಾನದ ವೈಪರೀತ್ಯಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ.

ಸೂರ್ಯನು ಮತ್ತೆ ಉದಯಿಸುವವರೆಗೂ ನಿದ್ರೆಯಲ್ಲೇ ಇರುವ ಈ ಸಸ್ಯವನ್ನು ಕೆಲ ಕಡೆ ಮಜ್ಜಿಗೆ ಸೊಪ್ಪೆಂದೂ ಕರೆದಿದ್ದಾರೆ. ಆದರೆ ಈ ಸೊಪ್ಪಿಗೆ ಹುಳಿಮಜ್ಜಿಗೆಯ ರುಚಿ, ವಾಸನೆಯಲ್ಲ. ಎಲೆಗಳು ಹಸಿರಿರಬಹುದು, ಕಡು ನೀಲಿಯದೂ ಆಗಿರಬಹುದು. ಹೆಚ್ಚಾಗಿ ಹಳದಿ ಅಥವಾ ಮಸುಕಾದ ಗುಲಾಬಿ ಬಣ್ಣದ ಹೂವುಗಳನ್ನು ಹೊಂದುವ ಆಕರ್ಷಕ ಸಸ್ಯವಾಗಿದೆ. ಹುಳಿಚಿಕ್ಕಿ ಸಸ್ಯವು ಸಾಂಸ್ಕೃತಿಕ ಸಂಕೇತಗಳಲ್ಲಿ ಅದೃಷ್ಟಕ್ಕೆ, ಮೂರು ಎಲೆಯ ಹೋಲಿ ಟ್ರಿನಿಟಿ ಎಂಬುದಾಗಿ ಮಹತ್ವದ್ದಾಗಿದೆ.

ನೆಲದ ತಂಪನ್ನು ಹಿಡಿದಿಟ್ಟುಕೊಳ್ಳುವಲ್ಲಿ ಗುಬ್ಬಚ್ಚಿ ಬಾಳೆ, ಹುಳಿಚಿಕ್ಕಿಗಳಂತಹ ಪುಟ್ಟ ಪುಟ್ಟ ಸಸ್ಯವರ್ಗಗಳು ಸಹಾಯಕಾರಿ. ಇವುಗಳ ಹಸಿರು ಹಾಸು ಮೆತ್ತನೆಯ ದುಕೂಲದ ಮೇಲೆ ನಡೆದಂತಹ ಅನುಭವವನ್ನು ಕೊಡುತ್ತವೆ. ತಮಗೊದಗುವ ಕಿಂಚಿತ್ ತೇವವನ್ನು ಪರಿಪರಿಯಾಗಿ ಬಳಸಿಕೊಂಡು ವಿಶಿಷ್ಟವಾಗಿ ಬೆಳೆದು ಬದುಕುವ ರೀತಿಯೇ ಚಂದ.

ಬದುಕಿನಲ್ಲಿ ಯಾವುದು ಮುಖ್ಯ ಎಂದು ಕೇಳಿದರೆ ಬಹುತೇಕ ಮಂದಿ ಗಂಡಸರಿಂದ ಬರುವ ಉತ್ತರ ನೀರು ಮತ್ತು ನೀರೆಯರು ಎಂಬುದಾಗಿರಬಹುದು. ಇನ್ನೂ ಕೆಲವು ಬೀರಬಲ್ಲರು ನೀರಿನಷ್ಟೇ ಬಿಯರು ಕೂಡ ಮುಖ್ಯ ಎಂದು ವಾದಿಸಬಹುದು. ಕಾರಣ ಒಂದೇ ಗುಟುಕಿಗೆ ಎರಡು ಗ್ಲಾಸ್ ನೀರು ಕುಡಿಯಲಾಗದವರು ಎರಡೆರಡು ಬಾಟಲಿ ಬಿಯರುಗಳನ್ನು ಕುಡಿದು ಬಿಂದಾಸಾಗಿಯೂ, ಬಿಯರ್ ದಾಸರಾಗಿಯೋ ಆರಾಮಾಗಿರುತ್ತಾರೆ.

ನೀರು ನೀರೆಯರ ಸುತ್ತ

» ರಾಜು ಅಡಕಳ್ಳಿ

ಲಹರಿ

ನಾವು ಪ್ರತಿನಿತ್ಯ ನೀರನ್ನು ಯಥೇಚ್ಚವಾಗಿ ಬಳಸಿದರೂ ಆ ನೀರಿನ ಬಣ್ಣ, ವಾಸನೆ ಮತ್ತು ರುಚಿ ಏನು ಎಂದು ಕೇಳಿದರೆ ಹೇಳುವುದಕ್ಕೆ ಸಾಧ್ಯವಿಲ್ಲ. ಶುದ್ಧವಾದ ನೀರಿಗೆ ವಾಸನೆ ರುಚಿ ಏನೂ ಇರುವುದಿಲ್ಲ, ಆದರೆ ದಾಹವನ್ನು ತಣಿಸುವ ಶಕ್ತಿ ನೀರಿಗೆ ಅಧಿಕ. ನೀರು ನಿರ್ವಿಕಾರ, ನಿರಂತರ ಎಂದು ಜಲ ತಜ್ಞರು ಹೇಳುತ್ತಾರೆ.

ವಿಚಿತ್ರವೆಂದರೆ ಸ್ಕಾಟಲ್ಯಾಂಡಿನಲ್ಲಿ ಫಿಡಿಚ್ ಎಂಬ ನದಿ ನೀರು ತುಂಬಾ ರುಚಿಯಾಗಿರುವುದರಿಂದ ಆ ನದಿ ನೀರಿನಿಂದ ತಯಾರಿಸಲಾಗುವ ವಿಸ್ಕಿಯೂ ತುಂಬಾ ರುಚಿ ಮತ್ತು ದುಬಾರಿಯಾಗಿದೆ ಎಂದು ಅಲ್ಲಿಯ ಡಿಸ್ಟಿಲರಿಗಳ ಮಾಲೀಕರು ಹೇಳುತ್ತಾರೆ. ಹೀಗಾಗಿ ಫಿಡಿಚ್ ನದಿ ದಂಡೆಯ ಮೇಲಿರುವ ಮದ್ಯ ತಯಾರಿಕಾ ಘಟಕದಲ್ಲಿ ಅವತಾರವೆತ್ತುವ ಗ್ಲೆನ್ ಫಿಡಿಚ್ ವಿಸ್ಕಿ ದುಬಾರಿ ಮತ್ತು ಅದಕ್ಕೆ ವಿಶ್ವದಾದ್ಯಂತ ಅಷ್ಟೊಂದು ಬೇಡಿಕೆ. ನಮ್ಮ ಬೆಂಗಳೂರಿನಲ್ಲಿ ವೃಷಭಾವತಿಯನ್ನೂ ಫಿಡಿಚ್ ನದಿಯಂತೆಯೇ ಸ್ವಚ್ಛವಾಗಿಟ್ಟುಕೊಂಡಿದ್ದರೆ, ವೃಷಭಾವತಿ ಬ್ರಾಂಡಿನ ಬ್ರಾಂಡಿಯನ್ನಾದರೂ ತಯಾರಿಸಬಹುದಾಗಿತ್ತು. ಈಗ ವೃಷಭಾವತಿಯ ಪಕ್ಕ ಹಾದು ಹೋದರೂ ಸಾಕು. ಅಲ್ಲಿಯ ಗಬ್ಬು ನಾಥದಿಂದ ತಲೆ ಸುತ್ತು ಬರುತ್ತದೆ.

ನೀರ ಮೇಲಿನ ಗುಳ್ಳೆ ನಿಜವಲ್ಲ ಹರಿಯೇ ಎಂಬಂತೆ ವೃಷಭಾವತಿಯನ್ನು ಸ್ವಚ್ಛಗೊಳಿಸಲು ಸರ್ಕಾರ ವಿನಿಯೋಗಿಸುತ್ತಿರುವ ಹಣವೆಲ್ಲ ಹೊಳೆಯಲ್ಲಿ ಹೋಮ ಮಾಡಿದಂತಾಗಿ ವ್ಯರ್ಥವಾಗಿದೆ.

ವಿವಿಧ ಪೊಲಿಟಿಕಲ್ ಪಾರ್ಟಿಗಳ ಧ್ರುವೀಕರಣಕ್ಕೆ ನೀರು ಬೇಕಾಗಿಲ್ಲ, ಆದರೆ ರಾತ್ರಿಯ ಗುಂಡು ಪಾರ್ಟಿಗಳ ದ್ರವೀಕರಣಕ್ಕೆ ನೀರು ಬೇಕು, ಅಥವಾ ನೀರಿನ ಇತರ ಸ್ವರೂಪಗಳಾದ ಐಸ್, ಸೋಡಾಗಳು ಬೇಕೇಬೇಕು. ಇಂತಹ ದ್ರವೀಕರಣದ ಪ್ರಭಾವಕ್ಕೊಳಪಟ್ಟು ಬ್ರಾಹ್ಮಿ ಮುಹೂರ್ತದಿಂದ ಸಂಜೆಯ ಬ್ರಾಂದಿ ಮುಹೂರ್ತದ ಪ್ರಭಾವಳಿಗೆ ಶಿಫ್ಟ್ ಆದ ಅನೇಕ ಗುಂಡುಗಲಿಗಳೂ ಇದ್ದಾರೆ.

ನೀರಿನ ದಾರಿಗೆ ನೀರೆಯ ಹೆಸರು!

ನೀರು ನಾರಿಯಂತೆ ಒನಪು ವೈಯಾರದಿಂದ ಹರಿಯುತ್ತದೆ. ಹರಿಯುವ, ಫಲವತ್ತತೆಯ ಗುಣದಿಂದ, ಪೊರೆಯುವ ಸ್ವಭಾವದಿಂದ ನೀರನ್ನು ಹೆಣ್ಣಿಗೆ ಹೋಲಿಸುತ್ತಾರೆ. ಹೀಗೆ ನೀರು ನೀರೆಯಂತೆ ಬಾಗುತ್ತಾ ಬಳುಕುತ್ತಾ ಸುಂದರವಾಗಿ ಸಾಗುತ್ತದೆ. ಬಹುಶ: ಈ ವಿಶಿಷ್ಟ ಗುಣದಿಂದಾಗಿಯೇ ಬಹುತೇಕ ಎಲ್ಲಾ ನದಿಗಳಿಗೂ ನಾರಿಯರ ಹೆಸರನ್ನೇ ಇಟ್ಟಿರಬಹುದೇನೋ. ಜಲಜಾ, ಜಲಜಾಕ್ಷಿ, ಜಲಜಾತೆ, ನೀರಜಾಕ್ಷಿಯಂಥ ಹುಡುಗಿಯರ ಹೆಸರಿಗೂ ಜಲದ ಬಲವೇ ಕಾರಣ.

ಮತ್ತೊಂದು ಜೀವಕ್ಕೆ ಜೀವ ಕೊಡುವ ಹೆಣ್ಣಿನ ರೂಪಾಂತರದಂತಿರುವ ಜಲಕ್ಕೆ ಇದರಿಂದಾಗಿಯೇ ಜೀವಜಲ ಎನ್ನುತ್ತಾರೆ. ಇಂತಹ ಜೀವ ಜಲವನ್ನು, ನೀರಿನ ಮೂಲಗಳನ್ನು ಜತನದಿಂದ ಸಂರಕ್ಷಿಸುವ ವಿಧಾನವನ್ನು ನಾವು ಮುಂದಿನ ತಲೆಮಾರಿನವರಿಗೆ ತಿಳಿಸಿಕೊಡದಿದ್ದರೆ ಅವರನ್ನು ನಾವು ಸಮಸ್ಯೆಗಳ ನಡು ನೀರಿನಲ್ಲಿ ಕೈ ಬಿಟ್ಟಂತಾಗುತ್ತದೆ.

ಕ್ರಿಸ್ತಶಕ 505 ರಲ್ಲೇ ವರಾಹಮಿಹಿರಾಚಾರ್ಯರು ನಮ್ಮ ಅಂತರ್ಜಲದ ಸಂರಕ್ಷಣೆಯ ಬಗ್ಗೆ ಕಣ್ತೆರೆಸಬಲ್ಲಂಥ ವಿಚಾರಗಳನ್ನು ಸಂಶೋಧಿಸಿ ಬರೆದಿದ್ದಾರೆ. ನೀರಿನ ಬಗ್ಗೆ ಇವರು ಬರೆದಿರುವ ಈ ನಿರಪೇಕ್ಷ ಚಿಂತನೆಗಳನ್ನು ಅರಗಿಸಿಕೊಳ್ಳುವುದೆಂದರೆ ನೀರಿಳಿಯದ ಗಂಟಲಿನೊಳಗೆ ಕಡುಬು ತುರುಕಿದಂತೆ ಎಂದು ಭಾವಿಸಬಾರದು. ಯುವ ಜನಾಂಗಕ್ಕೆ ಇದನ್ನು ಸುಲಭವಾಗಿ ಅರ್ಥವಾಗುವಂತೆ ತಿಳಿಸಿಕೊಡುವ ಕೆಲಸವಾಗಬೇಕು.

ಭೀಮಾ ನದಿ ಮತ್ತು ಬ್ರಹ್ಮಪುತ್ರಗಳಂಥ ಕೆಲವೇ ಕೆಲವು ನದಿಗಳನ್ನು ಹೊರತುಪಡಿಸಿದರೆ, ಭಾರತದ ಹೆಚ್ಚಿನ ನದಿಗಳ ಹೆಸರುಗಳೆಲ್ಲವೂ ಮಹಿಳೆಯರದ್ದೇ ಆಗಿವೆ ಎಂಬುದು ಕುತೂಹಲಕಾರಿ. ಉದಾಹರಣೆಗೆ ಕಾವೇರಿ, ಕೃಷ್ಣೆ, ಗೋದಾವರಿ, ಶರಾವತಿ, ತುಂಗಾ, ಭದ್ರಾ, ಕಾಳಿ, ವರದಾ, ನೇತ್ರಾವತಿ, ಗಂಗಾ, ಯಮುನಾ, ನರ್ಮದಾ, ಸರಸ್ವತಿ, ಅಘನಾಶಿನಿ, ವೃಷಭಾವತಿ, ಸೀತಾ ನದಿ ಇತ್ಯಾದಿ.

ಕರಾವಳಿ ಮತ್ತು ಮಲೆನಾಡಿನಲ್ಲಿ ನೀರನ್ನು ದೇವತೆಯ ಪ್ರತಿರೂಪವೆಂದು ಭಾವಿಸಿ ಗಂಗಾಷ್ಟಮಿಯಂದು ನೀರನ್ನು ಪೂಜಿಸುವ ಪರಿಪಾಠವಿದೆ. ಹಲವು ಕಡೆಗಳಲ್ಲಿ ಪ್ರತಿ ವರ್ಷ ನದಿ ಹಬ್ಬವನ್ನು ಮತ್ತು ಸಮುದ್ರ ಪೂಜೆಯನ್ನು ನಡೆಸಿ ನೀರು ನಮನ ಸಲ್ಲಿಸುವ ಸಂಪ್ರದಾಯವಿದೆ. ನೀರಿನ ಬಗ್ಗೆ ಹಾಡು, ಲಾವಣಿಗಳ ಅಪರೂಪದ ಕಣಜಗಳು ನಮ್ಮ ಜಾನಪದ ಸಾಹಿತ್ಯದಲ್ಲಿ ಜಬರ್ದಸ್ತಾಗಿವೆ.

ಯಾವುದೇ ಮಗು ಹುಟ್ಟಿದಾಗ ಅದನ್ನು ಮೊದಲು ಸ್ವಚ್ಛಗೊಳಿಸುವುದು ನೀರಿನಿಂದಲೇ. ಯಾರೇ ಸತ್ತರೂ ಅಂತ್ಯಕ್ರಿಯೆಗಿಂತ ಮುಂಚೆ ಪಾರ್ಥಿವ ಶರೀರವನ್ನು ನೀರಿನಿಂದ ಶುಚಿಗೊಳಿಸುವುದು ಅಥವಾ ಸ್ನಾನ ಮಾಡಿಸುವುದು ರೂಢಿಯಲ್ಲಿರುವ ಪದ್ಧತಿ. ಹೀಗೆ ಹುಟ್ಟು ಸಾವು ಮತ್ತು ಅದರ ನಡುವಿನ ಬದುಕಿನ ಸರ್ವ ಸಂದರ್ಭಗಳಲ್ಲೂ ನೀರಿಗೆ ಮಹತ್ವ. ನೀರು ನಮ್ಮ ನಿತ್ಯ ಸಂಗಾತಿ ಮತ್ತು ಸಂಸ್ಕೃತಿ.

ಈಜಿಪ್ಟಿನ ರಣರಣ ಮರುಭೂಮಿಯಲ್ಲೂ ಆಭರಣದಂತೆ ಕಂಗೊಳಿಸುವ, ಜಲಲ ಜಲಧಾರೆಯಂತೆ ಹರಿಯುವ ನೈಲ್ ನದಿಯನ್ನು ನೋಡುವಾಗ ನೀರು ಜಲಂತರ್ಗಾಮಿಯೊಂದೇ ಅಲ್ಲ, ಸರ್ವಾಂತರ್ಯಾಮಿಯೂ ಹೌದು ಎಂದು ಅನ್ನಿಸುವುದು ಸಹಜ. ಬೆಂಕಿ ಹೊತ್ತಿದಾಗ ಆರಿಸಲು ನೀರು ಬೇಕು, ಆದರೆ ಎಷ್ಟೋ ಬಾರಿ ನೀರಿನಿಂದಲೇ ಬೆಂಕಿ ಹೊತ್ತಿಕೊಳ್ಳುವುದೂ ಇದೆ. ಹಿಂದೆ ನೀರಿಗೆ ಬೆಂಕಿ ಬಿದ್ದಂತಹ ಪ್ರಸಂಗಗಳೂ ನಡೆದಿವೆ. ಕಾವೇರಿ ಜಲ ವಿವಾದದ ಸಂದರ್ಭದಲ್ಲಿ, ಕಾವು ಏರಿ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಬೆಂಕಿ ಭುಗಿಲೆದ್ದಿತ್ತಲ್ಲವೇ!

ಜಲದ ನೆಲೆ

ಪ್ರಸ್ತುತ ಅಲ್ಲಲ್ಲಿ ನಡೆಯುವ ನೀರಿನ ವಿವಾದ, ವಿಕೋಪಗಳನ್ನು ಕನಕದಾಸರು ನೋಡುವಂತಾಗಿದ್ದರೆ, ಜಲ ಜಲವೆಂದು - ನೆಲ ನೆಲವೆಂದು ಹೊಡೆದಾಡದಿರಿ, ನಿಮ್ಮ ಜಲದ ನೆಲೆಯನೇನಾದರೂ ಬಲ್ಲಿರಾ ಂದು ಬರೆಯುತ್ತಿದ್ದರೇನೋ.

ನೀರು ಎಲ್ಲರಿಗೂ ಬೇಕೇಬೇಕು. ಹಾಗಂತ ಹಾಲನ್ನು ಖರೀದಿಸುವಾಗ ನೀರನ್ನು ಯಾರಾದರೂ ಸೇರಿಸಿದರೆ ಆ ಹಾಲೇ ಹಾಲಾಹಲವಾಗಿ ಕೋಲಾಹಲವಾಗಿ ಗಲಾಟೆಯಾಗುವುದು ಖಚಿತ.

ಹಿಂದೆಲ್ಲ ನೀರು ತುಂಬಾ ಅಗ್ಗವಾಗಿತ್ತು. ಈಗ ನೀರು ಹಾಲಿಗಿಂತ ದುಬಾರಿ. ಎಷ್ಟೋ ಹೋಟೆಲುಗಳಲ್ಲಿ ಒಂದು ಲೀಟರ್ ನೀರಿಗೆ ನೂರಿನ್ನೂರು ರೂಪಾಯಿ ದರವಿದೆ! ಮುಂದೊಂದು ದಿನ ಹಾಲಿಗಿಂತ ನೀರನ್ನೇ ಕೊಡುವ ಎಮ್ಮೆಗಳ ಹೊಸ ತಳಿಯನ್ನೇ ಸಂಶೋಧಿಸಬೇಕಾದೀತು.

ಎಮ್ಮೆಯ ರೀತಿ ಸ್ನಾನ

ಹಳ್ಳಿಗಳಲ್ಲಿ ನಾವು ದೊಡ್ಡ ಹಂಡೆಯಲ್ಲಿ ನೀರನ್ನು ಕಾಯಿಸಿಕೊಂಡು ಬಾಳಂತಿಯಂತೆ ಸ್ನಾನ ಮಾಡುತ್ತಿದ್ದೆವು. ಸುಮಾರು ಮೂರು ದಶಕಗಳ ಹಿಂದೆ ನಾವು ಬೆಂಗಳೂರಿಗೆ ಬಂದಾಗ ದೋಣಿ ಆಕಾರದ ಬಾತ್ ಟಬ್ಬುಗಳಲ್ಲೇ ನೀರನ್ನು ಸಂಗ್ರಹಿಸಿ, ಅದರೊಳಗೆ ಮೈ ಇಳಿಬಿಟ್ಟು ಸ್ನಾನ ಮಾಡುತ್ತಿದ್ದೆವು. ಧಾರವಾಡದ ಎಮ್ಮಿಕೇರಿಯ ಹೊಂಡದಲ್ಲಿ ಎಮ್ಮೆ ಗೊಡ್ಡುಗಳು ಸಂತೋಷದಿಂದ ಮೀಯುತ್ತಿದ್ದವಲ್ಲ, ಅಂತಹ ಆನಂದ ಆಗ ನಮ್ಮ ಟಬ್ ಸ್ನಾನದಲ್ಲಿ ಸಿಗುತ್ತಿತ್ತು. ಆದರೆ ಈಗ ಕಡು ಬೇಸಿಗೆಯಲ್ಲಂತೂ ವಾರಕ್ಕೆ ಒಂದು ಅಥವಾ ಎರಡು ದಿನ ಮಾತ್ರ ನಲ್ಲಿಯಲ್ಲಿ ಭುಸುಗುಡುತ್ತಾ ನೀರು ಬರುವುದರಿಂದ ಟಬ್ ಬದಲು ಬಕೇಟು, ಚಂಬುಗಳಿಂದಲೇ ಸಮಾಧಾನ ಪಟ್ಟುಕೊಳ್ಳುವಂತಾಗಿರುವುದು ನೀರಿನ ತುಟಾಗ್ರತೆ ತಿಳಿಸುವಂಥ ಪಾಠವಾಗಿದೆ.

ಹಳ್ಳಿಗಳಲ್ಲಿ ನೀರಿನ ಬಾವಿಗಳಿರುವ ನೋಟ ಸಹಜ. ಹಿಂದಿನ ಕಾಲದಲ್ಲಿ ಮದುವೆಯ ದಿನ ನವ ದಂಪತಿಯು ಜೊತೆಯಾಗಿ ಬಾವಿ ಪೂಜೆ ಮಾಡುತ್ತಾ ನೀರಿಗೂ ನಮಿಸುತ್ತಿದ್ದರು. ಈಗ ಪೇಟೆ ಪಟ್ಟಣಗಳಲ್ಲಂತೂ ಬಾವಿಗಳೇ ಇಲ್ಲ. ನಲ್ಲಿಗಳೇ ಎಲ್ಲೆಲ್ಲೂ ತುಂಬಿಕೊಂಡಿವೆ. ಹೀಗಾಗಿ ನವ ದಂಪತಿ ಪೂಜೆ ಮಾಡಬೇಕೆಂದರೆ ನೀರಿಲ್ಲದೇ ಒಣಗಿದ, ಈ ನರಪೇತಲ ನಲ್ಲಿಗಳಿಗೇ ಮಂಗಳಾರತಿ ಮಾಡುವುದು ಅನಿವಾರ್ಯ.

ಖಾಲಿ ಕೊಡ ತುಳುಕೀತೆ?

ಒಬ್ಬ ವ್ಯಕ್ತಿಯ ದೊಡ್ಡತನವನ್ನು ಹೇಳುವಾಗ ನೀರಿನ ಮೂಲಕವೇ ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆಯನ್ನು ಬಳಸಿ ಹೇಳುತ್ತಾರೆ, ಆದರೆ ಖಾಲಿ ಕೊಡವೂ ತುಳುಕುವುದಿಲ್ಲ ಎಂದು ಟೀಕಿಸುವವರೂ ಇರುತ್ತಾರೆ. ಇರಲಿ.. ಕಿವಿ ಇದ್ದಲ್ಲಿ ಕುಗ್ಗ ಇರುವಂತೆಯೇ, ಇಂಥ ಟೀಕೆ ಟಿಪ್ಪಣಿಗಳೆಲ್ಲಾ ಇರುವುದು ಸಹಜವೇ. ಆದರೆ ಇದಕ್ಕೆಲ್ಲಾ ತಲೆಕೆಡಿಸಿಕೊಳ್ಳದೇ ನೀರು ಹೊಳೆಯಾಗಿ, ನದಿಯಾಗಿ ತನ್ನ ಪಾಡಿಗೆ ತಾನು ಹರಿಯುತ್ತಲೇ ಇರುತ್ತದೆಯಲ್ಲವೇ.

ನೀರು ನಿಸರ್ಗದ ಅತ್ಯದ್ಭುತ ಕೊಡುಗೆ. ಮೋಡ ಕರಗಿ ನೀರಾಗಿ ಸುರಿಯುವುದು, ಆ ನೀರು ವಸುಂಧರೆಯಲ್ಲಿ ಒರತೆಯಾಗಿ ಒಸರುವುದು, ಮುಂದೆ ಅದೇ ನೀರು ಹನಿ ಹನಿ ಗೂಡುತ್ತಾ ಕೊಳವಾಗಿ, ಕೆರೆಯಾಗಿ, ಹಳ್ಳವಾಗಿ, ಹೊಳೆಯಾಗಿ, ನದಿಯಾಗಿ, ಸಮುದ್ರವಾಗಿ ಬದಲಾಗುವುದು. ನೀರಿನ ಅಂಶಗಳೇ ಶೀತ ಮಾರುತದಿಂದ ಕೆನೆಗಟ್ಟಿ ಹಿಮಾಲಯವಾಗುವುದು ನೈಸರ್ಗಿಕ ವಿಸ್ಮಯವೇ ಸರಿ.

ನೀರಿನ ನಡುವೆ ಕ್ಯಾಸಿನೋ!

ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು ಎಂಬಂತೆ, ನೀರಿಲ್ಲದೇ ದೋಣಿಯಾಗಲಿ ಹಡಗಾಗಲಿ ಸಾಗಲು ಸಾಧ್ಯವಿಲ್ಲ. ಆಫ್ ಕೋರ್ಸ್ ದೋಣಿ ಅಥವಾ ಹಡಗು ಮುಳುಗುವುದಕ್ಕೂ ನೀರೇ ಬೇಕು. ಹೀಗಾಗಿ ಬೆಂಕಿ ಮತ್ತು ನೀರಿನ ಜೊತೆ ಸರಸ ಬೇಡ ಎಂದು ಹಿರಿಯರು ಮಕ್ಕಳಿಗೆ ಬುದ್ಧಿವಾದ ಹೇಳುವುದುಂಟು. ಆದರೆ ಗೋವಾದಂಥ ಕಡೆಗಳಲ್ಲಿ ನೀರಿನ ಮೇಲೆಯೇ ಹಡಗು ನಿಲ್ಲಿಸಿ, ಬೆಡಗು ಸೂಸುವ ಹುಡುಗಿಯರನ್ನೂ ನಿಲ್ಲಿಸಿ ಕ್ಯಾಸಿನೋದಂತಹ ಜೂಜು ಮೋಜುಗಳನ್ನು ರಾತ್ರಿಯಿಡೀ ನಡೆಸಲಾಗುತ್ತಿದೆ ಎಂಬುದು ಬೇರೆ ಮಾತು.

ನಮ್ಮಲ್ಲಿ ದೇವರಿಗೆ ನೀರನ್ನು ನೈವೇದ್ಯ ಮಾಡಿದರೂ ಸಾಕು. ಆ ದೇವರೇನೂ ಕೋಪಿಸಿಕೊಳ್ಳುವುದಿಲ್ಲ, ಆದರೆ ನಮ್ಮ ಜನರಿಗೆ ಹಾಗಲ್ಲ. ಅವರಿಗೆ ಬೆಳಗಿನ ದಿನಚರಿ ಪ್ರಾರಂಭವಾಗುವುದೇ ಸಂಡಾಸಿನಿಂದ. ಇನ್ನು ನೀರಿಲ್ಲದೇ ಸಂಡಾಸೇ ಕಷ್ಟವಾದರೆ ಮುಂಡಾಸಿನಿಂದ ಖುಷಿ ಸಿಗಲು ಸಾಧ್ಯವೇ? ಅಷ್ಟಕ್ಕೂ ನಮ್ಮವರಿಗೆ ಪಾಶ್ಚಾತ್ಯರಂತೆ ಕೇವಲ ಟಿಶ್ಯೂ ಪೇಪರಿನಿಂದಲೇ ತಲೆ ಬುಡ ಶುಚಿಗೊಳಿಸಿಕೊಳ್ಳುವ ಕಲೆ ರೂಢಿಯಾಗಿಲ್ಲ.

ವಿಚಿತ್ರವೆಂದರೆ ನಮ್ಮನ್ನು ಶುಚಿಗೊಳಿಸಿಕೊಳ್ಳುವುದಕ್ಕೆ ನಮಗೆ ನೀರು ಬೇಕು, ಆದರೆ ಆ ನೀರನ್ನು ನಾವು ಶುಚಿಯಾಗಿಟ್ಟುಕೊಳ್ಳಲು ಯತ್ನಿಸುವುದೇ ಇಲ್ಲ. ಹೀಗಾಗಿ ನಮ್ಮಲ್ಲಿಯ ಎಷ್ಟೋ ಕೆರೆ, ಕೊಳ್ಳ, ನದಿ ಮೂಲಗಳು ಕಲುಷಿತಗೊಂಡಿವೆ. ಪವಿತ್ರವಾಗಿದ್ದ ಗಂಗೆಯನ್ನೇ ಅಪವಿತ್ರಗೊಳಿಸಿ ಗಬ್ಬೆಬ್ಬಿಸಿಬಿಟ್ಟಿದ್ದೇವೆ.

ಗೋಟಾವಳಿ!

ಇದರಿಂದಾಗಿ ಈಗ ನೆಲ ನಂಜಾಗಿದೆ. ನೀರು ವಿಷವಾಗಿದೆ. ನಲ್ಲಿಯಲ್ಲಿ ಬರುವ ನೀರನ್ನು ನಂಬಿ ಶರಬತ್ತಿನಂತೆ ಕುಡಿಯುವ ಹಾಗಿಲ್ಲ. ಏಕೆಂದರೆ ನೀರು ಸರಬರಾಜು ಮಾಡುವ ಜಲ ಮಂಡಳಿ ಮತ್ತು ಒಳಚರಂಡಿ ಮಂಡಳಿಗಳು ಒಂದೇ ಸರ್ಕಾರದ ಅಡಿಯಲ್ಲಿ ಬರುವುದರಿಂದ ಎಷ್ಟೋ ಬಾರಿ ಕುಡಿಯುವ ನೀರು ಪೂರೈಸುವ ನಲ್ಲಿಗಳಲ್ಲಿ ಒಳಚರಂಡಿ ಪೈಪುಗಳೂ ಪೈಪೋಟಿಗೆ ಬಿದ್ದು, ಒಂದರೊಳಗೊಂದು ಸೇರಿಕೊಂಡು ಗೋಟಾವಳಿಯಾದ ಪ್ರಸಂಗಗಳು ಘಟಿಸಿವೆ.

ಹೀಗಾಗಿ ಎಲ್ಲರ ಅಡುಗೆ ಮನೆಯಲ್ಲೂ ಫಿಲ್ಟರ್ ನೀರುಗಳೇ ಬೇಕು! ಒಂದು ವೇಳೆ ಕುಡಿಯಲು ನೀರಿಲ್ಲದಿದ್ದರೂ ಹೇಗಾದರೂ ಮಾಡಿ ಸಹಿಸಿಕೊಳ್ಳುವ ನಮ್ಮ ಜನ, ಮುಂಜಾನೆ ತೊಳೆದುಕೊಳ್ಳಲು ನೀರಿಲ್ಲದಿದ್ದರೆ ಮಾತ್ರ ನಿರ್ಲಿಪ್ತವಾಗಿರುವುದಿಲ್ಲ. ಆಗ ನೀರಿಗಾಗಿ ಹಾಹಾಕಾರ ಹೋಹೋಕಾರ ಶುರುವಾಗುವುದು ಗ್ಯಾರಂಟಿ. ನಮ್ಮ ಜನ ಬೇಕಾದಷ್ಟು ನೀರಿದ್ದರೆ ನರಕವನ್ನಾದರೂ ಸಹಿಸಿಕೊಂಡಾರು, ಆದರೆ ಆ ಸ್ವರ್ಗದ ಬಾತ್ ರೂಮಿನಲ್ಲಿ ಅಥವಾ ಟಾಯ್ಲೆಟ್ಟಿನಲ್ಲಿ ಏನಾದರೂ ನೀರಿಲ್ಲ ಎಂದಾದರೆ, ಸಾಕ್ಷಾತ್ ಆ ಯಮನ ಎದುರೇ ಖಾಲಿ ಚೊಂಬಿನೊಂದಿಗೆ ಧರಣಿ ಸತ್ಯಾಗ್ರಹಕ್ಕೆ ಕುಳಿತುಬಿಟ್ಟಾರು.

ಇನ್ನು ಸಿನಿಮಾಗಳಲ್ಲಿ ನಟಿಯರ ಮೇಲಿರುವ ಅಲ್ಪಸ್ವಲ್ಪ ಬಟ್ಟೆಗಳನ್ನೂ ನೀರಿಂದ ಒದ್ದೆ ಮಾಡಿ, ತಾರಾ ಮಣಿಗಳನ್ನು ಪಾರದರ್ಶಕಗೊಳಿಸಿ ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ ಸಿನಿಮಾಗಳು ನಮ್ಮಲ್ಲಿ ಎಷ್ಟೊಂದು ಬಂದಿಲ್ಲ. ಇದೇ ರೀತಿ ಒದ್ದೆ ಮೈ ಪ್ರದರ್ಶಿಸಿ ರಾಮ್ ತೇರಿ ಗಂಗಾ ಮೈಲಿ ಚಿತ್ರವು ರಾಮ್ ತೇರಿ ಗಂಗಾ ಬರೀ ಮೈಲಿ ಎಂದು ಕನ್ನಡದಲ್ಲಿ ಹೆಸರುವಾಸಿಯಾಗಿರಲಿಲ್ಲವೇ. ಈ ಚಿತ್ರದ ನಾಯಕಿ ಬಿಕಿನಿಯಲ್ಲಿ ಕಾಣಿಸಿಕೊಂಡು, ಜನರ ಗಮನ ಸೆಳೆದಿದ್ದನ್ನೂ ಮರೆಯಲು ಸಾಧ್ಯವೇ?

ಮನುಷ್ಯನಿಗೆ ಮನೆ ಕಟ್ಟುವುದಕ್ಕೆ ಮತ್ತು ಮನೆ ಕಟ್ಟಿದ ಮೇಲೆ ನೀರು ಅತ್ಯವಶ್ಯಕ. ವಿಶೇಷವೇನೆಂದರೆ ಮೀನು, ಮೊಸಳೆ, ತಿಮಿಂಗಲಗಳಂತಹ ಜಲಚರಗಳಿಗೆ ನೀರೇ ವಾಸದ ಮನೆ. ಈ ಮೀನು, ಮೊಸಳೆಗಳು ಮನುಷ್ಯನಂತೆ ಯಾವುದೇ ಸ್ವಿಮ್ಮಿಂಗ್ ಪೂಲಿಗೆ ಹೋಗಿ ಬೇಸಿಗೆ ಶಿಬಿರದಲ್ಲಿ ಈಜನ್ನು ಕಲಿತವಲ್ಲ. ಆದರೂ ಬದುಕಿನ ಪ್ರವಾಹಗಳಿಗೆ ಎದುರಾಗಿ ಮನುಷ್ಯನಿಗೇ ಈಜುವುದನ್ನು ಕಲಿಸುವಷ್ಟು ಈ ಜಲಚರಗಳು ಜಲ ಕ್ರೀಡಾಪಟುಗಳಂತಿವೆ. ಒಟ್ಟಾರೆ ಸುಖ ಸಂಸಾರಕ್ಕೆ ನೀರೆರೆಯಲು ಮನೆಯಲ್ಲಿ ನೀರೆಯರು ಇರಬೇಕು. ನೆಮ್ಮದಿಯ ಬಾಳ ನೌಕೆ ಸಾಗುವಂತಾಗಲು ಮನೆಯಲ್ಲಿ ಸಮೃದ್ಧಿಯಾಗಿ ನೀರು ಸಿಗುತ್ತಿರಬೇಕು. ಆಗ ಆ ಸ್ವರ್ಗಕ್ಕೇ ಬೆಂಕಿ ಬಿದ್ದರೂ ನೀರಿನಿಂದ ನಂದಿಸಿ ನಂದನವನಾಗಿ ಮಾಡಬಹುದಲ್ಲವೇ!

ತರಕಾರಿ ಮಾರುಕಟ್ಟೆಯಲ್ಲಿ ಶಿಸ್ತು!

ತರಕಾರಿ ಮಾರುಕಟ್ಟೆ ಎಂದರೆ, ಕಸದ ರಾಶಿ, ತರಕಾರಿ ತ್ಯಾಜ್ಯದ ರಾಶಿ ಎಂಬುದೇ ನಮ್ಮ ಭಾವನೆ. ಆದರೆ, ಈ ತರಕಾರಿ ಮಾರುಕಟ್ಟೆಯು ಚೊಕ್ಕಟವಾಗಿತ್ತು, ಅಲ್ಲಿನ ಜನರಲ್ಲಿ ಶಿಸ್ತು ಎದ್ದು ಕಾಣಿಸುತ್ತಿತ್ತು!

» ಮಂಜುನಾಥ ಡಿ. ಎಸ್.



ಕಠ್ಮಂಡುವಿನಲ್ಲಿ ನಾನು ತಂಗಿದ್ದ ಹೋಟೆಲಿನ ಪಕ್ಕದಲ್ಲಿಯೇ 'ಧೂಮ್ ಬಾರಾಹಿ' ಹೆಸರಿನ ತರಕಾರಿ, ಹಣ್ಣು, ಹೂಗಳ ಮಾರುಕಟ್ಟೆ ಇತ್ತು. (ಇಲ್ಲಿ 'ವ' ಅಕ್ಷರದ ಬದಲು 'ಬ' ಅಕ್ಷರ ಬಳಸುತ್ತಾರೆ; ಹಾಗೆಯೇ ಉಚ್ಚರಿಸುತ್ತಾರೆ) ಇದನ್ನು ಪ್ರತ್ಯಕ್ಷ ಕಂಡು ಅನುಭವ ಪಡೆಯುವ ಉದ್ದೇಶದಿಂದ ಅಂದು ಬೆಳ್ಳಂಬೆಳಗ್ಗೆ ಈ ಮಾರುಕಟ್ಟೆಗೆ ಭೇಟಿಯಿತ್ತೆ; ಈ ಪರ್ವತ ದೇಶದಲ್ಲಿನ ತರಕಾರಿನ ಅನನ್ಯತೆಯನ್ನು ನೋಡುವ ಕುತೂಹಲ. ಕಠ್ಮಂಡುವಿನ ಹದಿನೈದಕ್ಕೂ ಹೆಚ್ಚು ಮಾರುಕಟ್ಟೆಗಳಲ್ಲಿ ಒಂದಾಗಿದ್ದ ಇದು ಅಷ್ಟೇನೂ ದೊಡ್ಡದಲ್ಲ. ಆದರೂ, ಅಲ್ಲಿನ ಮಾರುಕಟ್ಟೆಗಳ ಬಗ್ಗೆ ತಿಳಿದುಕೊಳ್ಳಲು ಇದು ಸಾಕಾಗಿತ್ತು.

ಎರಡಂತಸ್ತಿನ ಕಟ್ಟಡದ ಈ ಮಾರುಕಟ್ಟೆಯ ಮೇಲಿನ ಹಂತದಲ್ಲಿ ಸೀಮೆಬದನೆ, ಮೂಲಂಗಿ, ಗೆಣಸು, ಕುಂಬಳಕಾಯಿ, ಸೌತೆಕಾಯಿ, ಹಾಗಲಕಾಯಿ, ಪಡವಲಕಾಯಿ, ತೊಂಡೇಕಾಯಿ, ಎಲೆಕೋಸು, ಹೂಕೋಸು, ಈರುಳ್ಳಿ, ಸೇರಿದಂತೆ ನಮ್ಮಲ್ಲಿ ಸಿಗುವಂತಹ ತರಕಾರಿಗಳೇ ಹೆಚ್ಚಾಗಿ ಕಂಡುಬಂದವು. ಆ ದೇಶದ ಹೆಚ್ಚಿನ ಭಾಗ ಬೆಟ್ಟ, ಗುಡ್ಡ, ಪರ್ವತವೇ ತುಂಬಿರುವುದರಿಂದ, ಅಲ್ಲಿ ತರಕಾರಿ ಕೃಷಿ ತುಸು ಕಷ್ಟವೇ; ಆದ್ದರಿಂದಲೇ ಇರಬೇಕು, ಅಲ್ಲಿನ ಸ್ಥಳೀಯ ತರಕಾರಿಗಳು ಆ ಮಾರುಕಟ್ಟೆಯಲ್ಲಿ ಕಾಣಿಸಲಿಲ್ಲ. ವ್ಯಾಪಾರಿಗಳು ಹರಡಿಕೊಂಡಿದ್ದ ತಾಜಾ ತರಕಾರಿಗಳು ಗ್ರಾಹಕರನ್ನು ತಮ್ಮೆಡೆಗೆ ಸೆಳೆಯುವಂತಿದ್ದವು. ಸೇಬಿನ ಹಣ್ಣು ಬಿಟ್ಟರೆ ಇತರ ಹಣ್ಣುಗಳು, ಹೂಗಳು ಅಷ್ಟಾಗಿ ಇರಲಿಲ್ಲ. ಇಲ್ಲಿ ಸಗಟು ಹಾಗು ಚಿಲ್ಲರೆ ಎರಡೂ ಬಗೆಯ ವ್ಯಾಪಾರ ನಡೆಯುತ್ತಿತ್ತು. ಸಗಟಾಗಿ ಹತ್ತಿಪ್ಪತ್ತು ಕಿಲೋ ತರಕಾರಿಗಳನ್ನು ಕೊಂಡುಕೊಳ್ಳುವವರೇ ಅಧಿಕ ಸಂಖ್ಯೆಯಲ್ಲಿದ್ದರು. ನೆಲ ಅಂತಸ್ತಿನಲ್ಲಿ ಈರುಳ್ಳಿ, ಆಲೂಗೆಡ್ಡೆ ವಿಕ್ರಯಿಸುವ ಸಗಟು ವ್ಯಾಪರಿಗಳ ಮಳಿಗೆಗಳಿದ್ದವು.

ನೇಪಾಳದ ಖಾರ ಮೆಣಸಿನ ಕಾಯಿ!

ನೇಪಾಳದ ಎಲ್ಲ ಹೋಟೆಲುಗಳಲ್ಲಿ ಖಾದ್ಯಗಳ ಜೊತೆ ಕಾಣಸಿಗುತ್ತಿದ್ದ, ಚೆರಿ ಹಣ್ಣನ್ನು ಹೋಲುವ, ದುಂಡು ಮೆಣಸಿನಕಾಯಿ ಕುತೂಹಲ ಮೂಡಿಸಿತ್ತು. ಈ ಪ್ರಭೇದದ ಮೆಣಸಿನಕಾಯಿಯ ರಾಶಿಗಳನ್ನು ಇಲ್ಲಿಯೂ ನೋಡಿದೆ. ಡಲ್ಲೇ ಖುರ್ಸಾನೀ ಅಥವಾ ಅಕ್ಬರೇ ಖುರ್ಸಾನೀ ಎಂಬ ಹೆಸರಿನ ಈ ದುಂಡು ಮೆಣಸಿನಕಾಯಿ ಗಾತ್ರದಲ್ಲಿ ಕಿರಿದಾಗಿದ್ದರೂ, ಅತ್ಯಂತ ಖಾರವಾಗಿರುವ ತಳಿ ಎಂದು ಹೆಸರು ಪಡೆದಿದೆ. ಡಲ್ಲೇ ಎಂದರೆ ದುಂಡಗಿರುವ ಎಂಬ ಅರ್ಥ. ಕೆಲವು ಪೋಷಕಾಂಶಗಳ ಜತೆ, ಅಧಿಕ ಪೊಟಾಷಿಯಂ ಹಾಗು ಕಡಿಮೆ ಸೋಡಿಯಂ ಹೊಂದಿರುವ ಈ ಮೆಣಸಿನಕಾಯಿಗೆ ಸಿಕ್ಕಿಂನ ಜಿಯೋಗ್ರಾಫಿಕಲ್ ಇಂಡಿಕೇಷನ್ (ಜಿ.ಐ.) ಟ್ಯಾಗ್ ಹೊಂದಿರುವ ಹೆಗ್ಗಳಿಕೆ ಇದೆ.

ಈ ತರಕಾರಿ ಮಾರುಕಟ್ಟೆಯಲ್ಲಿ ಗಮನ ಸೆಳೆದಿದ್ದು ಎರಡು ಅಂಶಗಳು. ಮೊದಲನೆಯದು ಸ್ವಚ್ಛತೆ. ಅಲ್ಲಿನ ಪರಿಸರವು ಕಸದ ಕುಪ್ಪೆಗಳಿಂದ, ಕೊಳೆತ ಹಣ್ಣು ತರಕಾರಿಗಳಿಂದ, ದುರ್ಗಂಧದಿಂದ ಮುಕ್ತವಾಗಿತ್ತು; ಸಾಮಾನ್ಯವಾಗಿ ನಮಗೆಲ್ಲಾ ತರಕಾರಿ ಮಾರುಕಟ್ಟೆ ಎಂದರೆ ತರಕಾರಿಯ ತ್ಯಾಜ್ಯ, ಅವುಗಳ ರಾಶಿ ಮತ್ತು ವಾಸನೆ ಎಂಬುದೇ ಅಭ್ಯಾಸ. ಇಲ್ಲಿ ಅದಿಲ್ಲ. ತರಕಾರಿ ಮಾರುಕಟ್ಟೆಯ ಪರಿಸರವು ಸ್ವಚ್ಛವಾಗಿದ್ದುದನ್ನು ಕಂಡು ನಿಜಕ್ಕೂ ಅಚ್ಚರಿ ಎನಿಸಿತು.

ಎರಡನೆಯದು ಮಾರುಕಟ್ಟೆಯಲ್ಲಿ ಗ್ರಾಹಕರು ಯಾವುದೇ ಅಡೆತಡೆಯಿಲ್ಲದೆ ಸುಗಮವಾಗಿ ಓಡಾಡಲು ಅವಕಾಶವಿದ್ದುದು. ಜನಸಂಖ್ಯೆ ಕಡಿಮೆ ಇರುವುದರಿಂದ ಇವು ಸಾಧ್ಯವಾಗಿವೆ ಎನ್ನುವುದಕ್ಕಿಂತ, ಅಲ್ಲಿನ ಜನರ ಮನೋಧರ್ಮ, ಶಿಸ್ತಿನ ದಿನಚರಿ ಮತ್ತು ಇತರರಿಗೆ ನೀಡುವ ಗೌರವ ಮನೋಭಾವ ಮೊದಲಾದವುಗಳು ಇವುಗಳನ್ನು ಸಾಧ್ಯವಾಗಿಸಿವೆ ಎನ್ನುವುದೇ ಹೆಚ್ಚು ಸಮಂಜಸ ಎನಿಸುತ್ತದೆ. ಇಂಥ ಪ್ರಬುದ್ಧ ಮನಸ್ಥಿತಿಯನ್ನು ನಾವೂ ಬೆಳೆಸಿಕೊಳ್ಳಬಹುದಲ್ಲವೆ?

ನನ್ನ ದನಿಗೆ ನಿನ್ನ ದನಿಯು...

» ಮೊದಲ ಪುಟದಿಂದ

ಆತನ ಪಕ್ಕದಲ್ಲಿ ಆಧುನಿಕ ಪರಿಕರ ಇದ್ದೂ ಗಂಟೆಗಳಿಂದ ಮೀನು ಹಿಡಿಯಲಾಗದೆ ಈತನನ್ನು ನೋಡಿ ಆಶ್ಚರ್ಯ ಪಡುವವನ ಜಾಹೀರಾತನ್ನು ನೋಡಿ ನಿಬ್ಬೆರಗಾಗದವರೇ ಇಲ್ಲ! ಈ ಜಾಹೀರಾತು ನಮ್ಮ ದೇಶದ ಅತಿ ಜನಪ್ರಿಯ ಜಾಹೀರಾತುಗಳಲ್ಲಿ ಒಂದು! ಇದೇ ರೀತಿ ಬಸ್ಸಿನ ಮೇಲೆ ಕುಳಿತು ಪ್ರಯಾಣಿಸುವ ಜನರು ಒಂಚೂರೂ ಅಲುಗಾಡದೇ ಇರುವ ಫೆವಿಕಾಲ್ ಬಸ್, ಮೂರು ತಲೆಮಾರುಗಳಿಂದ ಗಟ್ಟಿಯಾಗಿ ಜೋಡಣೆ ಇರುವ ಫೆವಿಕಾಲ್ ಸೋಫಾ ಜಾಹೀರಾತು, ಮೊಟ್ಟೆ ಒಡೆಯಲು ಹರಸಾಹಸ ಪಡುವ ಫೆವಿಕಾಲ್ ಎಗ್ ಜಾಹೀರಾತು ಕೂಡ ಗಮನ ಸೆಳೆಯುವ ಜಾಹೀರಾತುಗಳು. ಇವೆಲ್ಲ ವಿನೂತನ ಕಂಟೆಂಟ್‌ನ ಹಿಂದೆ ಪಿಯೂಷ್ ಪಾಂಡೆಯವರ ಮಂಡೆ ಕೆಲಸ ಮಾಡಿದೆ!

ನಾಯಿಗಳು ನಿಷ್ಠೆ ಮತ್ತು ನಂಬಿಕೆಯ ಸಂಕೇತ. ಅದರಲ್ಲೂ ಪಗ್ ತಳಿಯ ನಾಯಿಯ ನಿಷ್ಠೆ ಶ್ರೇಷ್ಠ. ಈ ನಿಷ್ಠೆಯ ಪರಿಕಲ್ಪನೆಯನ್ನು ಬಳಸಿ, ಮೊಬೈಲ್ ಸಂಸ್ಥೆಯೊಂದಕ್ಕೆ ಅವರು ತಯಾರಿಸಿದ ಹಲವು 'ಪಗ್' ಜಾಹೀರಾತುಗಳು ಸಂಸ್ಥೆಯ ವ್ಯವಹಾರವನ್ನು ಹೆಚ್ಚಿಸಿ, ಜನರ ಮೆಚ್ಚುಗೆಯನ್ನೂ ಗಳಿಸಿದವು! ಕ್ರಿಕೆಟ್ ನೇರ ಪ್ರಸಾರದ ಸಂದರ್ಭದಲ್ಲಿ ತೆರೆಗೆ ಬಂದ, ಯಾವುದೋ ಅನ್ಯಗ್ರಹದಿಂದ ಬಂದಂತೆ ಕಾಣುವ, ಕಾರ್ಟೂನ್ ಪಾತ್ರ ಅಥವಾ ಕಂಪ್ಯೂಟರ್ ಅನಿಮೇಶನ್ ಬಳಸಿ ನಿರ್ಮಾಣ ಮಾಡಿದ ಪಾತ್ರಗಳಂತೆ ಕಂಡರೂ ಝೂಝೂ ಪಾತ್ರಗಳಿರುವ ಜಾಹೀರಾತು ಸಹ ತನ್ನ ಕಂಟೆಂಟ್‌ನಿಂದಾಗಿ ಗಮನ ಸೆಳೆಯಿತು.

ಮಿಲೇ ಸುರ್ ಮೇರಾ ತುಮ್ಹಾರಾ: 90ರ ದಶಕದಲ್ಲಿ 'ಹಮಾರಾ ಬಜಾಜ್' ಸ್ಲೋಗನ್ನಿನೊಂದಿಗೆ ಬಂದು, ಜನರ ಹೃದಯದಲ್ಲಿ ಜಾಗ ಪಡೆದು ದೇಶದ ಮಧ್ಯಮ ವರ್ಗದ ಆತ್ಮವಿಶ್ವಾಸ ಮತ್ತು ಪ್ರಗತಿಯನ್ನು ಬಿಂಬಿಸಿದ ಜಾಹೀರಾತದು. ಅದೇ ವರ್ಷಗಳಲ್ಲಿ ದೂರದರ್ಶನದಲ್ಲಿ ದಿನಕ್ಕೆ ಕನಿಷ್ಠ ಎರಡು ಬಾರಿಯಾದರೂ ಪ್ರಸಾರಗೊಳ್ಳುತ್ತಿದ್ದ 'ಮಿಲೇ ಸುರ್ ಮೇರಾ ತುಮ್ಹಾರಾ, ಏ ಸೂರ್ ಬನೇ ಹಮಾರಾ' ಹಾಡು ಜನರ ದೇಶಪ್ರೇಮವನ್ನು ಮತ್ತಷ್ಟು ಹಿಗ್ಗಿಸಿದ ಹಾಡು. ಅಬಾಲವೃದ್ಧರಾಗಿ ಎಲ್ಲರೂ ಆ ಹಾಡಿನ ಸಾಲುಗಳನ್ನು ತಂತಮ್ಮ ಭಾಷೆಗಳಲ್ಲಿ ಗುನುಗುತ್ತಿದ್ದರು. ಹಿಂದಿಯ ಸಾಲಿನ ನಂತರ 'ನನ್ನ ದನಿಗೆ ನಿನ್ನ ದನಿಯು ಸೇರಿದಂತೆ ನಮ್ಮ ಧ್ವನಿಯು' ಸಾಲುಗಳನ್ನು ನಾವು ಮನೆಯವರೆಲ್ಲರೂ ತಪ್ಪದೇ ಗುನುಗುತ್ತಿದ್ದೆವು. ಆ ಸಂಪೂರ್ಣ ಹಾಡು ನನ್ನ ನೆನಪಿನ ಪಟಲದಲ್ಲಿ ಇನ್ನೂ ಹಾಗೇ ಇದೆ.

2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಭಾಜಪ ಬಳಸಿದ, ಅತ್ಯಂತ ಗರಿಷ್ಠ ಜನರನ್ನು ತಲುಪಿದ 'ಅಬ್ ಕೀ ಬಾರ್ ಮೋದಿ ಸರ್ಕಾರ್' ಘೋಷಣೆಯ ಸೃಷ್ಟಿಕರ್ತರು ಇದೇ ಪಿಯೂಷ್ ಪಾಂಡೆ! ನಂತರ ಅದನ್ನು 'ಫಿರ್ ಏಕ್ ಬಾರ್ ಮೋದಿ ಸರ್ಕಾರ್' (2019), 'ಇಸ್ ಬಾರ್ ಚಾರ್ಸೋ ಪಾರ್' (2024) ಎಂಬಿತ್ಯಾದಿ ರೀತಿಯಲ್ಲಿ ಬಳಸಿಕೊಳ್ಳಲಾಯಿತು. ಟ್ರಂಪ್ ಮೊದಲ ಬಾರಿ ಅಧ್ಯಕ್ಷರಾಗಿ ಆಯ್ಕೆಯಾದ ಚುನಾವಣೆ ಸಂದರ್ಭದಲ್ಲಿ ಅಮೆರಿಕದಲ್ಲಿ ನೆಲೆಸಿರುವ ಭಾರತೀಯರನ್ನು ಮೆಚ್ಚಿಸಲು 'ಅಬ್ ಕೀ ಬಾರ್ ಟ್ರಂಪ್ ಸರ್ಕಾರ್' ಎಂದು ಘೋಷಣಾ ವಾಕ್ಯ ತಯಾರಿಸಿದ್ದು ಪಿಯೂಷ್ ಅವರ ವಾಕ್ಯದ ಆಧಾರದ ಮೇಲೆಯೇ!

ಇವರ ಸೃಜನಶೀಲ ಹೆಗ್ಗುರುತು ಇನ್ನೂ ಕೆಲವು ಜಾಹೀರಾತು ಮತ್ತು ಸಾಮಾಜಿಕ ಸಂದೇಶಗಳ ವೀಡಿಯೋಗಳಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ಅಮಿತಾಬ್ ಬಚ್ಚನ್ ಜೊತೆಗೂಡಿ ಮಾಡಿದ 'ಪೋಲಿಯೋ ಮುಕ್ತ ಅಭಿಯಾನ' ಸಂದೇಶ, ಲೂನಾ ದ್ವಿಚಕ್ರ ವಾಹನಕ್ಕಾಗಿ 'ಚಲ್ ಮೇರಿ ಲೂನಾ', ಕ್ಯಾಡ್‌ಬರಿಯವರ ಈಗಿನ 'ಕುಛ್ ಮೀಠಾ ಹೋಜಾಯೆಂ' ಮೊದಲಾದ ಜಾಹೀರಾತುಗಳು, ಆಯಾ ಬ್ರಾಂಡುಗಳನ್ನೂ ಮೀರಿದ ವಿರಳ-ಸೃಜನಶೀಲ ಪರಂಪರೆ ಹೊಂದಿದ್ದ ಅಪರೂಪದ 'ಜಾಹೀರಾತು ಬ್ರಹ್ಮ'ನ ಕೊಡುಗೆಗಳು! ಮಹಿಳೆ ಮತ್ತು ಹೆಣ್ಮಕ್ಕಳ ದೌರ್ಜನ್ಯ ತಡೆಯಲು 'ಬೆಲ್ ಬಜಾವೋ' ಆಂದೋಲನ ಜಾಹೀರಾತು ಸಂಚಲನ ಮೂಡಿಸುವ ಜತೆಗೆ, ವಿವಿಧ ಶಾಲಾ-ಕಾಲೇಜುಗಳು ಮತ್ತು ಎನ್‌ಜಿಒಗಳು ಅದೇ ಧ್ಯೇಯದೊಂದಿಗೆ ದೇಶಾದ್ಯಂತ ಬೀದಿ ನಾಟಕ ಪ್ರದರ್ಶಿಸಿ ಜಾಗೃತಿ ಮೂಡಿಸಿದ್ದನ್ನು ಮರೆಯುವಂತಿಲ್ಲ.

ಕಂಟೆಂಟ್ ದೊರೆ ಪಿಯೂಷ್: ಜಾಹೀರಾತು ಮತ್ತು ಸಾರ್ವಜನಿಕ ಸಂಪರ್ಕ ಕ್ಷೇತ್ರದಲ್ಲಿ ಸದ್ಯಕ್ಕೆ ದೇಶದ ದೊಡ್ಡ ಮತ್ತು ಪ್ರಭಾವೀ ಏಜೆನ್ಸಿಯಾಗಿರುವ ಒಗಿಲ್ವಿ ಇಂಡಿಯಾ ಕಂಪೆನಿಯನ್ನು ಆ ಮಟ್ಟಕ್ಕೇರಿಸಿದ ಕೀರ್ತಿ ಪಾಂಡೆ ಅವರಿಗೆ ಸಲ್ಲುತ್ತದೆ. ಜಾಹೀರಾತಿನ ಮೂಲ ಆಶಯಕ್ಕೆ ಧಕ್ಕೆಯಾಗದಂತೆ, ಜನರಿಗೆ ಯಾವುದೇ ತಪ್ಪು ಮಾಹಿತಿ ನೀಡದಂತೆ, ಜನರನ್ನು ಬ್ರ್ಯಾಂಡ್‌ನೆಡೆಗೆ ಸೆಳೆಯಲು, ಹೇಳಬೇಕಿರುವುದನ್ನು ನವಿರಾಗಿ, ಕಚಗುಳಿ ಇಟ್ಟಂತೆ, ವಿಶಿಷ್ಟವಾದ ಶೈಲಿ ಮತ್ತು ಸ್ಲೋಗನ್‌ಗಳ ಮೂಲಕ ವ್ಯಕ್ತಪಡಿಸುವ ಅವರ ಜಾಹೀರಾತು ಶೈಲಿಗಳು ಭಾರತೀಯರಿಗೆ ಇಷ್ಟವಾದವು. ಪ್ರಪಂಚದ ಜಾಹೀರಾತು ಪಿತಾಮಹನ ಹೆಸರು ಡೇವಿಡ್ ಒಗಿಲ್ವಿ. ನಂತರದ ಸ್ಥಾನ ಪಿಯೂಷ್ ಪಾಂಡೆ ಅವರಿಗೆ. ಈಗಿನ ಸಂಪರ್ಕ ಕ್ರಾಂತಿ ಮತ್ತು ಸಾಮಾಜಿಕ ಮಾಧ್ಯಮಗಳ ಕ್ರಾಂತಿಯಿಂದಾಗಿ ಗಲ್ಲಿಗೊಬ್ಬ 'ಕಂಟೆಂಟ್ ಕ್ರಿಯೇಟರ್' ಹುಟ್ಟುವ ಹಲವು ದಶಕಗಳ ಮೊದಲೇ ಜಾಹೀರಾತು ಕ್ಷೇತ್ರದ ಅನಭಿಷಿಕ್ತ 'ಕಂಟೆಂಟ್ ದೊರೆ'ಯಾಗಿ ಮೆರೆದವರು ಪಿಯೂಷ್!

ಅಮೆರಿಕಾದಲ್ಲಿ ಅತ್ಯುತ್ತಮ ಜಾಹೀರಾತುಗಳು, ಪುಸ್ತಕ ಮತ್ತು ವೀಡಿಯೋಗಳ ರೂಪದಲ್ಲಿ ಸಂಗ್ರಹವಾಗಿ ಸಿಗುತ್ತವೆ. ಆ ಪ್ರಯೋಗ ಭಾರತದಲ್ಲಿ ಇನ್ನೂ ಇದ್ದಂತಿಲ್ಲ. ಪಿಯೂಷ್ ಪಾಂಡೆ ಅವರ ಜಾಹೀರಾತುಗಳ ಸಂಗ್ರಹದ ಪುಸ್ತಕ ಮತ್ತು ವೀಡಿಯೋ ಮಾಡಿ ಜನರಿಗೆ ಉಣಬಡಿಸಿದರೆ ಅದುವೇ ಈ ಶ್ರೇಷ್ಠ 'ಜಾಹೀರಾತು ಭೀಮ'ನಿಗೆ ಕೊಡಬಹುದಾದ ನಿಜವಾದ ಪ್ರಶಸ್ತಿ ಮತ್ತು ಶ್ರದ್ಧಾಂಜಲಿ. ಅವರ ನಾಲ್ಕು ದಶಕಗಳ ಸೃಜನಶೀಲ ಬದುಕು 'ಜಾಹೀರಾತು ವಿಶ್ವವಿದ್ಯಾಲಯ'. ನಮ್ಮ ದೇಶದ ಜಾಹೀರಾತು ಜಗತ್ತನ್ನು ನಾಲ್ಕು ದಶಕಗಳ ಕಾಲ ಮುನ್ನಡೆಸಿದ ಪಾಂಡೆ, ಈಗ ಅಗಲಿದ್ದಾರೆ. ಪಿಯೂಷ್ ಪಾಂಡೆ ಮಂಡೆಗೆ ಪಿಯೂಷ್ ಪಾಂಡೆ ಹಂಡೆ ಮಾತ್ರ ಸಾಟಿ!

ರೀಲ್ಸ್ ಮಾಡಲು ತಂದೆ ತಾಯಿ ಒಪ್ಪುತ್ತಿಲ್ಲ, ಏನು ಮಾಡಲಿ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ನಿರ್ಮಲಾ ಸಣ್ಣಾಪುರ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಇಪ್ಪತ್ತೆಂಟು ವರ್ಷ ವಯಸ್ಸು. ನಾನು ಚೆನ್ನಾಗಿ ಡಾನ್ಸ್ ಮಾಡುತ್ತೇನೆ. ನನಗೆ ರೀಲ್ಸ್ ಮಾಡುವುದೆಂದರೆ ಇಷ್ಟ. ಆದರೆ ನನ್ನ ಮನೆಯಲ್ಲಿ ಅದಕ್ಕೆ ಯಾರದ್ದೂ ಬೆಂಬಲವಿಲ್ಲ. ಹೀಗಾಗಿ ನಾನು ನನ್ನ ರೀಲ್ಸ್ ಅಪ್ಲೋಡ್ ಮಾಡದೇ ಸುಮ್ಮನಿದ್ದೇನೆ. ನನ್ನ ಮೂವರು ಸ್ನೇಹಿತೆಯರು ರೀಲ್ಸ್ ಮಾಡಿ ಸಾಕಷ್ಟು ಹೆಸರು ಗಳಿಸಿದ್ದಾರೆ. ನಾನು ಅವರನ್ನು ಮೀರಿಸಬಲ್ಲೆ ಎಂದು ಅನಿಸುತ್ತಿದೆ. ನಾನು ನನ್ನ ತಂದೆ-ತಾಯಿ ಮತ್ತು ಅಣ್ಣಂದಿರ ಮನವೊಲಿಸುವುದು ಹೇಗೆ?**

– ನಿರ್ಮಲಾ ಅವರೇ, ನಿಮ್ಮ ಈ ಆಸಕ್ತಿ ಮತ್ತು ಪ್ರತಿಭೆಯ ಬಗ್ಗೆ ತಿಳಿದು ಸಂತೋಷವಾಯಿತು. ಈ ಸಣ್ಣ ವಯಸ್ಸಿನಲ್ಲಿ, ನಿಮ್ಮ ಸಾಮರ್ಥ್ಯದ ಮೇಲೆ ನಿಮಗೆ ನಂಬಿಕೆ ಇರುವುದು ಒಳ್ಳೆಯದೇ. ಡ್ಯಾನ್ಸ್ ಪ್ರತಿಭೆ ಮತ್ತು ರೀಲ್ಸ್ ಮಾಡುವ ಆಸಕ್ತಿ ಎರಡೂ ನಿಮ್ಮ ವೈಯಕ್ತಿಕ ಅಭಿವ್ಯಕ್ತಿಯ ಪ್ರಮುಖ ಭಾಗಗಳು. ಕುಟುಂಬದ ಬೆಂಬಲವಿಲ್ಲದ ಕಾರಣ ನಿಮ್ಮ ಆಸಕ್ತಿಯನ್ನು ಹಿಡಿದಿಟ್ಟುಕೊಂಡಿರುವುದು ಸಹಜ. ನಾನು ಕೆಲವು ಸಲಹೆಗಳನ್ನು ಸೂಚಿಸುತ್ತೇನೆ. ಅವು ನಿಮ್ಮ ತಂದೆ-ತಾಯಿ ಮತ್ತು ಅಣ್ಣಂದಿರ ಮನವೊಲಿಸಲು ಸಹಾಯಕವಾಗಬಹುದು.

ಮೊದಲು, ನಿಮ್ಮ ಕುಟುಂಬ ಏಕೆ ಬೆಂಬಲ ನೀಡುತ್ತಿಲ್ಲ ಎಂಬುದನ್ನು ನಿಖರವಾಗಿ ತಿಳಿದುಕೊಳ್ಳಿ. ಅವರ ಆಕ್ಷೇಪಣೆಗೋ ಕಾರಣಗಳಿರಬಹುದು. ಆನ್‌ಲೈನ್ ಜಗತ್ತಿನಲ್ಲಿ ಸುರಕ್ಷತೆ, ವೈಯಕ್ತಿಕ ಮಾಹಿತಿ ಸೋರಿಕೆ ಅಥವಾ ಅನಾಮಧೇಯ ಟೀಕೆ, ಟ್ರೋಲಿಂಗ್ ಬಗ್ಗೆ ಅವರಿಗೆ ಭಯ ಇರಬಹುದು. ಡ್ಯಾನ್ಸ್ ಮತ್ತು ರೀಲ್ಸ್ ಅನ್ನು ಗಂಭೀರ ವೃತ್ತಿಯೆಂದು ನೋಡದೇ, ಅದನ್ನು ತಮ್ಮ ಕುಟುಂಬದ 'ಗೌರವಕ್ಕೆ' ಧಕ್ಕೆ ತರುವಂಥ ಚಟುವಟಿಕೆ ಎಂದು ಭಾವಿಸಿರಬಹುದು. ಇದೊಂದು ಕೇವಲ ಕಾಲಹರಣ ಮತ್ತು ನಿಮ್ಮ ಮುಖ್ಯ ಜೀವನೋಪಾಯಕ್ಕೆ ಇದು ಅಡ್ಡಿಯಾಗುತ್ತದೆ ಎಂದು ಅವರು ಭಾವಿಸಿರಬಹುದು. ಇದರ ಹಿಂದೆ ಬಿದ್ದು ನೀವು ಹೆಚ್ಚು ಸಮಯ ವ್ಯರ್ಥ ಮಾಡಬಹುದು ಮತ್ತು ನಿಮ್ಮ ಇತರ ಜವಾಬ್ದಾರಿಗಳಿಗೆ ತೊಂದರೆಯಾಗಬಹುದು ಎಂಬ ಆತಂಕ ಅವರದ್ದಾಗಿರಬಹುದು.

ಹಾಗಾದರೆ ಅವರ ಮನವೊಲಿಸುವ ಕಾರ್ಯತಂತ್ರಗಳೇನು? ಯಾವುದೇ ಪೂರ್ವ ಸಿದ್ಧತೆ ಇಲ್ಲದೇ ಮಾತನಾಡಲು ಹೋಗಬೇಡಿ. ಇದೊಂದು ಕೇವಲ ಮೋಜು ಅಲ್ಲ, ಬದಲಿಗೆ ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಒಂದು ಗಂಭೀರ ವೇದಿಕೆ ಎಂದು ಅವರಿಗೆ ಮನವರಿಕೆ ಮಾಡಿ. ನೀವು ಯಾವ ರೀತಿಯ ಡ್ಯಾನ್ಸ್ ಮಾಡುತ್ತೀರಿ, ಯಾವ ರೀತಿಯ ಸಂಗೀತ ಬಳಸುತ್ತೀರಿ ಮತ್ತು ನಿಮ್ಮ ರೀಲ್‌ಗಳು ಎಷ್ಟು ಸಕಾರಾತ್ಮಕವಾಗಿರುತ್ತವೆ ಇಂದು ಮನವರಿಕೆ ಮಾಡಿಕೊಡಿ.

ನಿಮ್ಮ ಸ್ನೇಹಿತೆಯರು ಹೇಗೆ ಯಶಸ್ವಿಯಾದರು ಮತ್ತು ಅವರು ಆರ್ಥಿಕವಾಗಿ ಅಥವಾ ವೃತ್ತಿಪರವಾಗಿ ಹೇಗೆ ಲಾಭ ಪಡೆದರು ಎಂಬುದಕ್ಕೆ ಸ್ಪಷ್ಟ ಉದಾಹರಣೆಗಳನ್ನು ನೀಡಿ. 'ನಾನು ಅವರನ್ನು ಮೀರಿಸಬಲ್ಲೆ' ಎಂಬ ನಿಮ್ಮ ವಿಶ್ವಾಸವನ್ನು, ಯಶಸ್ವಿ ರೀಲ್‌ಗಳನ್ನು ತೋರಿಸುವ ಮೂಲಕ ಸಾಬೀತುಪಡಿಸಿ. 'ರೀಲ್ಸ್‌ಗಾಗಿ ನಾನು ನನ್ನ ಕೆಲಸ/ಇತರ ಜವಾಬ್ದಾರಿಗಳನ್ನು ನಿರ್ಲಕ್ಷಿಸುವುದಿಲ್ಲ. ಇದಕ್ಕಾಗಿ ನಾನು ದಿನದಲ್ಲಿ ಕೇವಲ ಒಂದು ಗಂಟೆಯನ್ನಷ್ಟೇ ಮೀಸಲಿಡುತ್ತೇನೆ' ಎಂದು ಸ್ಪಷ್ಟವಾಗಿ ಭರವಸೆ ನೀಡಿ. ನಿಮ್ಮ ಕುಟುಂಬದ ಮುಖ್ಯ ಆತಂಕಗಳಲ್ಲಿ ಒಂದಾದ ಸುರಕ್ಷತೆಯ ಕುರಿತು ಅವರೊಂದಿಗೆ ಮಾತುಕತೆ ನಡೆಸಿ ಮತ್ತು ಅದನ್ನು ಹೇಗೆ ನಿಭಾಯಿಸುತ್ತೀರಿ ಎಂದು ವಿವರಿಸಿ.

'ನಾನು ವೈಯಕ್ತಿಕ ಮಾಹಿತಿ, ಮನೆ ವಿಳಾಸ ಅಥವಾ ಕುಟುಂಬದವರನ್ನು ತೋರಿಸುವುದಿಲ್ಲ. ನನ್ನ ಎಲ್ಲ ವೀಡಿಯೋಗಳು ಸುರಕ್ಷಿತ ಸೆಟ್ಟಿಂಗ್‌ಗಳಲ್ಲಿರುತ್ತವೆ' ಎಂಬುದನ್ನು ಖಾತ್ರಿಪಡಿಸಿ. ನೀವು ಡ್ಯಾನ್ಸ್ ರೀಲ್‌ಗಳನ್ನು ಮನೆಯ ಹೊರಗೆ ಅಥವಾ ಕೇವಲ ಒಂದು ಕೋಣೆಯಲ್ಲಿ ಮಾತ್ರ ಮಾಡುತ್ತೀರಿ, ಇದರಿಂದ ಇತರ ಸದಸ್ಯರ ಗೌಪ್ಯತೆ ಮತ್ತು ಶಾಂತಿಗೆ ಭಂಗವಾಗುವುದಿಲ್ಲ ಎಂದು ವಿವರಿಸಿ. ವೀಡಿಯೋದಲ್ಲಿ ಯಾವ ರೀತಿಯ ಉಡುಪು ಇರುತ್ತದೆ ಅಥವಾ ಯಾವ ವಿಷಯ ಇರುತ್ತದೆ ಎಂಬುದರ ಬಗ್ಗೆ ಅವರೊಂದಿಗೆ ಚರ್ಚಿಸಿ, ಅವರಿಗೆ ಆರಾಮದಾಯಕ ಎನಿಸುವ ಮಿತಿಯನ್ನು ಒಪ್ಪಿಕೊಳ್ಳಿ.

ಅಣ್ಣಂದಿರು ಸಾಮಾನ್ಯವಾಗಿ ತಂದೆ-ತಾಯಿಯರ ನಿರ್ಧಾರಗಳ ಮೇಲೆ ಪ್ರಭಾವ ಬೀರಬಲ್ಲರು. ಅವರೊಂದಿಗೆ ಪ್ರತ್ಯೇಕವಾಗಿ ಕುಳಿತು, 'ಇದು ನನ್ನ ಬಹುದಿನದ ಕನಸು ಮತ್ತು ನನ್ನ ಪ್ರತಿಭೆ. ನನಗಿದನ್ನು ಸಾಧಿಸಲು ನಿಮ್ಮ ಬೆಂಬಲ ಬೇಕು. ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ' ಎಂದು ಹೇಳಿ. ಆನ್‌ಲೈನ್‌ನಲ್ಲಿ ಹೆಸರು ಮತ್ತು ಬ್ರ್ಯಾಂಡಿಂಗ್‌ನ ಮಹತ್ವದ ಕುರಿತು ಅವರಿಗೆ ಅರಿವು ಮೂಡಿಸಿ. ರೀಲ್ಸ್ ಕೇವಲ ಮನರಂಜನೆಯಲ್ಲ, ಬದಲಿಗೆ ಭವಿಷ್ಯದಲ್ಲಿ ಹೇಗೆ ಬ್ರ್ಯಾಂಡ್ ಸಹಯೋಗಗಳು ಅಥವಾ ಆರ್ಥಿಕ ಅವಕಾಶಗಳನ್ನು ತರಬಹುದು ಎಂಬುದನ್ನು ವಿವರಿಸಿ.

ಸಣ್ಣ ಹೆಜ್ಜೆಗಳಿಂದ ಪ್ರಾರಂಭಿಸಿ. ಒಂದೇ ದಿನದಲ್ಲಿ ದೊಡ್ಡ ಮಟ್ಟದ ಬೆಂಬಲವನ್ನು ನಿರೀಕ್ಷಿಸಬೇಡಿ. 'ದಯವಿಟ್ಟು ನನಗೆ ಒಂದು ತಿಂಗಳು ಅವಕಾಶ ಕೊಡಿ. ನಾನು ಒಂದೆರಡು ವೀಡಿಯೋಗಳನ್ನು ಮಾಡಿ ಕೇವಲ ನಿಮಗೆ ತೋರಿಸುತ್ತೇನೆ. ಆನಂತರ ಅದನ್ನು ಅಪ್‌ಲೋಡ್ ಮಾಡಬಹುದೇ ಎಂದು ನೀವೇ ನಿರ್ಧರಿಸಿ' ಎಂದು ಕೇಳಿ. ನಿಮ್ಮ ವೀಡಿಯೋಗಳನ್ನು ಕೇವಲ ಆಯ್ದ ಸ್ನೇಹಿತೆಯರಿಗೆ ಮಾತ್ರ ಮೊದಲು ಅಪ್‌ಲೋಡ್ ಮಾಡಿ, ಸಕಾರಾತ್ಮಕ ಪ್ರತಿಕ್ರಿಯೆ ಬಂದ ನಂತರ ಅದನ್ನು ನಿಮ್ಮ ಕುಟುಂಬಕ್ಕೆ ತೋರಿಸಿ. ಪ್ರತಿಭೆಯ ಜತೆಗೆ ನಿಮ್ಮ ಬದ್ಧತೆ ಮತ್ತು ಜವಾಬ್ದಾರಿಯನ್ನು ತೋರಿಸಿದಾಗ, ನಿಮ್ಮ ಕುಟುಂಬ ಕ್ರಮೇಣ ನಿಮ್ಮನ್ನು ಬೆಂಬಲಿಸುತ್ತದೆ. ನಿಮಗೆ ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇದೆ. ಈ ವಿಶ್ವಾಸ ಮತ್ತು ತಾಳ್ಮೆಯೊಂದಿಗೆ ಕುಟುಂಬವನ್ನು ಎದುರಿಸಿದರೆ, ನೀವು ಖಂಡಿತವಾಗಿಯೂ ಅವರ ಮನವೊಲಿಸಿ ಯಶಸ್ಸು ಗಳಿಸಬಹುದು.

ರಾಜಶೇಖರ ಸಿಂದಗಿ, (ಇಮೇಲ್ ಮೂಲಕ)

- **ಸಂಪಾದಕರೇ, ನಾನು ಬರೆದ ಲೇಖನಗಳನ್ನು ಕನ್ನಡದ ಎಲ್ಲ ಪತ್ರಿಕೆಗಳು ಪ್ರಕಟಿಸುತ್ತಿದ್ದವು. ಆದರೆ ಕಳೆದ ಹತ್ತು ತಿಂಗಳಿನಿಂದ ಯಾವ ಪತ್ರಿಕೆಯೂ ಪ್ರಕಟಿಸುತ್ತಿಲ್ಲ. ನನ್ನ ವಿರುದ್ಧ ಎಲ್ಲಾ ಪತ್ರಿಕಾ ಸಂಪಾದಕರು ಮುಗಿಬಿದ್ದಿರಬಹುದೇ? ನನ್ನ ಬಗ್ಗೆ ಯಾರಾದರೂ ಪತ್ರಿಕೆಗಳ ಸಂಪಾದಕರಿಗೆ ಚಾಡಿ ಹೇಳಿರಬಹುದಾ? ಮೊದಲಿನಂತೆ ನನ್ನ ಲೇಖನ ಪ್ರಕಟವಾಗಲು ಏನು ಮಾಡಬೇಕು?**

– ರಾಜಶೇಖರ ಅವರೇ, ನಿಮ್ಮ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನೀವು ಬರೆದ ಲೇಖನಗಳು ಈ ಹಿಂದೆ ನಿಯಮಿತವಾಗಿ ಪ್ರಕಟವಾಗುತ್ತಿದ್ದು, ಈಗ ಹತ್ತು ತಿಂಗಳಿಂದ ಪ್ರಕಟವಾಗದಿರುವಾಗ ಈ ರೀತಿ ಆಲೋಚನೆಗಳು ಬರುವುದು ಸಹಜ. ಆದರೆ, ನಿಮ್ಮ ವಿರುದ್ಧ ಪತ್ರಿಕಾ ಸಂಪಾದಕರು 'ಮುಗಿಬೀಳುವ' ಅಥವಾ ಯಾರೋ ನಿಮ್ಮ ಬಗ್ಗೆ 'ಚಾಡಿ ಹೇಳಿರುವ' ಸಾಧ್ಯತೆಗಳು ಕಡಿಮೆ. ಪತ್ರಿಕೆಗಳು ಸಾಮಾನ್ಯವಾಗಿ ವೈಯಕ್ತಿಕ ದ್ವೇಷ ಅಥವಾ ಪೂರ್ವಗ್ರಹಕ್ಕಿಂತ ಹೆಚ್ಚಾಗಿ ಸಂಪಾದಕೀಯ ಅಗತ್ಯ, ಲೇಖನದ ಪ್ರಸ್ತುತತೆ, ಬರಹದ ಶೈಲಿ, ನಿರೂಪಣೆ, ಓದುಗರ ಅಭಿರುಚಿ ಮತ್ತು ಮಾರುಕಟ್ಟೆ ಬೇಡಿಕೆಯ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ.

ಯಾವುದೇ ಬಾಹ್ಯ ಕಾರಣಗಳ ಬಗ್ಗೆ ಯೋಚಿಸುವ ಮೊದಲು, ನಿಮ್ಮ ಲೇಖನಗಳ ಗುಣಮಟ್ಟ ಮತ್ತು ವಿಷಯದ ಬಗ್ಗೆ ಆಂತರಿಕ ವಿಮರ್ಶೆ ಮಾಡಿಕೊಳ್ಳಿ. ಕಳೆದ ಹತ್ತು ತಿಂಗಳಲ್ಲಿ ನಿಮ್ಮ ಲೇಖನಗಳ ವಿಷಯಗಳು ಪ್ರಸ್ತುತ ಟ್ರೆಂಡ್‌ಗಳು ಮತ್ತು ಸುದ್ದಿಗೆ ಅನುಗುಣವಾಗಿವೆಯೇ? ಸಂಪಾದಕರು ಯಾವಾಗಲೂ ಓದುಗರಿಗೆ ತಕ್ಷಣ ಆಸಕ್ತಿ ಹುಟ್ಟಿಸುವ ತಾಜಾ ವಿಷಯಗಳನ್ನು ಹುಡುಕುತ್ತಾರೆ. ನಿಮ್ಮ ಬರಹದ ಶೈಲಿ ಹಳೆಯದಾಗಿದೆಯೇ? ಪತ್ರಿಕೆಗಳು ಈಗ ಹೆಚ್ಚು ಸಂಕ್ಷಿಪ್ತ, ವಿಶ್ಲೇಷಣಾತ್ಮಕ ಅಥವಾ ವೈಯಕ್ತಿಕ ಸ್ಪರ್ಶವಿರುವ ಲೇಖನಗಳನ್ನು ಬಯಸುತ್ತವೆಯೇ ಎಂಬ ಬಗ್ಗೆ ಗಮನಹರಿಸಿ. ಪತ್ರಿಕೆಗಳ ಸಂಪಾದಕೀಯ ನೀತಿ ಅಥವಾ ಅವರ ಓದುಗರ ವರ್ಗ ಬದಲಾಗಿದೆಯೇ? ನೀವು ಅದೇ ಹಳೆಯ ಪತ್ರಿಕೆಗಳಿಗೆ ಕಳುಹಿಸುತ್ತಿದ್ದೀರಾ ಅಥವಾ ಹೊಸ ವಿಭಾಗಗಳನ್ನು ಗುರಿಯಾಗಿಸುತ್ತಿದ್ದೀರಾ?

ನಿಮ್ಮ ಲೇಖನಗಳು ಮತ್ತೆ ಪ್ರಕಟವಾಗಲು ಏನು ಮಾಡಬೇಕು? ಪ್ರಚಲಿತ ವಿದ್ಯಮಾನಗಳು, ವಿವಾದಗಳು, ಹೊಸ ತಂತ್ರಜ್ಞಾನ ಅಥವಾ ಸಮಾಜದ ಬಗೆಗಿನ ಅನನ್ಯ ಲೇಖನ, ವಿಶ್ಲೇಷಣೆಗಳನ್ನು ಬರೆಯಿರಿ. ಉದಾಹರಣೆಗೆ, ರಾಜಕೀಯಕ್ಕಿಂತ ಆರೋಗ್ಯ, ಪರಿಸರ, ಸಾಮಾಜಿಕ ಜಾಲತಾಣ, ಡಿಜಿಟಲ್ ಟ್ರೆಂಡ್‌ಗಳ ಮೇಲೆ ಹೆಚ್ಚು ಗಮನ ಹರಿಸಿ. ದೀರ್ಘ ಲೇಖನಗಳ ಬದಲಿಗೆ, ಓದುಗರು ಸುಲಭವಾಗಿ ಓದಬಹುದಾದ ತ್ವರಿತ ಓದುವ ಸ್ವರೂಪಕ್ಕೆ ಬದಲಿಸಿ. ಪತ್ರಿಕೆಗಳು ಚಿಕ್ಕದಾದ ಮತ್ತು ಚುರುಕಾದ ಅಂಕಣಗಳನ್ನು ಹೆಚ್ಚು ಇಷ್ಟಪಡುತ್ತವೆ. ನೀವು ಕಳುಹಿಸುವ ಲೇಖನಗಳು ಆ ಪತ್ರಿಕೆಯ ಯಾವ ನಿರ್ದಿಷ್ಟ ವಿಭಾಗಕ್ಕೆ (ಉದಾಹರಣೆಗೆ, ಸಂಪಾದಕೀಯ ಪುಟ, ಸಾಪ್ತಾಹಿಕ ಪುರವಣಿ ಅಥವಾ ಓದುಗರ ವಿಭಾಗ) ಸೂಕ್ತವಾಗಿವೆ ಎಂಬುದನ್ನು ಮೊದಲೇ ನಿರ್ಧರಿಸಿ ಕಳುಹಿಸಿ.

ನಿಮ್ಮ ಸಮಸ್ಯೆಯನ್ನು ನಿವಾರಿಸಲು ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ ಸಂಪಾದಕರೊಂದಿಗೆ ನೇರ ಸಂವಹನ. ನೀವು ಹಿಂದೆ ಲೇಖನ ಕಳುಹಿಸುತ್ತಿದ್ದ ಪತ್ರಿಕೆಯ ಸಂಪಾದಕರಿಗಾಗಲೀ ಅಥವಾ ವಿಭಾಗದ ಮುಖ್ಯಸ್ಥರಿಗಾಗಲೀ ಒಂದು ಸೌಜನ್ಯದ ಇ-ಮೇಲ್ ಅಥವಾ ಕರೆ ಮಾಡಿ. 'ನನ್ನ ಇತ್ತೀಚಿನ ಲೇಖನಗಳು ಪ್ರಕಟವಾಗದಿರಲು ನಿರ್ದಿಷ್ಟ ಸಂಪಾದಕೀಯ ಕಾರಣಗಳಿವೆಯೇ? ನನ್ನ ಬರಹವನ್ನು ಸುಧಾರಿಸಲು ಅಥವಾ ಯಾವ ರೀತಿಯ ವಿಷಯಗಳನ್ನು ಕಳುಹಿಸಿದರೆ ಉತ್ತಮ ಎಂದು ಸಲಹೆ ನೀಡಬಹುದೇ?' ಎಂದು ವಿನಯದಿಂದ ಕೇಳಿ. ಅವರು ತಪ್ಪು ತಿಳಿದುಕೊಳ್ಳುವುದಿಲ್ಲ. ನೀವು ಯಾವುದೇ ಕಾರಣಕ್ಕೂ ವೈಯಕ್ತಿಕ ದ್ವೇಷದ ಬಗ್ಗೆ ಸುಳಿವು ನೀಡದೇ ಸಂಪೂರ್ಣವಾಗಿ ವೃತ್ತಿಪರ ನೆಲೆಯಲ್ಲಿ ಮಾತನಾಡಿ. ಅವರು ನೀಡುವ ಸಲಹೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿ.

ಪತ್ರಿಕೆಗಳಿಗಾಗಿ ಕಾಯುವ ಬದಲು, ನಿಮ್ಮ ಬರಹಗಳಿಗೆ ಬೇರೆ ವಾಚಕರನ್ನೂ ಕಂಡುಕೊಳ್ಳಿ. ನಿಮ್ಮದೇ ಆದ ಬ್ಲಾಗ್, ವೆಬ್‌ಸೈಟ್ ಅಥವಾ ಜನಪ್ರಿಯ ಕನ್ನಡ ಸುದ್ದಿ/ಮಾಹಿತಿ ಪೋರ್ಟಲ್‌ಗಳಿಗೆ ನಿಮ್ಮ ಲೇಖನಗಳನ್ನು ಕಳುಹಿಸಿ. ಫೇಸ್‌ಬುಕ್, ಎಕ್ಸ್ (ಟ್ವಿಟರ್) ಅಥವಾ ಲಿಂಕ್ಡ್‌ಇನ್‌ನಂಥ ವೇದಿಕೆಗಳಲ್ಲಿ ನಿಮ್ಮ ಲೇಖನಗಳನ್ನು ಹಂಚಿಕೊಳ್ಳಿ. ಆನ್‌ಲೈನ್‌ನಲ್ಲಿ ಜನಪ್ರಿಯತೆ ಗಳಿಸಿದರೆ, ಪತ್ರಿಕೆಗಳು ತಾವಾಗಿಯೇ ನಿಮ್ಮ ಲೇಖನಗಳನ್ನು ಪ್ರಕಟಿಸಲು ಆಸಕ್ತಿ ತೋರಿಸಬಹುದು. ವೈಯಕ್ತಿಕ ಟೀಕೆಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಬದಲು, ನಿಮ್ಮ ಲೇಖನಗಳ ವಿಷಯ ಮತ್ತು ಶೈಲಿಯನ್ನು ಪ್ರಸ್ತುತ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ನವೀಕರಿಸುವುದರ ಮೇಲೆ ಗಮನ ಹರಿಸಿ.

ಕೆ.ಅನಿಲ್, ಧಾರವಾಡ

- **ಭಟ್ರೇ, ನನಗೆ ಮದ್ಯದ (ಲಿಕ್ಕರ್) ಬಾಟಲಿಗಳನ್ನು ಸಂಗ್ರಹಿಸುವ ಹವ್ಯಾಸ. ಆದರೆ ನನಗೆ ಕುಡಿಯುವ ಅಭ್ಯಾಸ ಇಲ್ಲವೇ ಇಲ್ಲ. ಆದರೆ ನನ್ನ ತಂದೆ-ತಾಯಿಗೆ ನನ್ನ ಈ ಹವ್ಯಾಸದ ಬಗ್ಗೆ ಸ್ವಲ್ಪವೂ ಗೌರವವಿಲ್ಲ. ನಾನು ಹಾಸ್ಟೆಲ್‌ನಲ್ಲಿದ್ದಾಗ, ಕೆಲವು ಬಾಟಲಿಗಳನ್ನು ಸಂಗ್ರಹಿಸಿದ್ದೆ. ನಂತರ ಅವನ್ನು ಮನೆಗೆ ತಂದಾಗ ನನ್ನ ತಂದೆಯವರು ಅವನ್ನೆಲ್ಲ ಒಡೆದು ಹಾಕುತ್ತೇನೆ ಎಂದು ಗದರಿದರು. ನಾನು ಅವರಿಗೆ ಏನೇ ಹೇಳಿದರೂ ಅವರು ಒಪ್ಪುತ್ತಿಲ್ಲ. ಆದರೆ ನನಗೆ ಆ ಬಾಟಲಿಗಳನ್ನು ಕೊಡುವ ಮನಸ್ಸಿಲ್ಲ. ಮನೆಯಲ್ಲಿ ಪ್ರದರ್ಶಿಸಲು ಬಿಡುತ್ತಿಲ್ಲ. ನಾನು ಏನು ಮಾಡಲಿ?**

– ಅನಿಲ್ ಅವರೇ, ನಿಮ್ಮ ಈ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಕುಡಿಯುವ ಅಭ್ಯಾಸ ಇಲ್ಲದಿದ್ದರೂ ಮದ್ಯದ ಬಾಟಲಿಗಳನ್ನು ಸಂಗ್ರಹಿಸುವ ನಿಮ್ಮ ಹವ್ಯಾಸವು ವಿಶಿಷ್ಟವಾಗಿದೆ. ಅದು ನಿಮ್ಮ ವೈಯಕ್ತಿಕ ಆಸಕ್ತಿ. ಆದರೆ, ಇದು ನಿಮ್ಮ ಪೋಷಕರಿಗೆ ಗೊಂದಲ ಮತ್ತು ಅಸಮಾಧಾನವನ್ನು ಉಂಟುಮಾಡಿರುವುದು ಸಹಜ.

ನಿಮ್ಮ ಹವ್ಯಾಸವನ್ನು ಉಳಿಸಿಕೊಳ್ಳಲು ಮತ್ತು ಮನೆಯಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳಲು ಕೆಲವು ಮಾರ್ಗೋಪಾಯಗಳನ್ನು ಸೂಚಿಸಬಹುದು. ಪೋಷಕರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಿ. ಪೋಷಕರು ನಿಮ್ಮ ಹವ್ಯಾಸವನ್ನು ಗೌರವಿಸದಿರಲು ಈ ಕಾರಣಗಳು ಇರಬಹುದು. ಭಾರತೀಯ ಸಮಾಜದಲ್ಲಿ ಮದ್ಯ ಮತ್ತು ಮದ್ಯದ ಬಾಟಲಿಗಳು ನಕಾರಾತ್ಮಕ ವಿಚಾರಗಳೊಂದಿಗೆ ಸಂಬಂಧ ಹೊಂದಿವೆ. ಇದನ್ನು ಮನೆಯಲ್ಲಿ ಇಡುವುದು ಅವರ ಸಾಮಾಜಿಕ ಪ್ರತಿಷ್ಠೆಗೆ ಧಕ್ಕೆಯಾಗಬಹುದು ಎಂದು ಅವರು ಭಾವಿಸಿರಬಹುದು. ನೀವು 'ಕುಡಿಯುವುದಿಲ್ಲ' ಎಂದು ಹೇಳಿದರೂ, ಸಂಗ್ರಹಣೆಯ ಮೂಲಕ ನಿಮಗೆ ಮದ್ಯದ ಬಗ್ಗೆ ಆಸಕ್ತಿ ಬೆಳೆಯಬಹುದು ಅಥವಾ ನೀವು ರಹಸ್ಯವಾಗಿ ಕುಡಿಯುತ್ತಿರಬಹುದು ಎಂಬ ಭಯ ಅವರಿಗೆ ಇರಬಹುದು. ಇದು ಅಸಹಜ ಅಥವಾ ಅಸಾಂಪ್ರದಾಯಿಕ ಹವ್ಯಾಸ ಎಂದು ಅವರು ಭಾವಿಸಿರಬಹುದು. ಈ ಸಮಸ್ಯೆಗೆ ನೇರ ಸಂಘರ್ಷದ ಬದಲು, ಹೊಂದಾಣಿಕೆಯ ಮಾರ್ಗವನ್ನು ಅನುಸರಿಸುವುದು ಉತ್ತಮ. ತಾತ್ಕಾಲಿಕವಾಗಿ ಬಾಟಲಿಗಳನ್ನು ಬೇರೆಡೆ ಇಡಿ. ನಿಮ್ಮ ಪೋಷಕರ ಆಜ್ಞೆ ಮತ್ತು ಕೋಪವನ್ನು ಶಾಂತಗೊಳಿಸಲು ಇದು ಅತ್ಯುತ್ತಮ ಮಾರ್ಗ. ಬಾಟಲಿಗಳನ್ನು ತಾತ್ಕಾಲಿಕವಾಗಿ ಮನೆಯಲ್ಲಿ ಎಲ್ಲರಿಗೂ ಕಾಣದ ಸ್ಥಳದಲ್ಲಿ (ಉದಾಹರಣೆಗೆ, ನಿಮ್ಮ ಕ್ಲೋಸೆಟ್‌ನ ಹಿಂಭಾಗದ ಕಪಾಟು, ಹಾಸಿಗೆಯ ಕೆಳಗಿನ ಡ್ರಾಯರ್‌ಗಳು ಅಥವಾ ಬೀಗ ಹಾಕಿದ ಪೆಟ್ಟಿಗೆಯಲ್ಲಿ) ಸುರಕ್ಷಿತವಾಗಿ ಇರಿಸಿ. ಒಂದು ವೇಳೆ ಮನೆಯಲ್ಲಿ ಇಡುವುದಕ್ಕೆ ಸಾಧ್ಯವಾಗದಿದ್ದರೆ, ವಿಶ್ವಾಸಾರ್ಹ ಸ್ನೇಹಿತರ ಮನೆಯಲ್ಲಿ ಇಡಬಹುದು. ಇದು ನಿಮ್ಮ ಸಂಗ್ರಹಕ್ಕೆ ಸಂಪೂರ್ಣ ಸುರಕ್ಷತೆಯನ್ನು ನೀಡುತ್ತದೆ.

ಕೋಪ ತಣ್ಣಗಾದ ಮೇಲೆ, ಒಂದೆರಡು ದಿನಗಳ ನಂತರ, ನಿಮ್ಮ ಪೋಷಕರೊಂದಿಗೆ ಶಾಂತವಾಗಿ ಮಾತನಾಡಿ, ನಿಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿ. 'ಇದು ಕೇವಲ ಮದ್ಯದ ಬಾಟಲಿಯಲ್ಲ, ಆದರೆ ಇದರ ವಿಶಿಷ್ಟ ವಿನ್ಯಾಸ, ಅದರ ಲೇಬಲ್‌ನ ಕಲೆ ಅಥವಾ ಅದು ಪ್ರತಿನಿಧಿಸುವ ಒಂದು ನಿರ್ದಿಷ್ಟ ಕಥೆಗಾಗಿ ನಾನು ಇವನ್ನು ಸಂಗ್ರಹಿಸುತ್ತಿದ್ದೇನೆ. ಇದು ನನಗೆ ಸ್ಟ್ಯಾಂಪ್ ಸಂಗ್ರಹಣೆ, ಅಥವಾ ನಾಣ್ಯಗಳ ಸಂಗ್ರಹದಂತೆ ಒಂದು ಹವ್ಯಾಸ' ಎಂದು ವಿವರಿಸಿ. 'ನಾನು ಎಂದಿಗೂ ಕುಡಿಯುವುದಿಲ್ಲ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ನಾನು ಕುಡಿಯುವುದನ್ನು ನೀವು ನೋಡಿದರೆ, ಈ ಎಲ್ಲ ಬಾಟಲಿಗಳನ್ನು ಒಡೆದು ಹಾಕಬಹುದು. ಇದು ಕೇವಲ ಒಂದು ಹವ್ಯಾಸದ ಸಂಗ್ರಹ, ಕೆಟ್ಟ ಅಭ್ಯಾಸವಲ್ಲ' ಎಂದು ಖಚಿತಪಡಿಸಿ. 'ನನಗೆ 28 ವರ್ಷವಾಗಿದೆ ಮತ್ತು ನನ್ನ ಆಸಕ್ತಿಗಳು ಹಾಗೂ ಮಿತಿಗಳ ಬಗ್ಗೆ ನನಗೆ ಅರಿವಿದೆ. ಈ ವಿಷಯದಲ್ಲಿ ನನ್ನ ಮೇಲೆ ನಂಬಿಕೆ ಇಡಿ' ಎಂದು ಪ್ರಬುದ್ಧತೆಯಿಂದ ಮಾತನಾಡಿ.

ಒಂದು ವೇಳೆ ಪೋಷಕರು ಸಂಪೂರ್ಣ ಬಾಟಲಿಗಳನ್ನು ಮನೆಯಲ್ಲಿ ಇಡುವುದಕ್ಕೆ ಅವಕಾಶ ನೀಡದಿದ್ದರೆ, ಭಾಗಶಃ ಪರಿಹಾರಕ್ಕೆ ಪ್ರಯತ್ನಿಸಿ. ಪ್ರತಿ ಬಾಟಲಿಯಿಂದ ಅದರ ಸುಂದರವಾದ ಲೇಬಲ್ ಅನ್ನು ಎಚ್ಚರಿಕೆಯಿಂದ ತೆಗೆದು, ಅದನ್ನು ಒಂದು ಆಲ್ಬಮ್‌ನಲ್ಲಿ ಸಂಗ್ರಹಿಸಿ. ಆಗ ಬಾಟಲಿಗಳನ್ನು ಒಡೆದರೂ, ನಿಮ್ಮ ಸಂಗ್ರಹದ ಕಲಾತ್ಮಕ ಭಾಗ ಉಳಿಯುತ್ತದೆ. ನೀವು ಪ್ರದರ್ಶಿಸಲು ಬಯಸಿದರೆ, ಅತ್ಯಂತ ವಿಶಿಷ್ಟವಾದ ಒಂದು ಅಥವಾ ಎರಡು ಬಾಟಲಿಗಳನ್ನು ಮಾತ್ರ ತೆಗೆದುಕೊಂಡು, ಅದನ್ನು ಮದ್ಯದ ಬಾಟಲಿ ಎಂದು ಗೊತ್ತಾಗದ ರೀತಿಯಲ್ಲಿ ಅಲಂಕಾರಿಕ ವಸ್ತುಗಳ ನಡುವೆ ಇರಿಸಿ.

ನೆನಪಿಡಿ, ಹಿರಿಯರ ಮನವೊಲಿಸಲು ಸಮಯ ಬೇಕಾಗುತ್ತದೆ. ತಾಳ್ಮೆಯಿಂದ ಇರಿ ಮತ್ತು ಅವರ ಭಯಗಳನ್ನು ಹೋಗಲಾಡಿಸಲು ನಿರಂತರವಾಗಿ ವೃತ್ತಿಪರ ಹಾಗೂ ಜವಾಬ್ದಾರಿಯುತ ವರ್ತನೆಯನ್ನು ಪ್ರದರ್ಶಿಸಿ. ನಿಮ್ಮ ಹವ್ಯಾಸ ಗೌಪ್ಯವಾಗಿದ್ದರೂ ಅದನ್ನು ಉಳಿಸಿಕೊಳ್ಳಲು ಈ ಎಲ್ಲ ಪರಿಹಾರಗಳು ನಿಮಗೆ ಸಹಾಯ ಮಾಡಬಹುದು.

ಜಿ.ಕೆ.ಶ್ರೀನಿಧಿ, ಶಿವಮೊಗ್ಗ

- **ಸಂಪಾದಕರೇ, ನನಗೆ ಜೋಕ್ ಪುಸ್ತಕಗಳೆಂದರೆ ಬಹಳ ಇಷ್ಟ. ನಾನು ಇಲ್ಲಿ ತನಕ ಹೆಚ್ಚಾಗಿ ಓದಿದ್ದರೆ ಆ ಪುಸ್ತಕಗಳೇ. ನನಗೆ ಅವು ಬಹಳ ಖುಷಿ ಕೊಡುತ್ತವೆ. ಆದರೆ ಕತೆ, ಕಾದಂಬರಿ, ವೈಚಾರಿಕ ಪುಸ್ತಕಗಳು ನನಗೆ ಬೋರು ಹೊಡೆಸುತ್ತವೆ. ಇತ್ತೀಚೆಗೆ ನನ್ನ ಸ್ನೇಹಿತನೊಬ್ಬ, 'ಜೋಕ್ ಪುಸ್ತಕಗಳನ್ನು ಹೆಚ್ಚಾಗಿ ಓದುವುದು ಒಳ್ಳೆಯ ಅಭಿರುಚಿ ಅಲ್ಲ. ನೀನು ಸಾಹಿತ್ಯಕ ಕೃತಿಗಳನ್ನು ಓದಬೇಕು' ಎಂದು ಹೇಳಿದ. ಅಂದಿನಿಂದ ನನ್ನ ಮನಸ್ಸಿನಲ್ಲಿ ಈ ವಿಷಯ ಕುರಿತು ತಾಕಲಾಟ ಆರಂಭವಾಗಿದೆ. ಜೋಕ್ ಪುಸ್ತಕ ಓದುವುದು ಒಳ್ಳೆಯ ಅಭಿರುಚಿ ಅಲ್ಲವಾ? ದಯವಿಟ್ಟು ತಿಳಿಸಿ.**

– ಶ್ರೀನಿಧಿ ಅವರೇ, ನಿಮ್ಮ ಮನಸ್ಸಿನಲ್ಲಿ ಉಂಟಾಗಿರುವ ಗೊಂದಲ ವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಇಂಥ ಸಂದರ್ಭಗಳಲ್ಲಿ ಗೊಂದಲವಾಗುವುದು ಸಹಜ. ಜೋಕ್ ಪುಸ್ತಕಗಳನ್ನು ಓದುವುದು ಯಾವುದೇ ಕಾರಣಕ್ಕೂ ಕೆಟ್ಟ ಅಭಿರುಚಿ ಅಲ್ಲ. ವಾಸ್ತವವಾಗಿ, ಓದುವಿಕೆಯ ಉದ್ದೇಶದ ಬಗ್ಗೆ ನಿಮ್ಮ ಸ್ನೇಹಿತರ ಹೇಳಿಕೆ ತಪ್ಪು ಕಲ್ಪನೆಯನ್ನು ಆಧರಿಸಿದೆ. ಈ ವಿಷಯವನ್ನು ಇನ್ನಷ್ಟು ಸ್ಪಷ್ಟಪಡಿಸ ಬೇಕು. ಓದುವಿಕೆಯ ಪ್ರಾಥಮಿಕ ಉದ್ದೇಶವೆಂದರೆ, ವೈಯಕ್ತಿಕ ಸಂತೋಷ ಮತ್ತು ಮನರಂಜನೆ. ಜೋಕ್ ಪುಸ್ತಕಗಳು ನಿಮಗೆ ಅಪಾರ ಖುಷಿಯನ್ನು ನೀಡುತ್ತಿವೆ ಎಂದ ಮೇಲೆ, ಆ ಪುಸ್ತಕಗಳು ತಮ್ಮ ಉದ್ದೇಶವನ್ನು ಸಂಪೂರ್ಣವಾಗಿ ಪೂರೈಸುತ್ತಿವೆ ಎಂದರ್ಥ. ನಿಮಗೆ ಸಂತೋಷ ನೀಡುವ ವಿಷಯವನ್ನು ಓದುವುದು ಯಾವಾಗಲೂ ಒಳ್ಳೆಯ ಅಭ್ಯಾಸವೇ.

ಸಾಹಿತ್ಯಕ ಅಭಿರುಚಿ ಎಂಬುದು ಸಂಪೂರ್ಣವಾಗಿ ವೈಯಕ್ತಿಕವಾದದ್ದು. ಒಬ್ಬರಿಗೆ ಕಾದಂಬರಿಗಳು ಇಷ್ಟವಾಗಬಹುದು, ಇನ್ನೊಬ್ಬರಿಗೆ ಕವನಗಳು ಇಷ್ಟವಾಗಬಹುದು, ಮತ್ತೊಬ್ಬರಿಗೆ ತಂತ್ರಜ್ಞಾನದ ಪುಸ್ತಕಗಳು ಇಷ್ಟವಾಗಬಹುದು. ನಿಮ್ಮ ಸ್ನೇಹಿತರ ಅಭಿರುಚಿ ಮತ್ತು ನಿಮ್ಮ ಅಭಿರುಚಿ ಭಿನ್ನವಾಗಿರಬಹುದು. ಒಂದು ಪ್ರಕಾರಕ್ಕಿಂತ ಇನ್ನೊಂದು ಪ್ರಕಾರ ಶ್ರೇಷ್ಠ ಎಂದು ಹೇಳಲು ಸಾಧ್ಯವಿಲ್ಲ.

ನಗು ಅತ್ಯುತ್ತಮ ಔಷಧ. ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಲು ಹಾಸ್ಯವು ಸಹಾಯ ಮಾಡುತ್ತದೆ. ಜೋಕ್ ಪುಸ್ತಕಗಳನ್ನು ಓದುವುದು ಮಾನಸಿಕ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಒಳ್ಳೆಯ ಅಭ್ಯಾಸ. ಹಾಸ್ಯವನ್ನು ಅರ್ಥಮಾಡಿಕೊಳ್ಳುವುದು, ವಿಶೇಷವಾಗಿ ಭಾಷೆಯ ಆಧಾರಿತ ಹಾಸ್ಯವನ್ನು ಅರ್ಥಮಾಡಿಕೊಳ್ಳುವುದು ಉತ್ತಮ ಭಾಷಾ ಜ್ಞಾನವನ್ನು ಸೂಚಿಸುತ್ತದೆ. ಸಾಹಿತ್ಯ ಎಂದರೆ ಕೇವಲ ಗಂಭೀರ ಕಾದಂಬರಿಗಳು ಅಥವಾ ವೈಚಾರಿಕ ಪ್ರಬಂಧಗಳು ಮಾತ್ರವಲ್ಲ. ಹಾಸ್ಯ, ವಿಡಂಬನೆ, ಮತ್ತು ವ್ಯಂಗ್ಯ ಕೂಡ ಸಾಹಿತ್ಯದ ಅತ್ಯಂತ ಪ್ರಮುಖ ಭಾಗಗಳಾಗಿವೆ. ಕನ್ನಡದಲ್ಲೂ ರಾಶಿ, ಅನಕೃ, ಬೀಚಿ ಅವರಂಥ ಶ್ರೇಷ್ಠ ಲೇಖಕರು ಹಾಸ್ಯದ ಮೂಲಕವೇ ದೊಡ್ಡ ಸಾಹಿತ್ಯ ಕೃಷಿ ಮಾಡಿದ್ದಾರೆ, ಅಪಾರ ಓದುಗ ವರ್ಗವನ್ನು ಹೊಂದಿದ್ದಾರೆ.

ನಿಮಗೆ ಕಾದಂಬರಿಗಳು ಬೋರ್ ಎನಿಸಿದರೆ, ನೀವು ತಕ್ಷಣವೇ ಅವುಗಳನ್ನು ಓದಲೇಬೇಕು ಎಂದೇನೂ ಇಲ್ಲ. ಆದರೆ, ನಿಮ್ಮ ಓದುವ ಆಸಕ್ತಿಯನ್ನು ಉಳಿಸಿಕೊಂಡು, ನಿಧಾನವಾಗಿ ಬೇರೆ ಪ್ರಕಾರಗಳತ್ತ ವಾಲಲು ನೀವು ಪ್ರಯತ್ನಿಸಬಹುದು. ಹಾಸ್ಯದ ಅಂಶ ಇರುವ ಸಣ್ಣ ಕಥೆಗಳು ಅಥವಾ ಲಘು ಕಾದಂಬರಿಗಳಿಂದ ಪ್ರಾರಂಭಿಸಿ. ಇದು ಮನರಂಜನೆಯ ಜತೆಗೆ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಹಾಯ ಮಾಡಬಹುದು.

ನಿಮ್ಮ ಸ್ನೇಹಿತನ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ, ಆದರೆ ಅದು ಸಾರ್ವತ್ರಿಕ ಸತ್ಯವಲ್ಲ. ಓದುವಿಕೆಯ ಮುಖ್ಯ ಉದ್ದೇಶ ಖುಷಿ ಮತ್ತು ಜ್ಞಾನವನ್ನು ಪಡೆಯುವುದು. ಆ ಖುಷಿ ನಿಮಗೆ ಜೋಕ್ ಪುಸ್ತಕಗಳಿಂದ ಸಿಗುತ್ತಿದ್ದರೆ, ನಿಮ್ಮ ಅಭಿರುಚಿ ಒಳ್ಳೆಯದೇ ಆಗಿದೆ. ನೀವು ಖುಷಿಪಡುವ ಪುಸ್ತಕಗಳನ್ನು ಮುಂದುವರಿಸಿ, ಮತ್ತು ಉಳಿದ ಪ್ರಕಾರಗಳನ್ನು ನಿಮಗೆ ಆಸಕ್ತಿ ಬಂದಾಗ ಓದಿ. ಇತರರ ಅಭಿಪ್ರಾಯಗಳಿಗಾಗಿ ನಿಮ್ಮ ಸಂತೋಷವನ್ನು ತ್ಯಾಗ ಮಾಡಬೇಡಿ.

ಆನಂದ ರೆಡ್ಡಿ, ಕೋರಮಂಗಲ

- **ಭಟ್ರೇ, ನನ್ನ ಮಗ ಇಂಜಿನಿಯರಿಂಗ್ ಫೈನಲ್ ವರ್ಷದಲ್ಲಿ ಓದುತ್ತಿದ್ದಾನೆ. ಅವನಿಗೆ ಡ್ರೆಸ್, ಗ್ಯಾಜೆಟ್ ಯಾವುದರಲ್ಲೂ ಆಸಕ್ತಿಯಿಲ್ಲ. ಕೂದಲನ್ನು ಸರಿಯಾಗಿ ಬಾಚಿಕೊಳ್ಳುವುದಿಲ್ಲ. ಇಸ್ತ್ರಿ ಮಾಡಿದ ಬಟ್ಟೆಗಳನ್ನು ಧರಿಸುವುದಿಲ್ಲ. ಅವನ ಈ ವರ್ತನೆ ನನಗೆ ವಿಚಿತ್ರವಾಗಿ ಕಾಣುತ್ತಿದೆ. ಆತನ ವರ್ತನೆಯನ್ನು ಬದಲಿಸುವುದು ಹೇಗೆ?**

– ರೆಡ್ಡಿ ಅವರೇ, ನಿಮ್ಮ ಮಗನಿಗೆ ಬಂದಿರುವ ರೋಗದ ಹೆಸರು 'ಅತ್ಯುನ್ನತ ಬುದ್ಧಿಮತ್ತೆ ಮತ್ತು ಶೂನ್ಯ ಫ್ಯಾಷನ್ ಸೆನ್ಸ್ ಸಿಂಡ್ರೋಮ್'. ಸಂಕ್ಷಿಪ್ತವಾಗಿ, 'ಎಂಜಿನಿಯರಿಂಗ್ ಅಂತಿಮ ವರ್ಷದ ಅಲಕ್ಷ್ಯ' ಎನ್ನಬಹುದು. ನಿಮ್ಮ ಮಗನಿಗೆ ನಿಜವಾಗಿಯೂ ಬಾಚಣಿಗೆ ಬೇಡವೆಂದರೆ, ಅವನಿಗೆ ಜಗತ್ತಿನ ಅತ್ಯಂತ ದುಬಾರಿ, ಅತ್ಯಾಧುನಿಕ, ಬ್ಲೂಟೂತ್ ಕನೆಕ್ಟ್ ಆಗುವ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಇರುವ 'ಸ್ವಯಂ-ಬಾಚಣಿಗೆ'ಯನ್ನು ಕೊಡುವ ಆಫರ್ ನೀಡಿ. 'ಇದು ಸಾಮಾನ್ಯ ಬಾಚಣಿಗೆ ಅಲ್ಲ, ಇದು ನಿನ್ನ ಮೆದುಳಿನ ತರಂಗಗಳನ್ನು ವಿಶ್ಲೇಷಿಸಿ ಕೂದಲು ಬಾಚುತ್ತದೆ' ಎಂದು ಹೇಳಿ. 'ನೋಡಪ್ಪಾ, ಇಸ್ತ್ರಿ ಮಾಡುವುದೆಂದರೆ ಕಷ್ಟ ಅಲ್ಲ, ಇದು ಒಂದು ಅತ್ಯಾಧುನಿಕ ಥರ್ಮಲ್ ಇಂಜಿನಿಯರಿಂಗ್ ಪ್ರಾಸೆಸ್' ಎಂದು ಹೇಳಿ.

ಎಂಜಿನಿಯರಿಂಗ್ ವಿದ್ಯಾರ್ಥಿಗಳು ಹೆಚ್ಚು ಯೋಚಿಸಲು ಮತ್ತು ಕಡಿಮೆ ಗಮನ ಕೊಡಲು ಇಂಥ 'ಸರಳ' ಬಟ್ಟೆಗಳನ್ನು ಧರಿಸುತ್ತಾರೆ. ಇಸ್ತ್ರಿ ಮಾಡಿದ ಬಟ್ಟೆಗಳು ಮತ್ತು ಅಚ್ಚುಕಟ್ಟಾದ ಕೂದಲು ಅಂದರೆ ಸುಮ್ಮನೆ ಫ್ಯಾಷನ್ ಅಲ್ಲ. ಇದು ನಿನ್ನ 'ವೈಯಕ್ತಿಕ ಬ್ರ್ಯಾಂಡಿಂಗ್‌ನಲ್ಲಿ ಹೂಡಿಕೆ' (Investment in Personal Branding). ಒಳ್ಳೆಯ ಇಂಟರ್ವ್ಯೂನಲ್ಲಿ, ನಿನ್ನ ಕೋಡಿಂಗ್ ಜ್ಞಾನ ಶೇ.50 ಕೆಲಸ ಮಾಡಿದರೆ, ನಿನ್ನ ಲುಕ್ ಶೇ. 50 ಕೆಲಸ ಮಾಡುತ್ತದೆ. ಇದು 'ರಿಟರ್ನ್ ಆನ್ ಇನ್ವೆಸ್ಟ್‌ಮೆಂಟ್ (ROI)' ಬಗ್ಗೆ ಇರುವ ವಿಷಯ' ಎಂದು ಆರ್ಥಿಕ ಮತ್ತು ಲಾಜಿಕಲ್ ಭಾಷೆಯಲ್ಲಿ ವಿವರಿಸಿ.

ನಿಮ್ಮ ಮಗನ ಹಳೆಯ, ಅಸ್ತವ್ಯಸ್ತವಾದ ಲುಕ್ ಇರುವ ಫೋಟೋಗಳನ್ನು ತೆಗೆದು, ಅತ್ಯುತ್ತಮವಾಗಿ ಡ್ರೆಸ್ ಮಾಡಿದ (ಚೆನ್ನಾಗಿ ಬಾಚಿಕೊಂಡ) ಐಷಾರಾಮಿ ಎಂಜಿನಿಯರ್‌ಗಳ ಫೋಟೋಗಳ ಪಕ್ಕದಲ್ಲಿ ಹಾಕಿ. ನಂತರ ಫೋಟೋಶಾಪ್ ಬಳಸಿ ಅವನ ಮುಖವನ್ನು ಆ ಡ್ರೆಸ್ ಮಾಡಿದವರ ದೇಹದ ಮೇಲೆ ಅಂಟಿಸಿ. ನೋಡಪ್ಪಾ, ನೀನು ಈ ರೀತಿ ಡ್ರೆಸ್ ಮಾಡಿದರೆ ನಿನಗೆ ಎಷ್ಟು ಚೆನ್ನಾಗಿ ಕಾಣಿಸುತ್ತದೆ ಎಂದು ತಮಾಷೆ ಮಾಡಿ. ನೆನಪಿಡಿ, ಫೈನಲ್ ಇಯರ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಮ್ಮ ಕೋರ್ಸ್‌ಗಿಂತ ಬೇರೇನೂ ಮುಖ್ಯವಾಗಿರುವುದಿಲ್ಲ. ಅವರ ಗಮನವೆಲ್ಲಾ ಕೋಡಿಂಗ್, ಪ್ರಾಜೆಕ್ಟ್ ಮತ್ತು ಕೆಲಸ ಪಡೆಯುವುದರ ಮೇಲೆ ಇರುತ್ತದೆ. ಅವರ ಅಲಕ್ಷ್ಯವು ಅವರು ಎಷ್ಟು ಏಕಾಗ್ರತೆಯಿಂದ ಓದುತ್ತಿದ್ದಾರೆ ಎಂಬುದರ ಸಂಕೇತವಾಗಿರಬಹುದು. ಈ ಪ್ರಯೋಗಗಳು ಅವರ ಮನಸ್ಸನ್ನು ಗಾಯಗೊಳಿಸದೆ, ಅವರನ್ನು ನಗಿಸಿ, ಬದಲಾವಣೆಯ ಕಡೆಗೆ ಪ್ರೇರೇಪಿಸಲಿ!